ಕವಿ ಕಾವ್ಯ ಪರಂಪರೆ

2

ಒಂದನೆಯ
ನಾಗವರ್ಮ

ಸಂಪಾದಕರು

ವಿ. ಸೀತಾರಾಮಯ್ಯ

ಲೇಖಕರು

ಪ್ರೊ॥ ಎಚ್. ಎಂ. ಶಂಕರನಾರಾಯಣರಾವ್

ಶ್ರೀ ಪಿ. ವಿ. ಜೋಶಿ

ಡಾ॥ ಡಿ. ಎಸ್. ಕರ್ಕಿ

ವಿದ್ವಾನ್ ಎನ್. ರಂಗನಾಥ ಶರ್ಮ

ಕವಿಕಾವ್ಯ ಪರಂಪರೆ – ೨

ಒಂದನೆಯ ನಾಗವರ್ಮ

ಪ್ರೊ॥ ಎಚ್. ಎಂ. ಶಂಕರನಾರಾಯಣರಾವ್
ಶ್ರೀ ಪಿ. ವಿ. ಜೋಶಿ
ಡಾ॥ ಡಿ. ಎಸ್. ಕರ್ಕಿ
ವಿದ್ವಾನ್ ಎನ್. ರಂಗನಾಥಶರ್ಮ

ಐ ಬಿ ಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು – ೯

ಸಂಪಾದಕ :

ವಿ. ಸೀತಾರಾಮಯ್ಯ

*

ಮೊದಲನೆಯ ಮುದ್ರಣ :

ಫೆಬ್ರುವರಿ 1973

*

ಬೆಲೆ :

ರೂ. 12-50

*

ಐ ಬಿ ಎಚ್ ಪ್ರಕಾಶನ, ಬೆಂಗಳೂರು – 560009
ಇವರ ಪರವಾಗಿ **ಶ್ರೀ ಪಿ. ಎನ್. ಕಾಮತ್**
ಪ್ರಕಾಶಿಸಿದುದು.

*

ಅಧಿಕೃತ ಮಾರಾಟಗಾರರು :
ಇಂಡಿಯ ಬುಕ್ ಹೌಸ್
ಬೆಂಗಳೂರು – 560009

*

ಮುದ್ರಕರು :

ಐ ಬಿ ಎಚ್ ಪ್ರಕಾಶನ ಪ್ರಿಂಟರಿ
ಎಂ. ಎಸ್. ಆರ್. ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560054

ಮುನ್ನುಡಿ

ಈ ಮಾಲೆಯಲ್ಲಿ ಕವಿಗಳ ಕಾಲಮಾನವನ್ನು ಅನುಸರಿಸಿ ಒಂದು ಕ್ರಮದಲ್ಲಿ ಪುಸ್ತಕಗಳನ್ನು ಪ್ರಕಟಿಸಬೇಕೆಂದಿತ್ತು. 'ಪರಂಪರೆ'ಯ ಪ್ರಕಟನೆ ಹೊರಡಿಸಿ ಎರಡು ವರ್ಷಗಳಾದರೂ ಕ್ರಮವನ್ನು ಸಾಧಿಸಲಾಗಲಿಲ್ಲ. ಒಂದೊಂದು ಪುಸ್ತಕಕ್ಕೆ 3–4ಮಂದಿ ಲೇಖಕರ ಸಹಕಾರ ಬೇಕಾಗಿರುವಾಗ ಅದರ ಯಾವ ಒಂದು ಭಾಗ ಕೈಗೆ ಬರದಿದ್ದರೂ ಪುಸ್ತಕ ಸಿದ್ಧವಾಗುವುದಿಲ್ಲವಾಗಿ ಕ್ರಮವಿರಲಿ, ಯಾವ ಪುಸ್ತಕವನ್ನೂ ಹೊರತರಲಾಗಲಿಲ್ಲ. ಆದ್ದರಿಂದ ಆ ಆ ಪುಸ್ತಕದ ಮೂರು ಲೇಖನಗಳು ಕೈಗೆ ಬಂದಹಾಗೆಯಾದರೂ ಪುಸ್ತಕಗಳನ್ನು ಸಿದ್ಧಪಡಿಸೋಣವೆಂದು ಮಾಲೆಯು ಮೊದಲ 3 ಪುಸ್ತಕಗಳಾಗಿ ಕವಿರಾಜಮಾರ್ಗ, ನಾಗವರ್ಮ I, ನಾಗವರ್ಮ II ಎಂಬ ಇವನ್ನು ಪ್ರಕಟಿಸುತ್ತಿದೆ. ಕವಿರಾಜಮಾರ್ಗದ ಮೇಲಿನ ಪುಸ್ತಕವಾದರೂ ಮೊದಲಿಗೇ ಬರುವಂತಾದುದು ಒಂದು ಪುಣ್ಯ. ಮೊದಲು ನಾಗವರ್ಮ ಎಂಬುದನ್ನು ಕುರಿತು ಆ ಹೆಸರಿನ ಇಬ್ಬರನ್ನೂ ಸೇರಿಸಿಕೊಂಡು ಒಂದೇ ಪುಸ್ತಕವನ್ನು ಪ್ರಕಟಿಸಬೇಕೆಂದಿತ್ತು. ಆದರೆ ಕಾವ್ಯಾವಲೋಕನದ ಕರ್ತೃವನ್ನು ಕಾದಂಬರಿ, ಛಂದೋಂಬುಧಿಗಳ ಲೇಖಕನ ಜೊತೆಗೇ ಸೇರಿಸಿ ಹಾಗೂ ಹೀಗೂ ಮುಗಿಸುವುದು ಸರಿಯಲ್ಲವೆಂದು ತೋರಿತು. ಜೊತೆಗೆ, ಛಂದೋಂಬುಧಿಯನ್ನು ಕುರಿತು ಮಾತನಾಡುವಾಗ ಈ ಕಾಲದವರಿಗೆ ನಿವೇದಿಸಬಲ್ಲ ಒಂದೆರಡು ಮಾತುಗಳನ್ನು ಸಮೀಕ್ಷೆಯಲ್ಲಿ ಸೇರಿಸಬಹುದೆನ್ನಿಸಿತು. ಕಾವ್ಯಾವಲೋಕನವನ್ನು ಕುರಿತು ಬರೆಯುವಾಗ ಪ್ರಾಚೀನ ಅಲಂಕಾರ ಗ್ರಂಥಗಳಲ್ಲಿ ಕಾವ್ಯಾವಲೋಕನದ ಸ್ಥಾನವನ್ನು ನಿರ್ದೇಶ ಮಾಡುವುದೂ ಪಾಶ್ಚಿಮಾತ್ಯರ ಸಾಧನೆಗೂ ನಮ್ಮದಕ್ಕೂ ಇರುವ ಹೋಲಿಕೆ, ವ್ಯತ್ಯಾಸಗಳನ್ನು ಸಂಕ್ಷೇಪವಾಗಿಯಾದರೂ ತಿಳಿಸುವುದೂ ಉಪಯುಕ್ತವಾದೀತು ಎಂದು ಅದನ್ನು ಬೇರೆಯ ಒಂದು ಪುಸ್ತಕವನ್ನಾಗಿಯೇ ಮಾಡಿದೆ. ಶಕ್ಯವಾದರೆ ಮುಂದಿನ ಮೂರು – ಪಂಪ, ವಡ್ಡಾರಾಧನೆ, ರನ್ನ – ಗ್ರಂಥಗಳು ಆದಾವೆಂದು

ನಿರೀಕ್ಷಿಸಿದ್ದೇನೆ. ಯಾವುದಕ್ಕೂ ಕಾಲಲಬ್ಧಿ ಬೇಕು. ನಮ್ಮ ಉಪಕಾರಿಗಳಾದ ಲೇಖಕರು ದಯಮಾಡಿ ತಮ್ಮ ಲೇಖನಗಳನ್ನು ಬೇಗ ಕಳಿಸಿಕೊಟ್ಟರೆ 1973 ನೆಯ ವರ್ಷ ಮುಗಿಯುವುದರೊಳಗಾಗಿ ಈ ಮಾಲೆಯ ಗ್ರಂಥಗಳನ್ನೆಲ್ಲ ಹೊರಗೆ ತರಬಹುದು. ಕೆಲಸಕ್ಕೆ ನಾನು ಸಿದ್ಧ ; ಅಚ್ಚಿನಮನೆ ಐ. ಬಿ. ಎಚ್. ಸಂಸ್ಥೆಯವರದು; ಹೊರಗಿನ ಇನ್ನಾವ ಸಹಾಯಕ್ಕೂ ಕಾಯಬೇಕಿಲ್ಲ. ಕಾಲ ಅನಂತವಾದರೆ ನನ್ನ ಪಾಲಿಗೆ ಉಳಿದಿರುವುದು ಅಷ್ಟು ನಿಡಿದಲ್ಲವಾದ್ದರಿಂದ ಆದಷ್ಟು ತ್ವರೆಮಾಡಬೇಕೆಂಬುದು ನನ್ನ ಮನಸ್ಸು. ಪ್ರಕಾಶಕರ ತಾಳ್ಮೆ, ನನ್ನಲ್ಲಿನ ವಿಶ್ವಾಸ ಕಳಲುವ ಮುನ್ನ ಕೆಲವಾದರೂ ಹೊರಕ್ಕೆ ಬಂದರೆ ಸ್ವಲ್ಪವಾದರೂ ತೃಪ್ತಿಯುಂಟಾದೀತು.

ವಿಷಯವ್ಯವಸ್ಥೆ, ಅಚ್ಚಿನ ಲೋಪದೋಷಗಳು, ಒಂದೆರಡು ಕಡೆ ಅನಿವಾರ್ಯವಾಗಿ ತಲೆದೋರಿರುವ ಪುನರುಕ್ತಿಗಳನ್ನು ಉದಾರ ಮನಸ್ಸಿನಿಂದ ಕಂಡು ಇವನ್ನು ಸ್ವೀಕರಿಸಬೇಕೆಂದು ಬೇಡುತ್ತೇನೆ. ಹಳಗನ್ನಡ ಗ್ರಂಥಗಳ ಪರಿಚಯ ಹೆಚ್ಚಾಗಿ ಇಲ್ಲದ ಕಾಲದಲ್ಲಿ ಮೊಳೆ ಜೋಡಿಸುವಲ್ಲಿ, ಕರಡು ತಿದ್ದುವಾಗ ಅನೇಕ ಕಷ್ಟಗಳು ಒದಗುತ್ತವೆ. ಱ, ೞ ಗಳೂ ಅವುಗಳ ಕಾಗುಣಿತದ ರೂಪಗಳೂ ಇನ್ನಷ್ಟು ಕ್ಲೇಶ ಕೊಡುತ್ತವೆ. ಕಾಲಾಂತರದಲ್ಲಿ, ಪುಸ್ತಕದ ಬೇರೆ ಬೇರೆ ಭಾಗಗಳನ್ನು ಓದುವಾಗ, ಕರಡನ್ನು ತಿದ್ದಿ ಅಚ್ಚಿಗೆ ಒಪ್ಪಿಕೆ ಕೊಡುವಾಗ ಪುನರುಕ್ತಿಗಳು ಸೇರಿಕೊಂಡಿರುತ್ತವೆ; – ಸಂಪಾದಕನ ಪ್ರಮಾದಗಳ ಜೊತೆಗೆ. ಲೇಖನದ ಪ್ರತಿಗಳೆಲ್ಲ ಅಚ್ಚಿನ ಮನೆಗೆ ಸಿದ್ಧವಾಗುವಂತೆ ವಿಶದವಾಗಿ ಬಿಡಿಬಿಡಿಯಾಗಿ ಹಾಳೆಯ ಒಂದೇ ಕಡೆ ಬರೆದುಬಂದರೆ ಸಂಪಾದಕರಿಗೂ ಮೊಳೆ ಜೋಡಿಸುವವರಿಗೂ ದೊಡ್ಡ ಉಪಕಾರವಾಗುತ್ತದೆ.

ತಮ್ಮ ಬರವಣಿಗೆಯನ್ನು ದಾನಮಾಡಿ ಇವಕ್ಕೂ ಈವರೆಗೆ ಇತರ ಪುಸ್ತಕಗಳ ಭಾಗವಾಗಿಯೂ ತಮ್ಮ ಲೇಖನಗಳನ್ನು ಕಳಿಸಿ ನೆರವಾಗಿರುವ ಸುಮಾರು 40–45 ಮಂದಿ ವಿದ್ವಾಂಸರಿಗೆ ನಾನು ಕೃತಜ್ಞನಾಗಿದ್ದೇನೆ. ತಗಾದೆ ಕಾಗದಗಳನ್ನು ಬರೆದು ಎದುರು ನೋಡುತ್ತಿದ್ದೇನೆಂದು ಹೇಳಿ ಉಳಿದವರಿಂದ ಗಡವುಗಳನ್ನು ಪಡೆದುಕೊಂಡಿದ್ದೇನೆ. ಈಗ ಓದುಗರಿಗೆ ನಂಬಿಕೆಯಾದರೂ ಬಂದೀತು: 'ಪರಂಪರೆ' ಹೊರಗೆ ಬಂದೀತೆಂದು. ಆ ನಂಬಿಕೆಯ ಸಂಚಕಾರ ಈ ಯತ್ನ. ಬರೆಯಲು ಒಪ್ಪಿರುವ ಸ್ನೇಹಿತರು ದಯಮಾಡಿ ಹಾಳೆಯ ಒಂದೇ ಕಡೆ, ಅಕ್ಷರಗಳು ಸುಲಭವಾಗಿ ಗೊತ್ತಾಗುವಂತೆ – ನನ್ನ ಕೈ ಬರಹದಂತಲ್ಲ – ಹೆಚ್ಚು ಮೋಡಿ, ಚಿತ್ತು ಇಲ್ಲದೆ ಬೇಗ ಬರೆದು ಕಳಿಸಿದರೆ ಉಪಕಾರವಾಗುತ್ತದೆ. ಇಂದಿನ ಅಚ್ಚಿನ ಮನೆಗಳಲ್ಲಿ ಮೋಡಿ ಅರಿತವರು ಕಡಮೆಯಾದ್ದರಿಂದ ಈ ಪ್ರಾರ್ಥನೆ.

ಐ. ಬಿ. ಎಚ್. ಸಂಸ್ಥೆಯವರು ಈ ಕಾರ್ಯವನ್ನು ನನಗೆ ಒಪ್ಪಿಸಿ ಎಲ್ಲ ಧಾರಾಳವನ್ನೂ ನನಗೆ ಕೊಟ್ಟಿದ್ದಾರೆ. ಲೇಖನಗಳು ಬಂದ ಬಂದ ಹಾಗೆಲ್ಲಾ

ಮುನ್ನುಡಿ

ಬರೆದವರಿಗೆ ಗೌರವಧನವನ್ನು ಕೊಟ್ಟಿದ್ದಾರೆ. ಅವರ ಔದಾರ್ಯಕ್ಕೆ ನಾನು ಋಣಿ. ಛಂದೋಂಬುಧಿಯಂತಹದರ ಪರಿಚಯ ಮತ್ತು ಅದಕ್ಕೆ ಅನುಬಂಧವಾಗಿ ಕೊಟ್ಟಿರುವ ಕೆಲವು ಭಾಗಗಳಿಂದ ಅಚ್ಚಿನ ಮನೆಯವರಿಗೆ ಪೀಡೆಯೇ ಆಯಿತು. ಅಲ್ಲಿನದು ಒಂದು ಬಗೆಯ ಪರಿಭಾಷೆ. ಗಣಗಳನ್ನು ವಿಂಗಡಿಸುವಾಗ, ಗೀಟುಗಳನ್ನು ಹಾಕುವಾಗ, ಸಾಲುಗಳನ್ನು ವಿಂಗಡಿಸುವಾಗ, ಸಂಜ್ಞೆಗಳನ್ನು ತಿಳಿಸುವಾಗ ಗದ್ಯ ಪದ್ಯ ಕಲಸಿಕೊಳ್ಳುತ್ತವೆ. ಕೆಲಸ ಸ್ವಲ್ಪ ಗೋಜೇ. ಅದನ್ನೆಲ್ಲ ಸಹಿಸಿಕೊಂಡು ಅಚ್ಚಿನ ಮನೆಯವರು ಅಚ್ಚು ಮಾಡಿದ್ದಾರೆ. ಅವರ ಸಹಕಾರಕ್ಕೆ ನಾನು ಕೃತಜ್ಞ. ಮುಂದಿನ ಪುಸ್ತಕಗಳು ಇಷ್ಟು ಕ್ಲೇಶಕೊಡಲಾರವು.

ಐ. ಬಿ. ಎಚ್. ಅಧಿಕಾರಿಗಳಿಗೂ ಲೇಖನವನ್ನು ಅಚ್ಚಿಗೆ ತಯಾರಿಸುವುದರಲ್ಲಿಯೂ ಈ ಬಗ್ಗೆ ಕಾಗದ ಪತ್ರವ್ಯವಹಾರಗಳಲ್ಲಿಯೂ ನೆರವಾಗಿರುವ ನನ್ನ ಕಿರಿಯ ಗೆಳೆಯರಾದ ಎಂ. ವಿ. ವೆಂಕಟೇಶಮೂರ್ತಿ ಮತ್ತು ಎಂ. ವಿ. ಸತ್ಯನಾರಾಯಣ ಸೋದರರಿಗೂ ನನ್ನ ವಂದನೆಗಳು. ಈಚಿನ ನನ್ನ ಕೆಲಸಕ್ಕೆಲ್ಲ ಇವರು ಒದಗಿಸುತ್ತಿರುವ ಸಹಕಾರ ನಾನು ಎಂದಿಗೂ ನೆನೆಯುವಂಥದು.

ಪರಂಪರೆಯ ಈ ಮೂರೂ ಗ್ರಂಥಗಳನ್ನು ಕನ್ನಡಿಗರಿಗೆ ಮೊದಲ ಕಾಣಿಕೆಯಾಗಿ ಅರ್ಪಿಸಿದೆ.

ಬೆಂಗಳೂರು ಪಿ. ಸೀತಾರಾಮಯ್ಯ
9ನೇ ಫೆಬ್ರುವರಿ 1973

ಪರಿವಿಡಿ

ಭಾಗ		ಪುಟ
	ಮುನ್ನುಡಿ	iii
1.	ಕಾಲ, ದೇಶ, ಕೃತಿಗಳು ಪ್ರೊ॥ ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.	1
2.	ಕರ್ಣಾಟಕ ಕಾದಂಬರಿ ಶ್ರೀ ಪಿ. ವಿ. ಜೋಶಿ, ಎಂ. ಎ., ಎಲ್ ಎಲ್.ಬಿ.	33
	ಅನುಬಂಧ ಕವಿವಾಣಿ	76
3.	ಛಂದೋಂಬುಧಿ ಡಾ॥ ಡಿ. ಎಸ್. ಕರ್ಕಿ, ಎಂ. ಎ., ಪಿಎಚ್ ಡಿ.	89
	ಸಮೀಕ್ಷೆ ವಿ. ಸೀತಾರಾಮಯ್ಯ	134
	ಅನುಬಂಧಗಳು	175
	i) ಜಯಕೀರ್ತಿಯ ಛಂದೋನುಶಾಸನ	
	ii) ಜನಾಶ್ರಯೀ ಛಂದೋವಿಚಿತಿ ವಿದ್ವಾನ್ ಎನ್. ರಂಗನಾಥಶರ್ಮ	
	iii) ರತ್ನಮಂಜೂಷದೊಡನೆ ಹೋಲಿಕೆ. ಎಚ್. ಡಿ. ವೇಲಣಕರ್ ಅವರ ಹೇಮಚಂದ್ರನ ಛಂದೋನುಶಾಸನ ಪುಟ ೬.	

ಒಂದನೆಯ ನಾಗವರ್ಮ, ಭಾಗ-1

ಕಾಲ, ದೇಶ, ಕೃತಿಗಳು

ಪ್ರೊ. ಹೆಚ್. ಎಂ. ಶಂಕರನಾರಾಯಣರಾವ್

ಒಂದನೆಯ ನಾಗವರ್ಮ

ಕಾಲ, ದೇಶ, ಕೃತಿಗಳು

ಕವಿ

ಶ್ರೀಹರ್ಷಚಕ್ರವರ್ತಿಯ ಆಸ್ಥಾನಕವಿಯಾಗಿ ಬಾಳಿದ ಬಾಣಭಟ್ಟನೂ ಅವನ ಮಗನಾದ ಭೂಷಣಭಟ್ಟನೂ ಒಟ್ಟಾಗಿ ಸಂಸ್ಕೃತಗದ್ಯದಲ್ಲಿ ರಚಿಸಿದ 'ಕಾದಂಬರಿ'ಯನ್ನು ಹಳಗನ್ನಡ ಚಂಪೂಮಾರ್ಗದಲ್ಲಿ ಅನುವಾದ ಮಾಡಿರುವ ಕವಿ ನಾಗವರ್ಮ. ಬಾಣಕವಿ ತನ್ನ ವಿಷಯವನ್ನು ಹರ್ಷಚರಿತ್ರೆಯಲ್ಲಿ ವಿಸ್ತಾರವಾಗಿಯೂ ಕಾದಂಬರಿಯಲ್ಲಿ ಸಂಗ್ರಹವಾಗಿಯೂ ಹೇಳಿಕೊಂಡಿರುವಂತೆ ಸಂಸ್ಕೃತಕವಿಯ ಕೃತಿಯನ್ನು ಕನ್ನಡಿಸಿರುವ ನಾಗವರ್ಮ ತನ್ನ ಜೀವನದ ವಿವರಗಳನ್ನು 'ಕರ್ಣಾಟಕ ಕಾದಂಬರಿ'[1] ಯಲ್ಲಿ ನಿರೂಪಿಸಿರಬಹುದೆಂದು ಸಹೃದಯರು ನಿರೀಕ್ಷಿಸಿದರೆ ಆ ನಿರೀಕ್ಷೆ ಸಹಜವಾದದ್ದೇ. ಇದೂ ಅಲ್ಲದೆ ತಮ್ಮ ಕಾವ್ಯಗಳ ಆದಿ ಅಂತ್ಯಗಳಲ್ಲಿ ಕನ್ನಡಕವಿಗಳು ತಮ್ಮ ಬದುಕಿನ ವಿವರಗಳನ್ನು ತಿಳಿಸುವುದು ಪಂಪರನ್ನರ ಕಾಲದಿಂದಲೂ ನಡೆದು ಬಂದಿರುವ ಸಂಪ್ರದಾಯ. ಈ ದೃಷ್ಟಿಯಿಂದ ಕಾದಂಬರಿಯನ್ನು ಅವಲೋಕಿಸಿದಾಗ ಸಹೃದಯರಿಗೆ ತುಂಬ ನಿರಾಶೆಯುಂಟಾಗುತ್ತದೆ. ಏಕೆಂದರೆ ನಾಗವರ್ಮನ ಕೃತಿಯಿಂದ ಕವಿಯ ವಿಷಯವಾಗಿ ತಿಳಿದುಬರುವ ವಿವರಗಳು ತೀರ ಅಲ್ಪ; ಅವೂ ತೀರ ಅಸ್ಪಷ್ಟ, ಸಂದಿಗ್ಧ. ಮೇಲಾಗಿ ನಾಗವರ್ಮನಾದ ಮೇಲೆ ಬಂದ ಕವಿಗಳು ಪೂರ್ವ ಕವಿ ಸ್ತವಾವಸರದಲ್ಲಿ ಕಾದಂಬರಿಯ ಕವಿಯನ್ನು ಸ್ತುತಿಸಿಲ್ಲವೆಂದೇ ಹೇಳಬೇಕು. 'ಕಾವ್ಯಾವಲೋಕನ'[2] ದಲ್ಲಿ ಮಾತ್ರ ಶಂಖವರ್ಮ ಗುಣವರ್ಮರ ಹೆಸರಿನೊಂದಿಗೆ ನಾಗವರ್ಮನ ಹೆಸರನ್ನು ಸೇರಿಸಿ ಹೊಗಳಿದೆ. ಸಮಕಾಲೀನ ಶಾಸನಗಳಲ್ಲಿ ಎಲ್ಲಿಯೂ ಕವಿಯ ಹೆಸರು ಉಲ್ಲೇಖಗೊಂಡಿಲ್ಲ. ಇಷ್ಟೇ ಅಲ್ಲದೆ ಈಗ ಪ್ರಚಾರದಲ್ಲಿರುವ

'ಕರ್ಣಾಟಕ ಛಂದೋಂಬುಧಿ,' 'ಕರ್ಣಾಟಕ ಭಾಷಾಭೂಷಣ,' 'ಕಾವ್ಯಾವಲೋಕನ,' 'ಅಭಿಧಾನ ವಸ್ತುಕೋಶ'ಗಳೆಂಬ ಗ್ರಂಥಗಳು ನಾಗವರ್ಮನ ಹೆಸರಿನಲ್ಲಿದ್ದು ಇವು ಗಳ ಕರ್ತೃತ್ವದ ವಿಚಾರ ವಿದ್ವಾಂಸರಲ್ಲಿ ವಿವಾದಕ್ಕೆ ಎಡೆಮಾಡಿಕೊಟ್ಟಿದೆ. ಕಾದಂಬರಿ ಛಂದೋಂಬುಧಿಗಳ ರಚಕ ಬೇರೆ, ಉಳಿದುವನ್ನು ಬರೆದವನು ಬೇರೊಬ್ಬ; ಈ ಐದು ಗ್ರಂಥಗಳನ್ನು ಒಬ್ಬನೇ ನಾಗವರ್ಮನು ಬರೆದನು; ಕಾದಂಬರಿ ಛಂದೋಂಬುಧಿ ಗಳನ್ನು ಬರೆದವರು ಬೇರೆ ಬೇರೆ ನಾಗವರ್ಮರು ಎಂಬ ಭಿನ್ನಾಭಿಪ್ರಾಯಗಳು ಈವರೆಗೆ ವ್ಯಕ್ತಪಟ್ಟಿವೆ.[3] ಈ ಅಭಿಪ್ರಾಯಗಳನ್ನು ಪರಿಶೀಲಿಸುವ ಮುಂಚೆ ಕಾದಂಬರಿಯಿಂದ ಕವಿಯ ವಿಷಯವಾಗಿ ತಿಳಿದುಬರುವ ಅಂಶಗಳನ್ನು ಮೊದಲು ಈ ರೀತಿಯಾಗಿ ಸಂಗ್ರಹಿಸಬಹುದು. ಕರ್ಣಾಟಕ ಕಾದಂಬರಿ ವಿಸ್ತಾರವಾದ ಚಂಪೂ ಕಾವ್ಯವಾದರೂ ಇದರ ಉಪಕ್ರಮ ಉಪಸಂಹಾರಭಾಗಗಳು ಅತ್ಯಂತ ಹ್ರಸ್ವವಾಗಿವೆ. ಇಷ್ಟು ಹ್ರಸ್ವವಾದ ಆದಿ ಅಂತ್ಯ ಉಳ್ಳ ಚಂಪೂ ಕಾವ್ಯಗಳು ಕನ್ನಡ ಸಾಹಿತ್ಯದಲ್ಲಿ ಇಲ್ಲವೆಂದೇ ಹೇಳಬೇಕು. ಕಾವ್ಯದ ಆದಿಯಲ್ಲಿ ಪೀಠಿಕಾರೂಪವಾಗಿ ಏಳು ಪದ್ಯ ಗಳಿದ್ದರೆ ಅಂತ್ಯದಲ್ಲಿ ನಾಲ್ಕೇ ಪದ್ಯಗಳಿವೆ. ಕವಿ ಮೊದಲನೆಯ ಪದ್ಯದಲ್ಲಿ ಶಿವನ ಜಟಾಜೂಟವನ್ನು ಅಲಂಕರಿಸಿದ ಚಂದ್ರನನ್ನೂ ಎರಡನೆಯ ಪದ್ಯದಲ್ಲಿ ಸರಸ್ವತಿ ಯನ್ನೂ ಸ್ತೋತ್ರಮಾಡಿದ್ದಾನೆ. ಮೂರನೆಯ ಪದ್ಯದಲ್ಲಿ ಬಾಣನನ್ನೂ ನಾಲ್ಕು ಐದ ನೆಯ ಪದ್ಯಗಳಲ್ಲಿ ಸಂಸ್ಕೃತ ಕಾದಂಬರಿಯನ್ನೂ ಹೊಗಳಿ, ಏಳನೆಯ ಪದ್ಯದಲ್ಲಿ 'ಕೃತಿಪತಿ ನರೇಂದ್ರಚಂದ್ರಂ, ಕೃತಿಯಂ ಪೇಟ್ದಂ ಬುಧಾಬ್ಜವನಕಳಹಂಸಂ, ಕೃತಿ ಕಾದಂಬರಿಯೆನೆ, ಸತ್ಕೃತಿ ಕಥಿತ ಕಥಾವತಾರಮೇಂ ಕೇವಳಮೇ' ಎಂದು ಹೇಳಿ ಕಥೆ ಯನ್ನು ನೇರವಾಗಿ ಪ್ರಾರಂಭಿಸುತ್ತಾನೆ. ಕಾವ್ಯದ ಕೊನೆಯಲ್ಲಿ, ಸಂಸ್ಕೃತ ಕಾದಂಬರಿ 'ಕರ್ಣಾಟಭಾಷಾ ಚತುರತ್ವಂ ಬೊರ್ದಿ, ರಾಜೇಂದ್ರ ಚಂದ್ರಾಂಕನೊಳ್ ಸಂಗತಿವೆತ್ತು ಆದಂ ತ್ರಿಲೋಕೀ ಸಹಚರಿಯೆನೆ ತಾಂ ಸಂದುದು' ಎಂದು ತಿಳಿಸಿ, ಭೋಜರಾಜನು 'ಸತ್ಕೃತಿವನಿತೆಗಿವೌಚಿತ್ಯವೆಂದು' ತನಗೆ ಕುದುರೆಗಳನ್ನು ಕೊಟ್ಟು ಬಹುಮಾನಿಸಿದ ನೆಂದು ಹೇಳಿ, 'ಜಗತ್‌ಸ್ತುತನಾದ ನಾಗಪೂಜ್ಯಂ ಕೃತಿಪಂ ತಾಂ ಸುಖದಿನಿರ್ಕೆ ಇನ ನುಳಿವಿನೆಗಂ' ಎಂದು ತನ್ನ ಸ್ವಾಮಿಗೆ ಮಂಗಳವನ್ನು ಕೋರಿ, ಆ ಬಳಿಕ ತನ್ನ ಕಾವ್ಯದ ಶ್ರೇಷ್ಠತೆಯನ್ನು ಪ್ರಶಂಸಿಸಿ ಕೃತಿಯನ್ನು ಮುಗಿಸಿದ್ದಾನೆ. ಸಾಮಾನ್ಯವಾಗಿ ಚಂಪೂಕಾವ್ಯಗಳ ಆಶ್ವಾಸಾಂತ್ಯಗಳಲ್ಲಿ ಗದ್ಯವಿರುತ್ತದೆ. ಕರ್ಣಾಟಕ ಕಾದಂಬರಿಯಲ್ಲಿ ಪೂರ್ವಭಾಗ ಉತ್ತರಭಾಗಗಳೆಂಬ ಎರಡು ಭಾಗಗಳಿದ್ದು ಪೂರ್ವಭಾಗದಲ್ಲಿ ಮಾತ್ರ 'ಇತಿ ಶ್ರೀ ನಾಗವರ್ಮ ವಿರಚಿತಮಪ್ಪ ಕರ್ಣಾಟಕ ಕಾದಂಬರಿಯೊಳ್ ಪೂರ್ವ ಭಾಗಂ ಸಮಾಪ್ತಂ' ಎಂಬ ಗದ್ಯವಿದೆ.[4] ಈ ಗದ್ಯವನ್ನೂ ಗಣನೆಗೆ ತೆಗೆದುಕೊಂಡರೆ ಕವಿಯ ಹೆಸರು ಕಾವ್ಯದಲ್ಲಿ ಎರಡು ಸಾರಿ ಮಾತ್ರ ಬರುತ್ತದೆ.

ಮೇಲಿನ ನಿರೂಪಣೆಯಿಂದ ಕವಿಯ ವಿಷಯವಾಗಿ ಒಂದೆರಡು ಅಂಶಗಳನ್ನು ಮಾತ್ರ ಊಹಿಸಬಹುದು.

ಕಾವ್ಯದ ಮೊದಲಲ್ಲಿ ದೇವತಾಸ್ತೋತ್ರದೊಂದಿಗೆ ತಮಗೆ ಆಶ್ರಯವನ್ನು ಕೊಟ್ಟ ರಾಜರ ಸ್ತುತಿಯನ್ನು ಸಂಮಿಳನಮಾಡಿ ಲೌಕಿಕಕಾವ್ಯಗಳನ್ನು ಪಂಪ ಪೊನ್ನ ರನ್ನರು ರಚಿಸಿರುವರಷ್ಟೆ. ನಾಗವರ್ಮನೂ ಈ ಪದ್ಧತಿಯನ್ನು ಅನುಸರಿಸಿರುವಂತೆ ಕಾಣುತ್ತದೆ. ಏಕೆಂದರೆ ತನ್ನ ಕೃತಿಯ ಮೊದಲಲ್ಲಿ[5] ತ್ರಿಮೂರ್ತಿಗಳಲ್ಲಿ ಯಾರನ್ನೂ ಸ್ತುತಿಸದೆ ದೇವತೆಗಳಲ್ಲಿ ನವಗ್ರಹಗಳಲ್ಲಿ ಅಪ್ರಧಾನನಾದ ಚಂದ್ರನನ್ನು ಸ್ತುತಿಸಿರುವುದರಿಂದಲೂ ಕಾದಂಬರಿಯ 'ಕೃತಿಪತಿ ನರೇಂದ್ರಚಂದ್ರಂ,' ಬಾಣನ ಕಾದಂಬರಿ 'ಕರ್ಣಾಟಭಾಷಾಚತುರತ್ವಂಬೊರ್ದಿ ರಾಜೇಂದ್ರಚಂದ್ರಾಂಕನೊಳ್ ಸಂಗತಿವೆತ್ತು ತ್ರಿಲೋಕೀ ಸಹಚರಿ' ಎನಿಸಿತೆಂದು ಹೇಳಿಕೊಂಡಿರುವುದರಿಂದಲೂ ಚಂದ್ರಾಪೀಡನನ್ನು ವರ್ಣಿಸುವಾಗ ಮೇಲಿಂದ ಮೇಲೆ 'ನರೇಂದ್ರಚಂದ್ರ' 'ಮನುಜೇಂದ್ರಚಂದ್ರ' 'ನೃಪರೂಪಚಂದ್ರ,' 'ರಾಜೇಂದ್ರಚಂದ್ರ,' 'ರಾಜೇಂದ್ರಚಂದ್ರಾಂಕ' 'ಮಹೀಪಾಲಚಂದ್ರ' 'ನೃಪಚಂದ್ರ' 'ರಾಜಚಂದ್ರಾಂಕ,' 'ನೃಪಕುಲಚಂದ್ರ' ಎಂದು ಬಗೆಬಗೆಯಾಗಿ ವಿಶೇಷಿಸುವುದರಿಂದಲೂ ಕವಿ ಕಥಾನಾಯಕನೊಡನೆ ತನ್ನ ಪೋಷಕನನ್ನು ಸೇರಿಸಿ ಹೊಗಳುತ್ತಿರುವನೆಂದೂ ನಾಗವರ್ಮನಿಗೆ ಚಂದ್ರನೆಂಬ ರಾಜನ ಆಶ್ರಯವಿತ್ತೆಂದೂ ಸ್ಪಷ್ಟವಾಗುತ್ತದೆ.

ಕಾವ್ಯರಚನೆಗಾಗಿ ರಾಜರು ಕವಿಗಳನ್ನು ವಿದ್ವತ್ಸಭೆಗಳಲ್ಲಿ ಮನ್ನಿಸಿ, ಧನಕನಕಗಳನ್ನೊ ಭೂಮಿಯನ್ನೊ ಅಗ್ರಹಾರವನ್ನೊ ಕೊಡುವುದು ಸಂಪ್ರದಾಯ. ಇದಕ್ಕೆ ಪ್ರತಿಯಾಗಿ ಭೋಜನು ಸತ್ಕೃತಿವನಿತೆಗೆ ಉಚಿತವೆನಿಸುವಂತೆ ನಾಗವರ್ಮನಿಗೆ ಜಾತ್ಯಶ್ವಗಳನ್ನು ಕೊಟ್ಟನೆಂದು ಹೇಳಿರುವುದರಿಂದ, ಕವಿ ಪಂಪನಂತೆ ಯುದ್ಧವೀರನಾಗಿರಬೇಕೆಂದು ತೋರುತ್ತದೆ.[6] ಈ ಭೋಜನು ವಿದ್ವತ್ಪಕ್ಷಪಾತಿಯಾದ ಧಾರಾಪುರದ ಭೋಜನೇ ಆಗಿರಬೇಕು.

ಕವಿ ತನ್ನನ್ನು 'ಬುಧಾಬ್ಜವನ ಕಳಹಂಸ' ಎಂದು ವಿಶೇಷಿಸಿಕೊಂಡಿರುವುದರಿಂದ ಇದು ಅವನ ಬಿರುದಾಗಿರಬೇಕು.

ಕರ್ಣಾಟಕ ಕಾದಂಬರಿಯನ್ನು ಸಮಗ್ರವಾಗಿ ಪರಿಶೀಲಿಸಿದಾಗ ಕವಿ ಶಿವೋಪಾಸಕನಾದ ಬ್ರಾಹ್ಮಣನೆಂದು ಹೇಳಬಹುದೆನಿಸುತ್ತದೆ.

ನಾಗವರ್ಮನ ಅಂಕಿತದಲ್ಲಿರುವ ಇನ್ನೊಂದು ಕೃತಿ 'ಕರ್ಣಾಟಕ ಛಂದೋಂಬುಧಿ'ಯಲ್ಲಿ ಕವಿಯವಿಷಯವಾಗಿ ಹೆಚ್ಚು ವಿವರಗಳು ತಿಳಿದು ಬರುತ್ತವೆ. ಅವನ್ನು ಹೀಗೆ ಸಂಗ್ರಹಿಸಬಹುದು.

ಸುಪ್ರಸಿದ್ಧವಾದ ವೆಂಗಿಮಂಡಲದ ಸಪ್ತಗ್ರಾಮಗಳಲ್ಲಿ ಅತಿರಮ್ಯವಾದ

ಊರು ವೆಂಗಿಪಳು. ಆ ಊರಿನಲ್ಲಿ ಸುಂದರನೂ ಗುಣನಿಧಿಯೂ ವೇದಶಾಸ್ತ್ರಗಳಲ್ಲಿ ಪರಿಣತನೂ ಕೌಂಡಿನ್ಯ ಗೋತ್ರೋದ್ಭವನೂ ಆದ ವೆಣ್ಣಮಯ್ಯನೆಂಬ ಬ್ರಾಹ್ಮಣ ನಿದ್ದನು. ಆತನ ಹೆಂಡತಿ ಗುಣದಲ್ಲಿ, ಸಜ್ಜನಿಕೆಯಲ್ಲಿ ಅರುಂಧತಿಗೆ ಮಿಗಿಲಾದ ಕೌಂಡಿಕಬ್ಬೆ. ಈ ದಂಪತಿಗಳ ಮಗ ಲೋಕಸ್ತುತನಾದ ದಾಮಮಯ್ಯ. ಇವನ ಹೆಂಡತಿ ಗುಣ ರೂಪಗಳಲ್ಲಿ ಪ್ರಖ್ಯಾತಳಾದ ಕುಂದಕಬ್ಬೆ. ಇವರ ಹಿರಿಯ ಮಗ ಲೌಕಿಕ ವೈದಿಕಶಾಸ್ತ್ರಗಳಲ್ಲಿ ಪರಿಣತನೂ ವಿವೇಕಿಯೂ ಕಲಾಭಿಜ್ಞನೂ ಮನು ಮಾರ್ಗಚರಿತನೂ ಆಗಿದ್ದ ವೆಣ್ಣಮಯ್ಯ. ಇವನ ಹೆಂಡತಿ ಪತಿಭಕ್ತಿಯಲ್ಲಿ ಜಾನ ಕಿಗೂ ಮಿಗಿಲಾದ ಪೋಳಕಬ್ಬೆ. ಈ ಪೋಳಕಬ್ಬೆಯ, ವಿದ್ಯಾಪರಿಣತನಾದ ವೆಣ್ಣ ಮಯ್ಯನ ಹಿರಿಯಮಗನೇ ಸತ್ಕವಿ ನಾಗವರ್ಮ.

ಕವಿ ತನ್ನನ್ನು 'ಕುಂತೀಪುತ್ರಂ ಪೊಣರ್ದ ರಣದೊಳ್' ಎಂದು ವಿಶೇಷಿಸಿ ಕೊಂಡಿರುವುದಲ್ಲದೆ, 'ಬೀರಸಿರಿಯಕ್ಕೆ ಭುಜಾಸಿಗೆ ನಾಗವರ್ಮನಾ' ಎಂದು ಪಾರ್ವತಿ ಯನ್ನು ಪ್ರಾರ್ಥಿಸಿಕೊಂಡಿದ್ದಾನೆ.

ನಾಗವರ್ಮನಿಗೆ ದೊರೆತ ಆಶ್ರಯವನ್ನೂ ಅವನ ಗುರು ಯಾರೆಂಬುದನ್ನೂ ತಿಳಿಸುವ ಎರಡು ಪದ್ಯಗಳು ಇವು —

ಅರಸಂ ರಕ್ಕಸಗಂಗಂ
ಗುರುಗಳ್ ನೆಗಟ್ದಜಿತ ಸೇನದೇವರ್ ದಯೆಯಿಂ
ಪೊರೆವ ನೃಪನಣ್ಣನೆನೆ ಮ
ಚ್ಚರಿಸುವರಾರ್ ನಾಕಿಯಿರುಳೊಳೇಂ ಪುಟ್ಟದನೇ

ಗಂಡರ ಮೂಕುತಿಯೆನಿಸಿದ
ಮಾಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ
ಕೊಂಡಾಡಿ ಪೊರೆದನೆನೆ ಧರೆ
ಕೊಂಡಾಡದೆ ಕೊಂಡುಕೊನೆಯದೇ ನಾಕಿಗನಂ[7]

ಮೇಲಿನ ಪದ್ಯಗಳಲ್ಲಿ ಕೀರ್ತಿತರಾದವರಲ್ಲಿ ರಕ್ಕಸಗಂಗನು ಗಂಗಮಂಡಲವನ್ನು ಆಳಿದ ದೊರೆ ರಾಚಮಲ್ಲನ ತಮ್ಮನಾಗಿದ್ದು ಅಣ್ಣನ ತರುವಾಯ ಪಟ್ಟಕ್ಕೆ ಬಂದು (988–1024) ರಾಜ್ಯವಾಳಿದನು. ಚಾವುಂಡರಾಯನು ರಾಚಮಲ್ಲನಲ್ಲಿ ಮಂತ್ರಿಯೂ ಸೇನಾನಾಯಕನೂ ಆಗಿದ್ದುದಲ್ಲದೆ, ಕನ್ನಡದಲ್ಲಿ 'ಚಾವುಂಡರಾಯ ಪುರಾಣ'ವೆಂಬ ಗದ್ಯಗ್ರಂಥವನ್ನು ಬರೆದು ಶ್ರವಣಬೆಳಗೊಳದಲ್ಲಿ ಗೋಮಟೇಶ್ವರ ವಿಗ್ರಹವನ್ನು ಪ್ರತಿಷ್ಠಿಸಿ ಪ್ರಖ್ಯಾತನಾದನು. ರಾಚಮಲ್ಲ, ಚಾವುಂಡರಾಯ, ರನ್ನ ಇವರಿಗೆ ಅಜಿತಸೇನಾಚಾರ್ಯರು ಗುರುಗಳಾಗಿದ್ದರು.

ಈ ಗ್ರಂಥದಿಂದ ಕವಿಗೆ 'ಕವಿರಾಜಹಂಸ' ಎಂಬ ಬಿರುದು ಇದ್ದಂತೆ ತಿಳಿದು ಬರುತ್ತದೆ. ಅಲ್ಲದೆ ಕವಿ ತನ್ನನ್ನು ನಾಕಿ, ನಾಕಿಗ, ಸಯ್ಯಡಿಯಾತನೆಂದು ಕರೆದು ಕೊಂಡಿದ್ದಾನೆ.

ಛಂದೋಂಬುಧಿ ಕಾದಂಬರಿಗಳನ್ನು ಬರೆದವನು ಒಬ್ಬನೆ ? ಅಥವಾ ಬೇರೆ ಬೇರೆಯವರೆ ? ಎಂಬ ಅಂಶವನ್ನು ಇಲ್ಲಿ ಪರಿಶೀಲಿಸಬಹುದು.

ಮೇಲೆ ಹೇಳಿದ ಯಾವ ಒಂದು ಗ್ರಂಥದಲ್ಲಾಗಲಿ, ಇನ್ನೊಂದು ಗ್ರಂಥದ ಹೆಸರನ್ನು ಹೇಳಿಲ್ಲ. ಛಂದಶ್ಶಾಸ್ತ್ರವನ್ನು ಇಂದುಧರನು ಉಮೆಗೆ ಹೇಳಿದಂತೆ, ನಾಗ ವರ್ಮನು ಛಂದೋಂಬುಧಿಯನ್ನು ತನ್ನ ಹೆಂಡತಿಗೆ ಹೇಳುತ್ತಾನೆ. ಕವಿಗೆ ಚಾವುಂಡ ರಾಯನ ಆಶ್ರಯವಿತ್ತೆಂದು ಇಟ್ಟುಕೊಳ್ಳೋಣ. ಹಾಗೆಂದ ಮಾತ್ರಕ್ಕೆ ತನ್ನ ಆಶ್ರಯದಾತನ ತೃಪ್ತಿಗಾಗಿ ಅವನು ಇದನ್ನು ಬರೆಯಲಿಲ್ಲ. ಹಾಗೆ ಬರೆದಿದ್ದರೆ ಇಲ್ಲಿ ಅವನ ವಿಷಯವಾದ ಇನ್ನೂ ಕೆಲವು ಪದ್ಯಗಳಿರುತ್ತಿದ್ದವು. ಕಾದಂಬರಿಯ ಕೃತಿ ಪತಿಯಾದ ನರೇಂದ್ರಚಂದ್ರನಿಗೆ ಸಂಬಂಧಿಸಿದ ಒಂದು ಮಾತೂ ಛಂದೋಂಬುಧಿ ಯಲ್ಲಿಲ್ಲ. ಛಂದೋಂಬುಧಿಯಲ್ಲಿ ಬರುವ ವಂಶವರ್ಣನೆ ಕಾದಂಬರಿಯಲ್ಲಿಲ್ಲ. ಹೀಗಿ ರುವಲ್ಲಿ ಎರಡುಕೃತಿಗಳನ್ನು ಒಬ್ಬನೇ ಬರೆದನೆಂದು ಹೇಳುವುದು ಹೇಗೆ ?

ಈ ಸಂಶಯವನ್ನು ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರೇ ವ್ಯಕ್ತಪಡಿಸಿದ್ದಾರೆ. ಚಾವುಂಡರಾಯ ಮತ್ತು ಭೋಜರ ಕಾಲಕ್ಕೆ ಇರುವ ಅಂತರ ವನ್ನು ಗಮನಿಸಿ ಅವರು ಕವಿಚರಿತೆಯ ಮೂರನೆಯ ಸಂಪುಟದ ಗ್ರಂಥ ಶುದ್ಧಿ (ಪುಟ 478) ಯ ಭಾಗದಲ್ಲಿ 'ಧಾರಾಪುರದ ಭೋಜರಾಜನು 1010ರಲ್ಲಿ ಆಳುವು ದಕ್ಕೆ ಆರಂಭಿಸಿದಂತೆ ತಿಳಿಯುವುದರಿಂದ ಕಾದಂಬರಿಯನ್ನು ಬರೆದ ನಾಗವರ್ಮನು ಛಂದೋಂಬುಧಿಯನ್ನು ಬರೆದ ನಾಗವರ್ಮನಿಗಿಂತ ಬೇರೊಬ್ಬನಿರಬಹುದೊ ಎಂಬ ಸಂದೇಹಕ್ಕೆ ಅವಕಾಶವಿರುವಂತೆ ತೋರುತ್ತದೆ' ಎಂದು ಅಭಿಪ್ರಾಯಪಟ್ಟರು. ಸಂದೇಹವನ್ನು ವ್ಯಕ್ತಪಡಿಸಿದರೇ ಹೊರತು ಆಚಾರ್ಯರು ತಮ್ಮ ನಿಲವನ್ನು ಮಾರ್ಪಡಿಸಲಿಲ್ಲ. ಶ್ರೀ ಚೆನ್ನಕೇಶವ ಐಯಂಗಾರರು ಈ ಗ್ರಂಥಗಳ ಕರ್ತೃಗಳು ಬೇರೆ ಬೇರೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೆ ಅವರು ಕೊಡುವ ಕಾರಣ ಗಳು ವಿಚಿತ್ರವಾಗಿವೆಯಾಗಿ ಅವನ್ನು ಒಪ್ಪುವಂತಿಲ್ಲ. ಮೊದಲನೆಯದಾಗಿ ಛಂದೋಂ ಬುಧಿಯಲ್ಲಿ ಕವಿಯ ವಂಶಾವಳಿ ಇದೆ ; ಕಾದಂಬರಿಯಲ್ಲಿಲ್ಲ. ಎರಡನೆಯದಾಗಿ ಈ ಎರಡು ಕೃತಿಗಳಿಗೂ ಸಾಕಷ್ಟು ಕಾಲದ ಅಂತರವಿದ್ದು ಶೈಲಿ ಬೇರೆಬೇರೆಯಾಗಿದೆ. ಆದ್ದ ರಿಂದ ಇವರಿಬ್ಬರು ಬೇರೆ ಬೇರೆ ವ್ಯಕ್ತಿಗಳು. ಈ ವಾದವನ್ನು ಸುಲಭವಾಗಿ ಖಂಡಿಸ ಬಹುದು. ಭಾರತದಲ್ಲಿ ತನ್ನ ವಂಶಾವಳಿಯನ್ನು ಹೇಳಿಕೊಂಡ ಪಂಪನು ಆದಿ ಪುರಾಣದಲ್ಲಿ ಹೇಳಿಕೊಂಡಿಲ್ಲವಾದ ಕಾರಣ, ಈ ಕೃತಿಗಳ ರಚನೆ ಮಾಡಿದವರು ಬೇರೆ

ಬೇರೆ ಎನ್ನಬಹುದೆ? ಜನ್ನನ ಯಶೋಧರ ಚರಿತ್ರೆಯ ರಚನೆಗೂ ಅನಂತನಾಥ ಪುರಾಣದ ರಚನೆಗೂ ಇಪ್ಪತ್ತೊಂದು ವರ್ಷಗಳ ಅಂತರವಿದೆ. ಶೈಲಿ ಹಿಡಿತಕ್ಕೆ ಸಿಕ್ಕತಕ್ಕ ವಿಷಯವಲ್ಲ. ಛಂದಶ್ಶಾಸ್ತ್ರದಲ್ಲಿ ಎಂಥ ಶೈಲಿಯ ಸ್ವರೂಪವನ್ನು ಕಾಣಬಹುದು ? ಮೇಲಿನ ಅಂಶಗಳಷ್ಟರಿಂದಲೇ ಯಾವ ನಿರ್ಣಯವನ್ನೂ ಮಾಡುವಂತಿಲ್ಲ.

ಈಗ ನಮಗೆ ತಿಳಿದಿರುವ ಅಂಶಗಳಿಂದ ಈ ಗ್ರಂಥಗಳ ಏಕಕರ್ತೃತ್ವದ ವಿಚಾರದಲ್ಲಿ ಇಷ್ಟನ್ನು ಮಾತ್ರ ಹೇಳಬಹುದು. ಎರಡು ಗ್ರಂಥಗಳಲ್ಲಿಯೂ ಕವಿಯನ್ನು ಯುದ್ಧವೀರನೆಂದು ವರ್ಣಿಸಿದೆ. ಈ ಎರಡು ಕೃತಿಗಳಲ್ಲಿಯೂ ಕವಿಯ ಬಿರುದುಗಳು ಸಮಾನಾರ್ಥವನ್ನು ಸೂಚಿಸುತ್ತವೆ. ಅಲ್ಲದೆ ಕೆಲವು ಕಡೆ ಕಾದಂಬರಿ ಛಂದೋಂಬುಧಿಗಳಲ್ಲಿ ಸಮಾನವಾದ ಕೆಲವು ಪದಪುಂಜಗಳು ದೊರೆಯುತ್ತವೆ. ಆದ್ದರಿಂದ ಬೇರೆ ಪ್ರಮಾಣಗಳು ದೊರಕುವ ವರೆಗೆ ಛಂದೋಂಬುಧಿಯನ್ನು ಒಂದನೆಯ ನಾಗವರ್ಮನು ತಾರುಣ್ಯದಲ್ಲಿಯೂ ಕಾದಂಬರಿಯನ್ನು ಪರಿಣತ ವಯಸ್ಸಿನಲ್ಲಿಯೂ ಬರೆದನೆಂದಿಟ್ಟುಕೊಳ್ಳಬಹುದು.[8]

ಕಾಲ ಮತ್ತು ರಾಜಾಶ್ರಯ

ನಾಗವರ್ಮನು ಕಾದಂಬರಿಯಲ್ಲಾಗಲಿ ಛಂದೋಂಬುಧಿಯಲ್ಲಾಗಲಿ ಕಾವ್ಯ ರಚನೆಯ ಕಾಲವನ್ನು ಹೇಳಿಕೊಂಡಿಲ್ಲವಾದ ಕಾರಣ, ಕವಿಯ ಜೀವಿತಕಾಲವೂ ಒಂದು ತೊಡಕಿನ ಪ್ರಶ್ನೆಯಾಗಿದೆ. ಕನ್ನಡ ಸಾಹಿತ್ಯ ಮೊದಲಾದ ದಿನದಿಂದ ಇತ್ತೀಚಿನವರೆಗೆ ಬಹುವಾಗಿ ಅದು ರಾಜಾಶ್ರಯದಲ್ಲಿ ಬೆಳೆದುಬಂದಿತು ಎನ್ನುವುದು ಎಲ್ಲರಿಗೂ ತಿಳಿದ ಸಂಗತಿಯೇ. ಆದಕಾರಣ ನಾಗವರ್ಮನಿಗೆ ಆಶ್ರಯ ಕೊಟ್ಟಿದ್ದ ರಾಜರು ಯಾರು ಅವರು ಬದುಕಿದ್ದ ಕಾಲ ಯಾವುದು ಎನ್ನುವುದನ್ನು ತಿಳಿದುಕೊಳ್ಳುವುದರಿಂದಲೂ ಕವಿಯ ಗ್ರಂಥಗಳಲ್ಲಿ ದೊರಕುವ ಇತರ ಸಾಕ್ಷ್ಯಗಳಿಂದಲೂ ನಾಗವರ್ಮನ ಕಾಲವನ್ನು ನಿರ್ಣಯಿಸಬೇಕಾಗಿದೆ. ನಮಗೆ ಈಗ ತಿಳಿದಿರುವಂತೆ ನಾಗವರ್ಮನಿಗೆ ಆಶ್ರಯಕೊಟ್ಟವರು ಮೂರು ಮಂದಿ.

ಗಂಗರ ದೊರೆ ರಾಚಮಲ್ಲನ ತಮ್ಮ ರಕ್ಕಸಗಂಗನಲ್ಲಿ ಸೇನಾಪತಿಯೂ ಮಂತ್ರಿಯೂ ಅಜಿತಸೇನಾಚಾರ್ಯರ ಶಿಷ್ಯನೂ ಚಾವುಂಡರಾಯ ಪುರಾಣದ ಕರ್ತೃವೂ ಆದ ಚಾವುಂಡರಾಯ.

ಈ ಕಾದಂಬರಿ ಕೃತಿಗೆ ಒಡೆಯನಾದ ಚಂದ್ರನೆಂಬ ರಾಜ.

ಕನ್ನಡ ಕಾದಂಬರಿ ಕಾವ್ಯಕ್ಕೆ ಗೌರವ ತೋರಿ, ಕವಿಗೆ ಜಾತ್ಯಶ್ವಗಳನ್ನು ಕೊಟ್ಟು ಬಹುಮಾನಿಸಿದ ಭೋಜರಾಜ.

ಮೇಲುನೋಟಕ್ಕೆ ಮೇಲೆ ನಿರೂಪಿತರಾಗಿರುವ ವ್ಯಕ್ತಿಗಳು ಚಿರಪರಿಚಿತರಾಗಿ ಕಂಡುಬಂದರೂ ಇಲ್ಲಿಯೂ ಕೆಲವು ತೊಡಕುಗಳಿವೆ. ಕನ್ನಡನಾಡಿನ ಚರಿತ್ರೆಯಲ್ಲಿ ಮೂರುಜನ ರಕ್ಕಸಗಂಗರು ಆಗಿ ಹೋಗಿದ್ದಾರೆ. ಇವರಲ್ಲಿ ನಗರದ 35ನೆಯ ಶಾಸನದಲ್ಲಿ ಕೀರ್ತಿತನಾಗಿರುವ ರಕ್ಕಸಗಂಗನಿಗೆ ಮಾತ್ರ ಗಂಡರ ಮೂಕುತಿ ಎಂಬ ಬಿರುದಿದೆ. ಇವನು ಹನ್ನೊಂದನೆಯ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದನು. ಹಾಗೆಯೇ ಚರಿತ್ರೆಯಲ್ಲಿ ಹಲವು ಜನ 'ಚಂದ್ರ'. 'ಭೋಜ' ರಾಜರು ಉಲ್ಲೇಖ ಗೊಂಡಿದ್ದಾರೆ. ಹೀಗಾಗಿ ಕವಿಯ ಕಾಲದ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿವೆ. ಅವನ್ನು ಹೀಗೆ ಸಂಗ್ರಹಿಸಬಹುದು.

ಚಂದ್ರನೆಂಬ ದೊರೆ ನಾಗವರ್ಮನಿಗೆ ಆಶ್ರಯ ಕೊಟ್ಟಿದ್ದ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳದೆ, ಛಂದೋಂಬುಧಿಯ ಪದ್ಯಗಳು ಪ್ರಕ್ಷಿಪ್ತಗಳಾಗಿರದೆ ಕವಿಯ ಕಾಲನಿರ್ಣಯಕ್ಕೆ ನಿಸ್ಸಂದೇಹವಾಗಿ ಸಹಾಯಕವಾಗಿವೆಯೆಂದು ಭಾವಿಸಿ, ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ನಾಗವರ್ಮನ ಕಾಲ ಸು. 990 ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇವರ ಪ್ರಕಾರ ನಾಗವರ್ಮನು ಅಜಿತಸೇನಾಚಾರ್ಯರ ಶಿಷ್ಯನಾಗಿದ್ದು ಚಾವುಂಡರಾಯನಲ್ಲಿ ಆಶ್ರಯ ಪಡೆದಿದ್ದನು. ಜಾತ್ಯಶ್ವಗಳನ್ನು ಕೊಟ್ಟು ಕವಿಯನ್ನು ಗೌರವಿಸಿದವನು ಧಾರಾಪುರದ ಭೋಜರಾಜ.

ನಾಗವರ್ಮನ ಹೆಸರಿನಲ್ಲಿರುವ ಐದು ಗ್ರಂಥಗಳನ್ನೂ ಒಬ್ಬನೇ ನಾಗವರ್ಮನು ರಚಿಸಿರುವನೆಂದು ಭಾವಿಸಿರುವ ಡಾ. ಎ. ವೆಂಕಟಸುಬ್ಬಯ್ಯನವರು ಕವಿಚರಿತೆಕಾರರ ಕಾಲ ನಿರ್ಣಯವನ್ನು ಒಪ್ಪದೆ, ನಾಗವರ್ಮನು 1030 ರಿಂದ 1050ರ ಅವಧಿಯಲ್ಲಿ ತನ್ನ ಕೃತಿಗಳನ್ನು ರಚಿಸಿರಬೇಕೆಂಬ ನಿರ್ಣಯವನ್ನು ಮುಂಡಿಸಿದ್ದಾರೆ. ತಮ್ಮ ನಿರ್ಣಯವನ್ನು ಸಮರ್ಥಿಸಲು ಅವರು ಕೊಡುವ ಕಾರಣಗಳು ಇವು : ರಕ್ಕಸಗಂಗ, ಅಜಿತಸೇನ, ರಾಯ ಎಂಬ ಹೆಸರಿನ ಅನೇಕ ವ್ಯಕ್ತಿಗಳು ಕರ್ಣಾಟಕದ ಶಾಸನಗಳಲ್ಲಿ ಉಕ್ತರಾಗಿದ್ದಾರೆ. ರಾಯ ಅಥವಾ ಚಾವುಂಡರಾಯ ಎಂಬ ಹೆಸರಿನ ಅನೇಕ ಜನ ಗಣ್ಯರು ಹನ್ನೊಂದನೆಯ ಶತಮಾನದಲ್ಲಿದ್ದರು. ರಾಯ ಎನ್ನುವುದು ಕವಿಚರಿತೆಕಾರರು ಹೇಳುವಂತೆ ಬಿರುದಲ್ಲ ; ಚಾವುಂಡರಾಯ ಎಂಬ ಹೆಸರಿನ ಹ್ರಸ್ವರೂಪ. ಛಂದೋಂಬುಧಿಯ ರಾಯ ಮಂಡಳಿಕರಲ್ಲಿ ಸಂಧಿವಿಗ್ರಹಿಯೂ ಮಂತ್ರಿಯೂ ಆಗಿದ್ದನು. ರಾಚಮಲ್ಲನಲ್ಲಿ ಸೇನಾನಾಯಕನೂ ಮಂತ್ರಿಯೂ ಹಾಗೂ ಪುರಾಣ

ಕರ್ತೃವೂ ಆದ ಚಾವುಂಡರಾಯನಿಗಿಂತ ಛಂದೋಂಬುಧಿಯ ರಾಯನು ಭಿನ್ನನು. ರಕ್ಕಸಗಂಗರು ಬೇರೆ ಬೇರೆ ಇದ್ದರೂ ನಗರದ 35ನೆಯ ಶಾಸನದಲ್ಲಿ ಕೀರ್ತಿತನಾಗಿ ರುವ ರಕ್ಕಸಗಂಗನಿಗೆ ಮಾತ್ರ 'ಗಂಡರ ಮೂಕುತಿ' ಎನ್ನುವ ಬಿರುದಿದೆ. ಇವನು ರಾಚಮಲ್ಲನ ತಮ್ಮನಾದ ವಾಸವದೇವ ಕಂಚಲದೇವಿಯರ ಮಗ. ಗೋವಿಂದನೆಂದು ಇವನ ಹೆಸರು. ಇವನಿಗೆ ಅರುಮುಳಿದೇವನೆಂಬ ತಮ್ಮನಿದ್ದನು. ಇವನ ದೌಹಿತ್ರ ನಾದ ನನ್ನಿಶಾಂತನು ಹುಂಚದಲ್ಲಿರುವ ಪಂಚಕಳಶ ಬಸದಿಗೆ 1077ರಲ್ಲಿ ಗ್ರಾಮಾದಿ ಗಳನ್ನು ದತ್ತಿ ಬಿಟ್ಟನು. ಆದ್ದರಿಂದ ನಾಗವರ್ಮನ ಪೋಷಕನಾದ ರಕ್ಕಸಗಂಗನ ಕಾಲ ಸುಮಾರು 1050. ಛಂದೋಂಬುಧಿಯಲ್ಲಿ ಕೀರ್ತಿತನಾಗಿರುವ ಅಜಿತಮುನಿ ಚಾವುಂಡರಾಯ ರಾಚಮಲ್ಲರ ಗುರುವೊ ಇಲ್ಲವೆ ಶ್ರೀ ವಿಜಯಭಟ್ಟಾರಕನ ಶಿಷ್ಯನೊ ಇಲ್ಲವೆ ಇವರಿಬ್ಬರಿಗಿಂತ ಭಿನ್ನನಾದವನೊ ಹೇಳಲು ಬರುವಂತಿಲ್ಲ.

ಜನ್ನನು ತನ್ನ ಅನಂತನಾಥಪುರಾಣದಲ್ಲಿ 'ಜನನಾಥಂ ಜಗದೇಕನಲ್ಲಿ ಕಟಕೋ ಪಾಧ್ಯಾಯನಾ ನಾಗವರ್ಮಂ' ಎಂದು ಹೇಳಿರುವುದರಿಂದ, ನಾಗವರ್ಮನು ಚಾಲುಕ್ಯ ಚಕ್ರವರ್ತಿ ಜಯಸಿಂಹ ಜಗದೇಕಮಲ್ಲ (1015–1042)ನಲ್ಲಿ ಕಟಕೋಪಾಧ್ಯಾಯ ನಾಗಿದ್ದುದು ಸುಸ್ಪಷ್ಟ. ರಕ್ಕಸಗಂಗನ ಕಾಲ ಸು. 1050 ಎಂದು ಮೇಲೆ ಹೇಳಿ ತಷ್ಟೆ. ನಾಗವರ್ಮನಿಗೆ ಮರ್ಯಾದೆ ಮಾಡಿದ ಭೋಜನ ಕಾಲ ಡಾ. ವಿಂಟರ್‌ನಿಟ್ಜ಼ರ ಅಭಿಪ್ರಾಯದಂತೆ 1018 ರಿಂದ 1060. ಆದ್ದರಿಂದ ನಾಗವರ್ಮನು 1030 ರಿಂದ 1050ರ ಒಳಗೆ ತನ್ನೆಲ್ಲ ಗ್ರಂಥಗಳನ್ನು ರಚಿಸಿದನೆಂದರೆ ಅದು ವಸ್ತುಸ್ಥಿತಿಗೆ ವಿರೋಧವಾಗಲಾರದು. ಮೊದಲು ನಾಗವರ್ಮನು ಛಂದೋಂಬುಧಿಯನ್ನು ರಚಿಸಿ, ಆ ಬಳಿಕ ಕಾದಂಬರಿಯನ್ನು ಬರೆದು ಭೋಜನಿಂದ ಬಹುಮಾನವನ್ನು ಪಡೆ ದನು. ಒಟ್ಟಿನಲ್ಲಿ 1030–40ರ ಅವಧಿಯಲ್ಲಿ ಛಂದೋಂಬುಧಿ, ಕಾದಂಬರಿ, ಭಾಷಾ ಭೂಷಣಗಳನ್ನು ಬರೆದು, ಜಯಸಿಂಹನ ಆಳ್ವಿಕೆಯ ಕಡೆ ವರ್ಷಗಳಲ್ಲಿ ಅವನ ಬಳಿ ಕಟಕೋಪಾಧ್ಯಾಯನಾಗಿದ್ದು 1040–1042ರಲ್ಲಿಯೊ 1042ರ ಈಚೆಯೊ ವಸ್ತು ಕೋಶ ಕಾವ್ಯಾವಲೋಕನಗಳನ್ನು ಬರೆದಿರಬೇಕು.

ಕಾದಂಬರಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ 'ತ್ರಿಭುವನ' 'ತ್ರೈಲೋಕ್ಯ', 'ಜಗದೇಕ' 'ವಿಕ್ರಮಾಂಕ' ಈ ಪದಗಳು ಅಲ್ಲಿ ವಿಪುಲವಾಗಿ ಪ್ರಯೋಗಗೊಂಡಿವೆ. ಇವು ಚಾಳುಕ್ಯರ ಐದನೆಯ ವಿಕ್ರಮಾದಿತ್ಯ ತ್ರಿಭುವನಮಲ್ಲ(1009-1014), ಜಯ ಸಿಂಹ ಜಗದೇಕಮಲ್ಲ (1015–1042), ಸೋಮೇಶ್ವರ ತ್ರೈಲೋಕ್ಯ ಆಹವಮಲ್ಲ (1042-1068) ಇವರನ್ನೂ ಇವರ ಬಿರುದುಗಳನ್ನೂ ಶ್ಲೇಷೆಯಿಂದ ಸೂಚಿಸು ತ್ತವೆ. ಕವಿ ಈ ಕಾಲದವನು. ಭೋಜನೂ ಇದೇ ಸಮಯದಲ್ಲಿ ಧಾರಾಪುರದಲ್ಲಿ

ರಾಜ್ಯವಾಳುತ್ತಿದ್ದನು. ಇದು ಕವಿಯ ಕಾಲದ ವಿಷಯದಲ್ಲಿ ಎಚ್. ಚೆನ್ನಕೇಶವ ಐಯಂಗಾರರ ನಿಲವು.

ಶ್ರೀ ಎಂ. ಗೋವಿಂದಪೈಗಳು 'ನಾಗವರ್ಮರು ಎಷ್ಟು ಮಂದಿ?' ಎಂಬ ತಮ್ಮ ವಿಸ್ತಾರವಾದ ಲೇಖನದಲ್ಲಿ ಕವಿಯ ಕಾಲವನ್ನು ಚರ್ಚಿಸಿದ್ದಾರೆ. ಅವರ ವಾದದ ಸಾರಾಂಶ ಇಷ್ಟು: ನಾಗವರ್ಮರು ಮೂರು ಮಂದಿ ಇದ್ದರು. ಜೈನನೂ ಕಾವ್ಯಾವಲೋಕನ, ಭಾಷಾಭೂಷಣಗಳ ಕರ್ತೃವೂ ಆದ ಎರಡನೆಯ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದದ್ದು ಚಾಳುಕ್ಯರ ಇಮ್ಮಡಿ ಜಗದೇಕಮಲ್ಲ (1139–1150)ನಲ್ಲಿ. ಕಾದಂಬರಿ ಛಂದೋಂಬುಧಿಗಳ ನಾಗವರ್ಮನಿಗೂ ಎರಡನೆಯ ನಾಗವರ್ಮನಿಗೂ ಅಂತರ 180 ವರ್ಷಗಳು. ಒಂದನೆಯ ನಾಗವರ್ಮನ ಛಂದೋಂಬುಧಿಯಲ್ಲಿ ಹೇಳಿರುವ 'ಅರಸಂ ರಕ್ಕಸಗಂಗಂ' ಎಂಬ ಪದ್ಯದಲ್ಲಿ, ರಾಯ, ಅಣ್ಣ ಎಂಬ ಪದಗಳು ನಾಗವರ್ಮನ ಪೋಷಕನ ಬಿರುದೊ ಇಲ್ಲವೆ ಉಪನಾಮಗಳೊ ಆಗಿರಬೇಕು. ಚಾವುಂಡರಾಯ ಪುರಾಣದ ಕರ್ತೃವಾದ ಚಾವುಂಡರಾಯನಿಗೆ 'ರಾಯ', 'ಗೊಮ್ಮಟ' ಎಂಬ ಬಿರುದುಗಳಿದ್ದವು. ಇವನೇ ನಾಗವರ್ಮನ ಪೋಷಕನಾದ ಚಾವುಂಡರಾಯ. ಮೇಲಿನ ಪದ್ಯದಲ್ಲಿ ಕೀರ್ತಿತನಾಗಿರುವ ರಕ್ಕಸಗಂಗ ಸತ್ಯವಾಕ್ಯ ನಾಲ್ಕನೆಯ ರಾಚಮಲ್ಲ (978-984). ಇವನು ಶ್ರೇಷ್ಠನಾದ ಕವಿಯೆಂದು ನಗರದ '35ನೆಯ ಶಾಸನ ವರ್ಣಿಸಿದೆ. ಛಂದೋಂಬುಧಿಯ ಆದಿಯಲ್ಲಿ ಬರುವ 'ಅಶೇಷ ಭೂಭುವನ ಮಂಡಲವಲ್ಲಭನಾದ ದೇವನ್ ....ಸುಕವೀಂದ್ರವಲ್ಲಭನ್' ಎಂಬ ವಿಷ್ಣುಸ್ತುತಿರೂಪವಾದ ಪದ್ಯದಲ್ಲಿ ಮಂಡಲೇಶ್ವರನೂ ಸುಕವೀಂದ್ರನೂ ಆದ ರಾಚಮಲ್ಲನನ್ನು ಕವಿ ಶ್ಲೇಷೆಯಿಂದ ವರ್ಣಿಸಿದ್ದಾನೆ. ಆದ್ದರಿಂದ ಕವಿ ಯುವಕನಾಗಿದ್ದಾಗ, ರಾಚಮಲ್ಲನ ಕಾಲದಲ್ಲಿ, ಎಂದರೆ ಸು. 980ರಲ್ಲಿ ಛಂದೋಂಬುಧಿ ರಚಿತವಾಗಿರಬೇಕು. ಛಂದೋಂಬುಧಿಯಲ್ಲಿ ದೊರಕುವ ಕವಿಯ ವಿಷಯವಾವ ವಿವರಗಳು ಕಾದಂಬರಿಯಲ್ಲಿ ದೊರಕುವುದಿಲ್ಲ. ಆದರೆ ಭೋಜ ರಾಜನು ನಾಗವರ್ಮನಿಗೆ ಜಾತ್ಯಶ್ವಗಳನ್ನು ಬಹುಮಾನವಾಗಿ ಕೊಟ್ಟದ್ದಂತೂ ಗಟ್ಟಿ ಸಂಗತಿ. ಕಾವ್ಯದ ಆದಿಯಲ್ಲಿ ಚಂದ್ರನ ಸ್ತುತಿ, 'ಕೃತಿಪತಿ ನರೇಂದ್ರಚಂದ್ರಂ' ಎಂಬ ಹೇಳಿಕೆ, ಚಂದ್ರಾಪೀಡನನ್ನು ಬಗೆಬಗೆಯಾಗಿ ಒಕ್ಕಣಿಸುವುದು ಇವೆಲ್ಲ ಕವಿಗೆ ಚಂದ್ರನೆಂಬ ದೊರೆಯ ಆಶ್ರಯವನ್ನು ಸೂಚಿಸುತ್ತವೆ. ಭೋಜ ಚಂದ್ರರು ಬದುಕಿದ್ದಾಗಲೇ ಈ ಕೃತಿ ರಚನೆಯಾಗಿರಬೇಕು.

ಹಾಗಾದರೆ ಈ ಭೋಜ ಚಂದ್ರರು ಯಾರು? ಚರಿತ್ರೆಯಲ್ಲಿ ಈ ಹೆಸರಿನ ಅನೇಕರಿದ್ದಾರೆ. ಇವರಲ್ಲಿ ಶಿಲಾಹಾರ ವಂಶದ ಮೂರನೆಯ ಶಾಖೆಯವರು ಕೊಲ್ಲಾಪುರ–

ಕರ್ಹಾಡ ದೇಶಗಳಲ್ಲಿ ಆಳುತ್ತಿದ್ದರು. ಇವರಲ್ಲಿ ಧಾರಾಪುರದ ಸಿಂಧರಾಜ (995 999) ನ ಸಮಕಾಲೀನನೂ ಸಾಮಂತನೂ ಆಗಿದ್ದ ಚಂದ್ರನೆಂಬ ದೊರೆಯಿದ್ದಾನೆ. ಇವನೇ ನಾಗವರ್ಮನ ಆಶ್ರಯದಾತ. ಇವನು 980 ರಿಂದ 1005ರ ವರೆಗೆ ಆಳಿರ ಬಹುದು. ಪರಮಾರ ವಂಶೀಯರು ಕರ್ಣಾಟಕ ಚಕ್ರವರ್ತಿಗಳ ಸಾಮಂತರಾಗಿದ್ದು ಭೋಜನ ಅಜ್ಜ ಸೀಯಕನ ಕಾಲದಲ್ಲಿ ಸ್ವತಂತ್ರರಾದರು. ಮುಂಜ ಭೋಜರೊಡನೆ ಪಡುವಣ ಚಾಳುಕ್ಯರು ಸೆಣಸಿ ಯುದ್ಧ ನಡಸುತ್ತಿದ್ದುದು ಇತಿಹಾಸ ಪ್ರಸಿದ್ಧವಾದ ಸಂಗತಿ. ಈ ಯುದ್ಧಗಳ ಪರಿಣಾಮವಾಗಿ ಪರಮಾರ ದೊರೆಗಳಿಗೆ ಸಾಕಷ್ಟು ಕನ್ನಡದ ತಿಳಿವಳಿಕೆ ಇದ್ದಿರಬೇಕು. ಆದ್ದರಿಂದಲೇ 1000 ದಿಂದ 1054ರ ವರೆಗೆ ಆಳಿದ ಕವಿಗಳ ಕಾಮಧೇನು ಭೋಜನು ಯುದ್ಧವೀರನಾದ ನಾಗವರ್ಮನನ್ನು ಕವಿಯೆಂಬ ಮಮತೆಯಿಂದ ಗೌರವಿಸಿರಬೇಕು. 'ಅತಏವ ಈ ನಾಗವರ್ಮನು ತನ್ನ ಕನ್ನಡದ ಕಾದಂಬರಿಯನ್ನು ಕೊಲ್ಲಾಪುರದ ಶಿಲಾಹಾರ ಅರಸನಾದ ಚಂದ್ರನ ಹಾಗೂ ಧಾರಾಪುರದ ಅರಸನಾದ ಪರಮಾರ ಭೋಜನ ಆಳಿಕೆಗಳ ಸರಿಗಾಲವಾದ ಕ್ರಿ. ಶ. 1000 ದಿಂದ 1005 ರೊಳಗೆ ರಚಿಸಿರುವನೆಂದು ಹೇಳಬಹುದು'.

ಮೇಲೆ ಹೇಳಿದ ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ, ಬೇರೆ ಸಾಕ್ಷ್ಯಗಳು ದೊರಕುವವರೆಗೆ ಕವಿಚರಿತೆಕಾರರ, ಶ್ರೀ ಗೋವಿಂದಪೈಗಳ ಅಭಿಪ್ರಾಯ ವನ್ನು ಒಪ್ಪಿ ಒಂದನೆಯ ನಾಗವರ್ಮ ಹತ್ತನೆಯ ಶತಮಾನದ ಕೊನೆಯಲ್ಲಿಯೂ ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿಯೂ ಜೀವಿಸಿದ್ದನೆಂದಿಟ್ಟುಕೊಳ್ಳ ಬಹುದು. ನಾಗವರ್ಮನು ಮೊದಲು ಚಾವುಂಡರಾಯನ ಆಶ್ರಯಕ್ಕೆ ಸಂದು, ಆ ಬಳಿಕ ಕೊಲ್ಲಾಪುರ ಕರ್ಹಾಡ ಶಾಖೆಯ ಅರಸನಾದ ಚಂದ್ರರಾಜನಲ್ಲಿ ಸ್ಥಿರವಾಗಿ ನಿಂತು, ಅವನ ಅಧಿರಾಜನಾದ ಭೋಜನ ಪರವಾಗಿ ಹೋರಾಡಿ, ಅವನ ಮೆಚ್ಚುಗೆ ಯನ್ನು ಕವಿ ಪಡೆದಿರುವುದು ಸಂಭವ. ಛಂದೋಂಬುಧಿ ಯೌವನದ ಹುಮ್ಮಸ್ಸಿ ನಲ್ಲಿ ಹೆಂಡತಿಯ ಮೇಲಿನ ಪ್ರೀತಿಗಾಗಿ ಬರೆದ ಗ್ರಂಥ. ಅದರಲ್ಲಿ ಅವನ ವಂಶದ ಕೆಚ್ಚು ಮೂಡಿರುವುದು ಸ್ವಾಭಾವಿಕ. ಅನುಭವ ಪಕ್ವವಾಗಿ, ಉತ್ಕೃಷ್ಟವಾದ ಕಥೆ ಯನ್ನು ಕಾವ್ಯಮಯವಾಗಿ ರಚಿಸಿರುವ ಕವಿ, ಭೋಜನು ತನ್ನ ಶಕ್ತಿಯನ್ನು ಮನ ಗಂಡು ಗೌರವಿಸಿದನು ಎಂಬ ಮಾತಿನಿಂದಲೇ ತೃಪ್ತನಾಗಿದ್ದಾನೆ.

ಮತ

ಕವಿಯ ಮತದ ವಿಷಯವನ್ನಾಗಲಿ ಅವನು ಅನುಸರಿಸಿದ ಧರ್ಮವನ್ನಾಗಲಿ ತಿಳಿದುಕೊಳ್ಳಲು ಆಧುನಿಕರಾದ ನಮಗೆ ವಿಶೇಷವಾಗಿ ಆಸಕ್ತಿ ಇಲ್ಲವಾದರೂ

ಪ್ರಾಚೀನ ಕಾವ್ಯಗಳನ್ನು ಅರ್ಥಮಾಡಿಕೊಳ್ಳಲು ಕವಿ ಅನುಸರಿಸಿದ ಧರ್ಮ, ಅದರಿಂದ ಅವನು ಪಡೆದ ವಿಶೇಷ ಸಂಸ್ಕಾರ ಇವುಗಳ ಪರಿಚಯ ಆವಶ್ಯಕವಾಗುತ್ತದೆ. ಈ ದೃಷ್ಟಿಯಿಂದ ನಾಗವರ್ಮನ ಕೃತಿಗಳನ್ನು ಪರಿಶೀಲಿಸಿದಾಗ ಅವನು ಶೈವಮತಾವಲಂಬಿಯೆಂದು ಹೇಳಬೇಕಾಗುತ್ತದೆ. ಕನ್ನಡ ಕಾದಂಬರಿಯಲ್ಲಿ ನಿರೂಪಿತವಾಗಿರುವ ಶಿವಭಕ್ತಿ ಪ್ರಾಧಾನ್ಯದ ಈ ಹೇಳಿಕೆಗೆ ಪುಷ್ಟಿ ಅದಕ್ಕೂ ಕೊಡುತ್ತದೆ. ಈ ಮಾತನ್ನು ಒಪ್ಪದವರು ಸಂಸ್ಕೃತಕಾವ್ಯದ ಧಾರ್ಮಿಕ ಆವರಣವೇ ಕನ್ನಡದ ಕೃತಿಯಲ್ಲಿ ಮೂಡಿಬಂದಿದೆ ಎಂದು ಹೇಳಬಹುದು. ಅಲ್ಲದೆ ಪಂಪ ರನ್ನರಂತೆ ನಾಗವರ್ಮನು ತನ್ನ ಪೋಷಕನ ಧರ್ಮವನ್ನು ಕಾದಂಬರಿಯಲ್ಲಿ ಪ್ರತಿಪಾದಿಸುತ್ತಿರಬಹುದಲ್ಲವೆ ? ಆದ ಕಾರಣ ಇಷ್ಟರಿಂದಲೇ ಕವಿಯ ಮತವನ್ನು ಹೇಗೆ ನಿರ್ಧರಿಸುವುದು ? ಈ ವಾದದ ಮೊದಲ ಭಾಗವನ್ನು ಒಂದು ವೇಳೆ ಒಪ್ಪಿದರೂ ಎರಡನೆಯ ಭಾಗವನ್ನು ಒಪ್ಪಲಾಗುವುದಿಲ್ಲ. ವೈದಿಕ ಮತಾವಲಂಬಿಗಳಾದ ಅರಸರಿಗಾಗಿ ಕಾವ್ಯ ಬರೆದ ಪಂಪರನ್ನರು, ತಮ್ಮ ಲೌಕಿಕ ಗ್ರಂಥಗಳಲ್ಲಿ ತಾವು ಜೈನರೆಂಬುದನ್ನು ತೋರಿಸಿಕೊಂಡಿದ್ದಾರೆ. ಪಡೆದ ಸಂಸ್ಕಾರ ಮನುಷ್ಯನನ್ನು ಹೇಗೆ ತಾನೆ ಬಿಟ್ಟೀತು ? ನಾಗವರ್ಮನ ವಿಷಯದಲ್ಲಿ ಈ ಮಾತನ್ನು ಹೇಳುವಂತಿಲ್ಲ.

ಛಂದೋಂಬುಧಿಯಲ್ಲಿ ನಾಗವರ್ಮನು ಬ್ರಾಹ್ಮಣನೆಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಸೈಯಡಿಯ ಪಿನಾಕಿಯನ್ನು ದುರ್ಗಿಯನ್ನು ತುಂಬ ಆತ್ಮೀಯವಾಗಿ ಸ್ತುತಿಸಿರುವುದರಿಂದಲೂ ಲಘು ಮುರಾಂತಕ,ಗುರು ತ್ರಿಯಂಬಕ ಎಂದು ಕನ್ನಡ ಅಂಶಗಣಗಳ ನಿರೂಪಣೆಯಲ್ಲಿ ರುದ್ರಗುಣಕ್ಕೆ ಪ್ರಾಧಾನ್ಯವನ್ನು ಕೊಟ್ಟು ಶಿವನ ವಿಷಯದಲ್ಲಿ ತನ್ನ ಒಲವರನನ್ನು ಮೆರೆದಿರುವುದರಿಂದಲೂ ; 'ಇಂದುಧರನುಮೆಗೆಪೇಳ್ದಛಂದಂ' ಎಂದು ಹೇಳಿರುವುದರಿಂದಲೂ ನಾಗವರ್ಮನು ಸ್ಮಾರ್ತ ಬ್ರಾಹ್ಮಣನೆನ್ನುವುದು ಸ್ಪಷ್ಟವಾಗುತ್ತದೆ. ಆದರೆ 'ಅರಸಂ ರಕ್ಕಸಗಂಗಂ' ಎಂಬ ಪದ್ಯದಿಂದ ಕವಿ ಜೈನನಾಗಿದ್ದಿರಬಹುದೆ ಎಂಬ ಅನುಮಾನಕ್ಕೆ ಎಡೆಯಾಗಬಹುದು.

ಈ ವಿಷಯದಲ್ಲಿ ಯಾವ ಅನುಮಾನಕ್ಕೂ ಎಡೆಯಿಲ್ಲವೆಂದು ತೋರುತ್ತದೆ. ಮೊದಲನೆಯದಾಗಿ ಈ ಪದ್ಯಗಳು ಪ್ರಕ್ಷಿಪ್ತವಾಗಿರಬಹುದೆಂದು ಹಿಂದೆ ಹೇಳಿದೆ. ಈ ಎರಡು ಪದ್ಯಗಳನ್ನು ಬಿಟ್ಟರೆ ಕವಿ ಜೈನನೆನ್ನುವುದಕ್ಕೆ ಗ್ರಂಥದಲ್ಲಿ ಬೇರೆ ಯಾವ ಆಧಾರವೂ ಇಲ್ಲ. ಈ ಎರಡು ಪದ್ಯಗಳಿಂದಲೇ ಕವಿ ಜೈನನೆಂದು ನಿರ್ಧರಿಸುವುದಾದರೂ ಹೇಗೆ ? ಜೈನ ವೀರಶೈವಕವಿಗಳು ತಮ್ಮ ಕಾವ್ಯಗಳಲ್ಲಿ ಇತರ ಧರ್ಮದ ಕವಿಗಳನ್ನು ಹೊಗಳುವುದಿಲ್ಲ. ಬ್ರಾಹ್ಮಣ ಕವಿಗಳು ಮಾತ್ರ ಈ ಸೂತ್ರಕ್ಕೆ ಹೊರತು. ಬ್ರಾಹ್ಮಣನಾದವನು ಬ್ರಾಹ್ಮಣನಲ್ಲಿಯೇ ವಿದ್ಯೆ ಕಲಿಯಬೇಕು, ಬ್ರಾಹ್ಮಣನಲ್ಲಿಯೇ

ಆಶ್ರಯ ಪಡೆಯಬೇಕು ಎಂದು ಎಲ್ಲಿಯೂ ಹೇಳಿಲ್ಲ. ಆದಕಾರಣ ನಾಗವರ್ಮನು ತನ್ನಂತೆಯೇ ಯುದ್ಧವೀರನಾದ ಚಾವುಂಡರಾಯನಲ್ಲಿ ಆಶ್ರಯ ಪಡೆದು, ಅಜಿತ ಸೇನಾಚಾರ್ಯರಲ್ಲಿ ಶಿಷ್ಯವೃತ್ತಿಯನ್ನು ಕೈಕೊಂಡದ್ದು ಅಸಂಭವವಾಗಿ ಕಂಡುಬರು ವುದಿಲ್ಲ. ಈ ಆಶ್ರಯ ಶಿಷ್ಯವೃತ್ತಿಗಳಿಂದ ನಾಗವರ್ಮನ ಸ್ವಧರ್ಮಾಚಾರಣೆಗೆ ಚ್ಯುತಿ ಯುಂಟಾಗಿರಲಾರದು. ಈಗ ನಮಗೆ ದೊರೆತಿರುವ ಆಧಾರಗಳಿಂದ ನಾಗವರ್ಮನು ಶೈವಬ್ರಾಹ್ಮಣನೆಂದು ಧಾರಾಳವಾಗಿ ಹೇಳಬಹುದು.

ದೇಶ

ಕರ್ಣಾಟಕ ಛಂದೋಂಬುಧಿಯಿಂದ ನಾಗವರ್ಮನ ದೇಶ ವೆಂಗಿಮಂಡಲವೆನ್ನು ವುದು ಖಚಿತವಾಗಿ ಗೊತ್ತಾಗುತ್ತದೆ. 'ವೆಂಗಿ ಮಂಡಳ ಕೃಷ್ಣಾಗೋದಾವರಿಗಳ ನಡುವೆ ಪೂರ್ವ ಸಮುದ್ರದ ಕರೆಯತನಕ ಮುಟ್ಟಿದ್ದ ವಿಸ್ತಾರವಾದ ನಾಡು'. ಈ ಪ್ರದೇಶ ಹತ್ತನೆಯ ಶತಮಾನದ ವೀರಪುರುಷರ, ಸಾಹಿತಿಗಳ ಚಟುವಟಿಕೆಗಳಿಗೆ ಪ್ರಧಾನವಾಗಿತ್ತು. ಈ ನಾಡಿನ ಪಟ್ಟಣಗಳಲ್ಲಿ ಒಂದಾದ ವೆಂಗಿಪಳು ಕನ್ನಡಸಾಹಿತ್ಯ ದಲ್ಲಿ ಆದಿಕವಿಯೂ ಅಗ್ರಕವಿಯೂ ಆದ ಪಂಪನ ಹಿರಿಯರಿಗೆ ಆಶ್ರಯ ನೀಡಿತ್ತು. ತಮ್ಮ ವಿದ್ಯೆಯಿಂದ ಯಜ್ಞಯಾಗಾದಿಗಳ ಆಚರಣೆಯಿಂದ ಪ್ರಖ್ಯಾತರಾಗಿ ಬಾಳಿ ದ್ದರು. ಅವರಂತೆಯೇ ಆವರು ಅಲ್ಲಿ ನಾಗವರ್ಮನ ತಂದೆ, ತಾತ, ಮುತ್ತಾತಂದಿರು ಆ ಊರಿನಲ್ಲಿ ವೇದಾಧ್ಯಯನ ಸಂಪನ್ನರಾಗಿ, ಶಾಸ್ತ್ರಸಾಹಿತ್ಯಗಳಲ್ಲಿ ವಿದ್ವಾಂಸರಾಗಿ ಗುಣವಂತರಾಗಿ, ಶೀಲವಂತರಾಗಿ ಲೋಕಹಿತೈಷಿಗಳಾಗಿ ಬಾಳಿ ಕೀರ್ತಿ ಪಡೆದಿದ್ದರು. ಕಾಲ ದೇಶಗಳ ದೃಷ್ಟಿಯಿಂದ ಹೇಳಬಹುದಾದರೆ ಒಂದೇ ಪಟ್ಟಣದಲ್ಲಿ ವಾಸ ಮಾಡುತ್ತಿದ್ದ ಪಂಪನ ಹಿರಿಯರಿಗೂ ನಾಗವರ್ಮನ ಹಿರಿಯರಿಗೂ ಗಾಢವಾದ ಪರಿಚಯವಿದ್ದಿದ್ದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ತನ್ನ ಪೂರ್ವಜರ ಹಿರಿಮೆಯನ್ನು ಕವಿ ಹೆಮ್ಮೆಯಿಂದ ಹೇಳಿಕೊಂಡಿರುವುದನ್ನು ಪರಿಶೀಲಿಸಿದರೆ ತನ್ನ ಜೀವನದ ಸಾರವತ್ತಾದ ಭಾಗವನ್ನು ವೆಂಗಿಪಳುವಿನಲ್ಲಿ ವಿದ್ವಾಂಸರ ಸಂಪರ್ಕದಲ್ಲಿ ಕಳೆದಿರಬೇಕೆಂಬುದು ಸ್ಪಷ್ಟವಾಗುತ್ತದೆ.

ಆದರೆ ಕಾದಂಬರಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದ ವಿದ್ವಾಂಸರು ನಾಗ ವರ್ಮ ಬನವಾಸಿಯ ಪ್ರಾಂತದವನೆಂಬ ತೀರ್ಮಾನಕ್ಕೆ ಬಂದಿದ್ದಾರೆ.[9] ತಮ್ಮ ತೀರ್ಮಾನಕ್ಕೆ ಅವರು ಕೊಡುವ ಕಾರಣಗಳಿವು. ಚಂದ್ರನನ್ನು ವರ್ಣಿಸುವ ಕಾದಂ ಬರಿಯ ಮೊದಲನೆಯ ಪದ್ಯವನ್ನೇ ಗಮನಿಸಿ. 'ಅರುಣ ಮಣಿದ್ಯೋತಿ ಸಂಧ್ಯಾ ನಿಬದ್ಧಪ್ರೇಮಂ', 'ಅಮರನದೀ ಶಿಕರೋದಾರತಾರಾರಾಮಂ', 'ಗಿರಿಶಚಂಚಜ್ಜಟಾ

ಜಾಲಜೂಟ ಪ್ರೋದ್ಭಾಸಿ ಚಂದ್ರಂ' ಎಂಬ ವಿಶೇಷಣಗಳು ಪಶ್ಚಿಮ ಸಮುದ್ರದಲ್ಲಿ ಮುಳುಗುವ ಸಂಧ್ಯಾಕಾಲದ ಸೂರ್ಯನ ಸೊಬಗನ್ನೂ ಉತ್ತರಕನ್ನಡ ಜಿಲ್ಲೆಯ 'ಗಂಗಾವಲೀ' ನದಿಯನ್ನೂ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಉನ್ನತಾಗ್ರ ವೃಕ್ಷ ಗಳ ಮೇಲೆ ಮೂಡಿಬರುವ ಚಂದ್ರನನ್ನೂ ಧ್ವನಿ ಪೂರ್ಣವಾಗಿ ಸೂಚಿಸುತ್ತವೆ. ಪಶ್ಚಿಮಘಟ್ಟ ಪ್ರಾಂತಗಳಲ್ಲಿ ಕಂಡುಬರುವ ಈ ವನವರ್ಣನೆ, ಸಂಧ್ಯಾಕಾಲದ ವರ್ಣನೆ, ಸರೋವರ ವರ್ಣನೆ, ವರ್ಷಾಕಾಲದ ವರ್ಣನೆಗಳಲ್ಲಿ ಆತ್ಮೀಯತೆ ಇದೆ. ನಾಗವರ್ಮನ ಕಾಲಕ್ಕೆ ಈಗಿರುವಂತೆ ಉತ್ತರ ದಕ್ಷಿಣ ಜಿಲ್ಲೆಗಳೆಂಬ ಭೇದಗಳಿರಲಿಲ್ಲ. ಉತ್ತರಕ್ಕೆ ಬನವಾಸಿ, ದಕ್ಷಿಣಕ್ಕೆ ಕೇರಳದ ಒತ್ತಿನಲ್ಲಿ ತೌಳದೇಶ ಇದ್ದವು. ಆ ಪ್ರಾಂತದ ಕಾಡುಗಳನ್ನೂ ಆಶ್ರಮಗಳನ್ನೂ ಕವಿಪರಿಚಿತನಂತೆ ವರ್ಣಿಸಿರುವುದು ಸಹಜವೇ ಆಗಿದೆ. ವಿಂಧ್ಯಾಟವಿಯನ್ನು ವರ್ಣಿಸುವ ನೆವದಲ್ಲಿ ಕವಿ ವರ್ಣಿಸಿರುವ ಬಿದಿರು,ತೆಂಗು. ಅಡಕೆ, ವೀಳೆಯದೆಲೆ, ಮೆಣಸಿನಬಳ್ಳಿ, ಏಲಕ್ಕಿ, ದರ್ಭೆ, ಶ್ರೀಚಂದನ ಇವು ಪಶ್ಚಿಮ ಘಟ್ಟದಲ್ಲಿ ಅಲ್ಲದೆ ಬೇರೆಲ್ಲಿ ದೊರೆತಾವು? 'ವಿರಾಟನಗರಿಯಂತೆ ಕೀಚಕಾ ವೃತಮುಂ' ಎಂಬಲ್ಲಿನ ವಿರಾಟನಗರಿ ಹಾನಗಲ್ಲನ್ನು[10] ಸೂಚಿಸುವುದಿಲ್ಲವೆ ? ಬಾಣನು ವಿಂಧ್ಯಾಟವಿಯನ್ನು ವರ್ಣಿಸಿದ್ದರೆ, ನಾಗವರ್ಮನು ಪಶ್ಚಿಮ ಘಟ್ಟದ ಬನವಾಸಿ ನಾಡಿನ ಕಾಡುಗಳನ್ನು ಗೋದಾವರಿಯಿಂದ ಕೇರಳದವರೆಗೆ ವರ್ಣಿಸಿದ್ದಾನೆ. ಈ ಅಂಶಗಳನ್ನೆಲ್ಲ ಗಮನಿಸಿದಾಗ ನಾಗವರ್ಮನು ಬನವಾಸಿ ಪ್ರಾಂತದವನೆಂದು ಸಿದ್ಧ ವಾಗುತ್ತದೆ.

ಕಾವ್ಯದಲ್ಲಿ ಕವಿ ತಾನು ಬನವಾಸಿ ಪ್ರಾಂತದವನೆಂದು ಹೇಳಿಕೊಂಡಿಲ್ಲದಿರುವಾಗ ಇದೆಲ್ಲ ಬರಿಯ ಊಹೆ. ಈ ವಾದವನ್ನು ಖಂಡಿತವಾಗಿ ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ಸಂಸ್ಕೃತ ಕನ್ನಡ ಕಾದಂಬರಿಗಳನ್ನು ಹೋಲಿಸಿದಾಗ, ನಾಗವರ್ಮನ ವರ್ಣನೆ ಗಳಿಗೆ ಮೂಲವನ್ನು ಬಾಣನಲ್ಲಿಯೇ ಕಾಣುತ್ತೇವೆ. ಹೀಗಿರುವಲ್ಲಿ ಕವಿಯ ವರ್ಣನೆ ಗಳು ಬನವಾಸಿಗೂ ಪಶ್ಚಿಮ ಘಟ್ಟಗಳಿಗೂ ಸಂಬಂಧಪಟ್ಟಿವೆಯೆಂದು ಹೇಗೆ ಹೇಳು ವುದು ? ಕವಿ ಆ ಪ್ರಾಂತದಲ್ಲಿದ್ದವನೆಂದು ಹೇಳುವುದಕ್ಕೆ ಬೇರೆ ಆಧಾರವೇನುಂಟು ಕಾವ್ಯದಲ್ಲಿ ? —

ಹೀಗೆಂದು ಮೇಲಿನ ವಾದವನ್ನು ತಳ್ಳಿಹಾಕುವಂತೆಯೂ ಇಲ್ಲ. ನಾಗವರ್ಮನು ಬನವಾಸಿಯ ಪ್ರಾಂತದವನಲ್ಲದಿದ್ದರೂ ಆ ನಾಡಿನಲ್ಲಿ ಸಂಚರಿಸಿದ್ದನೆಂದು ಊಹಿಸ ಬಹುದು. ಶಾಸ್ತ್ರ ಸಾಹಿತ್ಯಗಳನ್ನು ತಂದೆಯ, ಆ ಊರಿನ ಬಳಿಯ ಪ್ರಖ್ಯಾತ ವಿದ್ವಾಂಸರಲ್ಲಿ ಕಲಿತ ಮೇಲೆ, ವಿಶೇಷ ವಿಷಯಗಳನ್ನು ಅಜಿತಸೇನಾಚಾರ್ಯರಲ್ಲಿ ಅಭ್ಯಾಸ ಮಾಡಲು ಅವನು ಗಂಗಮಂಡಲಕ್ಕೆ ತೆರಳಿರಬೇಕು. ವಿದ್ಯಾಭ್ಯಾಸಕ್ಕಾಗಿ ಗುರುಗಳನ್ನು ಅರಸಿಕೊಂಡು ಪರನಾಡುಗಳಿಗೆ ಹೋಗುವುದು ಭರತಖಂಡದಲ್ಲಿ

ಹೊಸದೇನಲ್ಲ. ಬ್ರಾಹ್ಮಣನಾದ ಇವನಿಗೆ ಕುಲವೃತ್ತಿಯನ್ನು ಬಿಟ್ಟು ಶಸ್ತ್ರವನ್ನು ಹಿಡಿಯಲು ಏನು ಸಂದರ್ಭ ಒದಗಿತೋ! ಯುದ್ಧ ಕರ್ಮಕ್ಕಾಗಿ ಇವನು ಕನ್ನಡ ನಾಡಿನ ನಾನಾಭಾಗಗಳಲ್ಲಿ ಸಂಚರಿಸಿ, ಭೋಜನ ಧಾರಾನಗರದವರೆಗೂ ಹೋಗಿ ಬಂದಿರಬೇಕು. ಹೀಗಿರುವಲ್ಲಿ ಅವನು ಬನವಾಸಿ ಪ್ರಾಂತದಲ್ಲಿ ಸಂಚರಿಸಿದ್ದರೆ ಸೋಜಿಗವಲ್ಲ. ಸಂಸ್ಕೃತ ಕನ್ನಡಗಳಲ್ಲಿ ಸಮನಾದ ಪಾಂಡಿತ್ಯ, ಬಾಣಕವಿಯ ಕೃತಿಗಳ ಆತ್ಮೀಯವಾದ ಅಭ್ಯಾಸ, ಲೋಕಸಂಚಾರದ ಅನುಭವ, ಉತ್ತಮ ಕವಿತಾಶಕ್ತಿ ಇವೆಲ್ಲ ಸೇರಿ ಸಂಸ್ಕೃತ ಕಾವ್ಯದ ವರ್ಣನೆಗಳು ಅನುವಾದದಲ್ಲಿಯೂ ರಮ್ಯವಾಗಿ ಮೂಡಿಬಂದಿವೆ. ಇವೆಲ್ಲವನ್ನೂ ವಿಚಾರ ಮಾಡಿದಾಗ ನಾಗವರ್ಮನು ಬನವಾಸಿಯ ಪ್ರಾಂತದವನು ಎನ್ನುವುದಕ್ಕಿಂತ ಆ ನಾಡಿನಲ್ಲಿ ಸಂಚರಿಸಿ ಅದರ ಗಾಢವಾದ ಪರಿಚಯವನ್ನು ಪಡೆದಿದ್ದವನು ಎಂದು ಹೇಳಿದರೆ ಹೆಚ್ಚು ಸಮಂಜಸವೆನಿಸುತ್ತದೆ.

ಇನ್ನೊಂದು ವಿಷಯ. ನಾಗವರ್ಮನು ಛಂದೋಂಬುಧಿಯ 'ಸಯ್ಯಡಿಯ ಪಿನಾಕಿ ಕೂರ್ತು ನಮಗೀಗೆ ವರಂಗಳನುತ್ಸವಂಗಳಂ' ಮತ್ತು ಸಯ್ಯಡಿಯ 'ನಾಗವರ್ಮನ ಮತದಿಂ' ಎಂದು ಹೇಳಿಕೊಂಡಿರುವುದರಿಂದ ಕವಿಯು ಸಯ್ಯಡಿಯಲ್ಲಿದ್ದನೆಂದೂ ಸಯ್ಯಡಿಯ ಪಿನಾಕಿ ಇವನ ಇಷ್ಟದೇವರಾಗಿರಬಹುದೆಂದೂ ತೋರುತ್ತದೆ. ಈ ಸಯ್ಯಡಿ ಎಂಬ ಅಗ್ರಹಾರ ಐಶ್ವರ್ಯಕ್ಕೆ ನೆಲೆಮನೆಯೆನಿಸಿ, ದೇವತಾಭವನಗಳಿಂದ, ವಿದ್ವಾಂಸರಾದ ಬ್ರಾಹ್ಮಣರಿಂದ, ಸತ್ಕವಿಗಳಿಂದ ಕೂಡಿ, ಕಿಸುಕಾಡ ನಾಡಿನಲ್ಲಿದ್ದಿತ್ತೆಂದು ದುರ್ಗಸಿಂಹನ ಹೇಳಿಕೆ[11]. ಪಂಚತಂತ್ರದ ಪೀಠಿಕಾಭಾಗಕ್ಕೂ ಛಂದೋಂಬುಧಿಯ ಪೀಠಿಕಾಭಾಗಕ್ಕೂ ಎಷ್ಟೋ ಸಾಮ್ಯವಿದೆ. ಈಗ ನಮಗೆ ತಿಳಿದಿರುವಂತೆ ಒಂದನೆಯ ನಾಗವರ್ಮನ ಕಾಲಕ್ಕೂ ದುರ್ಗಸಿಂಹನ ಕಾಲಕ್ಕೂ ಹೆಚ್ಚು ಅಂತರವೇನಿಲ್ಲ. ಈ ಕವಿಗಳಿಬ್ಬರಿಗೂ ಗಾಢವಾದ ಪರಿಚಯವಿದ್ದಿರಬಹುದೆಂದರೂ ಸಲ್ಲುತ್ತದೆ. ಇದೆಲ್ಲದರ ಮಥಿತಾರ್ಥ, ನಾಗವರ್ಮನು ಯುದ್ಧಕರ್ಮದಿಂದ ವಿಶ್ರಾಂತನಾಗಿ, ತನ್ನ ಬಾಳಿನ ಕೊನೆಯ ದಿನಗಳನ್ನು ಶಾಂತವಾಗಿ ವಿದ್ವಾಂಸರ ಸಹವಾಸದಲ್ಲಿ ಕಳೆದಿರಬಹುದೆಂದೂ ಊಹಿಸಬಹುದು.

ವಿಶೇಷ ವಿಷಯಗಳು

ಹತ್ತನೆಯ ಶತಮಾನದ ಕೊನೆಯಭಾಗ, ಹನ್ನೊಂದನೆಯ ಶತಮಾನದ ಮೊದಲ ದಶಕಗಳಲ್ಲಿ ನಾಗವರ್ಮನು ಜೀವಿಸಿದ್ದನೆಂದು ಹೇಳಿತಷ್ಟೆ. ಹತ್ತನೆಯ ಶತಮಾನ ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಪ್ರಶಸ್ತವಾದ ಕಾಲ. ಮಳೆಗಾಲದಲ್ಲಿ ಮಹಾನದಿಯೊಂದು ಉಪನದಿಗಳನ್ನು ಕೂಡಿಕೊಂಡು ಭೋರ್ಗರೆದು ಹರಿದುಬರುವಂತೆ

ಹತ್ತನೆಯ ಶತಮಾನದವರೆಗೆ ಹದವಾಗಿದ್ದ ಕನ್ನಡ ಸಾಹಿತ್ಯ ಕ್ಷೇತ್ರವನ್ನು ರೂಢಿಸಿಕೊಂಡು, ಈ ಕಾಲದ ಕವಿಗಳು ಮಾರ್ಗದರ್ಶಕವಾದ ಮಹಾಕಾವ್ಯಗಳನ್ನು ಸೃಷ್ಟಿಸಿದರು. ಈ ಶತಮಾನವನ್ನು ಪೌರುಷದ ಯುಗವೆಂದೂ ಮಹಾಕಾವ್ಯಗಳ ಯುಗವೆಂದೂ ಕರೆಯಬಹುದು. ಈಗ ನಮಗೆ ತಿಳಿದಿರುವಂತೆ 'ಆದಿಪುರಾಣ' 'ವಿಕ್ರಮಾರ್ಜುನ ವಿಜಯ'ಗಳೇ ಕನ್ನಡಸಾಹಿತ್ಯದ ಆದಿಕಾವ್ಯಗಳು. ಇವು ಪಂಪನಿಗೆ ಆದಿಕವಿಯ ಪಟ್ಟವನ್ನು ತಂದುಕೊಟ್ಟವು. ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ಅವತರಿಸಿದ ಈ ಕಾವ್ಯಗಳು ಮೂಡುವ ಮುಂಚೆ ಕನ್ನಡಸಾಹಿತ್ಯದಲ್ಲಿ ನಡೆದಿದ್ದ ವ್ಯವಸಾಯವೆಷ್ಟು ? ಕನ್ನಡದಲ್ಲಿ ಸಾಹಿತ್ಯರಚನೆಗೆ ಸಂಸ್ಕೃತಭಾಷಾಸಾಹಿತ್ಯಗಳೇ ಮಾದರಿ. ನಮ್ಮ ಸಾಹಿತ್ಯ ಮೊದಲಾಗುವ ವೇಳೆ, ಸಂಸ್ಕೃತದಲ್ಲ ವ್ಯಾಸವಾಲ್ಮೀಕಿಗಳ, ಭಾಸ ಕಾಳಿದಾಸರ ಕಾಲ ಮುಗಿದುಹೋಗಿ, ಬಾಣ ಮಾಘರ ಕಾಲ ಮೊದಲಾಗಿತ್ತು. ಸಂಸ್ಕೃತವನ್ನು ರಾಜಭಾಷೆಯ ಪೀಠದಿಂದ ಇನ್ನೂಯಾರೂ ಕದಲಿಸಿರಲಿಲ್ಲ. ಆದಕಾರಣ ಸಹಜವಾಗಿಯೇ ಕನ್ನಡ ಕವಿಗಳು ವಸ್ತು, ರೀತಿ, ಛಂದಸ್ಸು, ಅಲಂಕಾರಗಳ ವಿಷಯದಲ್ಲಿ ಅಖಿಲಭಾರತ ವ್ಯಾಪ್ತಿಯನ್ನು ಪಡೆದಿದ್ದ ರಾಜಭಾಷೆಯಾದ ಸಂಸ್ಕೃತ ಭಾಷಾಸಾಹಿತ್ಯಗಳನ್ನು ಕನ್ನಡ ಕೃತಿಗಳ ಸೃಷ್ಟಿಗೆ ಮಾದರಿಯನ್ನಾಗಿಟ್ಟುಕೊಂಡರು. ಕನ್ನಡನಾಡಿನಲ್ಲಿ ಅಶೋಕನ ಶಾಸನಗಳು ಸಿಕ್ಕಿದ್ದು, ಅವು ಪ್ರಾಕೃತಭಾಷೆಯಲ್ಲಿವೆ. ಕನ್ನಡವನ್ನು ಪ್ರಾಕೃತಭಾಷೆ ಎಂದರೆ ಜನಸಾಮಾನ್ಯರು ಆಡುವ ಭಾಷೆ ಎಂದು ವಿದ್ವಾಂಸರು ಪರಿಗಣಿಸಿದಂತೆ ಶಾಸನಗಳು ಸಾರುತ್ತವೆ. ಪ್ರಾಕೃತಭಾಷೆಯ ವರ್ಚಸ್ಸು ನಮ್ಮ ಸಾಹಿತ್ಯದ ಮೇಲೆ ಅದರ ಮೊದಲ ಬೆಳವಣಿಗೆಯ ಕಾಲದಲ್ಲಿ ಬಿದ್ದಿರಬೇಕು. "ಭಾರವಿ ಕಾಳಿದಾಸ ಮಾಘಾದಿಗಳೀಗಣಿದ ದೊಳೆ ಮಹಾಕಾವ್ಯಪ್ರಣಯಮನಾಗಿಸಿದರ್" ಎಂಬ ನೃಪತುಂಗನ ಹೇಳಿಕೆಯೇ ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಎಷ್ಟಿತ್ತೆಂಬ ಅಂಶವನ್ನು ದೃಢಪಡಿಸುತ್ತದೆ. ಐದನೆಯ ಶತಮಾನದಿಂದಲೇ ಕನ್ನಡಭಾಷೆಯಲ್ಲಿ ಶಾಸನಗಳು ದೊರಕುತ್ತವೆ. ಇವು ಗದ್ಯಪದ್ಯಾತ್ಮಕವಾಗಿದ್ದು ಬಗೆಬಗೆಯ ವೃತ್ತಗಳಿಂದ ಕೂಡಿವೆ. ಈ ಶಾಸನಗಳನ್ನು ಬರೆದವರು ಕನ್ನಡ, ಅದಕ್ಕಿಂತ ಹೆಚ್ಚಾಗಿ ಸಂಸ್ಕೃತದಲ್ಲಿ ವಿದ್ವಾಂಸರಾಗಿದ್ದು, ನಮ್ಮ ನುಡಿಯಲ್ಲಿ ಸಾಹಿತ್ಯ ಸೃಷ್ಟಿಗೆ ಸಂಸ್ಕೃತಸಾಹಿತ್ಯದಿಂದ ಆದರ್ಶಗಳನ್ನು ಸ್ವೀಕರಿಸಿದರು. ಪದ್ಯರಚನೆಗೆ ಸಂಸ್ಕೃತವೃತ್ತಗಳನ್ನೂ ಕಂದವನ್ನೂ ಬಳಗಿಸಿದ್ದರಿಂದ, ಸಂಸ್ಕೃತ ಛಂದಸ್ಸು ಕನ್ನಡ ಕಾವ್ಯಗಳಲ್ಲಿ ತಾಂಡವವಾಡತೊಡಗಿತು. ದೇಶಿ ಛಂದಸ್ಸುಗಳಾದ ತ್ರಿಪದಿ ಅಕ್ಕರಗಳು ಶಾಸನಗಳಲ್ಲಿ ಕಾಣಿಸಿಕೊಂಡರೆ ಅದು ಹತ್ತರೊಡನೆ ಹನ್ನೊಂದು ಎಂಬಂತೆ ! ಇದರಿಂದ ಕನ್ನಡಕವಿಗಳು ಸಂಸ್ಕೃತಕ್ಕೆ ಶರಣುಹೋಗಿ ತಮ್ಮ ವ್ಯಕ್ತಿತ್ವವನ್ನು ಮಾರಿಕೊಂಡರು ಎಂದು ಅರ್ಥವಲ್ಲ. ಆಗತಾನೆ ಕಣ್ಣುಬಿಡಲು, ಬೆಳೆಯಲು ಯತ್ನಿಸು

ತ್ತಿದ್ದ ಕನ್ನಡಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಅತಿಶಯವಾಗಿತ್ತು ಎನ್ನು ವುದು ಮುಖ್ಯಸಂಗತಿ. ನೃಪತುಂಗನ ವೇಳೆಗೆ ಹೆಸರನ್ನು ಹೇಳಿಕೊಂಡಿರುವ, ಕೊಳ್ಳ ದಿರುವ ಶಾಸನಗಳಲ್ಲದೆ, ಕವಿರಾಜಮಾರ್ಗದಲ್ಲಿ ಉಕ್ತರಾಗಿರುವ ಅನೇಕ ಗದ್ಯ ಪದ್ಯ ಕವಿಗಳು ಕನ್ನಡದಲ್ಲಿ ಕೃತಿರಚನೆಮಾಡಿದ್ದರು. ಈ ಸಾಹಿತ್ಯ ಚಟುವಟಿಕೆ ನಾಡಿನಲ್ಲಿ ಎಷ್ಟುವ್ಯಾಪಕವಾಗಿದ್ದಿತೆಂದರೆ ಭಾಷೆ, ವಸ್ತು, ಅಲಂಕಾರ, ಛಂದಸ್ಸು ಇವುಗಳ ವಿಷ ಯದಲ್ಲಿ ಕವಿಗಳನ್ನು ನಿಯಮನಮಾಡಿ, ದೋಷಗಳನ್ನು ತೋರಿಸಿ, ಅವರಿಗೆ ಮಾರ್ಗದರ್ಶನಮಾಡುವ ಒಂದು ಕೈಪಿಡಿಯನ್ನು ನೃಪತುಂಗನು ರಚಿಸಬೇಕಾಯಿತು. ಇಷ್ಟಾದರೂ ಪಂಪನ ಹಿಂದಿನ ಕಾವ್ಯಗಳು ಒಂದೂ ನಮಗೆ ಉಳಿದು ಬಂದಿಲ್ಲ. ಇದಕ್ಕೆ ಕಾರಣ ಏನು ? ಸೂರ್ಯೋದಯವಾಗುತ್ತಲೇ ನಕ್ಷತ್ರಗಳು ಮರೆಯಾಗು ವಂತೆ ಪಂಪನು ತನ್ನ ಕೃತಿಗಳನ್ನು ಪ್ರಕಟಿಸಿದಕೂಡಲೆ, ಅವು ಮುನ್ನಿನ ಕಬ್ಬಗಳೆಲ್ಲ ವನ್ನೂ ಇಕ್ಕಿಮೆಟ್ಟಿದುವಂತೆ ! ಕನ್ನಡಕವಿಗಳ ಜೈತ್ರಯಾತ್ರೆಗೆ ದಾರಿ ಸಮೆದಿದ್ದ ಹತ್ತನೆಯ ಶತಮಾನದ ವೇಳೆಗೆ, ಸಂಸ್ಕೃತ ಕನ್ನಡಗಳಲ್ಲಿ ಸಮನಾದ ಪಾಂಡಿತ್ಯ, ಉಚ್ಚಪ್ರತಿಭೆ, ಲೋಕಾನುಭವ ಇವುಗಳಿಂದ ಕೂಡಿದ ಪಂಪನ ಕಾವ್ಯಗಳು ಹೊರ ಬಂದು, ಮಿಕ್ಕ ಕವಿಗಳ ಕೃತಿಗಳನ್ನು ಹಿಂದಿಕ್ಕಿದವು.

ಹತ್ತನೆಯ ಶತಮಾನದಲ್ಲಿಯೇ ಕನ್ನಡಸಾಹಿತ್ಯದಲ್ಲಿ ರತ್ನತ್ರಯರೆಂದು ಹೊಗ ಳಿಕೆಗೆ ಪಾತ್ರರಾಗಿರುವ ಪಂಪ ಪೊನ್ನ ರನ್ನರು ಬಾಳಿಬದುಕಿದ್ದು. ಪಂಪರನ್ನರಿಗೆ ಚಾಳುಕ್ಯರಾಜರ ಆಶ್ರಯವಿದ್ದರೆ, ಪೊನ್ನನಿಗೆ ರಾಷ್ಟ್ರಕೂಟಚಕ್ರವರ್ತಿ ಪೋಷಕ ನಾಗಿದ್ದನು. ಈ ಮೂವರೂ ಜೈನಕವಿಗಳು ಜೈನಧರ್ಮದ ಹಿರಿಮೆಯನ್ನು ಜನ ರಲ್ಲಿ ಹರಡುವುದಕ್ಕಾಗಿ ಪಂಪನು ಆದಿಪುರಾಣವನ್ನೂ ಪೊನ್ನನು ಶಾಂತಿಪುರಾಣ ವನ್ನೂ ರನ್ನನು ಅಜಿತಪುರಾಣವನ್ನೂ ರಚಿಸಿದರು. ಆದರೆ ಇಷ್ಟರಿಂದಲೇ ಇವರಿಗೆ ವಿಶಾಲವಾದ ಕೀರ್ತಿಯುಂಟಾಗುತ್ತಿರಲಿಲ್ಲ. ಏಕೆಂದರೆ ಈ ಕಾವ್ಯಗಳು ಜೈನಮತೀ ಯರಿಗೆ ಮಾತ್ರ ಪ್ರಿಯವಾಗಿ, ಅವುಗಳವ್ಯಾಪ್ತಿ ಸೀಮಿತವಾಗುತ್ತಿತ್ತು. ಕನ್ನಡಿಗರ ಸುದೈವದಿಂದ ಹಾಗಾಗಲಿಲ್ಲ. ಪಂಪರನ್ನರಿಗೆ ಆಶ್ರಯಕೊಟ್ಟ ದೊರೆಗಳು ವೈದಿಕ ಮತಾವಲಂಬಿಗಳು. ರಾಷ್ಟ್ರಕೂಟರ ಸಾಮಂತನಾದ ಎರಡನೆಯ ಅರಿಕೇಸರಿ, ಕಾವ್ಯದ ಮೂಲಕ ತನ್ನ ಕೀರ್ತಿಯನ್ನು ಶಾಶ್ವತಗೊಳಿಸಲು, ಪಂಪನನ್ನು ತನ್ನಲ್ಲಿಗೆ ಬರಮಾಡಿಕೊಂಡು, ಭಾರತವನ್ನು ರಚಿಸಲು ಆತನಿಗೆ ಒಪ್ಪಿಸಿದಾಗ, ತನ್ನ ಆಶ್ರಯ ದಾತನ ಗುಣಗಳಿಗೂ ಪರಾಕ್ರಮಕ್ಕೂ ಮಾರುಹೋದ ಪಂಪನು ಅಂಕೇಸರಿಗೂ ಅರ್ಜುನನಿಗೂ ಅಭೇದ ಕಲ್ಪಿಸಿ ವೀರರಸಪ್ರಧಾನವಾದ 'ವಿಕ್ರಮಾರ್ಜುನ ವಿಜಯ' ವನ್ನು ರಚಿಸಿದನು. 'ವಿಕ್ರಮಾರ್ಜುನ ವಿಜಯ'ದಲ್ಲಿ ಸಂಸ್ಕೃತ ಕಾವ್ಯನಾಟಕಗಳಲ್ಲಿ

ದೊರಕುವ ಉಚ್ಚತಮ ಸಂಸ್ಕೃತಿಯ ಸಾರ ಭಟ್ಟಿಯಿಳಿದು ಬಂದಿದೆ. ಈ ಗ್ರಂಥ ಕೇವಲ ಭಾರತದ ಕಥೆ ಮಾತ್ರವಲ್ಲ; ಆಕಾಲದಲ್ಲಿ ಎರಡನೆಯ ಅರಿಕೇಸರಿ ತೋರಿಸಿದ ಸಾಹಸಗಳ ಮೊಳಗು ಅದರಲ್ಲಿ ಅಡಗಿದೆ. ಮೇಲಾಗಿ ಪಂಪನು ಯುದ್ಧವೀರ. ಆದ್ದ ರಿಂದ, ಆ ಅನುಭವದಿಂದ ಅವನ ಕಾವ್ಯ ಕಾಂತಿಗೊಂಡಿದೆ. ಹಾಗೆಯೇ ಪೊನ್ನನಿಂದ ರಚಿತವಾದ ಹದಿನಾಲ್ಕು ಆಶ್ವಾಸಗಳುಳ್ಳ, ಆದರೆ ಈಗ ಅನುಪಲಬ್ಧವಾಗಿರುವ 'ಭುವನೈಕರಾಮಾಭ್ಯುದಯ' ಒಂದು ಲೌಕಿಕ ಕಾವ್ಯವೆಂದು ವಿದ್ವಾಂಸರು ತರ್ಕಿಸಿ ದ್ದಾರೆ. 'ಚಾವುಂಡರಾಯಪುರಾಣ'ವೆಂಬ ಗದ್ಯಗ್ರಂಥವನ್ನು – ಇದರಲ್ಲಿ ಅಲ್ಲಲ್ಲೇ ಪದ್ಯಗಳೂ ಇವೆ – ಬರೆದ ಚಾವುಂಡರಾಯನು ಗಂಗರ ದೊರೆಯಾದ ರಾಚಮಲ್ಲನಲ್ಲಿ ಸೇನಾಪತಿಯೂ ಮಂತ್ರಿಯೂ ಆಗಿದ್ದನೆಂಬುದನ್ನು ನಾವು ಮರೆಯುವಂತಿಲ್ಲ. ರನ್ನನು ಪಂಪನಂತೆ ಯುದ್ಧವೀರನಲ್ಲದಿದ್ದರೂ ತನ್ನ ಪೋಷಕನಾದ ಚಾಳುಕ್ಯ ಚಕ್ರ ವರ್ತಿ ಇಜೀವ ಬೆಡಂಗನ ಸಾಹಸಗಳನ್ನು ಮಹಾಭಾರತದ ಭೀಮನೊಡನೆ ಸಮೀ ಕರಿಸಿ 'ಸಾಹಸಭೀಮ ವಿಜಯ'ದಲ್ಲಿ ಹೊಗಳಿರುವುದಲ್ಲದೆ, ಮತಗ್ರಂಥವಾದ 'ಅಜಿತ ಪುರಾಣ'ದ ಮೊದಲನೆಯ ಆಶ್ವಾಸದಲ್ಲಿ ತೈಲಪನ ಚಮೂಪತಿಯಾಗಿದ್ದ ಪುನ್ನ ಮಯ್ಯನ ಯುದ್ಧಸಾಹಸವನ್ನೂ ಮತ್ತು ತನ್ನಿಂದ 'ಅಜಿತಪುರಾಣ'ವನ್ನು ಬರೆಯಿ ಸಿದ ಅತ್ತಿಮಬ್ಬೆಯ ಗಂಡನಾದ ನಾಗದೇವನ ಶೌರ್ಯಾತಿಶಯಗಳನ್ನೂ ವಿಶೇಷ ವಾಗಿ ಬಣ್ಣಿಸಿದ್ದಾನೆ. ಒಂದನೆಯ ನಾಗವರ್ಮನು ಈ ಕವಿಗಳ ಸಾಲಿನಲ್ಲಿಯೇ ಬರು ತ್ತಾನೆ. ಅವನು ವೀರರಸಪ್ರಧಾನವಾದ ಕಾವ್ಯವನ್ನು ರಚಿಸದಿದ್ದರೂ ಯುದ್ಧವೀರ ನಾಗಿದ್ದನೆಂಬ ಅಂಶವನ್ನು ನೆನಪಿನಲ್ಲಿಡಬೇಕು. ಈ ವಿಷಯಗಳನ್ನು ಪರಿಶೀಲಿಸಿದಾಗ ಹತ್ತನೆಯ ಶತಮಾನ ಕನ್ನಡಿಗರ ಸಾಹಸದ ಪ್ರಕಟನೆಯಕಾಲವೆಂಬುದೂ ಆ ಕಾಲದಲ್ಲಿ ಈ ದೇಶದಲ್ಲಿ ಸಾಮ್ರಾಜ್ಯಗಳು ಎದ್ದು ಮುಳುಗಿದವೆಂಬುದೂ ಸ್ಪಷ್ಟವಾಗುತ್ತದೆ. ಈ ಶತಮಾನದಲ್ಲಿ ರಚಿತವಾದ ಒಂದೊಂದು ಕಾವ್ಯವೂ ಅದನ್ನು ರಚಿಸಿದ ಕವಿಯ ಆಶ್ರಯದಾತನ ಸಾಹಸಗಳನ್ನು ಎತ್ತಿಹಿಡಿಯುತ್ತ, ವೀರರಸಪ್ರಧಾನವಾಗಿದ್ದು ಕನ್ನಡ ಸಾಹಿತ್ಯದಲ್ಲಿ ಅಮರವಾಗಿ ನಿಂತು, ಇಂದಿಗೂ ಸಹೃದಯರಿಗೆ ಆನಂದದಾಯ ಕವಾಗಿವೆ. ಒಂದು ಆದಿಪುರಾಣ, ಒಂದು ಭಾರತ, ಒಂದು ಗದಾಯುದ್ಧ, ಒಂದು ಕಾದಂಬರಿ ಇವು ಘನವಾದ ವಸ್ತುವನ್ನೊಳಗೊಂಡು, ಮುಂದಿನ ಕಾವ್ಯಗಳಿಗೆ ಆದ ರ್ಶವಾಗಿ ನಿಂತು ಮಾರ್ಗದರ್ಶನಮಾಡಿದವೆಂದ ಮೇಲೆ ಹತ್ತನೆಯ ಶತಮಾನವನ್ನು ಮಹಾಕಾವ್ಯಗಳ ಯುಗವೆಂದು ಕರೆದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ.

ಈ ಸಂದರ್ಭದಲ್ಲಿ ಹತ್ತನೆಯ ಶತಮಾನದ ಕನ್ನಡನಾಡಿನ ರಾಜಕೀಯ ಚರಿತ್ರೆ ಯನ್ನು ಸ್ಥೂಲವಾಗಿ ಪರಿಶೀಲಿಸುವುದರಲ್ಲಿ ಲಾಭವುಂಟು. ಎರಡು ಶತಮಾನಗಳ ಕಾಲ ಕನ್ನಡನಾಡನ್ನು ಬಹುವೈಭವದಿಂದ ಆಳಿ, ಉತ್ತರಭಾರತದಲ್ಲಿ ಕನ್ಯಾಕುಬ್ಜದ

ವರೆಗೂ ದಿಗ್ವಿಜಯಮಾಡಿ ಅಲ್ಲಿ ತಮ್ಮ ವೈಜಯಂತಿಯನ್ನು ನಟ್ಟ ರಾಷ್ಟ್ರಕೂಟರು ಹತ್ತನೆಯ ಶತಮಾನದ ಎಂಟನೆಯ ದಶಕದ ವೇಳೆಗೆ ತಮ್ಮ ರಾಜ್ಯವನ್ನು ಚಾಳುಕ್ಯರಿಗೆ ಕಳೆದುಕೊಂಡರು. ಇದಕ್ಕೆ ಮೊದಲು ಎಂದರೆ ಈ ಶತಮಾನಕ್ಕೆ ಮುಂಚೆ, ಕವಿರಾಜಮಾರ್ಗದ ಕರ್ತೃವೆಂದು ಕನ್ನಡಸಾಹಿತ್ಯದಲ್ಲಿ ಹೆಸರಾದ ನೃಪತುಂಗನೂ (814–878), ಅವನ ಮಗನಾದ ಇಮ್ಮಡಿ ಕೃಷ್ಣನೂ (880–914) ಒಂದು ಶತಮಾನ ಕಾಲ ರಾಷ್ಟ್ರದ ಶತ್ರುಗಳನ್ನು ನಿಗ್ರಹಿಸಿ, ಎಲ್ಲ ಧರ್ಮಗಳಿಗೂ ಆಶ್ರಯ ಕೊಟ್ಟು, ವಿದ್ವಾಂಸರಿಗೆ ಪೋಷಕರಾಗಿ, ಪ್ರಜಾವತ್ಸಲರಾಗಿ ರಾಜ್ಯಭಾರಮಾಡಿದ್ದರು. ಮೇಲೆ ಹೇಳಿದ ಇಬ್ಬರು ದೊರೆಗಳಾದ ಮೇಲೆ ಬಂದ ರಾಜರಲ್ಲಿ ಮುಮ್ಮಡಿ ಇಂದ್ರನು (914–928) ಪ್ರಖ್ಯಾತನು. ಮುಮ್ಮಡಿ ಇಂದ್ರ ಗೂರ್ಜರ ಪ್ರತಿಹಾರ ರಾಜನಾದ ಮಹೀಪಾಲನನ್ನು ಸೋಲಿಸಿ, ಅವನ ರಾಜಧಾನಿಯಾದ ಕನ್ಯಾಕುಬ್ಜವನ್ನು ಆಕ್ರಮಿಸಿಕೊಂಡನು. ಈ ದಿಗ್ವಿಜಯದಲ್ಲಿ ಇಂದ್ರನಿಗೆ ಅವನ ಸಾಮಂತನೂ ಸೋದರಿಯ ಗಂಡನೂ ಎರಡನೆಯ ಅರಿಕೇಸರಿಯ ತಂದೆಯೂ ಆದ ಚಾಳುಕ್ಯರ ದೊರೆ ನರಸಿಂಹನು ಬಲಗೈಬಂಟನಂತೆ ಸಹಾಯಮಾಡಿದನು. ಲಾಳಮಾಳವರನ್ನು ರಾಷ್ಟ್ರಕೂಟರಿಗೆ ತಲೆಬಾಗುವಂತೆಮಾಡಿ, ಮಹೀಪಾಲನನ್ನು ನಿಂತಲ್ಲಿ ನಿಲ್ಲದಂತೆ ಅಲೆಸಿ, ಹಾಗೂ 'ಗಂಗಾವಾರ್ಧಿಯೊಳಾತ್ಮತುರಂಗಮುಮಂ ಮಿಸಿಸಿ' ಅಪೂರ್ವಯುದ್ಧಸಾಮರ್ಥ್ಯವನ್ನು ಪ್ರಕಟಿಸಿದ ಕೀರ್ತಿ ನರಸಿಂಹನದು. ಇವನ ಮಗನೇ ಎರಡನೆಯ ಅ ರಿ ಕೇ ಸ ರಿ 'ಇಂದ್ರೇಂದ್ರನ ತೋಳೆತೊಟ್ಟಿಲಾಗಿ' ಬೆಳೆದವನು. ನರಸಿಂಹನಂಥ ಸಮರ್ಥ ಸಾಮಂತ ದಳಪತಿಯಿಂದ ರಾಷ್ಟ್ರಕೂಟರ, ಕನ್ನಡಿಗರ ಕೀರ್ತಿ ಉತ್ತರಭಾರತದವರೆಗೆ ಹಬ್ಬಿತ್ತು. ಇವನ ಮಗ ಎರಡನೆಯ ಅರಿಕೇಸರಿ, ತಂದೆಯಂತೆ ಸಮರ್ಥಯುದ್ಧವೀರನಾಗಿದ್ದು, ಇಂದ್ರನ ಮಗಳನ್ನೇ ಮದುವೆಯಾಗಿದ್ದರೂ ನಾಲ್ಕನೆಯ ಗೋವಿಂದ (ಇಂದ್ರನ ಎರಡನೆಯ ಮಗ)ನಿಗೆ ವಿರುದ್ಧವಾಗಿ ನಿಂತು ಅವನಿಗೆ ಶತ್ರುವೂ ಮೂಡಣ ಚಾಳುಕ್ಯರ ಸಿಂಹಾಸನಕ್ಕೆ ಹಕ್ಕುದಾರನೂ ಆದ ವಿನಯಾದಿತ್ಯನಿಗೆ ಆಶ್ರಯಕೊಟ್ಟ ಕೆಚ್ಚನ್ನು ಇಲ್ಲಿ ನೆನೆಯಬೇಕು. ಅರಿಕೇಸರಿ ಗೋವಿಂದನನ್ನು ಇದಿರಿಸಿದ್ದಲ್ಲದೆ, ಇಂದ್ರನ ಮಲತಮ್ಮನಾದ ಅಮೋಘವರ್ಷನಿಗೆ ಪಟ್ಟಕಟ್ಟಿಸಿದನು. ಈ ಸಂದರ್ಭವಲ್ಲಿ ಇಲ್ಲಿ ಇನ್ನೊಂದು ಅಂಶವನ್ನು ನೆನೆಯಬೇಕು. ರಾಷ್ಟ್ರಕೂಟರಿಗೂ ವೇಮುಲವಾಡದ ಚಾಳುಕ್ಯರಿಗೂ ಕೊಳುಕೊಡೆಯ ಸಂಬಂಧವಿತ್ತು. ಇಂಥ ಸಮರ್ಥರ ಸಹಾಯವಿರುವವರೆಗೆ ರಾಷ್ಟ್ರಕೂಟರ ರಾಜ್ಯಕ್ಕೆ ಯಾವ ಭಯವೂ ಇರಲಿಲ್ಲ.

ಮೂರನೆಯ ಅಮೋಘವರ್ಷನಾದ ಮೇಲೆ ಪಟ್ಟಕ್ಕೆ ಬಂದ ಮೂರನೆಯ ಕೃಷ್ಣ (939–967) ಮೂರನೆಯ ಇಂದ್ರನಂತೆ ರಾಷ್ಟ್ರಕೂಟರ ಪ್ರಖ್ಯಾತನಾದ

ದೊರೆ. ಇವನ ತಂದೆ ತನ್ನಭಾವನಾದ ಬೂತುಗನನ್ನು ಗಂಗರಾಜ್ಯದಲ್ಲಿ ಪ್ರತಿಷ್ಠೆ ಮಾಡಿದ್ದಕಾರಣ ಬೂತುಗನೂ ಅವನ ಮಗನಾದ ಮಾರಸಿಂಹನೂ ರಾಷ್ಟ್ರಕೂಟರಿಗೆ ಬೆಂಬಲವಾಗಿ ನಿಂತರು. ರಾಷ್ಟ್ರಕೂಟರಿಗೆ ಪದೇಪದೇ ತೊಂದರೆ ಕೊಡುತ್ತಿದ್ದ ಚೋಳರಾಜ ಪರಾಂತಕನನ್ನು ಬೂತುಗನ ಸಹಾಯದಿಂದ ಕೃಷ್ಣನು ಸೋಲಿಸಿ ತನ್ನ ದಿಗ್ವಿಜಯವನ್ನು ರಾಮೇಶ್ವರದವರೆಗೆ ವಿಸ್ತರಿಸಿದನು. ಈ ದಿಗ್ವಿಜಯ ಕಾಲದಲ್ಲಿ ಕೃಷ್ಣನ ಪರಾಕ್ರಮವನ್ನರಿತ ಸಿಂಹಳನೂ ಅವನಿಗೆ ಶರಣಾಗತನಾದನಂತೆ! ಕೇರಳದ ಪಾಂಡ್ಯರನ್ನು ಒಕ್ಕಲಿಕ್ಕಿ ದಕ್ಷಿಣ ದಿಗ್ವಿಜಯವನ್ನು ಮುಗಿಸಿದಮೇಲೆ, ಕೃಷ್ಣನು ಉತ್ತರಕ್ಕೆ ದಿಗ್ವಿಜಯ ಹೊರಟು ಮಾಳವರನ್ನೂ ಗೂರ್ಜರಪ್ರತಿಹಾರರನ್ನೂ ಜಯಿಸಿದನು. ಇದೂ ಅಲ್ಲದೆ ಯುದ್ಧಮಲ್ಲನ ಮಗನಾದ ಬಾಡಪನನ್ನು ಮೂಡಣ ಚಾಳುಕ್ಯರ ಸಿಂಹಾಸನದ ಮೇಲೆ ಕೂಡಿಸಿ ಕೃತಕೃತ್ಯನಾದನು. ಇದು ಕೃಷ್ಣನ ರಾಜಕೀಯ ಹಿರಿಮೆಯಾದರೆ, ಪೊನ್ನನನ್ನು ಆ ದ ರಿ ಸಿ ಅವನಿಗೆ ಕವಿಚಕ್ರವರ್ತಿಯೆಂಬ ಬಿರುದನ್ನು ಕೊಟ್ಟದ್ದು, ರಾಜನ ವಿದ್ವತ್‌ಪಕ್ಷಪಾತಕ್ಕೂ ಕನ್ನಡದ ಅಭಿಮಾನಕ್ಕೂ ದ್ಯೋತಕವಾಗಿದೆ. ಕೃಷ್ಣನು ಮಾಡಿದ ಒಂದೇ ಒಂದು ತಪ್ಪೆಂದರೆ ಇತರ ಸಾಮಂತರು ಅಸಮಾಧಾನಪಡುವಂತೆ ಇಮ್ಮಡಿ ತೈಲಪನಿಗೆ ಅತಿಶಯವಾದ ಅನುಗ್ರಹ ತೋರಿದ್ದು. ಕೃಷ್ಣನ ಸಾವಿನೊಡನೆ ರಾಷ್ಟ್ರಕೂಟರ ವೈಭವ ಇಳಿಮುಖವಾಗತೊಡಗಿತು. ಖೊಟ್ಟಿಗ (967–972)ನು ಪಟ್ಟವೇರುತ್ತಲೇ ಪರಮಾರ ರಾಜನಾದ ಸೀಯಕನು ದಂಡೆತ್ತಿಬಂದು ರಾಷ್ಟ್ರಕೂಟರ ರಾಜಧಾನಿಯನ್ನು ಸೂರೆಗೈದು ತನ್ನ ಹಿಂದಿನ ಸೇಡನ್ನು ತೀರಿಸಿಕೊಂಡನು. ತನ್ನ ರಾಜಧಾನಿ ನಾಶಗೊಂಡ ಪೆಟ್ಟಿನಿಂದ ಖೊಟ್ಟಿಗನು ಚೇತರಿಸಿಕೊಳ್ಳಲೇ ಇಲ್ಲ. ಇವನಾದ ಮೇಲೆ ಬಂದ ಇಮ್ಮಡಿ ಕರ್ಕ (972–973)ನಂತೂ ಸ್ವೇಚ್ಛಾಚಾರಿಯಾಗಿ ವರ್ತಿಸಿದನು. ಇವನ ಮಂತ್ರಿಗಳು ದುಷ್ಟರು. ಆಗ ರಾಷ್ಟ್ರಕೂಟರ ಸಾಮಂತರು ಸ್ವತಂತ್ರರಾಗಲು ಯತ್ನಿಸಬಯಸಿದರು. ಈ ಸಮಯವನ್ನು ಉಪಯೋಗಿಸಿಕೊಂಡು ತನ್ನ ಹಿರಿಯರ ವೈಭವವನ್ನು ನೆನೆದು ಮಹತ್ವಾಕಾಂಕ್ಷಿಯಾದ ತೈಲಪನು ಅಯೋಗ್ಯನಾದ ಕರ್ಕನನ್ನು ಮೂಲೆಗೆ ತಳ್ಳಿ ತಾನೇ ಪಟ್ಟವೇರಿ ಚಾಳುಕ್ಯ ಸಾಮ್ರಾಜ್ಯವನ್ನು ಮತ್ತೆ ಸ್ಥಾಪಿಸಿದನು. ಎರಡು ಶತಮಾನಗಳ ಕಾಲ ಕನ್ನಡನಾಡನ್ನು ವೈಭವದಿಂದ ಆಳಿ ಭಾರತದಲ್ಲಿ ಕೀರ್ತಿಯನ್ನು ಹಬ್ಬಿಸಿದ ರಾಷ್ಟ್ರಕೂಟರ ಚಕ್ರಾಧಿಪತ್ಯ ಕರ್ಕನೊಂದಿಗೆ ಮೂಲೆಗುಂಪಾಯಿತು. ಈ ರಾಜಮನೆತನದ ಪತನದೊಂದಿಗೆ ಸಾಮಂತರಾದ ಗಂಗರ ವೈಭವವೂ ಕ್ರಮಕ್ರಮವಾಗಿ ಕುಗ್ಗಿ, ಅವರ ರಾಜಧಾನಿಯಾದ ತಲಕಾಡನ್ನು ಚೋಳರು ಆಕ್ರಮಿಸಿಕೊಂಡರು. ಈ ಆಕ್ರಮಣವನ್ನು ತೆರವುಮಾಡಲು ಹೊಯಿಸಳರ ವಿಷ್ಣುವರ್ಧನನು ಬರಬೇಕಾಯಿತು!

ರಾಷ್ಟ್ರಕೂಟರಿಂದ ರಾಜ್ಯವನ್ನು ಕಸಿದುಕೊಂಡ ಇಮ್ಮಡಿ ತೈಲಪನು (977-997) ನಾಡನ್ನು ಒಟ್ಟುಗೂಡಿಸಿ ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಶ್ರಮಪಡಬೇಕಾಯಿತು. ದಕ್ಷಿಣದಲ್ಲಿ ಚೋಳರಾಜನನ್ನು ಸೋಲಿಸಿ, ದಕ್ಷಿಣ ಕೊಂಕಣವನ್ನು ತನ್ನ ಅಧೀನಕ್ಕೆ ತೆಗೆದುಕೊಂಡು, ಸೇವುಣರಾಜನನ್ನು ಮಾಂಡಳಿಕನನ್ನಾಗಿ ಪರಿಗ್ರಹಿಸಿ, ಉತ್ತರದಲ್ಲಿ ಲಾಟ ಪ್ರಾಂತವನ್ನು ಜಯಿಸಿದ ಯುದ್ಧವೀರ ತೈಲಪ. ಆದರೆ ಇವನು ಮಾಳವದ ಪರಮಾರ ದೊರೆಯಾದ ಮುಂಜನಿಗೆ ಆರು ಬಾರಿ ಸೋಲಬೇಕಾಯಿತು. ಏಳನೆಯ ಬಾರಿ ಮಾತ್ರ ತೈಲಪನು ಮುಂಜನನ್ನು ಸೋಲಿಸಿ, ಅವನನ್ನು ತನ್ನ ರಾಜಧಾನಿಯಲ್ಲೇ ಸೆರೆಯಿಡಿಸಿ ಕೊಲ್ಲಿಸಿದನು. ಇವನ ಮಗನಾದ ಸತ್ಯಾಶ್ರಯ (997-1008) ಇರಿವ ಬೆಡಂಗನು ತಂದೆಯ ದಿಗ್ವಿಜಯ ನೀತಿಯನ್ನು ಮುಂದುವರಿಸಿ, ಉತ್ತರಕೊಂಕಣವನ್ನು ವಶಪಡಿಸಿಕೊಂಡು, ಗೂರ್ಜರ ರಾಜ್ಯವನ್ನು ಆಕ್ರಮಿಸಿ, ಚೋಳರಾಜನಾದ ರಾಜರಾಜನನ್ನು ಸದೆಬಡಿದನು. ಈ ಸತ್ಯಾಶ್ರಯನೇ ಕವಿಚಕ್ರವರ್ತಿ ರನ್ನನಿಗೆ ಆಶ್ರಯದಾತ. ಸತ್ಯಾಶ್ರಯನ ದಿಗ್ವಿಜಯಗಳೇ ರನ್ನನನ್ನು 'ಸಾಹಸ ಭೀಮವಿಜಯ'ದ ರಚನೆಗೆ ಪ್ರೇರಣೆಮಾಡಿದವು. ಚಾಳುಕ್ಯ ಸಾಮ್ರಾಜ್ಯದ ಈ ವೈಭವ ಆರನೆಯ ವಿಕ್ರಮಾದಿತ್ಯ(1076-1126)ನ ಆಳಿಕೆಯ ಪೂರ್ತಿ ನಡೆದು ಬಂದು ಕನ್ನಡಿಗರ ಘನತೆಯನ್ನು ಮುಗಿಲಿಗೆ ಕೊಂಡೊಯ್ದಿತು.

ಮೇಲಿನ ಸ್ಥೂಲ ವಿವರಣೆಯಿಂದ ಹತ್ತನೆಯ ಶತಮಾನದ ಕನ್ನಡನಾಡಿನ ರಾಜಕೀಯ ಪರಿಸ್ಥಿತಿಯ ಸ್ವರೂಪವೇನೆಂಬುದು ಸ್ವಲ್ಪ ಮಟ್ಟಿಗಾದರೂ ಗೊತ್ತಾದೀತು. ಪಂಪಭಾರತ ಎರಡನೆಯ ಅರಿಕೇಸರಿಯ ಹಾಗೂ ಅವನ ವಂಶದವರ ಸಾಹಸಕಾರ್ಯಗಳನ್ನು ಉಜ್ವಲವಾಗಿ ವರ್ಣಿಸಿದ್ದರೂ, ಅವರು ರಾಷ್ಟ್ರಕೂಟರ ಸಾಮಂತರಾಗಿದ್ದರೆಂಬುದನ್ನೂ ಅವರ ನೆರವು ಸಾಹಸಗಳಿಂದ ರಾಷ್ಟ್ರಕೂಟರಿಗೆ ಉತ್ಕರ್ಷವಾಯಿತೆಂಬುದನ್ನೂ ನಾವು ಮರೆಯುವಂತಿಲ್ಲ. ರನ್ನನಂತೂ ಸತ್ಯಾಶ್ರಯನ ದಿಗ್ವಿಜಯಗಳನ್ನು ಬಾಯಿತುಂಬ ಹೊಗಳಿದ್ದಾನೆ. ಸೂರ್ಯೋದಯ ಸೂರ್ಯಾಸ್ತಗಳಂತೆ ಚಕ್ರಾಧಿಪತ್ಯಗಳ ಏಳುಬೀಳು, ಅದರೊಡನೆ ಆಯಾ ಸಾಮ್ರಾಜ್ಯಗಳಿಗೆ ಸೇರಿದ ಮಾಂಡಳಿಕರಲ್ಲಿ ಸ್ಪರ್ಧೆ—ಇವುಗಳಿಂದ ಕೂಡಿದ ಆಗಿನ ಕಾಲದ ರಾಜಕೀಯ ಯಾವ ವೀರನಿಗೇ ಆಗಲಿ ಸ್ಫೂರ್ತಿದಾಯಕವಾಗಿರಬೇಕು. ಈ ಕಾಲದಲ್ಲಿ ಬದುಕಿದ್ದ ನಾಗವರ್ಮನಿಗೆ ದರ್ಭೆ ಹಿಡಿಯುವುದಕ್ಕಿಂತ ಕತ್ತಿ ಹಿರಿಯುವುದೇ ಲೇಸೆಂದು ಕಂಡುಬಂದು ಅವನು ಯುದ್ಧ ಕರ್ಮವನ್ನು ಹಿಡಿದು ಕೀರ್ತಿ ಗೌರವಗಳನ್ನು ಗಳಿಸಿದನು.

ನಮಗೆ ಪ್ರಕೃತನಾದವನು ಯುದ್ಧವೀರ ನಾಗವರ್ಮನಿಗಿಂತ ಕವಿ ನಾಗವರ್ಮ. ಶಾಸನಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೆ, ಈಗ ತಿಳಿದಿರುವಂತೆ ಕನ್ನಡ ಸಾಹಿತ್ಯ

ದಲ್ಲಿ ಜೈನ ಕವಿಗಳಿಗೆ ಪಂಪನು ಆದಿಕವಿಯಾದಂತೆ, ಒಂದನೆಯ ನಾಗವರ್ಮನೇ ಬ್ರಾಹ್ಮಣ ಕವಿಗಳಿಗೆ ಆದಿಕವಿಯಾಗುತ್ತಾನೆ. ಈ ಕವಿಯ ಮತ್ತು ಇವನ ಕೃತಿಗಳ ವೈಶಿಷ್ಟ್ಯವನ್ನು ಕುರಿತು ಇಲ್ಲಿ ಒಂದೆರಡು ಮಾತುಗಳನ್ನು ಹೇಳಬಹುದು. ಕನ್ನಡದಲ್ಲಿ ಬೌದ್ಧರು ಗ್ರಂಥರಚನೆ ಮಾಡಿರಬಹುದೆಂದು ವಿದ್ವಾಂಸರು ಊಹಿಸಿದ್ದರೂ ಅವರ ಗ್ರಂಥವೊಂದೂ ಸಿಕ್ಕಿಲ್ಲ. ಈಗ ದೊರಕಿರುವ ಗ್ರಂಥಗಳು ಜೈನಕವಿಗಳಿಂದ ವಿರಚಿತ ವಾದವು. ಕನ್ನಡ ಸಾಹಿತ್ಯದ ಆದ್ಯಪ್ರವರ್ತಕರು ಜೈನರು. ಉತ್ತರಭಾರತದಿಂದ ದಕ್ಷಿಣಭಾರತಕ್ಕೆ ಬಂದ ಧರ್ಮ ಜೈನಧರ್ಮ. ಕನ್ನಡನಾಡಿನಲ್ಲಿ ಈ ಧರ್ಮವನ್ನು ಬೆಳಗಲು, ಪ್ರಚಾರ ಮಾಡಲು ಜೈನಕವಿಗಳು ಸುಸಂಸ್ಕೃತವಾದ ಕನ್ನಡ ಮಾಧ್ಯಮ ವನ್ನು ಬಳಸಿದರು. ಇದಲ್ಲದೆ ಜೈನಧರ್ಮಕ್ಕೆ ಹನ್ನೊಂದನೆಯ ಶತಮಾನದವರೆಗೆ ರಾಜಾಶ್ರಯವಿದ್ದು ವೈದಿಕಧರ್ಮದೊಡನೆ ಅದು ಹೊಂದಿಕೊಂಡು ಬಂದಿತ್ತು. ರಾಷ್ಟ್ರಕೂಟರು ತಮ್ಮ ಅರಸೊತ್ತಿಗೆಯನ್ನು ಕಳೆದುಕೊಂಡು ಜೈನರಾದ ಗಂಗರು ಪತನ ಹೊಂದಿದ ಮೇಲೆ, ಈ ದೇಶದಲ್ಲಿ ಜೈನಪ್ರಭಾವ ಇಳಿಮುಖವಾಗತೊಡಗಿ, ಅದನ್ನು ಪುನರುತ್ಥಾನಗೊಳಿಸಲು ಆ ಧರ್ಮದವರು ಅಧಿಕವಾಗಿ ಶ್ರಮಪಡಬೇಕಾ ಯಿತು. ಪಂಪನು ತನ್ನ ಧರ್ಮದ ಉತ್ಕರ್ಷವನ್ನು ಬೀರಲು ಆದಿಪುರಾಣವನ್ನು ಬರೆದನು. ಅವನು ಹಾಕಿಕೊಟ್ಟ ಮಾರ್ಗ ಬಹು ಕಾಲ ನಡೆದುಬಂತು !

ನಾಗವರ್ಮನಿಗೆ ದೇಶಭಾಷೆಯಲ್ಲಿ ವೈದಿಕ ಧರ್ಮದ ಪ್ರಸಾರ ಕಾವ್ಯಮಾರ್ಗ ದಲ್ಲಿ ಆವಶ್ಯಕವೆನಿಸಲಿಲ್ಲ. ಇದಕ್ಕೆ ಕಾರಣ ಇಷ್ಟೇ. ಶತಮಾನಗಳಿಂದ ಕನ್ನಡನಾಡಿ ನಲ್ಲಿ ಬೇರುಬಿಟ್ಟು, ರಾಜರಿಂದ ಪೋಷಿತವಾದ ವೈದಿಕಧರ್ಮದ ಗ್ರಂಥಗಳು ಸಂಸ್ಕೃತ ದಲ್ಲಿದ್ದರೂ ಪುರಾಣ ಪುಣ್ಯಕಥೆಗಳನ್ನು ವಿದ್ವಾಂಸರು ಕನ್ನಡದ ಮೂಲಕ ನಿರೂಪಿ ಸುತ್ತಿದ್ದ ಕಾರಣ, ಈ ಧರ್ಮದ ಸಾರ ಸುಲಭವಾಗಿ ಜನರಿಗೆ ದೊರಕುತ್ತಿತ್ತು. ಇದನ್ನು ಮತ್ತೆ ಕನ್ನಡದಲ್ಲಿ ಕಾವ್ಯರೂಪದಲ್ಲಿ ಹೇಳುವುದು ಅನಾವಶ್ಯಕವೆಂದು ತೋರಿ ನಾಗವರ್ಮನು ಶುದ್ಧ ಸಾಹಿತ್ಯ ರಚನೆಗೆ ಕೈಯಿಟ್ಟನು. ‘ಕವಿರಾಜಮಾರ್ಗ’ದಲ್ಲಿ ನೃಪತುಂಗನು ಅಲಂಕಾರ ವ್ಯಾಕರಣಗಳ ಸ್ವರೂಪವನ್ನು ತಕ್ಕಮಟ್ಟಿಗೆ ತಿಳಿಸಿ, ಕವಿ ಗಳಿಗೆ ಮಾರ್ಗದರ್ಶನ ಮಾಡಿದ್ದನು. ನಾಗವರ್ಮನಾದರೊ ಒಂದು ಕಡೆ ಬಾಣನ ಕಾದಂಬರಿಯನ್ನು ಅನುವಾದ ಮಾಡುವುದರ ಮೂಲಕ ಕನ್ನಡದ ಮೊದಲನೆಯ ಪ್ರಣಯ ಕಾವ್ಯವನ್ನು ಒದಗಿಸಿದ. ಮತ್ತೊಂದು ಕಡೆ ಪ್ರಮಾಣಭೂತವಾದ ‘ಛಂದೋಂಬುಧಿ’ಯನ್ನು ರಚಿಸಿ, ಕನ್ನಡಸಾಹಿತ್ಯದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿ ಯಾಗಿಸಿದ. ನಾಗವರ್ಮನನ್ನು ಬಿಟ್ಟರೆ ಛಂದಸ್ಸಿನ ಮೂಲತತ್ತ್ವಗಳು ಹೊರ ಬೀಳಲು ಈ ಶತಮಾನದವರೆಗೂ ಕಾಯಬೇಕಾಯಿತೆಂದರೆ ಈ ಗ್ರಂಥದ ಮಹತ್ವ ಸ್ಪಷ್ಟವಾಗುತ್ತದೆ.[12]

ಛಂದೋಂಬುಧಿಯಲ್ಲಿ ನಾಗವರ್ಮನು ತನ್ನ ವಂಶಗೌರವವನ್ನು ಹೊಗಳಿಕೊಂಡಿರುವ ಹಾಗೆ, ತಾನು ವಾಗ್ಗುಂಫನದಲ್ಲಿ ಬಾಣ, ಮಯೂರ, ಮಾಘ, ಗುಣಾಢ್ಯ, ದಂಡಿ, ಭಾರವಿಗಳನ್ನು ಮೀರಿಸಿದನೆಂದೂ ತನ್ನ ಕವಿತೆ 'ಕಾಳಿದಾಸನು ಮನೇಳಿಸಿ'ತೆಂದೂ ಹೇಳಿಕೊಂಡಿದ್ದಾನೆ. ಶಾಂತಿಪುರಾಣವನ್ನು ರಚಿಸಿದ ಪೊನ್ನನು ಕವಿತಾರಚನೆಯಲ್ಲಿ ತಾನು ಕಾಳಿದಾಸನಿಗೆ ನಾಲ್ಮಡಿ ಎಂದು ಉದ್ಘೋಷಿಸಿಕೊಂಡಿರುವುದನ್ನು ಇಲ್ಲಿ ನೆನೆಸಿಕೊಳ್ಳಬಹುದು. ಈ ಹೊಗಳಿಕೆ ಕನ್ನಡ ಕವಿಗಳ ಔದ್ಧತ್ಯ ಪ್ರದರ್ಶನವೆಂದು ವಾಚಕರಿಗೆ ತೋರಬಹುದು. ಆದರೆ ಇದನ್ನು ಹಾಗೆ ಪರಿಗಣಿಸದೆ, ಕನ್ನಡ ಕವಿಗಳ ಆತ್ಮಾಭಿಮಾನವನ್ನು ಸೂಚಿಸುತ್ತದೆ ಎಂದು ಭಾವಿಸಬೇಕು. ಪಂಪನಂಥ ಕವಿ ಸಂಸ್ಕೃತದಲ್ಲಿ ಕವಿತೆಯನ್ನು ಕಟ್ಟಬಲ್ಲ ಶಕ್ತಿಯುಳ್ಳವನಾಗಿದ್ದನು. ಆ ಕಾಲದ ಕನ್ನಡ ಕವಿಗಳಲ್ಲಿ ಇಂಥ ಶಕ್ತಿ ತಕ್ಕ ಪ್ರಮಾಣದಲ್ಲಿತ್ತು. ಸಂಸ್ಕೃತ ಕನ್ನಡಗಳೆರಡರಲ್ಲಿಯೂ ನಿಷ್ಣಾತರಾದ ಈ ಕವಿಗಳು ಕನ್ನಡಕ್ಕೆ ಒಲಿದು ಆ ನುಡಿಯಲ್ಲಿ ಕೃತಿರಚನೆ ಮಾಡಿ ಸಂಸ್ಕೃತಕವಿಗಳಿಗೆ ತಾವೇನೂ ಕಡಮೆಯಲ್ಲ, ಒಂದು ಕೈ ಮೇಲು ಎಂದು ಸ್ಪರ್ಧೆ ಹೂಡಿದ್ದು ಕನ್ನಡದ ಪುಣ್ಯವೆಂದೇ ಹೇಳಬೇಕು.

ಛಂದೋಂಬುಧಿಯಂತೆ ಕರ್ಣಾಟಕ ಕಾದಂಬರಿಯೂ ಕನ್ನಡ ಸಾಹಿತ್ಯದಲ್ಲಿ ಅಪೂರ್ವವೂ ಮಹತ್ವಪೂರ್ಣವೂ ಆದ ಗ್ರಂಥ. ಈ ಹೇಳಿಕೆಯನ್ನು ಸಮರ್ಥಿಸಲು ಕಾರಣಗಳನ್ನು ಹುಡುಕುವುದು ಅಷ್ಟೇನೂ ಕಷ್ಟವಲ್ಲ. ಕನ್ನಡ ಸಾಹಿತ್ಯ ಮೊದಲಾದಾಗ ಸಂಸ್ಕೃತಸಾಹಿತ್ಯದಲ್ಲಿ ಬಾಣನ ಯುಗ ಮೊದಲಾಗಿತ್ತು. ಕಾದಂಬರಿ ಹರ್ಷಚರಿತೆಗಳು ಗದ್ಯಗ್ರಂಥಗಳಿಗೆ ಮಾದರಿಗಳೆಂದು ನೃಪತುಂಗನು ಕವಿರಾಜಮಾರ್ಗದಲ್ಲಿ ಹೇಳಿದ್ದಾನೆ. ಬಾಣನ ಕೃತಿಗಳಿಂದ ಪಂಪನು ಉಪಕೃತನಾಗಿರುವುದು ಸರ್ವವಿದಿತ. ಪದ್ಯರಚನೆಯಲ್ಲಿ ತನಗೆ ಕಾಳಿದಾಸ ಬಾಣರು ಅಭಿವಂದ್ಯರೆಂದು ರನ್ನನು ಅವರನ್ನು ಗೌರವಿಸಿದ್ದಾನೆ. ಸಂಸ್ಕೃತ ಕಾವ್ಯಪ್ರಪಂಚದಲ್ಲಿ ಬಾಣನೇ ಶ್ರೇಷ್ಠ, ಉಳಿದದ್ದು ಅವನ ಎಂಜಲು ಎಂದು ಪ್ರಶಂಸಿತನಾದ ಕವಿಯ ಕೃತಿಯನ್ನು ಕನ್ನಡಿಸಲು ಎಂಟೆದೆಯೇ ಬೇಕು. ಪಂಪರನ್ನರು ಕೈಕೊಳ್ಳದ ಈ ಕಾರ್ಯವನ್ನು ನಾಗವರ್ಮನು ಕೈಕೊಂಡು ಬಹುಮಟ್ಟಿಗೆ ಜಯಶಾಲಿಯಾದನು. ಗದ್ಯದಲ್ಲಿದ್ದ ಸಂಸ್ಕೃತ ಕಾವ್ಯವನ್ನು ಬೇಸರ ಹೋಗುವಂತೆ, ವೈವಿಧ್ಯ ದೊರಕುವಂತೆ ಗದ್ಯಪದ್ಯಗಳಲ್ಲಿ ರಚಿಸಿದನು. ಪಾತ್ರಗಳ ಉದಾತ್ತತೆ ವಾಚಕರ ಮನಸ್ಸಿನ ಮೇಲೆ ಅಚ್ಚೊತ್ತುವಂತೆ, ಜನ್ಮಾಂತರಗಳ ಕಥೆ ಕಣ್ಣಿಗೆ ಕಟ್ಟುವಂತೆ ಶುಚಿ ರುಚಿಯಾದ ಗಂಭೀರವಾದ ಪ್ರೇಮದ ಸ್ವರೂಪ ಮನದಟ್ಟಾಗುವಂತೆ, ಮೂಲದ ವರ್ಣನೆಗಳ ಸಾರ ಬಿಟ್ಟುಹೋಗದಂತೆ ಎಲ್ಲಕ್ಕೂ ಮಿಗಿಲಾಗಿ ಕವಿ ಹಿಂದೆ ನಿಂತು ಪಾತ್ರಗಳೇ ಕಥೆಯನ್ನು ನಿರೂಪಿಸುವಂತೆ ಕೃತಿರಚನೆ ಮಾಡಿರುವ ನಾಗವರ್ಮನ ಕೌಶಲ ಹಿರಿದು. ಈ ಗುಣಗಳೆಲ್ಲ ಮೂಲದಲ್ಲಿಯೇ

ಇವೆ ಎಂದು ಯಾರಾದರೂ ಆಕ್ಷೇಪಣೆ ಮಾಡಬಹುದು; ಚಿಂತೆ ಇಲ್ಲ. ಬಾಣನನ್ನು ಓದಿದವರೆಲ್ಲ ಕಾದಂಬರಿಯನ್ನು ರಚಿಸಲಿಲ್ಲವಷ್ಟೆ! ಸಂಸ್ಕೃತ ಕನ್ನಡಗಳನ್ನು ಹದವಾಗಿ ಬೆರಸಿ ಅನುವಾದಗೊಂಡ ಈ ಕೃತಿ ಇಂದಿಗೂ ರಸಿಕ ಜನರಿಗೆ ಆಹ್ಲಾದ ಕಾರಿಯಾಗಿದೆ. ಸಾವಿರಕ್ಕೂ ಮಿಕ್ಕು ವರುಷಗಳು ಉರುಳಿ ಹೋಗಿದ್ದರೂ ಈ ಅನುವಾದವನ್ನು ಸರಿಗಟ್ಟುವ ಮತ್ತೊಂದು ಅನುವಾದ ಕನ್ನಡದಲ್ಲಿ ಬಂದಿಲ್ಲವೆಂದರೆ ಕರ್ಣಾಟಕ ಕಾದಂಬರಿಯ ಹಿರಿಮೆ ಮಹತ್ವ ಯಾರಿಗೂ ಗೊತ್ತಾದೀತು.

ಪರಿಶಿಷ್ಟ ೧

ನಾಗವರ್ಮನ ವಂಶ

(ಛಂದೋಂಬುಧಿ)

ಜಗದೊಳಗಿದೊಂದು ಮಿಗಿಲೆನೆ
ನೆಗಟ್ದಪುದು ವೆಂಗಿವಿಷಯಮಾ ವಿಷಯದೊಳೊ
ಳ್ಪಗಣೇಯಮೆನೆ ಸಪ್ತಗ್ರಾ
ಮಗಳೊಳಮಾ ವೆಂಗಿಪಟು ಕರಂ ಸೊಗಯಿಸುಗುಂ

ಆ ವೆಂಗಿಪಟುವಿನೊಳ್ ವಿಭು
ದೇವಸಮಾನಂ ವಿದಗ್ಧನಂಬುಜಭವನಂ
ತಾವಗವೊಳ್ಗುಣ ನಿಧಿಯುಂ
ದೀ ವಸುಧೆಯೊಳೆನಿಸಿ ವೆಣ್ಣಮಯ್ಯಂ ನೆಗಟ್ದಂ

ವೇದದೊಳನುಗತರೆನಿಸುವ
ವೇದಿಗಳೊಳ್ ನಿಪುಣನಾಗೆ ನೆಗಟ್ದಂ ಗಂಭೀ
ರೋದನ್ವತ್ಪರಿವೇಷ್ಟಿತ
ಮೇದಿನಿಯೊಳ್ ವೆಣ್ಣಮಯ್ಯ ನಕಳಂಕಗುಣಂ

ಸಕಲಜ್ಞಾನ ನನಿಂದಿತ
ಸುಕರಗುಣಾವಿಃ ಪ್ರಭವ ಮನೋಭವರೂಪಾ
ಭಿಕನಂಬುಜ ಸಂಭವ ಮೂ
ರ್ತಿಕ ಕರಂ ಕೌಂಡಿನ್ಯಗೋತ್ರನನುಪಮಚರಿತಂ

ವಿತತಯಶಂಗಾ ವಿಪ್ರಂ
ಗೆ ತತ್ಪ್ರಿಯಸಭಾಜಿತ ದ್ವಿಜನ್ಮಂಗೆ ಗುಣಾ
ನ್ವಿತೆ ಸತಿ ಸಜ್ಜನಿಕೆ ಗರುಂ
ಧತಿಗೆ ಮಿಗಿಲ್ ಕೌಂಡಿಕಬ್ಬೆಯೆಂಬಳ್ ಪೆಸರಿಂ

ಆ ಕೌಂಡಿಕಬ್ಬೆಗಂ ಮಹಿ
ಮಾಕರನೆನೆ ನೆಗಟ್ದ ವೆಣ್ಣಮಯ್ಯಂಗ ಮನಂ
ಗಾಕಾರನಾಗೆ ಪುಟ್ಟಿಯೆ
ಲೋಕಸ್ತುತನಾಗಿ ದಾಮಮಯ್ಯಂ ನೆಗಟ್ದಂ

ಆತನ ಕುಲವಸಿತೆ ಜಗತ್
ಖ್ಯಾತಗುಣವ್ರಾತೆ ರೂಪಲಾವಣ್ಯರಸೋ
ಪೇತೆ ಗಿರಿಜಾತೆಗಂ ಮಿಗಿ
ಲೇತಱಿಂೊಳಂ ಕುಂದಕಬ್ಬೆಯೆಂಬಳ್ ಪೆಸರಿಂ

ಎನೆ ನೆಗಟ್ದ ಕುಂದಕಬ್ಬೆಗ
ಮನಿಂದ್ಯಗುಣನೆನಿಪ ದಾಮಮಯ್ಯಂಗಂ ಭೂ
ವಿನುತಯಶಂ ದ್ವಿಜವಂದ್ಯಂ
ಮನುಮಾರ್ಗಂ ವೆಣ್ಣಮಯ್ಯನಗ್ರತನೂಜಂ

ಶ್ರೀಕಾಂತಾಪತಿ ಸಕಲ ಕ
ಲಾಕೋವಿದ ನದ್ವಿತೀಯ ನತುಲಚರಿತ್ರಂ
ಲೌಕಿಕ ವೈದಿಕಶಾಸ್ತ್ರ ವಿ
ವೇಕಿ ಕಲಾಭಿಜ್ಞನೆನಿಸಿ ನೆಗಟ್ದಂ ಧರೆಯೊಳ್

ಅಂತೆನಿಪ ವೆಣ್ಣಮಯ್ಯನ
ಕಾಂತೆ ಗುಣವ್ರಾತೆ ಧರಣಿಸುತೆಗಂ ಮಿಗಿಲೆಂ
ಬಂತೊದವಿದ ಪತಿಭಕ್ತಿಯ
ನಾಂತೆಸೆವಳ್ ಪೋಟಿಕಬ್ಬೆಯೆಂಬಳ್ ಪೆಸರಿಂ

ಆ ಪೋಟಿಕಬ್ಬೆಗಂ ವಿ
ದ್ಯಾಪರಿಣತನೆನಿಪ ವೆಣ್ಣಮಯ್ಯಂಗಂ ವಾ
ಕ್ಶ್ರೀಪತಿ ಸತ್ಕವಿತತ್ವಗು
ಣೋಪೇತಂ ನಾಗವರ್ಮನಗ್ರತನೂಜಂ

ನಾಗವರ್ಮನ ಕವಿತಾಚಾತುರ್ಯ ಮತ್ತು ಗುಣಾತಿಶಯಗಳು

ನವರಸಮುಣ್ಮೆ ಮಾತು ಪೊಸತಾಗಿರೆ ದೇಸಿಯಿಂ ಪೆ ದೇಸೆವೆತ್ತುದಂ
ಬವೊಲಿರೆ ಜಾಣ್ಮನಂಗೊಳಿಸೆ ಪೂಣ್ದಿರದರ್ಥಕೃತಿ ಪ್ರಬಂಧಮಂ
ಕಿವಿಗಿನಿದಾಗೆ ಪೊಚ್ಚಪೊಸತಾಗೆ ಮನೋಹರಮಾಗೆ ಪೇಟ್ವಿ ಸ
ತ್ಕವಿ ಕವಿರಾಜಹಂಸನೆನೆ ಪೇಟಲೊಡರ್ಚಿದನೀ ಪ್ರಬಂಧಮಂ

ರಚಿತಪದಪ್ರಸನ್ನ ಪರಿಪೂರ್ಣ ರಸಾವಹ ಮರ್ಥಯುಕ್ತ ಮಾ
ಗುಚಿತ ಪುರಾಣಮಾರ್ಗ ಪದ ಪದ್ಧತಿ ಬಂಧುರಬಂಧ ಮೆಂಬಿನಂ
ರಚಿಯಿಸೆ ವಾಚ್ಯವಾಚಕ ವಿಶೇಷ್ಯ ವಿಶೇಷಣ ಲಕ್ಷ್ಯಲಕ್ಷಣ
ಪ್ರಚುರತೆ ಕಾಳಿದಾಸನು ಮನೇಳಿಸಿತೀ ಕವಿರಾಜಹಂಸನಾ

ಜಿತಬಾಣಂ ಹರಿಯಿಂತಧಃಕೃತಮಯೂರಂ ತಾರಕಾರಾತಿಯಿಂ
ತತಿಮಾಘಂ ಶಿಶಿರಾಂತ್ಯದಂತೆ ಸುರಪಪ್ರೋಚ್ಚಂಡಕೋದಂಡದಂ
ತೆ ತಿರೋಭೂತ ಗುಣಾಢ್ಯನಬ್ಜವನದಂತಾವಿರ್ಭವದ್ದಂಡಿ ಭಾ
ರತದಂತಾತ್ತಧನಂಜಯೈಕ ವಿಭವಂ ವಾಗ್ಗುಂಫದೊಳ್ ನಾಕಿಗಂ

ಕರ್ಣಾಟಿಕ ಕಾದಂಬರಿಯಿಂದ ; ಕೃತಿ ಮತ್ತು ಪೋಷಕ

ಸತ್ಕೃತಿ ಸಂಸ್ಕೃತದಿಂದೆ ಜ
ಗತ್ಕೌತುಕಮಾಗಿ ಮತ್ತೆ ಕರ್ಣಾಟದೊಳಂ
ಸತ್ಕವಿ ನಿವಹಂ ಪೊಗಟೆ ಚ
ಮತ್ಕೃತಿಯಂ ಪಡೆದು ಸೊಬಗುವಡೆದತ್ತೀಗಳ್

ಕೃತಿಪತಿ ನರೇಂದ್ರಚಂದ್ರಂ
ಕೃತಿಯಂ ಪೇಟ್ದಂ ಬುಧಾಬ್ಜವನಕಳಹಂಸಂ
ಕೃತಿಕಾದಂಬರಿಯೆನೆ ಸ
ತ್ಕೃತಿಕಥಿತ ಕಥಾವತಾರಮೇಂ ಕೇವಳಮೇ

ಕ್ಷಿತಿಯೊಳ್ ಸೌವರ್ಣಕಾಂತಿ ಪ್ರಸರಮಸದಳಂ ಪರ್ವೆ ಸಂದಿರ್ದುದಂತಾ
ಕೃತಿ ಮುನ್ನಂ ಬಾಣವಾಣೀಪ್ರಿಯನ ವಚನದಿಂ ಮತ್ತೆ ಕರ್ಣಾಟಭಾಷಾ
ಚತುರತ್ವಂ ಬೊರ್ದಿ ಕಾದಂಬರಿ ಪಸರಿಸಿ ರಾಜೇಂದ್ರಚಂದ್ರಾಂಕನೊಳ್ ಸಂ
ಗತಿವೆತ್ತಾದಂ ತ್ರಿಲೋಕೀಸಹಚರಿಯೆನೆ ತಾಂ ಸಂದುದಾಚಂದ್ರತಾರಂ

ಇದು ಚೋದ್ಯಂ ಕವಿಹೃದ್ಗತಂ ನವರಸಂ ನಿರ್ದೋಷಮೆಂದೀಗಳಾ
ದುದು ಕಾದಂಬರಿ ಸೇವ್ಯಮಾದುದನಿತುಂ ತಾನೆಯ್ದೆ ಭೂಭಾಗದೊಳ್
ವಿದಿತಶ್ರೀ ಕವಿನಾಗವರ್ಮನ ವಚಃಸಂದೋಹದಿಂ ದೋಷಮೊಂ
ದದಲಂಕಾರದ ವಸ್ತುಬಂಧಮಿದು ತಾನೇಂ ಮಾಡದೇಂ ಗೆಯ್ಯದೋ

ಟಿಪ್ಪಣಿಗಳು

1 ಈ ಗ್ರಂಥವನ್ನು ಮೈಸೂರು ಶ್ರೀಮನ್ಮಹಾರಾಜರವರ ಕನ್ನಡ ಹೈಸ್ಕೂಲಿನ ಹೆಡ್ಮಾಸ್ಟರಾದ ಶ್ರೀ ಬಿ. ಮಲ್ಲಪ್ಪನವರು ಒಂದೇ ಒಂದು ಹಸ್ತಪ್ರತಿಯಿಂದ (ಅರಮನೆಯ ಸರಸ್ವತೀ ಭಂಡಾರದ ಹಸ್ತಪ್ರತಿ ಇವರಿಗೆ ದೊರೆತ ಪ್ರತಿಯ ನಕಲಾಗಿತ್ತು.) ಪರಿಷ್ಕರಿಸಿ 1892ರಲ್ಲಿ ಅಚ್ಚಿಟ್ಟದ್ದು ಒಂದು ಸಾಹಸವೇ. ಹಸ್ತ ಪ್ರತಿಯಲ್ಲಿ ಗ್ರಂಥಪಾತವಿದ್ದು, ಅನೇಕ ಭಾಗಗಳು ಲುಪ್ತವಾಗಿದ್ದವು. ಗ್ರಂಥಪಾಠಗಳನ್ನು ಸರಿಪಡಿಸಿ, ಬಿಟ್ಟು ಹೋದ ಭಾಗಗಳನ್ನು ಕಥಾ ಸರಣಿ ಕೆಡದಂತೆ, ಸಂಸ್ಕೃತ ಕಾವ್ಯದ ಸಹಾಯದಿಂದ ವಿದ್ವಾಂಸರಾದ ಬಸವಪ್ಪ ಶಾಸ್ತ್ರೀ ಪೂರ್ವಭಾಗ ಪದ್ಯಗಳು 603 618 ಪೂರ್ತಿ), ಸೋಸಲೆ ಅಯ್ಯಾಶಾಸ್ತ್ರೀ (ಉತ್ತರಭಾಗ ಪದ್ಯಗಳು 570-579 ಪೂರ್ತಿ) ಕರಿಬಸವಪ್ಪ ಶಾಸ್ತ್ರೀ (ಉತ್ತರಭಾಗ 725-735 ಪೂರ್ತಿ) ಗಳಿಂದ ಪುನರ್‌ರಚನೆ ಮಾಡಿಸಿ, ನಷ್ಟ ಹೋದಬಹುದಾಗಿದ್ದ ಕನ್ನಡದ ಈ ಮೊದಲ ಪ್ರೇಮಕಾವ್ಯವನ್ನು ಉಳಿಸಿಕೊಟ್ಟ ಕೀರ್ತಿ ಶಾಶ್ವತವಾಗಿ ಮಲ್ಲಪ್ಪನವರಿಗೆ ಸಲ್ಲುತ್ತದೆ. ರಳಾಕ್ಷರವನ್ನು ಉಪಯೋಗಿಸದಿರುವುದು ಈ ಪರಿಷ್ಕರಣದ ಒಂದು ಕೊರತೆ. ಇದನ್ನು ಬಿಟ್ಟರೆ ಕ್ಲಿಷ್ಟಪದಗಳಿಗೆ ಅರ್ಥಕೊಟ್ಟು, ಅಪೂರ್ವ ವೃತ್ತಗಳನ್ನು ಗುರುತಿಸಿ, ವ್ಯಾಕರಣಾಂಶಗಳನ್ನು ತಿಳಿಸಿರುವುದು ಈ ಪರಿಷ್ಕರಣದ ವೈಶಿಷ್ಟ್ಯ. ಗದ್ಯ ಪದ್ಯಗಳಿಗೆ ಒಟ್ಟಾಗಿ ಅಂಕಗಳನ್ನು ಕೊಟ್ಟಿದೆ.

2 ನಾಗವರ್ಮ ಕವಿ ಸ್ತುತಿರೂಪವಾದ ಪದ್ಯ ಕಾವ್ಯಾವಲೋಕನದಲ್ಲಿ ಹೀಗಿದೆ—

ಪ್ರಣುತ ಗುಣರೆನಿಪ ವಿಬುಧಾ। ಗ್ರಣಿಗಳ್ ಕೈಕೊಂಡು ಪೊಗಟಿ ಸಲೆನೆಗಟ್ದುವು ಧಾ।
ರಿಣಿಯೊಳಗೆ ನಾಗವರ್ಮನ। ಗುಣವರ್ಮನ ಶಂಖವರ್ಮನಧ್ವಾನಂಗಳ್॥

ಈ ಪದ್ಯದಲ್ಲಿ ನಾಗವರ್ಮನು ತನ್ನನ್ನು ತಾನೇ ಹೊಗಳಿಕೊಂಡಿರುವನೆಂದು ಡಾ॥ ಎ. ವೆಂಕಟಸುಬ್ಬಯ್ಯನವರೂ ಇಲ್ಲಿ ಸ್ತೋತ್ರಗೊಂಡಿರುವವನು ಒಂದನೆಯ ನಾಗವರ್ಮನೆಂದು ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರೂ ವರ್ಧಮಾನ ಪುರಾಣವನ್ನು ಬರೆದ ಪ್ರಾಚೀನ ನಾಗವರ್ಮನೆಂದು ಎಚ್. ಶೇಷ ಐಯಂಗಾರರೂ ಅಭಿಪ್ರಾಯ ಪಡುತ್ತಾರೆ. ನಾಗವರ್ಮನು ಗ್ರಂಥದ ಮಧ್ಯದಲ್ಲಿ ತನ್ನನ್ನೇ ತಾನು ಹೊಗಳಿಕೊಂಡಿರಲಾರ. ಕಾವ್ಯಾವಲೋಕನದಲ್ಲಾಗಲಿ ಭಾಷಾಭೂಷಣದಲ್ಲಾಗಲಿ ಕಾದಂಬರಿಯ ಒಂದು ಪದ್ಯವಾಗಲಿ ವಾಕ್ಯಖಂಡವಾಗಲಿ ಉದ್ಧೃತವಾಗಿಲ್ಲ. ನಾಗವರ್ಮನ ವರ್ಧಮಾನ ಪುರಾಣ ಇನ್ನೂ ಸಿಕ್ಕಿಲ್ಲ. ನಾಗವರ್ಮಮಾರ್ಗ (ಅಧ್ವಾನ) ಎಂದಿಷ್ಟೇ ಅರ್ಥಮಾಡಿದರೆ, ಅವನ ಗ್ರಂಥಗಳಿಂದ ಉದಾಹರಣೆಗಳನ್ನು ಕೊಡಬೇಕಾಗಿಲ್ಲ. ಆದ್ದರಿಂದ ಇಲ್ಲಿ ಸ್ತೋತ್ರಗೊಂಡಿರುವ ನಾಗವರ್ಮ ಒಂದನೆಯ ನಾಗವರ್ಮನೆಂದು ಹೇಳಬಹುದು. ಈಗ ಊಹಿಸಿರುವ ಮಟ್ಟಿಗೆ ನಾಗವರ್ಮನು ಬ್ರಾಹ್ಮಣ ಕವಿಯಾಗಿರುವ ಕಾರಣ, ಜೈನಕವಿಗಳು ಅವನನ್ನು ಹೊಗಳಿರುವುದು ಅಸಂಭವ. ಇದು ಹೀಗೆಯೇ ಸರಿ ಎಂದು ಹೇಳುವುದು ಕಷ್ಟ.

ಟಿಪ್ಪಣಿಗಳು

ಕೇಶಿರಾಜನು 'ಏನ್' ಎಂಬ ಸರ್ವನಾಮಲಿಂಗವು ಏಕವಚನದಲ್ಲಿ ಏಕವಚನ, ಬಹುವಚನ ದಲ್ಲಿ ಬಹುವಚನವಾಗಿ ಪ್ರಯೋಗವಾಗುತ್ತದೆ (ಸೂತ್ರ 89) ಎಂಬುದನ್ನು ಉದಾಹರಿಸಲು ಕಾದಂಬರಿಯಿಂದ 'ತತ್ಪರಿಜನಾಲಾಪಂಗಳೇನ್' (ಉ.ಭಾ. 197) ಎಂಬ ಭಾಗವನ್ನು ಶಬ್ದಮಣಿ ದರ್ಪಣದಲ್ಲಿ ಎತ್ತಿಕೊಟ್ಟಿದ್ದಾನೆ. ಹಾಗೆಯೇ ಭಿನ್ನಕರ್ತೃವಿರುವಲ್ಲಿ 'ಅಲ್' ಪ್ರಯೋಗವು ದೋಷ (ಸೂತ್ರ 260) ಎಂಬುದನ್ನು ನಿರ್ದೇಶಿಸಲು 'ಪಾದಪದ್ಮಂಗಳಸೊತ್ತುತ್ತಿರಲ್' ಶೂದ್ರಕ ನೃಪತಿ ಸುಖಾಸೀನನಾಗಿರ್ದನಾಗಳ್ (ಪೂ. ಭಾ. ೮0), 'ಬೈಗಿನ ಕೆಂಬಿಸಿಲಳುರಲೆಸೆದುವಾಶ್ರಮ ತರುಗಳ್' (ಪೂ. ಭಾ. 275) ಎಂಬ ಎರಡು ವಾಕ್ಯಗಳನ್ನು ಉದಾಹರಿಸಿ ಇವು ಅಬದ್ಧ ಎಂದು ಹೇಳಿದ್ದಾನೆ. ಮಲ್ಲಿಕಾರ್ಜುನನು 'ಸೂಕ್ತಿ ಸುಧಾರ್ಣವವೆಂಬ ಸಂಕಲನ ಗ್ರಂಥದಲ್ಲಿ ಕಾದಂಬರಿಯ ಪೂರ್ವಭಾಗದಿಂದ 31 ಪದ್ಯಗಳನ್ನೂ ಉತ್ತರ ಭಾಗದಿಂದ 16 ಪದ್ಯಗಳನ್ನೂ ಹೀಗೆ ಒಟ್ಟು 47 ಪದ್ಯಗಳನ್ನೂ ಎತ್ತಿಕೊಂಡಿದ್ದಾನೆ.

3 ಕಿಟ್ಟೆಲ್, ರೈಸ್, ಎ. ವೆಂಕಟಸುಬ್ಬಯ್ಯ, ಬಿ. ಮಲ್ಲಪ್ಪ ಇವರ ಮತದಂತೆ ಈ ಐದು ಗ್ರಂಥಗಳ ರಚಕ ಒಬ್ಬನೇ ನಾಗವರ್ಮ. ಕಾದಂಬರಿ ಛಂದೋಂಬುಧಿಗಳನ್ನು ಬರೆದವನು ಒಂದ ನೆಯ ನಾಗವರ್ಮ, ಉಳಿದ ಗ್ರಂಥಗಳನ್ನು ಬರೆದವನು ಎರಡನೆಯ ನಾಗವರ್ಮ ಎಂದು ಕವಿಚರಿತೆ ಕಾರರಾದ ಆರ್. ನರಸಿಂಹಾಚಾರ್, ಗೋವಿಂದ ಪೈ, ರಾಜಪುರೋಹಿತರು, ಎಚ್. ಶೇಷ ಐಯಂಗಾರ್ ಇವರು ಅಭಿಪ್ರಾಯ ಪಡುತ್ತಾರೆ. ಟಿ. ಎಸ್. ವೆಂಕಣ್ಣಯ್ಯನವರು ಆರ್. ನರ ಸಿಂಹಾಚಾರ್ಯರ ಅಭಿಪ್ರಾಯವನ್ನೇ ಪುಷ್ಟೀಕರಿಸಿದರೂ ಕಾದಂಬರಿ ಛಂದೋಂಬುದಿಗಳ ಏಕಕರ್ತೃ ತ್ವದ ವಿಚಾರದಲ್ಲಿ ಹೀಗೆಯೇ ಸರಿ ಎಂದು ಹೇಳಲು ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದಾರೆ.

4 ಸಂಸ್ಕೃತ ಕಾದಂಬರಿಯನ್ನು ಅನುಸರಿಸಿ, ಕನ್ನಡ ಕಾದಂಬರಿಯಲ್ಲಿಯೂ ಪೂರ್ವಭಾಗ ಉತ್ತರಭಾಗ ಎಂಬ ವಿಭಾಗಮಾಡಿ, ಪೂರ್ವಭಾಗದ ಕೊನೆಯಲ್ಲಿ ಮಾತ್ರ ಮೇಲಿನ ಗದ್ಯವನ್ನು ಕೊಟ್ಟಿದೆ. ಸಂಸ್ಕೃತ ಕಾವ್ಯದಲ್ಲಿ ಇಬ್ಬರ ಕೈವಾಡವಿರುವ ಕಾರಣ ಈ ವಿಭಾಗಕ್ರಮ ಸರಿಯೆಂದು ತೋರಬಹುದು. ಕನ್ನಡದ ಕೃತಿಕಾರ ಒಬ್ಬನೇ. ಉತ್ತರ ಭಾಗದ ಕೊನೆಯಲ್ಲಿ ಗದ್ಯವಿಲ್ಲದಿರುವು ದನ್ನೂ ಛಂದೋಂಬುಧಿಯ ಆಶ್ವಾಸಾಂತ್ಯಗಳ ಗದ್ಯದೊಡನೆ ಇದನ್ನು ಹೋಲಿಸಿದಾಗ ಈ ಗದ್ಯ ತೀರ ಸಪ್ಪೆಯಾಗಿ ಕಂಡುಬರುವುದನ್ನೂ ಗಮನಿಸಿದರೆ, ಈ ಭಾಗ ಪ್ರಕ್ಷಿಪ್ತವೆಂದೂ ಮೂಲವನ್ನು ಅನುಸರಿಸಿ ಯಾರೊ ಈಚೆಗೆ ಸೇರಿಸಿರಬಹುದೆಂದೂ ಹೊಳೆಯದಿರದು.

5 ಕಾದಂಬರಿಯ ಮೊದಲಲ್ಲಿ ವಿಷ್ಣುಸ್ತುತಿರೂಪವಾದ ಪದ್ಯವಿಲ್ಲ. ಅಂತ್ಯದಲ್ಲಿ ಮಂಗಳ ಪದ್ಯಗಳೂ ಸಮಾಪನ ವಾಕ್ಯಗಳೂ ಇಲ್ಲ. ಈಗ ಆಗಿರುವಂತೆ ಒಂದೆರಡು ಕಡೆ ಗ್ರಂಥ ತ್ರುಟಿತ ವಾಗಿರಬಹುದೇ ಎಂದು ಗೋವಿಂದ ಪೈಗಳು ಸಂಶಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಈಗಿರು ವಂತೆ ಕಾದಂಬರಿಯ ಆದಿ ಅಂತ್ಯಗಳು ಮುಕ್ಕಾಗಿರುವಂತೆ ಕಂಡುಬರುವುದಿಲ್ಲ.

6 ಕನ್ನಡ ಕವಿಗೆ ಭೋಜನು ಮರ್ಯಾದೆ ಮಾಡಿದ್ದು ಅಪೂರ್ವವಾದ ವಿಶೇಷ ಸಂಗತಿ. ಭೋಜನಿಗೆ ಕನ್ನಡ ಬರುತ್ತಿತ್ತೆ ? ಅದರಲ್ಲೂ ಹಳಗನ್ನಡವನ್ನು ಅರ್ಥಮಾಡಿಕೊಳ್ಳುವಷ್ಟು ಶಕ್ತಿ ಇತ್ತೆ ಎನ್ನುವುದು ಅಪ್ರಕೃತವಾದ ಸಂಗತಿ. ನಾಗವರ್ಮನು ಭೋಜನ ಪ್ರೀತಿಗಾಗಿ ಸಂಸ್ಕೃತದಲ್ಲಿ ಕಾವ್ಯ ಬರೆದಿದ್ದನೆ ? ಇದು ವಿಚಾರಾರ್ಹವಾದದ್ದು. ಕನ್ನಡ ಕಾವ್ಯಕ್ಕೆ ಮರ್ಯಾದೆಯ

ಉಲ್ಲೇಖವಿರುವುದರಿಂದ, ಕವಿಯ ಪೋಷಕನು ಭೋಜನ ಮಿತ್ರನೊ ಸಾಮಂತನೊ ಆಗಿದ್ದು, ಅವನ ಮೂಲಕ ಕವಿಗೆ ಮರ್ಯಾದೆ ಸಂದಿರಬೇಕು. ಇಲ್ಲವೆ ಭೋಜನ ಪರವಾಗಿ ನಾಗವರ್ಮನು ಯುದ್ಧಮಾಡಿ ಕವಿತೆಗೂ ಪರಾಕ್ರಮಕ್ಕೂ ಗೌರವ ಪಡೆದಿರಬೇಕು.

7 ಈ ಪದ್ಯಗಳು ಕೆಲವು ಹಸ್ತಪ್ರತಿಗಳಲ್ಲಿ ದೊರೆಯುವುದಿಲ್ಲವಾದ ಕಾರಣ, ಇವು ಪ್ರಕ್ಷಿಪ್ತವಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕಾಲ ನಿರ್ಣಾಯಕವಾದ ಈ ಪದ್ಯಗಳೂ ಮಂಗಳ ಪದ್ಯಗಳೂ ಕಿಟ್ಟೆಲ್ ಅವರ ಸಂಸ್ಕರಣದಲ್ಲಿ ದೊರೆಯುವುದಿಲ್ಲ.

8 ದಂಡಿಯ ಕಾವ್ಯಾದರ್ಶ ದಶಕುಮಾರ ಚರಿತ್ರೆಗಳಂತೆ ಒಂದು ಛಂದೋಗ್ರಂಥವನ್ನೂ ಬರೆದಿರುವನೆಂದು 'ಛಂದೋ ವಿಚಿತ್ಯಾಂ ಸಕಲಸ್ತತ್ವ ಪಂಚೋ ನಿರೂಪಿತಃ । ಸಾ ವಿದ್ಯಾ ನೌಸ್ತಿತೀರ್ಷೂಣಾಂ ಗಂಭೀರಂ ಕಾವ್ಯಸಾಗರಂ॥ ಎಂದು ಹೇಳಿಕೊಂಡಿರುವಂತೆ, ಅವನನ್ನು ಅನುಸರಿಸಿರುವ ನಾಗವರ್ಮನು ಅವನಂತೆ ಕನ್ನಡದಲ್ಲಿ ಒಂದು ಗದ್ಯಗ್ರಂಥ (ಕಾದಂಬರಿ), ಒಂದು ಛಂದೋಗ್ರಂಥ ಒಂದು ಅಲಂಕಾರ ಗ್ರಂಥವನ್ನು ರಚಿಸಿರುವುದಲ್ಲದೆ, ಒಂದು ವ್ಯಾಕರಣವನ್ನೂ ನಿಘಂಟನ್ನೂ ರಚಿಸಿದ್ದಾನೆ. ಅಲ್ಲದೆ ತಾನು ಸಂಸ್ಕೃತ ಕವಿಗಳನ್ನು ಮೀರಿಸಿದ್ದೇನೆ ಎಂದು ಹೊಗಳಿಕೊಳ್ಳುವ ಪದ್ಯ ಛಂದೋಂಬುಧಿಯಲ್ಲಿ ಬರುತ್ತದೆ. (ಈ ಪದ್ಯ ಕಿಟ್ಟೆಲ್ ಶೇಷ ಐಯಂಗಾರ್ ಮುದ್ರಣಗಳಲ್ಲಿಲ್ಲ; ಕವಿಚರಿತ್ರೆ ಕಾವ್ಯ ಕಲಾನಿಧಿ ಮುದ್ರಣಗಳಲ್ಲಿದೆ.) 'ಜಿತಬಾಣಂ ಹರಿಯಂತೆ' ಇತ್ಯಾದಿ ತೊಡಗುವ ಪದ್ಯದಲ್ಲಿ (ಪುಟ 27 ನೋಡಿ) ಆರು ವಿಶೇಷಣಗಳೂ ನಾಗವರ್ಮನ ಆರು ಕೃತಿಗಳಿಗೆ ಅನ್ವಯಿಸುತ್ತವೆ. ಬಾಣನನ್ನು ಗೆದ್ದವನು, ಅತಿಶಯಿಸಿದವನು ಎನ್ನುವುದು ಕಾದಂಬರಿಗೆ ಅನ್ವಯಿಸುತ್ತದೆ. ಗುಣಾಢ್ಯನನ್ನು ಹಿಂದಿಕ್ಕಿದವನು ಎನ್ನುವುದು ನಾಗವರ್ಮನ ಅಭಿನವ ಶರ್ವವರ್ಮ ಎಂಬ ಬಿರುದನ್ನು ನಿರ್ದೇಶಿಸುತ್ತದೆ. ಶರ್ವವರ್ಮನು ಗುಣಾಢ್ಯನನ್ನು ಸೋಲಿಸಿದ ವಿಷಯ ಕಥಾ ಸರಿತ್ಸಾಗರದ ಪೀಠಿಕಾಲಂಬಕದಲ್ಲಿ ಬರುತ್ತದೆ. ಕಾವ್ಯಾವಲೋಕನದಲ್ಲಿ ನಾಗವರ್ಮನು ದಂಡಿಯನ್ನು ವಿಶೇಷವಾಗಿ ಅನುಸರಿಸಿರುವುದರಿಂದ ಕಣ್ಣಮುಂದೆ ಬಂದ ದಂಡಿ ಎಂಬ ವಿಶೇಷಣ ಸಾರ್ಥಕವಾಗಿದೆ. 'ಧನಂಜಯನ ಏಕ ವಿಭವವನ್ನು ಸ್ವೀಕರಿಸಿದವನು, ವಿಶೇಷ ಗುಣವನ್ನು ಹೊಂದಿದವನು' ಎಂಬ ಗುಣವಾಚಕ ವಸ್ತುಕೋಶವನ್ನು ನಿರ್ದೇಶಿಸುತ್ತದೆ. ಏಕೆಂದರೆ ನಿಘಂಟಿಗೆ ತಾನು ಧನಂಜಯನಿಗೆ ಋಣಿ ಎಂದು ಕವಿ ಹೇಳಿಕೊಂಡಿದ್ದಾನೆ. ನಾಗವರ್ಮನು ಮಾಘನಂತೆ ಒಂದು ಪ್ರೌಢ ಕಾವ್ಯವನ್ನು ಬರೆದಿರಬೇಕು. ಜನ್ನನ ಹೇಳಿಕೆಯಂತೆ ಅದು ಜಿನಪುರಾಣವೇ ಆಗಿರಬೇಕು. ಐದು ವಿಶೇಷಗಳಿಗೆ ಐದು ಗ್ರಂಥಗಳಾದವು. ಆರನೆಯದು? ಅದು ಛಂದೋಂಬುಧಿಯೇ ಆಗಿರಬೇಕು. ಮಯೂರನನ್ನು ಕೀಳ್ಮಾಡಿದವನು ಎಂಬ ವಿಶೇಷಣ ನಾಗವರ್ಮನ ಛಂದಶ್ಯಾಸ್ತ್ರಕ್ಕೆ ಅನ್ವಯಿಸುತ್ತದೆ. ಮಯೂರನು ಸೂರ್ಯಶತಕವನ್ನಲ್ಲದೆ ಒಂದು ಕೋಶ, ಒಂದು ಛಂದೋಗ್ರಂಥವನ್ನು ಬರೆದಿರುವನಂತೆ! ಐದು ಗ್ರಂಥಗಳ ಕರ್ತೃ ಒಬ್ಬನೇ ನಾಗವರ್ಮ ಎಂದು ಸಾಧಿಸಲು ಡಾ. ಎ. ವೆಂಕಟಸುಬ್ಬಯ್ಯನವರು ಕೊಡುವ ಕಾರಣ ಮತ್ತು ಮೇಲಿನ ಪದ್ಯಕ್ಕೆ ಮಾಡಿರುವ ಅರ್ಥ. (ನಾಗವರ್ಮನ ಕೃತಿಗಳು: ಪ್ರ. ಕ. 15-3) ದೊರಕದೆ ಇದ್ದ ಗ್ರಂಥಗಳನ್ನು ಸೇರಿಸಿಕೊಂಡು ಇಲ್ಲಿ ಮಾಡಿರುವ ಊಹೆ ವಿಚಿತ್ರವಾಗಿದೆ. ಈ ವಾದವನ್ನು ವಿದ್ವಾಂಸರು ಒಪ್ಪಿಲ್ಲ. ಈ ಪದ್ಯ ಛಂದೋಂಬುಧಿಯ ನಾಗವರ್ಮನ ವಿನಯವನ್ನು ತೋರಿಸದು ಎಂಬುದು ನನ್ನ ಎಣಿಕೆ. ವಸ್ತು ಕೋಶದಲ್ಲಿ ಕಾವ್ಯಾವಲೋಕನದಲ್ಲಿ ಬರುವ ವಿನಯ ಎರಡನೆಯ ನಾಗವರ್ಮನಿಗೆ ಸಹಜವಾಗಿದೆ. ದಶಕುಮಾರ ಚರಿತೆ

ಗದ್ಯ ಗ್ರಂಥ. ಕನ್ನಡ ಕಾದಂಬರಿಯನ್ನು ಹಾಗೆನ್ನಲಾದೀತೆ? ಇಬ್ಬರು ನಾಗವರ್ಮರಿದ್ದರು ಎನ್ನುವುದು ಸುಸ್ಪಷ್ಟ

9 ಎಚ್. ಚೆನ್ನಕೇಶವ ಐಯಂಗಾರ್. ಹನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯ - ಕರ್ನಾಟಕ ಸಾಹಿತ್ಯಪರಿಷತ್ಪತ್ರಿಕೆ, ಸಂಪುಟ 14, ಸಂಚಿಕೆ 3 ಹಾನಂಗಲ್ಲು ವಿರಾಟನಗರಿಯೆನ್ನುವುದುಂಟು. ಪಾಂಡವರು ಇಲ್ಲಿಯ ವರೆಗೆ ಬಂದಿರಲಾರರು. ಪಾಂಡವರು 'ಯಮುನಾನದಿಯ ಬಲ ತೀರಕ್ಕೆ ಬಂದು, ದಶಾರ್ಣದ ಉತ್ತರಕ್ಕೂ ಪಾಂಚಾಲದ ದಕ್ಷಿಣಕ್ಕೂ, ಯಕೃಲ್ಲೋಕ ಶೂರಶೇನ ದೇಶಗಳ ನಡುವೆಯೂ ನಡೆದು ಕಾಡನ್ನು ದಾಟಿ ವಿರಾಟನ ನಾಡಿಗೆ ಬಂದರು' ಎಂದು ಭಾರತದಲ್ಲಿ ಹೇಳಿದೆ. 'ಜಗುನೆಯಂ ಪಾಯ್ದು ಮೂಡವೊಗದೆ ಪಯಣಂಬೋಗಿ ಮತ್ಸ್ಯದೇಶಮಂ ಪುಗುತಂದರ್' ಎಂದು ಪಂಪನ ಹೇಳಿಕೆ. 'ತೆಂಕಣ ಕಡೆಯವರು ಕಂಡಿಹರು' ಎನ್ನುತ್ತಾನೆ ಕುಮಾರವ್ಯಾಸ. ಆದ್ದರಿಂದ ಹಾನಗಲ್ ವಿರಾಟರಾಜಧಾನಿ ಅಲ್ಲ ಎಂಬುದು ಸ್ಪಷ್ಟ. ಆದರೆ ಕೆಲವು ಶಾಸನಗಳಲ್ಲಿ ಹಾನಗಲ್ಲಿಗೆ ವಿರಾಟನಗರಿ ಎಂದು ಹೆಸರುಂಟು.

[ಇಂದಿನ ಭರತಪುರ ವಿರಾಟನಗರಿ. — ದೆಹಲಿಗೂ ಇಂದ್ರಪ್ರಸ್ಥಕ್ಕೂ ಹತ್ತಿರದ ರಾಜಧಾನಿ ಉತ್ತರನನ್ನೂ ಕೀಚಕನನ್ನೂ ತಮ್ಮವರೆಂದು ಹೇಳಿಕೊಳ್ಳಲೇಬೇಕೆನ್ನಿಸಿದರೆ ನಮ್ಮ ಹಾನುಗಲ್ಲು ಅದು ಎನ್ನಬಹುದು - ಸಂ.]

10 ಕಿಸುಕಾಡ ನಾಡು ಸೊಗಯಿಸಿ ತೋರ್ಕುಂ.

ಆ ನಾಡೊಳಗ್ರಹಾರಂ
ಭೂನಾರೀ ಕುಚತಟಾಗ್ರಹಾರಂ ವಿಪುಳ
ಶ್ರೀ ನಿಲಯಮೆನಿಸಿ ಸೈಯಡಿ ... (ಪಂಚತಂತ್ರ 41)

ಪರಮಾನಂದಮನೀವ ದೇವಭವನ ಶ್ರೀಲೀಲೆಯಿಂದಂ ಧರಾ
ಮರರುತ್ಸಾಹದೆ ಮಾಡುತಿರ್ಪ ಮಖಸಂದೋಹಂಗಳಿಂದಂ ಮುನೀ
ಶ್ವರರಿಂದಂ ನುತಸತ್ಕವಿಪ್ರವರ ವಿದ್ವದ್ಬೃಂದದಿಂದಂ ಮನೋ
ಹರ ಸೌಂದರ್ಯ ವಿಭಾಸಿ ಸೈಯಡಿ ಕರಂ ರಯ್ಯಂ ಮಹೀಭಾಗದೊಳ್ (ಅದೇ. 43)

ಪಂಚತಂತ್ರದ ಪೀಠಿಕಾ ಭಾಗದಲ್ಲಿ ದುರ್ಗಸಿಂಹನು ನಾಗವರ್ಮನನ್ನಾಗಲಿ ಅವನ ಕೃತಿಯನ್ನಾಗಲಿ ಹೆಸರಿಸಿಲ್ಲ. ಆದರೂ ಪಂಚತಂತ್ರದ ಆರಂಭದಲ್ಲಿ ಬರುವ ವಿಷ್ಣು, ಶಿವ, ಸರಸ್ವತಿ, ಆದಿತ್ಯ, ವಿನಾಯಕ, ದುರ್ಗಿಯರ ಸ್ತೋತ್ರ ಭಾಗದಿಂದಲೂ ಸಂಸ್ಕೃತ ಕವಿಗಳಾದ ಬಾಣ ಮಯೂರ ಗುಣಾಢ್ಯ ಮಾಘ ದಂಡಿ ಧನಂಜಯರನ್ನು ಹೊಗಳಿರುವುದರಿಂದಲೂ ತನ್ನ ವಂಶದ ಪ್ರಶಸ್ತಿಯನ್ನು ಪೊಗಳಿಕೊಂಡಿರುವ ರೀತಿಯಿಂದಲೂ ದುರ್ಗಸಿಂಹನಿಗೆ ಛಂದೋಂಬುಧಿ ಮಾದರಿಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಿಂದಿನ ಕವಿಗಳೂ ಈ ವಿಷಯದಲ್ಲಿ ದುರ್ಗಸಿಂಹನಿಗೆ ಮಾದರಿಯಾಗಿದ್ದಿರಬಹುದಾಗಿದೆ.

11 ಛಂದೋಂಬುಧಿಯ ಮೂರು ಸಂಸ್ಕರಣಗಳಿದ್ದರೂ (ಕಿಟ್ಟೆಲ್, ಎಂ. ಎ. ರಾಮಾನುಜ ಐಯಂಗಾರ್, ಎಚ್. ಶೇಷ ಐಯಂಗಾರ್ ಮತ್ತು ಎಚ್. ಎಸ್. ರಾಮಸ್ವಾಮಿ ಐಯಂಗಾರ್) ಅವುಗಳಲ್ಲಿ ಪ್ರಕ್ಷಿಪ್ತಗಳು ಹೇರಳವಾಗಿವೆ. ಈ ರೀತಿಯ ಪ್ರಕ್ಷಿಪ್ತಗಳಿಗೆ ಕಾರಣಗಳನ್ನು ಸುಲಭ

ವಾಗಿ ಊಹಿಸಬಹುದು. ಈ ಶತಮಾನದವರೆಗೆ ವಿದ್ವಾಂಸರು ಈ ಗ್ರಂಥವನ್ನೇ ಛಂದಶ್ಶಾಸ್ತ್ರದ ಬೋಧೆಗಾಗಿ ಉಪಯೋಗಿಸುತ್ತಿದ್ದ ಕಾರಣ ತಮ್ಮ ಟಿಪ್ಪಣಿಗಳಲ್ಲಿ ಇತ್ತೀಚಿನ ಯಕ್ಷಗಾನ ಗ್ರಂಥಗಳಿಂದಲೂ ಪದ್ಯಗಳನ್ನು ಇದರಲ್ಲಿ ಸೇರಿಸಿದ್ದಾರೆ. ಈ ಎರಡು ಗ್ರಂಥಗಳನ್ನಲ್ಲದೆ ನಾಗವರ್ಮನು ಸಂಸ್ಕೃತದಲ್ಲಿ ಏನಾದರೂ ಗ್ರಂಥರಚನೆ ಮಾಡಿದ್ದನೆ ? ಎಂಬುದು ಕುತೂಹಲಕರವಾದ ಅಂಶ. ವಾದಿರಾಜನ ಯಶೋಧರ ಚರಿತೆಗೆ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿರುವ ಲಕ್ಷ್ಮಣನು ನಾಗವರ್ಮನ ಸಂಸ್ಕೃತ ಕೋಶದಿಂದ ಪಂಕ್ತಿಗಳನ್ನು ಉದಾಹರಿಸಿದ್ದಾನೆ. ಈ ನಾಗವರ್ಮನು ಯಾರು? ಒಂದನೆಯ ನಾಗವರ್ಮನೆ? ಅಥವಾ, ಎರಡನೆಯ ನಾಗವರ್ಮನು ಕನ್ನಡ ಸಂಸ್ಕೃತಗಳಲ್ಲಿ ವ್ಯಾಕರಣಗಳನ್ನು ಬರೆದಂತೆ, ಕನ್ನಡ ಕೋಶದೊಂದಿಗೆ ಸಂಸ್ಕೃತದಲ್ಲಿ ಕೋಶವನ್ನು ಬರೆದಿದ್ದನೆ ? ಇದು ವಿಚಾರಾರ್ಹವಾದ ಸಂಗತಿ. ಮೇಲಿನ ವ್ಯಾಖ್ಯಾನದಲ್ಲಿ ಕನ್ನಡ ಪದಗಳು ಬಂದಿರುವುದೂ ರಾಘವಾಂಕನ ಹೆಸರು ಉಲ್ಲೇಖಗೊಂಡಿರುವುದೂ ಈ ಕುತೂಹಲವನ್ನು ಇನ್ನೂ ಹೆಚ್ಚಿಸುತ್ತದೆ.

ಒಂದನೆಯ ನಾಗವರ್ಮ, ಭಾಗ - 2

ಕರ್ಣಾಟಕ ಕಾದಂಬರಿ

ಪಿ. ವಿ. ಜೋಶಿ

ಕರ್ಣಾಟಕ ಕಾದಂಬರಿ

ಕಾದಂಬರಿ ಎಂಬ ಗ್ರಂಥದ ಹೆಸರು ಆ ಕಥೆಯ ನಾಯಕಿಯ ಹೆಸರು. ಸಂಸ್ಕೃತದಲ್ಲಿ ಹೀಗೆ ಒಂದು ಗದ್ಯಕಾವ್ಯಕ್ಕೆ ಅಂಕಿತನಾಮವಾಗಿದ್ದ ಪದವು ನಮ್ಮ ಭಾಷೆಯಲ್ಲಿ ಎಲ್ಲ ದೀರ್ಘವಾದ ಗದ್ಯಕತೆಗಳಿಗೆ ಜಾತಿವಾಚಕವಾಗಿ ಈ ಕಾಲದಲ್ಲಿ ರೂಢವಾಗಬೇಕಾದರೆ ಮೂಲ ಕಾದಂಬರಿಯ ಜನಪ್ರಿಯತೆ, ಅದು ಏಕಮಾತ್ರವಾದ ಅಸದೃಶವಾದ, ಅಂತಹ ಗದ್ಯಕಾವ್ಯ ಎನ್ನುವ ಭಾವನೆ ಎಷ್ಟೊಂದು ಬಲವಾಗಿರಬಹುದು ! ಕನ್ನಡದಲ್ಲಿ ದೀರ್ಘವಾದ ಗದ್ಯಕಥೆಗಳು ಹುಟ್ಟುತ್ತಿದ್ದ ಕಾಲದಲ್ಲಿಯೇ ತೂರಮರಿಯವರ "ಕನ್ನಡ ಕಾದಂಬರೀ ಕಥೆ"ಯೂ,* ಅದಕ್ಕಿಂತ ಎಂಟು ನೂರು ವರ್ಷದಷ್ಟು ಹಿಂದಿನದಾದ ನಾಗವರ್ಮನ "ಕರ್ಣಾಟಕ ಕಾದಂಬರಿ" ಎಂಬ ಚಂಪೂ ಕಾವ್ಯವೂ ಪ್ರಕಟವಾದವು. ಇವೆರಡಕ್ಕೂ ಮೂಲವಾದ ಬಾಣಭಟ್ಟನ ಕಾದಂಬರಿ ನಾಗವರ್ಮನಿಗಿಂತ ನಾಲ್ಕು ಶತಮಾನಗಳಷ್ಟು ಹಿಂದಿನದು. ಆದರೂ ಅದು ನಾಗವರ್ಮನ ಕಾಲದಲ್ಲಿ "ಚೆಲ್ವಿಂಗಾಗಕರಮೆನಿಸಿದ್ದುರ್ದ ಜಗತ್ಕೌತುಕಮಾಗಿ" ತ್ತೆಂಬ ಕಾರಣ ನಾಗವರ್ಮನು ಅದನ್ನು ಕನ್ನಡಿಸಿದನೆಂದು ಹೇಳಿಕೊಂಡಿದ್ದಾನೆ. "ಈ ಕಾದಂಬರಿ ಕಥೆಯನ್ನು ಆರಂಭದಿಂದ ಕಡೆತನಕ ಓದಿ ಇದರೊಳಗೆ ಸಾಧಿಸಿದ ಸಂವಿಧಾನಕವನ್ನು ಸ್ಮರಣೆಗೆ ತಂದರೆ ಮನಸಿಗೆ ಆನಂದವೂ, ಆಶ್ಚರ್ಯವೂ ಆಗದೆ ಇರವೆಂದು" ತೂರಮರಿಯವರು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ. ಇಂತಹ ಜನಪ್ರಿಯವಾದ ಕಥೆಯು ಬಾಣನಿಗಿಂತಲೂ ಬಹುಕಾಲ ಮೊದಲಿನಿಂದಲೇ ಪ್ರಚಲಿತವಾಗಿತ್ತೆಂಬುದು ಕಥಾಸರಿತ್ಸಾಗರದ ಮಕರಂದಿಕೋಪಾಖ್ಯಾನದಿಂದ ತಿಳಿಯುತ್ತದೆ. ಬಾಣನ ಹಿಂದಿನ ಪರಂಪರೆ ಮರೆಯಾಗಿ ಅದು ಬಾಣನ ಹೆಸರಿನಿಂದಲೇ "ಆ ಚಂದ್ರತಾರಂ" ಪ್ರಸಿದ್ಧವಾಗಿರುವದನ್ನು ನೆನೆದರೆ ಬಾಣನ ಪ್ರತಿಭೆ ಎಂತಹದೆಂಬುವನ್ನು ತಿಳಿಯಬಹುದು. ಅವನ ಮುಂಚೆ ಪ್ರಚಲಿತವಾಗಿದ್ದ ಕಥೆಯಲ್ಲಿ ಎಷ್ಟು ಸ್ವಲ್ಪ ಬದಲಾವಣೆಗಳಿಂದ ಎಂತಹ ಔಚಿತ್ಯವನ್ನೂ ಚಮತ್ಕೃತಿಯನ್ನೂ ಬಾಣನು ಸಾಧಿಸಿದ

---

*ಕರ್ನಾಟಕ ಕಾದಂಬರೀ ಸಂಗ್ರಹ ಎಂಬ ಇನ್ನೊಂದು ಸಣ್ಣ ಗದ್ಯಕಾವ್ಯವೂ ಬಹು ರಮ್ಯವಾಗಿದೆ

—ಸಂ

ನೆಂಬುದನ್ನು ತಿಳಿಯಬೇಕಾದರೆ ಕಥಾಸರಿತ್ಸಾಗರದ ಮಕರಂದಿಕೋಪಾಖ್ಯಾನವನ್ನು ಸ್ವಲ್ಪ ವಿವರವಾಗಿ ಹೇಳಬೇಕು —

ಕಥಾಸರಿತ್ಸಾಗರದ 'ಮಕರಂದಿಕಾ' ಉಪಾಖ್ಯಾನ

ಕಾಂಚನಪುರಿ ಎಂಬ ನಗರದಲ್ಲಿ ಸುಮನಾ ಎಂಬ ರಾಜನಿದ್ದನು. ಅವನು ಒಂದು ದಿವಸ ಒಡ್ಡೋಲಗದಲ್ಲಿದ್ದಾಗ ಚಾಂಡಾಲಾಧಿಪತಿಯ ಮಗಳು ಮುಕ್ತಾಲತಾ ಎಂಬವಳು ಒಂದು ಗಿಳಿಯನ್ನು ತೆಗೆದುಕೊಂಡು ತನ್ನ ಅಣ್ಣ ವೀರ ಪ್ರಭನ ಜತೆಗೆ ರಾಜನ ದರ್ಶನಕ್ಕೆ ಬಂದಳು. ದ್ವಾರಪಾಲಕನ ಅಪ್ಪಣೆ ಪಡೆದು ರಾಜನ ಸನ್ನಿಧಾನಕ್ಕೆ ಬಂದು ಅವಳು ನಿವೇದಿಸಿದಳು – "ಮಹಾರಾಜರೇ ಶಾಸ್ತ್ರಗಂಜ ಎಂಬ ಹೆಸರಿನ ಈ ಗಿಳಿಯು ಎಲ್ಲ ಕಲೆಗಳನ್ನೂ ವಿದ್ಯೆಗಳನ್ನೂ ವೇದಗಳ ಮರ್ಮ ವನ್ನೂ ತಿಳಿದುಕೊಂಡಿದೆ. ಇದು ತಮ್ಮಂತಹವರ ಬಳಿಯಲ್ಲಿಯೇ ಇರುವದು ಯೋಗ್ಯವಾದದು."

ಎಂದು ಹೇಳಿ ಗಿಳಿಯ ಪಂಜರವನ್ನು ಪ್ರತೀಹಾರಿಗೆ ಒಪ್ಪಿಸಿದಳು. ಪ್ರತೀ ಹಾರಿ ಅದನ್ನು ಅರಸನ ಹತ್ತಿರ ತಂದಕೂಡಲೆ ಗಿಳಿಯು

> 'ರಾಜನ್ ! ಯುಕ್ತಮಿದಂ ಸದೈವ ಯದಯಂ ದೇವಸ್ಯ ಸಂಧುಕ್ಷತೇ
> ಧೂಮಶ್ಯಾಮ ಮುಖೋದ್ವಿಷ ದ್ವಿರಹಿಣೀ ನಿಶ್ವಾಸವಾತೋದ್ಗಮೈಃ
> ಏತ ತ್ವದ್ಭುತ ಮೇವ ಯತ್ಪರಿಭವಾದ್ಬಾಷ್ಪಾಂಬು ಪೂರಪ್ಲವೈ
> ರಾಪ್ರಜ್ವಲತೀವ ದಿಕ್ಷು ದಶಸು ಪ್ರಾಜ್ಯಃ ಪ್ರತಾಪಾನಲಃ

— ರಾಜ ! ನಿನ್ನ ಪ್ರತಾಪದ ಜ್ವಾಲೆ ಹೊಗೆಯಾಡುತ್ತಲೇ ನಿನ್ನ ಶತ್ರುಗ ಳನ್ನು ಕಳೆದುಕೊಂಡ ಅವರ ಸ್ತ್ರೀಯರ ನಿಶ್ವಾಸಗಳಗಾಳಿಯಿಂದ ಭುಗಿಲೆಂದು ಹೊತ್ತಿಕೊಳ್ಳುವದು ಯುಕ್ತವಾದದ್ದೇ ಸರಿ. ಆದರೆ ಅದೇ ಜ್ವಾಲೆಯು ಅದೇ ಸ್ತ್ರೀ ಯರ ಕಣ್ಣೀರಿನ ಪ್ರವಾಹದಿಂದ ತುಪ್ಪವನ್ನು ಹೊಯ್ದಂತೆ ಧಗಧಗಿಸುವದು ಅದ್ಭುತವಲ್ಲವೆ !" ಎಂದು ರಾಜನನ್ನು ಸ್ತುತಿಸಿ "ಮಹಾರಾಜ ! ಯಾವ ಶಾಸ್ತ್ರದ ಯಾವ ಪ್ರಮೇಯವನ್ನು ಹೇಳಲಿ, ಅಪ್ಪಣೆಯಾಗಬೇಕು" ಎಂದಿತು.

ರಾಜನಿಗೆ ಅತ್ಯಾಶ್ಚರ್ಯವಾಯಿತು. ಮಂತ್ರಿ ಹೇಳಿದನು – ಒಡೆಯರೆ ! ಈ ಗಿಳಿ ಪೂರ್ವಜನ್ಮದಲ್ಲಿ ಯಾವನೊ ತಪಸ್ವಿಯಾಗಿದ್ದು ಶಾಪವಶನಾಗಿ ಪಕ್ಷಿಯೋನಿಯಲ್ಲಿ ಜನಿಸಿರಬಹುದು. ಆ ತಪಃಪ್ರಭಾವದಿಂದಲೇ ಪೂರ್ವಜನ್ಮದ ಸ್ಮೃತಿ ಇನ್ನೂ ಅಚ್ಚಳಿ ಯದೆ ಉಳಿದಂತಿದೆ.

ಆಗ ರಾಜನು ಗಿಳಿಯನ್ನು ಉದ್ದೇಶಿಸಿ "ನಿನ್ನ ಜನ್ಮವಾದುದು ಎಲ್ಲಿ ? ಈ

ತಿರ್ಯಗ್ಯೋನಿಯಲ್ಲಿ ನಿನಗೆ ಶಾಸ್ತ್ರಗಳ ಜ್ಞಾನವಾದದ್ದು ಹೇಗೆ ? ನೀನು ನಿಜವಾಗಿಯೂ ಯಾರು ? ನಿನ್ನ ವೃತ್ತಾಂತವನ್ನು ಪೂರ್ತಿಯಾಗಿ ತಿಳಿಸು" ಎಂದನು.

ಗಿಳಿ ಕಣ್ಣೀರು ಸುರಿಸುತ್ತ ಗದ್ಗದಿತವಾಗಿ, "ರಾಜನ್! ನನ್ನ ಕಥೆ ಹೇಳುವಂತಹದಲ್ಲ. ಆದರೂ ತಮ್ಮ ಅಪ್ಪಣೆಯನ್ನು ಪಾಲಿಸಲೆಂದು ಹೇಳುತ್ತೇನೆ, ಚಿತ್ತೈಸಬೇಕು" ಎಂದಿತು.

ಹಿಮಾಲಯದ ಅಡಿಯಲ್ಲಿ ಒಂದು ಮಹಾವೃಕ್ಷದಲ್ಲಿ ಒಂದು ಗಿಳಿ ತನ್ನ ಪತ್ನಿಯೊಡನೆ ವಾಸವಾಗಿತ್ತು. ಅದರ ಮರಿಯೇ ನಾನು. ನಾನು ಹುಟ್ಟಿನಿಂದಲೇ ನನ್ನ ತಾಯಿಗೆ ಮೃತ್ಯುವಾದೆನು. ತಂದೆ ಮುಪ್ಪಿನಿಂದ ಜೀರ್ಣನಾಗಿ ತನ್ನ ಹೊಟ್ಟೆಯನ್ನೇ ಹೊರೆಯಲಾರದವನಾಗಿದ್ದರೂ ಅಕ್ಕಪಕ್ಕದ ಗೂಡುಗಳಲ್ಲಿಯ ಗಿಳಿಗಳು ತಿಂದು ಬಿಟ್ಟದ್ದನ್ನು ತಂದು ತಾನೂ ತಿಂದು ನನಗೂ ತಿನ್ನಿಸುತ್ತಿದ್ದನು. ತನ್ನ ರೆಕ್ಕೆಯಲ್ಲಿ ನನ್ನನ್ನು ಮುಚ್ಚಿಟ್ಟುಕೊಂಡು ನನ್ನ ಪಾಲನೆ ಮಾಡಿದನು.

ಒಂದು ದಿನ ಆ ಅಡವಿಗೆ ಬೇಡರ ಪಡೆಯೊಂದು ಬಂದು ಇಡಿಯ ದಿನವೆಲ್ಲ ಅನೇಕ ಪಶು ಪಕ್ಷಿಗಳ ಬೇಟೆಯಾಡಿತು. ಆ ಪಡೆಯಲ್ಲೊಬ್ಬ ಮುದುಕನು ಬೇರೆ ಬೇಟೆಯನ್ನು ಕಾಣದೆ ನಾವಿದ್ದ ಮರದ ಹತ್ತಿರ ಬಂದನು. ಮರದಲ್ಲಿ ಪಕ್ಷಿಗಳ ಶಬ್ದ ಕೇಳಿ ಮರವನ್ನು ಹತ್ತಿ ಗೂಡುಗಳಲ್ಲಿ ಕೈಯಿಕ್ಕಿ ಪಕ್ಷಿಗಳನ್ನು ಹೊರಗೆಳೆದು ಗೋಣು ಮುರಿದು ಮುರಿದು ಕೆಳಕ್ಕೆ ಹಾಕತೊಡಗಿದನು. ನಾನು ಭಯದಿಂದ ನಡುಗುತ್ತ ನನ್ನ ತಂದೆಯ ರೆಕ್ಕೆಗಳಲ್ಲಿ ಅವಿತುಕೊಂಡೆನು. ಅಷ್ಟರಲ್ಲಿ ಬೇಡನು ನಮ್ಮ ಗೂಡಿಗೂ ಕೈಹಾಕಿ ನನ್ನ ತಂದೆಯನ್ನು ಹೊರಗೆಳೆದು ಗೋಣುಮುರಿದು ಕೆಳಕ್ಕೆ ಎಸೆದನು. ತಂದೆಯ ರೆಕ್ಕೆಯಲ್ಲಿ ಅವಿತುಕೊಂಡಿದ್ದ ನಾನೂ ಅವನ ಜತೆಗೇ ನೆಲಕ್ಕೆ ಬಿದ್ದೆನು. ಭಯದಿಂದ ಅವನನ್ನು ಬಿಟ್ಟು ಆತ್ಮರಕ್ಷಣೆಗಾಗಿ ಒಣಗಿದ ಎಲೆಗಳಲ್ಲಿ ತಲೆ ಮರಸಿಕೊಂಡೆನು.

ಬೇಡನು ಎಲ್ಲ ಗೂಡುಗಳನ್ನು ತೆರವುಮಾಡಿ ಕೆಳಕ್ಕೆ ಬಂದನು. ಕೆಲವು ಪಕ್ಷಿಗಳನ್ನು ಅಲ್ಲಿಯೇ ಸುಟ್ಟು ತಿಂದನು. ಉಳಿದವನ್ನು ತೆಗೆದುಕೊಂಡು ತನ್ನ ಸಂಗಡಿಗರೊಂದಿಗೆ ಹೊರಟುಹೋದನು.

ಅವನು ಹೋದಮೇಲೆ ನನ್ನ ಭಯ ಕಡಮೆಯಾದರೂ ರಾತ್ರಿಯೆಲ್ಲ ಬಹಳ ಕ್ಲೇಶದಿಂದ ಕಳೆದೆನು. ಬೆಳಗಾದ ಮೇಲೆ ನೀರಡಿಕೆಯಿಂದ ಬಳಲುತ್ತ ಹತ್ತಿರದ ಪದ್ಮಸರವೆಂಬ ಕೊಳದ ದಾರಿಯನ್ನು ಹಿಡಿದು, ತಲುಪಲಾಗದೆ ರೆಕ್ಕೆಗಳನ್ನ ಕೆದರಿಕೊಂಡು ಬಿದ್ದಿದ್ದೆನು. ಅಲ್ಲಿ ಸ್ನಾನಕ್ಕೆ ಬಂದ ಮರೀಚಿ ಮುನಿಗಳು ನನ್ನನ್ನು ನೋಡಿ ಕನಿಕರಪಟ್ಟು ನಾಲ್ಕು ಹನಿ ನೀರು ಕುಡಿಸಿ ಎಲೆಯಲ್ಲಿ ಮುಚ್ಚಿಕೊಂಡು ತಮ್ಮ ಆಶ್ರಮಕ್ಕೆ ನನ್ನನ್ನು ಕೊಂಡೊಯ್ದರು. ಅಲ್ಲಿ ಪುಲಸ್ತ್ಯ ಋಷಿಗಳು ನನ್ನನ್ನು ನೋಡಿ ಮುಗು

ಳ್ನಗೆ ಬೀರಿದರು. ಅಲ್ಲಿದ್ದ ಬೇರೆ ತಾಪಸರೆಲ್ಲ ಅವರನ್ನು ಅದೇಕೆ ಹಾಗೆ ನಕ್ಕದ್ದು ಎಂದು ಕೇಳಿದರು.

ಮಹರ್ಷಿಗಳು ಹೇಳಿದರು – "ಇವನು ಶಾಪಗ್ರಸ್ತನಾಗಿ ಈ ಗತಿಗೆ ಬಂದಿದ್ದಾನೆ. ಆಹ್ನಿಕ ಮುಗಿಸಿದ ನಂತರ ಇವನ ಪೂರ್ಣಕತೆಯನ್ನು ಹೇಳುತ್ತೇನೆ. ಅದರಿಂದ ಇವನಿಗೂ ತನ್ನ ಪೂರ್ವಜನ್ಮದ ಸ್ಮರಣೆಯಾಗುವದು."

ಆಗ ಎಲ್ಲ ತಪಸ್ವಿಗಳೂ ತಮ್ಮ ತಮ್ಮ ನಿತ್ಯಕರ್ಮಾನುಷ್ಠಾನಕ್ಕೆ ತೆರಳಿದರು. ಅನಂತರ ಎಲ್ಲರೂ ಒತ್ತಟ್ಟಿಗೆ ಕೂತು ನನ್ನ ಕತೆಯನ್ನು ಹೇಳಬೇಕೆಂದು ಮಹರ್ಷಿಗಳನ್ನು ಕೇಳಿಕೊಂಡರು. ಮಹರ್ಷಿಗಳು ಹೇಳಿದ ಕತೆ ಇದು :

ರತ್ನಾಕರವೆಂಬ ನಗರದಲ್ಲಿ ಜ್ಯೋತಿಷ್ಪ್ರಭನೆಂಬ ರಾಜನಿದ್ದನು. ಅವನು ಉಗ್ರ ತಪಸ್ಸಿನಿಂದ ಮಹಾದೇವ ಶಂಕರನನ್ನು ಸಂತೋಷಪಡಿಸಿ ತನ್ನ ರಾಣಿ ಹರ್ಷವತಿಯಲ್ಲಿ ಸಂತಾನಫಲವನ್ನು ಬೇಡಿಕೊಂಡನು. ರಾಣಿಯು ಗರ್ಭಿಣಿಯಾದಾಗ ಅವಳ ಮುಖದಲ್ಲಿ ಚಂದ್ರಮನು ಪ್ರವೇಶಿಸಿದಂತೆ ರಾಜನಿಗೆ ಸ್ವಪ್ನವಾಯಿತು. ಆದ್ದರಿಂದ ಮಗುವಿಗೆ ರಾಜನು ಸೋಮಪ್ರಭನೆಂದು ಹೆಸರಿಟ್ಟನು.

ರಾಜಕುಮಾರರಿಗೆ ಯುಕ್ತವಾದ ಎಲ್ಲ ವಿದ್ಯೆಗಳಲ್ಲಿಯೂ ಸೋಮಪ್ರಭನು ಪಾರಂಗತನಾಗಿ ಪ್ರಾಪ್ತವಯಸ್ಕನಾಗಲು ರಾಜನು ಅವನಿಗೆ ಯುವರಾಜ ಪಟ್ಟಗಟ್ಟಿ ತನ್ನ ಮಂತ್ರಿಯ ಮಗನಾದ ಪ್ರಿಯಂಕರನೆಂಬವನನ್ನು ಅವನ ಮಂತ್ರಿ ಎಂದು ನೇಮಿಸಿದನು. ಆ ಸಮಯಕ್ಕೆ ಸ್ವರ್ಗದಿಂದ ಮಾತಲಿಯು ಒಂದು ಕುದುರೆಯನ್ನು ಹಿಡಿದುಕೊಂಡು ಸೋಮಪ್ರಭನ ಬಳಿಗೆ ಬಂದು "ರಾಜಕುವರ! ನೀನು ಪೂರ್ವಜನ್ಮದಲ್ಲಿ ಇಂದ್ರನ ಮಿತ್ರ ವಿದ್ಯಾಧರನಾಗಿದ್ದೆ. ಅದೇ ಸ್ನೇಹದಿಂದ ಇಂದ್ರನು ಉಚ್ಚೈಶ್ರವದ ಸಂತಾನವಾದ ಈ ಆಶ್ವಶ್ರವ ಎಂಬ ಕುದುರೆಯನ್ನು ನಿನಗಾಗಿ ಕಳುಹಿದ್ದಾನೆ. ಇದನ್ನೇರಿದ ನಿನ್ನನ್ನು ಯಾವ ಶತ್ರುವೂ ಜಯಿಸಲಾರನು" ಎಂದು ಹೇಳಿದನು. ಹಾಗೆ ಕುದುರೆಯನ್ನೊಪ್ಪಿಸಿ ಮಾತಲಿಯು ಮರಳಿ ಹೋದನು.

ಮರುದಿನ ಸೋಮಪ್ರಭನು ತಂದೆಯ ಬಳಿಗೆ ಬಂದು, "ತಂದೆಯೆ, ಕ್ಷತ್ರಿಯನಾಗಿ ಜನಿಸಿ ಬರಿಯ ಸುಖಜೀವನದಲ್ಲಿರುವದು ಧರ್ಮವಲ್ಲ. ಆದ್ದರಿಂದ ನನಗೆ ಈಗಲೇ ದಿಗ್ವಿಜಯಕ್ಕೆ ಹೊರಡಲು ಅನುಜ್ಞೆಯಾಗಬೇಕು ಎಂದನು. ರಾಜನು ಬಹಳ ಸಂತೋಷಪಟ್ಟು ದಿಗ್ವಿಜಯಕ್ಕೆ ಅವಶ್ಯವಾದ ಎಲ್ಲ ಸನ್ನಾಹಗಳನ್ನು ಮಾಡಿ ಶುಭಮುಹೂರ್ತದಲ್ಲಿ ಯುವರಾಜನನ್ನು ದಿಗ್ವಿಜಯಕ್ಕೆ ಹೊರಡಿಸಿದನು.

ಸೋಮಪ್ರಭನು ತನ್ನ ದಿವ್ಯಾಶ್ವವನ್ನೇರಿ ಭೂಮಂಡಲವನ್ನೆಲ್ಲ ಜಯಿಸಿ ತಿರುಗಿ ಬರುವಾಗ ಹಿಮಾಲಯದ ಅಡಿಯಲ್ಲಿ ಒಂದು ದಿನ ಬೀಡುಬಿಟ್ಟನು. ಅಲ್ಲಿಂದಲೇ ಆ ದಿವ್ಯಾಶ್ವವನ್ನೇರಿ ಬೇಟೆಗೆಂದು ಹೋದಾಗ ಮಾರ್ಗದಲ್ಲಿ ಮಣಿಮಯವಾದ

ಕಿನ್ನರವನ್ನು ಕಂಡು ಕುತೂಹಲದಿಂದ ಅದರ ಹಿಂದೆ ಕುದುರೆಯನ್ನು ಓಡಿಸಿದನು. ಕಿನ್ನರವು ಒಂದು ಗುಹೆಯಲ್ಲಿ ಅದೃಶ್ಯವಾಯಿತು. ಅಷ್ಟರಲ್ಲಿ ಕುದುರೆಯು ಕುಮಾರ ನನ್ನು ಬಹುದೂರ ತಂದುಬಿಟ್ಟಿತ್ತು. ಸೂರ್ಯಾಸ್ತವೂ ಆಯಿತು.

ಸೋಮಪ್ರಭನು ಬಹಳ ದಣಿದಿದ್ದನು. ಬೀಡಾರಕ್ಕೆ ತಿರುಗಿ ಹೋಗಬೇಕೆಂದು ದಾರಿ ಹುಡುಕುತ್ತಿದ್ದಾಗ ಅವನಿಗೆ ಒಂದು ವಿಶಾಲವಾದ ಸರೋವರ ಕಂಗೊಳಿಸಿತು. ಅದರ ದಡದಲ್ಲಿಯೇ ವಿಶ್ರಮಿಸಬೇಕೆಂದು ನಿಶ್ಚಯಿಸಿ ಕುದುರೆಯನ್ನಿಳಿದು ಅದಕ್ಕೆ ನೀರು ತೋರಿಸಿ ಹುಲ್ಲು ಹಾಕಿ ತಾನೂ ಹಣ್ಣು ತಿಂದು ನೀರು ಕುಡಿದು ಎಲೆಗಳನ್ನು ಹಾಸಿಕೊಂಡು ವಿಶ್ರಮಿಸಿದನು. ಆಗ ಎಲ್ಲಿಂದಲೊ ಮಧುರವಾದ ಗೀತಧ್ವನಿ ಕೇಳಿ ಬರುತ್ತಿತ್ತು. ಅವನು ಕೂಡಲೆ ಎದ್ದು ಧ್ವನಿ ಬರುತ್ತಿದ್ದ ದಿಕ್ಕಿನಲ್ಲಿ ನಡೆದನು. ಅಲ್ಲಿ ಒಂದು ದೇವಾಲಯ ಕಂಡಿತು. ಆ ದೇವಾಲಯದಲ್ಲಿ ಶಂಕರನ ಸನ್ನಿಧಾನದಲ್ಲಿ ಒಬ್ಬ ದಿವ್ಯಕನ್ಯೆಯು ಗಾನದಲ್ಲಿ ಮಗ್ನಳಾಗಿದ್ದುದು ಕಾಣಿಸಿತು. ಇವಳು ಯಾರಿದ್ದಾಳು ಎಂದು ವಿಸ್ಮಯಪಡುತ್ತ ನಿಂತುಕೊಂಡಿರಲು ಅವಳು ಗಾಯನವನ್ನು ಪೂರೈಸಿ ಅವನಕಡೆಗೆ ತಿರುಗಿ ಸನ್ಮಾನಪೂರ್ವಕವಾಗಿ, “ತಾವು ಯಾರು, ಯಾವ ಪ್ರಯೋಜನಕ್ಕಾಗಿ ಹೀಗೆ ಇಂತಹ ದುರ್ಗಮವಾದ ಸ್ಥಾನಕ್ಕೆ ಬಂದಿರಿ” ಎಂದು ಕೇಳಿದಳು. ಸೋಮಪ್ರಭನು ತನ್ನ ವೃತ್ತಾಂತವನ್ನೆಲ್ಲ ಹೇಳಿ, “ತಾವು ಯಾರು ಈ ನಿರ್ಜನ ವನದಲ್ಲಿ ಏಕಾಕಿಯಾಗಿರುವದಕ್ಕೆ ಕಾರಣವೇನು ?” ಎಂದು ಕೇಳಿದನು.

ಆ ದಿವ್ಯ ಕನ್ನಿಕೆ ಕಣ್ಣೀರು ಸುರಿಸುತ್ತ, “ಮಹಾಭಾಗರೆ ಈ ಅಭಾಗಿನಿಯ ಕತೆ ಯಿಂದ ನಿಮಗಾಗಬೇಕಾದದ್ದೇನು ? ಆದರೂ ನಿಮಗೆ ಕೇಳಬೇಕೆಂದು ಅಪೇಕ್ಷೆ ಯಿದ್ದರೆ ಹೇಳುವೆನು” ಎಂದಳು.

ಹಿಮಾಲಯದಲ್ಲಿ ಕಾಂಚನಾಭವೆಂಬ ನಗರವಿದೆ. ಅಲ್ಲಿ ವಿದ್ಯಾಧರರ ರಾಜ ಪದ್ಮಕೂಟನೆಂಬವನಿದ್ದಾನೆ. ಅವನ ರಾಣಿ ಹೇಮಪ್ರಭಾ ಎಂಬವಳ ಗರ್ಭದಲ್ಲಿ ನಾನು ಜನಿಸಿದೆ. ನನ್ನ ಹೆಸರು ಮನೋರಥಪ್ರಭಾ. ನಾನು ಸಖೀಜನರ ಸಂಗಡ ಆಶ್ರಮ, ಪರ್ವತ,ವನ,ಉಪವನಗಳಲ್ಲಿ ವಿಹರಿಸಿ – ಭೋಜನ ಸಮಯಕ್ಕೆ ತಂದೆಯ ಬಳಿಗೆ ಹೋಗುತ್ತಿದ್ದೆ. ಒಂದು ದಿನ ನಾವು ಈ ಸರೋವರದ ಹತ್ತಿರ ವಿಹರಿಸುತ್ತಿ ದ್ದಾಗ ಒಬ್ಬ ಮುನಿಕುಮಾರನು ತನ್ನ ಮಿತ್ರನೊಡನೆ ಬರುವುದನ್ನು ಕಂಡೆನು. ಅವನ ಚೆಲುವಿಗೆ ಮರುಳಾಗಿ ನಾನು ಮೆಲ್ಲ ಮೆಲ್ಲನೆ ಅವನ ಸಮಿಾಪಕ್ಕೆ ಹೋದೆನು. ಅವನೂ ನನ್ನನ್ನು ಪ್ರೇಮದ ಕಣ್ಣಿನಿಂದ ಕಂಡನು. ನನ್ನ ಸಖಿಯು ನಮ್ಮಿರ್ವರ ಇಂಗಿತವನ್ನರಿತು ಮುನಿಕುಮಾರನ ಮಿತ್ರನಲ್ಲಿ ಅವನ ಪರಿಚಯ ವಿಚಾರಿಸಿದಳು. ಆ ಮಿತ್ರನು ಹೇಳಿದನು – “ಸುಂದರಿ, ಇಲ್ಲಿ ಹತ್ತಿರದಲ್ಲಿಯೇ ದೀಧಿತಿ ಎಂಬ ಮುನಿ ಗಳು ವಾಸವಾಗಿದ್ದಾರೆ. ಅವರು ಒಂದು ದಿನ ಇಲ್ಲಿಗೆ ಸ್ನಾನಕ್ಕೆ ಬಂದಾಗ ಲಕ್ಷ್ಮಿಯು

ಅವರನ್ನು ಕಂಡು ಮೋಹಿಸಿದಳು. ಅಭಿಲಾಷಾಮಾತ್ರದಿಂದಲೇ ಅವಳಿಗೆ ಒಬ್ಬ ಮಗನು ಹುಟ್ಟಿದನು. ಅವನನ್ನು, ಲಕ್ಷ್ಮಿಯು ಮುನಿಯ ಹತ್ತಿರ ಒಯ್ದು ತಮ್ಮ ದರ್ಶನಮಾತ್ರದಿಂದಲೇ ಇವನು ಜನಿಸಿದ ಕಾರಣ ಇವನು ತಮ್ಮ ಪುತ್ರನೇ ಎಂದು ಮುನಿಗೆ ಒಪ್ಪಿಸಿ ತಾನು ಅದೃಶ್ಯಳಾದಳು. ಮುನಿಯು ಮಗುವಿಗೆ ರಶ್ಮಿವಾನ್ ಎಂದು ಹೆಸರಿಟ್ಟು ವಿಧಿವತ್ತಾಗಿ ಎಲ್ಲ ಸಂಸ್ಕಾರಗಳನ್ನೂ ಎಲ್ಲ ವಿದ್ಯೆಗಳನ್ನೂ ಅನು ಗ್ರಹಿಸಿದನು. ಆ ರಶ್ಮಿವಾನ್ ಎಂಬ ಕುಮಾರನೇ ಈ ನನ್ನ ಮಿತ್ರನು."

ಅವನು ಆಮೇಲೆ ನನ್ನ ಸಖಿಯ ಹತ್ತಿರ ವಿಚಾರಿಸಿ ನನ್ನ ಹೆಸರು ವಂಶಗಳ ನ್ನೆಲ್ಲ ತಿಳಿದುಕೊಂಡನು. ನಾನು ಅವರ ಹತ್ತಿರದಲ್ಲಿಯೇ ಇದ್ದಾಗ ಮನೆಯಿಂದ ನನ್ನ ಇನ್ನೊಬ್ಬ ಸಖಿ ಬಂದು "ಬೇಗನೆ ನಡೆ, ತಂದೆಯವರು ಭೋಜನಕ್ಕಾಗಿ ನಿನ್ನ ದಾರಿ ಕಾಯುತ್ತಿದ್ದಾರೆ" ಎಂದಳು. ನಾನು ಗಾಬರಿಯಿಂದ ಆ ಮುನಿಪುತ್ರನನ್ನು ಅಲ್ಲಿಯೇ ಬಿಟ್ಟು ತಂದೆಯ ಬಳಿಗೆ ಹೋದೆನು, ಭೋಜನವನ್ನು ಪೂರೈಸಿ ನಾನು ಹೊರ ಬರು ತ್ತಲೇ ನನ್ನ ಸಖಿಯು ಬಂದು "ನಿನ್ನ ಮುನಿಕುಮಾರನ ಮಿತ್ರನು ಬಂದಿದ್ದಾನೆ; ರಶ್ಮಿ ವಾನನು ತನ್ನ ತಂದೆಯಿಂದ ಕಲಿತ ಆಕಾಶಗಾಮಿನೀ ವಿದ್ಯೆಯನ್ನು ಇವನಿಗೂ ಕೊಟ್ಟು "ಮನೋರಥಪ್ರಭಳನ್ನು ಕೂಡಲೆ ಕಾಣಬೇಕೆಂದು ಕಳಿಸಿದ್ದಾನಂತೆ. ಕಾಮ ದೇವನ ಬಾಧೆಯಿಂದಾಗಿ ನೀನಿಲ್ಲದೆ ತಾನು ಒಂದು ಕ್ಷಣವೂ ಜೀವಿಸಲಾರೆನೆಂದು ಮುನಿಕುಮಾರನು ಹೇಳಿದ್ದಾನಂತೆ" ಎಂದಳು.

ಈ ಸಂದೇಶವನ್ನು ಕೇಳಿದ ಕೂಡಲೆ ನಾನು ನನ್ನ ಸಖಿಯ ಜತೆಗೆ ಇಲ್ಲಿಗೆ ಬಂದೆನು. ಆದರೆ ನಾನು ಇಲ್ಲಿಗೆ ಬರುವಷ್ಟರಲ್ಲಿ ಮುನಿಕುಮಾರನ ದೇಹಾಂತವಾ ಗಿತ್ತು. ಚಂದ್ರೋದಯವಾದಕೂಡಲೆ ಅವನಿಗೆ ತಾಪ ಹೆಚ್ಚಾಗಿ ಪ್ರಾಣನೀಗಿದನಂತೆ. ಅವನ ದೇಹದೊಂದಿಗೆ ನಾನೂ ಚಿತೆಯನ್ನು ಏರಬೇಕೆಂದು ನಾನು ಉಜ್ಜುಗಿಸುತ್ತಿ ದ್ದಾಗ ತೇಜಸ್ವಿಯಾದ ಒಬ್ಬ ಪುರುಷನು ಆಕಾಶದಿಂದ ಇಳಿದು ಬಂದು ಮುನಿ ಕುಮಾರನ ಶರೀರವನ್ನು ಎತ್ತಿಕೊಂಡುಹೋದನು. ನಾನು ಒಬ್ಬಳೇ ಅಗ್ನಿಯನ್ನು ಪ್ರವೇಶಿಸಲು ಸಿದ್ಧಳಾಗುತ್ತಿದ್ದಾಗ ಒಂದು ನಭೋವಾಣಿಯು "ವತ್ಸೆ, ಈ ಸಾಹಸ ಬೇಡ, ಯೋಗ್ಯ ಕಾಲದಲ್ಲಿ ಇದೇ ಮುನಿಪುತ್ರನೊಡನೆ ನಿನ್ನ ಸಮಾಗಮವಾಗು ವುದು" ಎಂದು ನುಡಿಯಿತು. ಅದನ್ನು ನಂಬಿ ನಾನು ಇದೇ ಸ್ಥಳದಲ್ಲಿ ಅಂದಿ ನಿಂದಲೂ ಕಾದಿದ್ದೇನೆ. ನನ್ನ ಯಾವತ್ತು ಸಮಯವನ್ನು ಭಗವಾನ ಶಂಕರನ ಆರಾಧನೆಯಲ್ಲಿ ಕಳೆಯುತ್ತೇನೆ. ನನ್ನ ಮುನಿಕುಮಾರನ ಆ ಮಿತ್ರನಾದರೂ ಏನಾದ ನೆಂಬುದು ಇಂದಿಗೂ ನನಗೆ ತಿಳಿದಿಲ್ಲ —

ಈ ವೃತ್ತಾಂತವನ್ನು ಕೇಳಿ ಸೋಮಪ್ರಭನು ಮತ್ತೆ "ನಿಮ್ಮನ್ನು ಇಲ್ಲಿ ಏಕಾಂಗಿಯಾಗಿ ಬಿಟ್ಟು ನಿಮ್ಮ ಆ ಸಖಿ ಎಲ್ಲಿಗೆ ಹೋದಳು" ಎಂದು ವಿಚಾರಿಸಿದನು.

ಅದಕ್ಕೆ ಮನೋರಥಪ್ರಭೆ ಹೇಳಿದಳು –"ವಿದ್ಯಾಧರರ ಅಧಿಪತಿ ಸಿಂಹವಿಕ್ರಮ ಮಹಾ ರಾಜನಿಗೆ ಮಕರಂದಿಕಾ ಎಂಬ ಮಗಳಿದ್ದಾಳೆ. ಅವಳು ನನಗೆ ಪ್ರಾಣಕ್ಕಿಂತಲೂ ಪ್ರಿಯಳಾದ ಸಖಿ. ನನ್ನ ದುಃಖದಲ್ಲಿ ಸಹಭಾಗಿನಿಯಾಗಿ ಅವಳು ಇಂದಿನವರೆಗೂ ಮದುವೆಯಾಗದೆ ಇದ್ದಾಳೆ. ನನ್ನ ಕ್ಷೇಮ ಸಮಾಚಾರವನ್ನು ತಿಳಿಯುವದಕ್ಕೆ ಅವಳು ತನ್ನ ಸಖಿಯನ್ನು ಇಲ್ಲಿಗೆ ಕಳುಹಿದ್ದಳು. ಅವಳು ತಿರುಗಿ ಹೋಗುವಾಗ ನಾನು ನನ್ನ ಸಖಿಯನ್ನೂ ಅವಳ ಜತೆಗೆ ಹೋಗಿ ಮಕರಂದಿಕೆಯನ್ನು ನೋಡಿಕೊಂಡು ಬಾ ಎಂದು ಕಳುಹಿದ್ದೇನೆ. ಆದ್ದರಿಂದ ಇಂದು ನಾನಿಲ್ಲಿ ಒಬ್ಬಳೇ ಇದ್ದೇನೆ."

ಇಷ್ಟರಲ್ಲಿಯೇ ಅವಳ ಸಖಿಯು ಆಕಾಶದಿಂದ ಇಳಿದಳು. ಮಕರಂದಿಕೆಯ ಸಮಾಚಾರವನ್ನು ಕೇಳಿ· ತಿಳಿದು ಮನೋರಥಪ್ರಭೆಯು ಸೋಮಪ್ರಭನಿಗಾಗಿ ಕೋಮಲವಾದ ಪರ್ಣಶಯ್ಯೆಯನ್ನು ಮಾಡಿಸಿ ಅವನ ಕುದುರೆಗೆ ಮೇವು ಹಾಕಿಸಿ ದಳು. ಆ ರಾತ್ರಿಯನ್ನು ಎಲ್ಲರೂ ಅಲ್ಲಿಯೇ ಕಳೆದರು. ಬೆಳಗಾಗುತ್ತಲೆ ದೇವಜಯ ನೆಂಬ ವಿದ್ಯಾಧರನು ಸಿಂಹವಿಕ್ರಮರಾಜನ ಸಂದೇಶದೊಡನೆ ಬಂದನು. "ರಾಜ ಕುಮಾರಿ, ನಿನ್ನ ಪಾಣಿಗ್ರಹಣವಾಗದವಿನಾ ಮಕರಂದಿಕೆಯು ತನ್ನ ಪಾಣಿಗ್ರಹಣಕ್ಕೆ ಒಪ್ಪುವದಿಲ್ಲವಂತೆ – ಆದ್ದರಿಂದ ನೀನೇ ಅಲ್ಲಿಯವರೆಗೆ ಬಂದು ಅವಳಿಗೆ ತಿಳಿಯ ಹೇಳಿ ಒಪ್ಪಿಸಬೇಕೆಂದು ಮಹಾರಾಜರು ಅಪೇಕ್ಷಿಸುತ್ತಾರೆ" ಎಂದು ಹೇಳಿದನು. ಇದನ್ನು ಕೇಳಿ ಮನೋರಥಪ್ರಭೆ ಹೊರಟು ನಿಂತಳು. ಆಗ ಸೋಮಪ್ರಭನು "ದೇವಿ, ನಾನೂ ವಿದ್ಯಾಧರರ ದೇಶವನ್ನು ನೋಡಬಯಸುತ್ತೇನೆ. ತಮಗೆ ಯೋಗ್ಯವೆಂದು ತೋರಿದರೆ ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೋಗಬೇಕು. ನಾನು ತಿರುಗಿ ಬರುವವರೆಗೆ ನನ್ನ ಕುದುರೆಯು ಇಲ್ಲಿಯೇ ಇರುವದು" ಎಂದನು. ಮನೋರಥಪ್ರಭೆಯು ದೇವಜಯನ ಜತೆಗೆ ಸೋಮಪ್ರಭನನ್ನು ಕರೆದುಕೊಂಡು ದಿವ್ಯಶಕ್ತಿಯಿಂದ ವಿದ್ಯಾಧರರ ಲೋಕವನ್ನು ತಲುಪಿದಳು. ಅಲ್ಲಿ ಮಕರಂದಿಕೆಯು ಅವರನ್ನು ಸತ್ಕರಿಸಿ ಸೋಮಪ್ರಭನ ಪರಿಚಯವನ್ನು ತಿಳಿದುಕೊಂಡಳು. ಕಂಡ ಕೂಡಲೆ ಅವನಲ್ಲಿ ಆಸಕ್ತಳಾದಳು. ಮಕರಂದಿಕೆಯ ಚೆಲುವಿಗೆ ಸೋಮಪ್ರಭನು ಮನಸೋತನು. ಇಂತಹ ಲಾವಣ್ಯವತಿಯು ಯಾವ ಪುಣ್ಯವಂತನಿಗಾಗಿ ಕಾದಿ ದ್ದಾಳು ಎಂದು ಅವನು ಚಿಂತಿಸತೊಡಗಿದನು.

ಆಮೇಲೆ ಏಕಾಂತದಲ್ಲಿ ಮನೋರಥಪ್ರಭೆಯು ಮಕರಂದಿಕೆಯನ್ನು ಸಂಧಿಸಿ ಅವಳು ವಿವಾಹವಾಗದಿರುವದಕ್ಕೆ ಕಾರಣವೇನೆಂದು ಕೇಳಿದಳು. ಅದಕ್ಕೆ ಮಕರಂದಿ ಕೆಯು "ಸಖಿ, ನೀನು ನಿನ್ನ ವರನನ್ನು ಇನ್ನೂವರೆಗೆ ಪಡೆದಿಲ್ಲ. ನನ್ನ ಪ್ರಾಣಕ್ಕಿಂತ ಪ್ರಿಯಳಾದ ನೀನು ಹೀಗಿರುವಾಗ ನಾನು ವಿವಾಹಕ್ಕೆ ಹೇಗೆ ಮನಸ್ಸು ಮಾಡಲಿ" ಎಂದಳು. ಅದಕ್ಕೆ ಮನೋರಥಪ್ರಭೆಯು "ಸುಂದರಿ, ನಾನು ವರನನ್ನು ಪಡೆದಿಲ್ಲ

ವೆಂದು ಏಕೆ ಹೇಳುತ್ತೀ; ಪಡೆದಾಗಿದೆ. ಈಗ ಅವನ ದಾರಿ ಕಾಯುತ್ತ ಇದ್ದೇನೆ ಅಷ್ಟೇ, ಆದ್ದರಿಂದ ನೀನು ವಿವಾಹವನ್ನು ತಡಮಾಡಬೇಡ" ಎಂದಳು. ಮಕರಂದಿಕೆಯು "ಆಗಲಿ ನಿನ್ನ ಮಾತಿನಂತೆಯೇ ನಡೆಯುತ್ತೇನೆ" ಎಂದಳು. ಅವಳ ಇಂಗಿತವನ್ನು ತಿಳಿದು ಮನೋರಥಪ್ರಭೆ ಹೇಳಿದಳು – "ಈ ರಾಜಕುಮಾರನು ದಿಗ್ವಿಜಯವನ್ನು ಪೂರೈಸಿ ನಿಮ್ಮ ಮನೆಗೆ ಬಂದಿದ್ದಾನೆ. ಇವನಿಗೆ ಉಚಿತವಾದ ಸತ್ಕಾರವನ್ನು ಮಾಡು." ಅದಕ್ಕೆ ಮಕರಂದಿಕೆಯು "ನಾನು ನನ್ನನ್ನು ಮೊದಲಾಗಿ ನನ್ನ ಎಲ್ಲ ವಸ್ತುಗಳನ್ನು ಅವನಿಗೆ ಅರ್ಪಿಸಿದ್ದೇನೆ. ಅವನು ಬಯಸಿದ್ದನ್ನು ಸ್ವೀಕರಿಸಲಿ" ಎಂದಳು. ಮನೋರಥಪ್ರಭೆಯು ಇದನ್ನು ಸಿಂಹವಿಕ್ರಮನಿಗೆ ತಿಳಿಸಿ ಅವರಿರ್ವರ ವಿವಾಹದ ಏರ್ಪಾಟು ಮಾಡಿಸಿದಳು. ಇದರಿಂದ ಸೋಮಪ್ರಭನು ಬಹಳ ಸಂತೋಷಪಟ್ಟನು.

ಅತ್ತಕಡೆಗೆ ತಾನಿಲ್ಲದೆ ತನ್ನ ಕುದುರೆಯನ್ನೊಂದೇ ಕಂಡರೆ ತನ್ನವರಿಗೆ ಚಿಂತೆಯಾದೀತೆಂದು ತಾನು ಬೇಗನೆ ಮನೋರಥಪ್ರಭೆಯ ಆಶ್ರಮದೆಡೆಗೆ ಹೋಗಬೇಕೆಂದು ಅವಸರ ಪಡಿಸಿದನು. ಅಲ್ಲಿ ತನ್ನ ಸೇನೆಯ ಪ್ರಯಾಣಕ್ಕೆ ಸರಿಯಾದ ಏರ್ಪಾಡು ಮಾಡಿ ಕೂಡಲೆ ತಿರುಗಿಬಂದು ಮಕರಂದಿಕೆಯನ್ನು ಮದುವೆಯಾಗುವದಾಗಿ ಹೇಳಿ ಹೊರಡಲುದ್ಯುಕ್ತನಾದನು.

ಮನೋರಥಪ್ರಭೆಯು ದೇವಜಯನ ಸಹಾಯದಿಂದ ಮೊದಲಿನಂತೆಯೇ ಸೋಮಪ್ರಭನನ್ನು ತನ್ನ ಆಶ್ರಮದಲ್ಲಿ ತಂದು ಇಳಿಸಿದಳು. ಅದೇ ಹೊತ್ತಿಗೆ ಅವನ ಮಂತ್ರಿ ಪ್ರಿಯಂಕರನೂ ಎಲ್ಲ ಸೇನಾಸಮೇತನಾಗಿ ಅಲ್ಲಿಗೆ ಬಂದನು. ಅವನು ಸೋಮಪ್ರಭನೊಂದಿಗೆ ಮಾತಾಡುತ್ತಿರುವಾಗಲೆ ಜ್ಯೋತಿಷ್ಪ್ರಭರಾಜನ ದೂತನೊಬ್ಬನು ಬಂದು "ರಾಜಪುತ್ರರೆ ತಾವು ಕೂಡಲೆ ರಾಜಧಾನಿಗೆ ಬರಬೇಕೆಂದು ಮಹಾರಾಜರು ಕರೆ ಕಳಿಸಿದ್ದಾರೆ" ಎಂದನು. ತಂದೆಯ ಸಂದೇಶದಂತೆ ಸೋಮಪ್ರಭನು ರಾಜಧಾನಿಗೆ ಹೊರಟನು. ತಂದೆಯನ್ನು ಕಂಡು ಬೇಗನೆ ತಿರುಗಿ ಬರುವೆನೆಂದು ಮನೋರಥಪ್ರಭೆಗೂ ದೇವಜಯನಿಗೂ ಹೇಳಿದನು. ದೇವಜಯನು ಮಕರಂದಿಕೆಯ ಬಳಿಗೆ ಹೋಗಿ ಈ ವೃತ್ತಾಂತವನ್ನು ತಿಳಿಸಿದನು. ಆದರೆ ಮಕರಂದಿಕೆಯು ವಿರಹದಿಂದ ವ್ಯಾಕುಲಳಾಗಿ ಚಡಪಡಿಸಹತ್ತಿದಳು. ಅವಳ ತಂದೆತಾಯಿಗಳು ಎಷ್ಟು ರೀತಿಯಿಂದ ಸಮಾಧಾನ ಹೇಳಿದರೂ ಅವಳ ವ್ಯಾಕುಲ ಹೆಚ್ಚಾಗುತ್ತಲೇ ಇತ್ತು. ಇದರಿಂದ ಅವರು ಕ್ರುದ್ಧರಾಗಿ "ನೀನು ಇದೇ ಶರೀರದಿಂದ ನಿನ್ನ ಹುಟ್ಟು ಮರೆತವಳಾಗಿ ನಿಷಾದರಲ್ಲಿ ಬದುಕುವಂತಾಗಲಿ" ಎಂದು ಶಪಿಸಿದರು.

ಶಾಪಗ್ರಸ್ತಳಾದ ಮಕರಂದಿಕೆ ನಿಷಾದ ಕನ್ಯೆಯಾದಳು. ಅವಳ ತಾಯಿ ತಂದೆಗಳು ಶೋಕದಿಂದ ಪ್ರಾಣ ನೀಗಿದರು. ತಂದೆಯು ಪುನರ್ಜನ್ಮದಲ್ಲಿ ಸರ್ವಶಾಸ್ತ್ರ

ಗಳನ್ನು ತಿಳಿದ ಋಷಿಯಾದನು. ಆಮೇಲೆ ಇನ್ನಾವುದೂ ಶಾಪದಿಂದ ಗಿಳಿಯ ಜನ್ಮವನ್ನೂ ಪಡೆದನು. ಅದೇ ಗಿಳಿಯು ಇಲ್ಲಿ ಬಂದಿದೆ. ಪೂರ್ವದ ತಪೋಬಲದಿಂದ ಆಗ ಗಳಿಸಿದ ಶಾಸ್ತ್ರಜ್ಞಾನವೆಲ್ಲ ಅದರ ಸ್ಮರಣೆಯಲ್ಲಿದೆ. ಇವನ ವಿಚಿತ್ರಕರ್ಮ ಗತಿಯನ್ನು ಕಂಡು ವಿಸ್ಮಯದಿಂದ ನಾನು ನಕ್ಕೆನು. ಈ ಕಥೆಯನ್ನು ಇವನು ತನ್ನ ಬಾಯಿಂದಲೇ ರಾಜಸಭೆಯಲ್ಲಿ ಹೇಳಿ ಪಾಪಮುಕ್ತನಾಗುವನು; ಮತ್ತು, ಇವನ ಮಗಳು ಸೋಮಪ್ರಭನ ಸಮಾಗಮವನ್ನು ಪಡೆಯುವಳು. ಮನೋರಥ ಪ್ರಭೆಯಾದರೂ ತನ್ನ ಪ್ರಿಯತಮನಾದ ರಶ್ಮಿವಾನನನ್ನು ಪಡೆಯುವಳು. ಈ ಸಮಯದಲ್ಲಿ ಸೋಮಪ್ರಭನು ತನ್ನ ತಂದೆಯ ದರ್ಶನ ಪಡೆದು ಮನೋರಥಪ್ರಭೆಯ ಆಶ್ರಮದಲ್ಲಿ ಮಕರಂದಿಕೆಯನ್ನು ಪಡೆಯುವದಕ್ಕೆ ಮಹಾದೇವ ಶಂಕರನ ಆರಾಧನೆಮಾಡುತ್ತಲಿದ್ದಾನೆ."—

ಈ ಕಥೆಯನ್ನು ಹೇಳಿ ಪುಲಸ್ತ್ಯಮುನಿಗಳು ಸುಮ್ಮನಾದರು. ನನ್ನ ಪೂರ್ವಜನ್ಮಸ್ಮರಣೆಯಿಂದ ನನಗೆ ಹರ್ಷಶೋಕಗಳೆರಡೂ ಒಮ್ಮೆಲೆ ಒತ್ತಿಬಂದವು. ಮರೀಚಿ ಮುನಿಗಳು ನನ್ನನ್ನು ಕೆಲವುಕಾಲ ಪೋಷಿಸುತ್ತಿರುವಾಗ ನನ್ನ ರೆಕ್ಕೆಗಳು ಬಲಿತವು. ನಾನು ಅಲ್ಲಿ ನಿಲ್ಲಲಾರದೆ ಹಾರಿ ನಿಷಾದರ ವಸತಿಗೆ ಬಂದು ತಲುಪಿದನು. ಈಗ ಇಲ್ಲಿಗೆ ಬಂದು ನನ್ನ ಎಲ್ಲ ಪಾಪಗಳಿಗೂ ಕೊನೆಯಾಯಿತು.

ಗಿಳಿಯ ಈ ಕತೆ ಕೇಳಿ ಸುಮನರಾಜನು ಸಂತೋಷಪಟ್ಟನು. ಅತ್ತ ಮನೋರಥ ಪ್ರಭೆಯ ಆಶ್ರಮದಲ್ಲಿ ಮಹಾದೇವನು ಪ್ರಸನ್ನನಾಗಿ ಸೋಮಪ್ರಭನಿಗೆ "ಮಗು, ಈಗ ನೀನು ಸುಮನರಾಜನಲ್ಲಿಗೆ ಹೋಗು; ಮಕರಂದಿಕೆಯು ತನ್ನ ತಂದೆಯ ಶಾಪದಿಂದ ನಿಷಾದರಲ್ಲಿ ಬೆರೆತು ಮುಕ್ತಾಲತಾ ಎಂಬ ಹೆಸರಿನಿಂದ ಅಲ್ಲಿಗೆ ಬಂದಿದ್ದಾಳೆ. ಅವಳಿಗೆ ಶಾಪವನ್ನಿತ್ತ ಅವಳ ತಂದೆಯೂ ಗಿಳಿಯಾಗಿ ಹುಟ್ಟಿ ಅವಳ ಜತೆಯಲ್ಲಿದ್ದಾನೆ. ನಿನ್ನನ್ನು ಕಂಡಕೂಡಲೆ ತನ್ನ ಹುಟ್ಟಿನ ಸ್ಮರಣೆಯಾಗಿ ಅವಳು ಶಾಪಮುಕ್ತಳಾಗುವಳು. ನಿಮ್ಮ ಸುಖಸಮಾಗಮವಾಗುವದು" ಎಂದು ಅಪ್ಪಣೆ ಕೊಡಿಸಿದನು.

ಸೋಮಪ್ರಭೆಗೂ ಅಲ್ಲಿಯೇ ಮಹಾದೇವನು, "ನಿನ್ನ ಪ್ರಿಯಕರನು ಸುಮನರಾಜನಾಗಿ ಜನ್ಮವೆತ್ತಿದ್ದಾನೆ, ನೀನೂ ಅಲ್ಲಿಗೆ ಹೋಗು. ನಿನ್ನನ್ನು ಕಾಣುತ್ತಲೆ ಅವನಿಗೂ ತನ್ನ ಪೂರ್ವಜನ್ಮದ ಸ್ಮರಣೆಯಾಗಿ ಅದೇ ಮೊದಲಿನ ಶರೀರವನ್ನು ಪಡೆಯುವನು" ಎಂದು ಸಂತಯಿಸಿದನು.

ಈ ಸಂದೇಶಗಳನ್ನು ಪಡೆದು ಸೋಮಪ್ರಭನೂ ಮನೋರಥಪ್ರಭೆಯೂ ಜತೆಯಾಗಿ ಸುಮನರಾಜನ ಓಲಗಕ್ಕೆ ಬಂದರು. ಅಲ್ಲಿ ಸೋಮಪ್ರಭನನ್ನು ಕಂಡ ಕೂಡಲೆ ಮಕರಂದಿಕೆಗೆ ತನ್ನ ಪೂರ್ವಸ್ಮರಣೆಯಾಗಿ ವಿದ್ಯಾಧರಶರೀರವನ್ನು

ಪಡೆದು ಅವನನ್ನು ಅಪ್ಪಿಕೊಂಡಳು. ಸುಮನರಾಜನಿಗೂ ಸೋಮಪ್ರಭೆಯನ್ನು ಕಾಣುತ್ತಲೆ ಪೂರ್ವಜನ್ಮದ ಸ್ಮರಣೆಯಾಗುವಷ್ಟರಲ್ಲಿ ಅವನ ಮೊದಲಿನ ರಶ್ಮಿವಾನ ಶರೀರವು ಆಕಾಶದಿಂದ ಇಳಿಯಿತು. ಸುಮನರಾಜನ ಶರೀರವನ್ನು ಬಿಟ್ಟು ತನ್ನ ಶರೀರವನ್ನು ಪಡೆದು ಮನೋರಥಪ್ರಭೆಯ ಒಡಗೂಡಿ ರಶ್ಮಿವಾನನು ತನ್ನ ಆಶ್ರಮಕ್ಕೆ ಹೊರಟುಹೋದನು. ಸೋಮಪ್ರಭನು ತನ್ನ ಪ್ರಿಯತಮೆಯೊಡನೆ ತನ್ನ ರಾಜಧಾನಿಗೆ ಬಂದನು. ಗಿಳಿಯೂ ತನ್ನ ಶರೀರವನ್ನು ಬಿಟ್ಟು ತನ್ನ ಪೂರ್ವ ತಪಃ ಪ್ರಭಾವದಿಂದ ಮೊದಲಿನ ಉಚ್ಚ ಜನ್ಮವನ್ನು ಪಡೆಯಿತು.

ಮಕರಂದಿಕೆಯೆಂಬ ಹೆಸರು ಪುಷ್ಪರಸದಿಂದ ಬಂದಂತೆ ಕಾದಂಬರಿಯ ಹೆಸರೂ ಪುಷ್ಪದ್ದೊ ಫಲದ್ದೊ ರಸದಿಂದಲೇ ಬಂದದ್ದು. ಸೋಮಪ್ರಭನೇ ಚಂದ್ರಾಪೀಡ; ಜ್ಯೋತಿಷ್ಪ್ರಭನೇ ತಾರಾಪೀಡ; ಹರ್ಷವತಿಯೇ ವಿಲಾಸವತಿ. ಪ್ರಾರಂಭದಲ್ಲಿಯೇ ಬರುವ ಮುಕ್ತಾಲತಾ ಎಂಬ ಪಾತ್ರದ ಹೆಸರೂ ಕಥಾ ಸಂಬಂಧವೂ ಬದಲಾಗಿದ್ದರೂ "ಮುಕ್ತಾಲತೆ"ಯು ಕಾದಂಬರೀ ಕಥೆಯನ್ನು ಮೊದಲಿನಿಂದ ಕೊನೆಯುವರೆಗೂ ಕಟ್ಟಿಕೊಂಡಿದೆ.

ದೂರಂ ಮುಕ್ತಾಲತಯಾ
ಬಿಸಸಿತಯಾ ವಿಪ್ರಲೋಭ್ಯಮಾನೋ ಮೇ
ಹಂಸ ಇವ ದರ್ಶಿತಾಶಃ
ಮಾನಸಜನ್ಮಾ ತ್ವಯಾ ನೀತಃ

ಎನಗಾಸೆದೋರಿ ಬಿಸಸಿತ
ಮೆನಿಸುವ ನಿಜತಾರಹಾರಲತೆಯಿಂದಂ ಹಂ
ಸನವೋಲ್ ಮಾನಸ ಸಂಭವ
ಮೆನಿಪ ಮದೀಯಾಭಿಮಾನಮುಂ ಕಟ್ಟುಯೆಯ್ದಿ

ಎಂಬ ಪುಂಡರೀಕನ ಸಂದೇಶದಿಂದ ಅವನ ಮತ್ತು ಮಹಾಶ್ವೇತೆಯ ಕಷ್ಟಪರಂಪರೆಗಳು ಪ್ರಾರಂಭವಾಗುತ್ತವೆ. ಮಹಾಶ್ವೇತೆಯ ಕಣ್ಣೀರಿನ ವರ್ಣನೆಯಲ್ಲಿ

ಅವಶೀರ್ಣಹಾರ ಮುಕ್ತ ಮುಕ್ತಾಫಲ ತರಲಪಾತೈಃ
ವಲ್ಕಲಾವೃತಕುಚ ಶಿಖರ ಜರ್ಜರಿತ ಶೀಕರೈಃ

(ಕಡಿದ ಹಾರದ ಮುತ್ತುಗಳು ಒಂದೊಂದಾಗಿ ಉದುರುವಂತೆ ವಲ್ಕಲಾವೃತವಾದ ಎದೆಯ ಮೇಲೆ ಬಿದ್ದು ಸಿಡಿದು ಹನಿಹನಿಯಾಗುವ) ಎಂಬ ಪದಗಳು ಬರುತ್ತವೆ.

ಪುಂಡರೀಕನು ವೈಶಂಪಾಯನನಾಗಿ ಆಮೇಲೆ ಗಿಳಿಯಾಗಿ ಮೂರನೆಯ ಜನ್ಮವನ್ನು ಪಡೆದಾಗಲೂ ಶೂದ್ರಕ ರಾಜನೆದುರು –

ಸ್ತನಯುಗಮಶ್ರುಸ್ನಾತಂ ಸಮೀಪತರ
ವರ್ತಿಹೃದಯ ಶೋಕಾಗ್ನೇಃ
ಚರತಿ ವಿಮುಕ್ತಾಹಾರಂ ವ್ರತಮಿವ
ಭವತೋ ರಿಪುಸ್ತ್ರೀಣಾಂ
ವೀರರ ವೀರ, ವಿಮುಕ್ತಾ
ಹಾರಂ ಭವದರಿವಧೂ ಸ್ತನ ದ್ವಿತಯಂ ಕ
ಣ್ಣೀರಿಂ ಮಿಂದೆರ್ದೆಗಿಚ್ಚಿಂ
ದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ

ಎಂದು ಹೇಳುವಾಗ ಅದೇ ಮುಕ್ತಾಹಾರ ಅದರ ಸ್ಮರಣೆಯಲ್ಲಿ ಅಂಟಿಕೊಂಡಿದ್ದಿತೆ ? ಏಕೆಂದರೆ ಇಲ್ಲಿ "ಭವತೋ ರಿಪುಸ್ತ್ರೀಣಾಂ ಸ್ತನಯುಗಂ ವ್ರತಂಚರತೀವ" ಎಂಬ ಅನ್ವಯದಂತೆಯೇ "ಭವತೋರಿಪುಸ್ತ್ರೀಣಾಂ ಇವ" ಇನ್ನಾರದೊ ನಿನಗೆ ರಿಪುವಲ್ಲದವಳ ಆಪ್ತಳಾದವಳ "ಸ್ತನಯುಗಂ ಅಶ್ರುಸ್ನಾತಂ ವ್ರತಂಚರತಿ" ಎಂದು ಮಹಾಶ್ವೇತೆಯ ವ್ರತಕ್ಕೂ ಅನ್ವಯಿಸಬಹುದು.*

---

* ಈ ಪದ್ಯ ರಾಜಾಶೀರ್ವಾದ: ಗಿಳಿ ಮಾಡುತ್ತಿರುವುದು ನಿಜ, ಗಿಳಿ ಪುಂಡರೀಕನೆಂಬುದೂ ನಿಜ. ಆದರೆ ತನ್ನ ಹಿಂದಿನ ಬದುಕಿಗೂ ಶೂದ್ರಕನಿಗೂ ಸಂಬಂಧಿಸಿದ ನೆನಪಾಗಲಿ ಆತ್ಮಪ್ರತ್ಯಯವಾಗಲಿ ಅದಕ್ಕಿದ್ದಿರಲಾರದು. ಸಂಸ್ಕೃತ ಸಮಸ್ತ ಪದಗಳನ್ನು ಬಿಡಿಸುವಾಗ ಹೇಗಾದರೂ ವಿಗ್ರಹವನ್ನು ಒಡೆದುಕೊಂಡು ಅರ್ಥವನ್ನು ಕಲ್ಪಿಸುವ ಸುಯೋಗವುಂಟು: 'ಭವತ್ ಅರಿವಧೂ ಸ್ತನ ದ್ವಿತಯಂ' ಎಂಬುದು ರಾಜಾಶೀರ್ವಾದದಲ್ಲಿ ಸಲ್ಲಬಲ್ಲದು. ಇದಿರು ರಾಜರನ್ನು ಕೊಂದು ಅವರ ಸತಿಯರಿಗೆ ವೈಧವ್ಯ ದೀಕ್ಷಾನುಗ್ರಹ ಮಾಡುವುದು ವೀರಕ್ಕೆ ಚಿಹ್ನೆ. ಇಂಥ ಆಶೀರ್ವಾದ ಮೂಲ ಕಥೆಯಲ್ಲಿಯೂ ಇದೆ. ಹಾಗೆ ಮಾತ್ರ ಇಲ್ಲಿಯೂ ಅರ್ಥ ಮಾಡುವುದು ಹೆಚ್ಚು ನೇರ. ಪುಂಡರೀಕನಾಗಿದ್ದ ತಾನು ಸತ್ತುದರಿಂದ ಮಹಾಶ್ವೇತೆಗೆ ಯಾವ ವಿರಹ ವುಂಟಾಗಿದೆಯೊ, ಅವಳನ್ನು ನೆನೆಯುವುದು ಈ ಆಶೀಪ್ರಕರಣದಲ್ಲಿ ಅಷ್ಟು ಸಂಗತವಾಗಿ ಸುಬದ್ಧವಾಗಿ ಕಾಣಲಾರದು. ಗಿಳಿ ಹೇಳುವ ಕಥೆಗೂ ಶೂದ್ರಕನಿಗೂ ಇರುವ ಸಂಬಂಧ ಗಿಳಿಗೆ ಇನ್ನೂ ತಿಳಿಯದು . ತಾಯಿ - ಲಕ್ಷ್ಮಿ - ಚಂಡಾಲಕನ್ಯೆ ಆಮೇಲೆ ಹೇಳುವವರೆಗೂ ಶೂದ್ರಕನು ಚಂದ್ರಾಪೀಡ ಅವನ ಪ್ರಿಯೆ ಕಾದಂಬರಿ ಅವನಿಗಾಗಲಿ ಮಹಾಶ್ವೇತೆಗಾಗಲಿ ವಿರೋಧವಿಲ್ಲ. ಮಹಾಶ್ವೇತೆಯ ವಿರಹ ದುಃಖವನ್ನು ಇಲ್ಲಿ ಹೇಳಬೇಕಾದ ಅಗತ್ಯವಿಲ್ಲ. ಶೂದ್ರಕನ ಮನಸ್ಸಿಗೆ ಸದ್ಯಃ ಹೇಗೂ ಸಂಬಂಧಿಸದ ಗಿಳಿಯ ಪೂರ್ವಜನ್ಮದ ಕತೆಯನ್ನು - ಅರಿ ಇವ - ಹೇಳಿ ರೂಪಿಸುವುದು ಸಮಂಜಸವಾದೀತೊ ಇಲ್ಲವೊ. — ಸಂ.

ಈ ಎರಡನೆಯ ಆರ್ಯೆಯ ತಾತ್ಪರ್ಯವೂ ಬಾಣನ ಕಲ್ಪನೆಯದಲ್ಲ, ಮಕರಂದಿಕೋಪಾಖ್ಯಾನದಲ್ಲಿ ಅದೇ ಗಿಳಿ ಹೇಳುವ ರಾಜನ್ ಯುಕ್ತಮಿದಂ ಎಂಬ ಪದ್ಯದೊಡನೆ ಹೋಲಿಸಿ ನೋಡಬಹುದು.

ಈ ಕಲ್ಪನೆ ನಮಗೆ ಬೀಭತ್ಸವೆನಿಸುವಷ್ಟು ಅಂದಿನವರಿಗೆ ಅನಿಸುತ್ತಿರಲಿಲ್ಲವೆಂದು ತೋರುತ್ತದೆ. ಆದ್ದರಿಂದಲೇ ಬಾಣನು ಭಾವವನ್ನು ಇದ್ದಂತೆಯೇ ಇಟ್ಟು ಸ್ವಲ್ಪೇ ಶಬ್ದಗಳಲ್ಲಿ ಕಥಾಸಂದರ್ಭಕ್ಕೆ ಹೊಂದುವಂತೆ ತನ್ನ ಆರ್ಯೆಯನ್ನು ರಚಿಸಿದ್ದಾನೆ. ಬಾಣನಿಗೆ ಶಬ್ದಜಾಲದಲ್ಲಿ ಪ್ರೀತಿಯೆಂಬ ಸಾಮಾನ್ಯ ತಿಳಿವಳಿಕೆಗೂ ಈ ಆರ್ಯೆ ವ್ಯತಿರಿಕ್ತವಾಗಿದೆ. ಕಾದಂಬರಿ ಚಂದ್ರಾಪೀಡರ ಪ್ರಣಯವೂ ಒಂದು ಮುಕ್ತಾಹಾರದಿಂದಲೇ ಪ್ರಾರಂಭವಾಗುತ್ತದೆ. "ಧವಲತಾಕಾರಣಮಿವ ಕ್ಷೀರೋದಸ್ಯ, ನಕ್ಷತ್ರಮಾಲಾಭರಣಮಿವ ಮದನದ್ವಿಪಸ್ಯ ಪ್ರಭಾವ ವರ್ಷಿಣಂ ಅತಿತಾರಂ ಹಾರಂ"

ಈ ಮೋಲಿನ ಕತೆಯಲ್ಲಿಯ ಸಣ್ಣ ಪುಟ್ಟ ಅಂಶಗಳನ್ನು ಸಹ ಇದ್ದಕ್ಕಿದ್ದಂತೆ ಬಾಣನು ಹೇಗೆ ಉಳಿಸಿಕೊಂಡಿದ್ದಾನೆಂಬುದನ್ನು ಈ ಕೆಳಗಿನ ಕಥಾಸಾರಾಂಶದಿಂದ ತಿಳಿಯಬಹುದು.

ಬಾಣನ ಕಾದಂಬರೀ ಕತೆಯು ನಾಗವರ್ಮನ ಕಾಲದಲ್ಲಿ "ಚೆಲ್ವಿಂಗಾಕರಮೆನಿಸಿ" ಪ್ರಸಿದ್ಧವಾಗಿದ್ದಿತೆಂದರೆ ಕೇವಲ ಕಥಾರಚನೆ ಭಾಷೆಗಳ ಚೆಲುವಾಗಿರದೆ, ಪಾತ್ರಗಳ ಶಾರೀರಕ ಚೆಲುವಾಗಿರದೆ, ಅನೇಕ ಸುಂದರವಾದ ಗುಣಗಳಿಗೂ ಆಶ್ರಯಸ್ಥಾನವಾಗಿದ್ದಿತೆಂದು ಸೂಚಿಸಿರಲಿಕ್ಕೆ ಸಾಕು. ಇಲ್ಲಿಯೂ ಕತೆ ಪ್ರಾರಂಭವಾಗುವದು ರಾಜನ (ಶೂದ್ರಕ ರಾಜ) ಆಸ್ಥಾನದಲ್ಲಿ ಗಿಳಿಯ ಆಶೀರ್ವಚನದಿಂದ. ಆದರೆ ಇಲ್ಲಿ ಗಿಳಿಯನ್ನು ತಂದವಳು ಚಾಂಡಾಲ ಕನ್ನಿಕೆಯೇ ಆದರೂ ಆ ಗಿಳಿಯ ಹಿಂದಿನ ಜನ್ಮದಲ್ಲಿ ಅದರ ತಾಯಿಯಾಗಿದ್ದ ಲಕ್ಷ್ಮಿ. ಮಗನು ಪುಂಡರೀಕನಾಗಿಯೂ ವೈಶಂಪಾಯನನಾಗಿಯೂ ಎರಡು ಜನ್ಮಗಳಲ್ಲಿಯೂ ಅವಿವೇಕದಿಂದ ನಡೆದುದನ್ನು ಅರಿತಿದ್ದೂ ತಿರ್ಯಗ್ಯೋನಿಯಲ್ಲಿ ಜನ್ಮತಾಳಿದಾಗ ಆ ತಾಯಿಯ ವಾತ್ಸಲ್ಯ ಅವನನ್ನು ಹಿಂಬಾಲಿಸಿ ಕಾಪಾಡಿತು.

ಗಿಳಿಯು ರಾಜಾಸ್ಥಾನದಲ್ಲಿ ಮೊದಲು ಹೇಳಿದ ಕತೆ ತಾನು ಅಲ್ಲಿಗೆ ಬಂದದ್ದು ಹೇಗೆ ಎಂದು. ಗಿಳಿ ಹುಟ್ಟುವಲ್ಲಿಯೇ ತನ್ನ ತಾಯನ್ನು ಕಳೆದುಕೊಂಡಿತು. ಮುಪ್ಪಿನ ತಂದೆ ತನ್ನ ಆಹಾರವನ್ನೇ ಗಳಿಸುವ ಸಾಮರ್ಥ್ಯವೂ ಇಲ್ಲದಾಗ ನೆರೆಹೊರೆಯ ಗೂಡುಗಳಲ್ಲಿಯ ಎಂಜಲುಗಳನ್ನು ತಂದು ತನ್ನನ್ನೂ ತನ್ನಮರಿಯನ್ನೂ ಪೋಷಿಸುತ್ತಿತ್ತು. ಹೀಗಿರುವಾಗ ಒಂದು ದಿನ ಬೇಡರ ತಂಡವೊಂದು ಆ ವನಕ್ಕೆ

ಬೇಟೆಗೆಂದು ಬಂದಿತು. ಒಬ್ಬ ವೃದ್ಧ ಬೇಡನು ಈ ಮರಿಯಿರುವ ಗೂಡಿಗೆ ಕೈಯಿಟ್ಟನು. ಮುದಿಗಿಳಿ ಮರಿಯನ್ನು ತನ್ನ ರೆಕ್ಕೆಯಲ್ಲಿ ಮುಚ್ಚಿಕೊಂಡಿತು. ಬೇಡನು ಮುದಿಗಿಳಿಯ ಗೋಣು ಮುರಿದು ನೆಲಕ್ಕೆಸೆದನು. ಅದು ತರಗೆಲೆಯ ರಾಶಿಯಲ್ಲಿ ಬಿದ್ದ ಕಾರಣ ರೆಕ್ಕೆಯಲ್ಲಿದ್ದ ಮರಿಗಿಳಿ ಬದುಕಿಕೊಂಡಿತು. ಬೆಳಗಾಗುತ್ತಲೆ ತರಗೆಲೆಯ ರಾಶಿಯಿಂದ ಹೊರಬಿದ್ದು ನೀರಡಿಕೆಯಿಂದ ಬಳಲುತ್ತ ಹಾರಲಿಕ್ಕೆ ರೆಕ್ಕೆಯಿಲ್ಲದೆ ಬಿದ್ದು ಬಿದ್ದು ಮೂಗು ಮುರಿಯುವಂತೆ ಮುಗ್ಗರಿಸುತ್ತ ನೀರು ಹುಡುಕಿಕೊಂಡು ಮರಿಗಿಳಿ ಹೊರಟಿತ್ತು. ಅದನ್ನು ಹಾರೀತನೆಂಬ ಋಷಿ ಕುಮಾರನು ಎತ್ತಿಕೊಂಡು ನೀರು ಕುಡಿಸಿ ಕಮಲದೆಲೆಯಲ್ಲಿ ಮುಚ್ಚಿಕೊಂಡು ತನ್ನ ತಂದೆ ಜಾಬಾಲಿಋಷಿಯ ಆಶ್ರಮಕ್ಕೆ ತಂದನು. ಋಷಿಗಳು ಗಿಳಿಮರಿಯನ್ನು ನೋಡಿ ನಸುನಕ್ಕು ಹಿಂದಿನ ಜನ್ಮದಲ್ಲಿ ನೀತಿಬಿಟ್ಟು ನಡೆದು ಈ ಪಾಡಿಗೆ ಬಂದಿದ್ದಾನೆ ಎಂದರು. ಶಿಷ್ಯರು ಆ ಕತೆ ಕೇಳುವದಕ್ಕೆ ಕುತೂಹಲ ತೋರಿದ್ದಕ್ಕೆ ಅಂದಿನ ನಿತ್ಯ ಕರ್ಮಗಳನ್ನು ಮುಗಿಸಿ ಗಿಳಿಯ ಪೂರ್ವ ಜನ್ಮಗಳ ಕತೆ ಹೇಳಲಿಕ್ಕೆ ಪ್ರಾರಂಭಿಸಿದರು.

ಮೊದಲು ಹೇಳಿದ್ದು ಗಿಳಿಯ ವೈಶಂಪಾಯನಜನ್ಮದ ಕತೆ. ಉಜ್ಜಯಿನಿಯ ಅರಸು ತಾರಾಪೀಡ, ರಾಣಿ ವಿಲಾಸವತೀದೇವಿ. ಅವನ ಮಂತ್ರಿ ಶುಕನಾಸ, ಶುಕನಾಸನ ಪತ್ನಿ ಮನೋರಮಾ. ಇಬ್ಬರೂ ಸಂತತಿಯಿಲ್ಲದೆ ಕೊರಗುತ್ತಿರುವಾಗ ವಿಲಾಸವತಿಯ ಮುಖದಲ್ಲಿ ಚಂದ್ರನು ಪ್ರವೇಶಿಸಿದಂತೆಯೂ ಮನೋರಮೆಯ ಉಡಿಯಲ್ಲಿ ದ್ವಿಜನೊಬ್ಬನು ಪುಂಡರೀಕವನ್ನು ಇರಿಸಿದಂತೆಯೂ ರಾಜನೂ ಮಂತ್ರಿಯೂ ಸ್ವಪ್ನಗಳನ್ನು ಕಂಡರು. ಈ ಸ್ವಪ್ನಾನುಸಾರ ಹುಟ್ಟಿದವರು ಚಂದ್ರಾಪೀಡ ವೈಶಂಪಾಯನರು. ಹುಟ್ಟಿನಿಂದಲೂ ಇವರಿಬ್ಬರ ಸ್ನೇಹ ಗಾಢವಾದದ್ದು. ಇಬ್ಬರೂ ತಮ್ಮ ತಮ್ಮ ಸ್ಥಾನಕ್ಕೆ ಯೋಗ್ಯವಾದ ಶಿಕ್ಷಣವನ್ನು ಪಡೆದರು. ಚಂದ್ರಾಪೀಡನಿಗೆ ಯೌವರಾಜ್ಯಾಭಿಷೇಕವಾಗುವಾಗ ಪಾರಸೀಕಾಧೀಶನು ಇಂದ್ರಾಯುಧವೆಂಬ ಕುದುರೆಯನ್ನು ಕಾಣಿಕೆಯೆಂದು ಕಳಿಸಿದನು.

ಇದು ಸಾಮಾನ್ಯದ ವಾಜಿಯಲ್ತು ಪಿರಿದುಂ ನೋಡಲ್
ಮುನೀಂದ್ರೋಗ್ರಶಾ
ಪದಿನೊರ್ವಂ ದಿವಿಜಂ ನಿಜಾಕೃತಿಯನಾದಂಬಿಟ್ಟು ದಿವ್ಯಾಶ್ವರೂ
ಪದಿನೀ ಲೋಕದೊಳಿರ್ದನೆಂದು ಬಗೆಯುತ್ತಲ್ಲಿಂದ ಮೆಳ್ತಂದನಂ
ದುದಿತಾರ್ಕ ಪ್ರಭನೇರಲೆಂದು ಹಯಮಂ ರಾಜಾಧಿರಾಜಾತ್ಮಜಂ

ಚಂದ್ರಾಪೀಡನಿಗೆ ಹೀಗೆ ತೋರಿದ್ದು ಸಹಜವೇ. ಏಕೆಂದರೆ ಈ ಕುದುರೆ ಹಿಂದಿನ ಜನ್ಮದಲ್ಲಿ ಪುಂಡರೀಕನ ಮಿತ್ರ ಕಪಿಂಜಲನಾಗಿತ್ತು. ಪುಂಡರೀಕನು ವೈಶಂಪಾಯನನಾಗಿ ಹುಟ್ಟಿದಾಗಲೂ ಅವನ ಹತ್ತಿರವೇ ಇರಬೇಕೆಂದು ಕುದುರೆಯಾಗಿ ಹುಟ್ಟಿ

ದಾಗಲೂ ಬಯಸಿದ್ದನು. ಅದೇ ಸಮಯದಲ್ಲಿ ಚಂದ್ರಾಪೀಡನ ತಾಯಿ ಆತನಿಗೆ ಕುಳೂತೇಶ್ವರನ ಮಗಳಾದ ಪತ್ರಲೇಖೆ ಎಂಬ ಕನ್ಯೆಯನ್ನು ತಾಂಬೂಲಕರಂಕವಾಹಿನಿಯೆಂದು ಒಪ್ಪಿಸಿದಳು. ಈ ಪತ್ರಲೇಖೆ ಚಂದ್ರನ ಚಿರಸಂಗಾತಿಯಾದ ರೋಹಿಣಿ.*

ಯೌವರಾಜ್ಯಾಭಿಷೇಕದ ನಂತರ ಚಂದ್ರಾಪೀಡನು ಜೈತ್ರಯಾತ್ರೆಗೆ ಹೊರಟು ಕೈಲಾಸದ ಹತ್ತಿರ ಸುವರ್ಣಪುರ ವೆಂಬಲ್ಲಿ ಬೀಡು ಬಿಟ್ಟಾಗ ಬೇಟೆಗೆ ಹೊರಟು ಕಿನ್ನರ ದಂಪತಿಗಳನ್ನು ಕಂಡನು. ತನ್ನ ಇಂದ್ರಾಯುಧಾಶ್ವವನ್ನೇರಿ ಆ ಕಿನ್ನರಗಳನ್ನು ಬೆನ್ನಟ್ಟಿ ಬಹುದೂರ ಹೋದನು. ಅವು ಕೈಗೆ ಸಿಗದೆ ಕಣ್ಮರೆಯಾಗಲು ಬೀಡಾರಕ್ಕೆ ತಿರುಗುವಾಗ ದಾರಿಯಲ್ಲಿ ಒಂದು ಅದ್ಭುತ ಸಂದರವಾದ ಸರೋವರವನ್ನು ಕಂಡನು. ಅಲ್ಲಿ ಆತನು ವಿಶ್ರಮಿಸುತ್ತಿರುವಾಗ ಇಂಪಾದ ಸಂಗೀತ ಕೇಳಿಸಿತು. ಅದರ ದಿಕ್ಕು ಹಿಡಿದು ಹೋದಾಗ ಅಲ್ಲಿ ಒಂದು ಸಿದ್ಧಾಯತನ ಕಾಣಿಸಿತು. ಅಲ್ಲೊಬ್ಬ ತಾಪಸ ವೇಷಧಾರಿಣಿಯಾದ ಅಲೌಕಿಕ ಸುಂದರಿ ಈಶ್ವರಾರಾಧನೆಯಲ್ಲಿ ಮಗ್ನಳಾಗಿರಲು ಅವಳ ಆರಾಧನೆ ಮುಗಿಯುವವರೆಗೂ ಅಲ್ಲಿಯೇ ನಿಂತಿದ್ದನು. ಆರಾಧನೆ ಮುಗಿಯುತ್ತಲೆ ಇವನನ್ನು ಕಂಡು ಆ ತಾಪಸಿ ತನ್ನ ಆಶ್ರಮಕ್ಕೆ ಕರೆದೊಯ್ದು ಸತ್ಕರಿಸಿ ಅವನ ವೃತ್ತಾಂತವನ್ನು ಕೇಳಿದಳು. ಚಂದ್ರಾಪೀಡನು ತನ್ನ ವೃತ್ತಾಂತವನ್ನು ಹೇಳಿ ಆಮೇಲೆ ಬಹುಗೌರವದಿಂದಲೂ ವಿನಯದಿಂದಲೂ ತಾಪಸಿಯ ವೃತ್ತಾಂತವನ್ನು ತಿಳಿಯಲು ಅಪೇಕ್ಷಿಸಿದನು. ಅವಳು ದುಃಖದ ಆವೇ

* ಕುಳೂತೇಶ್ವರನನ್ನು ಮಣಿಸಿ ತಾರಾಪೀಡನು ನಿಗ್ರಹಿಸಿ ಇವಳನ್ನು ತಂದಿದ್ದ. ಹಾಗೆ ತರುವಂತೆ ಕರ್ಮಕತೆ ನಡೆದಿರಬಹುದೆಂದರೂ — ವಿಧಿಗೆ ಯಾವುದು ಅಶಕ್ಯ ? ಆದರೆ ಇಲ್ಲಿ ವಿಧಿಯ ಮಾತನ್ನು ತರಬಹುದೆ ? — ಈಗ ಆಕೆ ಮನುಷ್ಯಳು. ಪ್ರಾಪ್ತವಯಸ್ಕಳು ಕುಮಾರನಿಗೆ ಮದುವೆಯಾದ ಮುನ್ನ ಜೊತೆಗೆ ಇರಲಿ, ಸೇವೆ ಸಲ್ಲಿಸಲಿ ಎಂದು ತಾಯಿ ಅವಳನ್ನು-ವಾತ್ಸ್ಯಾಯನನು ಇಂತಹ ಸಂಬಂಧವನ್ನು ಲಕ್ಷಿಸಿದ್ದಾನೆ ಎಂದು ಓದಿದ ನೆನಪು - ಮಗನಿಗೆ ಕೊಡುತ್ತಾಳೆ. ರಾಜಕುಮಾರಿಯೂ ಚೆಲುವೆಯೂ - ಕಾದಂಬರಿಯೇ ಅಚ್ಚರಿ ಪಡುವಷ್ಟು ಚೆಲು ಆಕೆಯದು - ಚಂದ್ರಾಪೀಡನ ಜೊತೆಯಲ್ಲಿರುವಾಗ ಚಂದ್ರ - ರೋಹಿಣೀ ಸಂಬಂಧ ಆಕೆಗೆ ಪರಿಚಿತವಾಗಿದ್ದರೆ ಚಂದ್ರಾಪೀಡನಿಗೆ ಇದ್ದಿತೆಂಬ ಯಾವ ಸೂಚನೆಯೂ ಗ್ರಂಥದಲ್ಲಿಲ್ಲ. ಅವನಿಗೆ ಅವಳಲ್ಲಿ ತಾಯಿಗೆಂತೋ ಅಂತೇ ವಿಶ್ವಾಸ ಭೂಮಿಯಾಗಿರಬೇಕಾದ ಪರಿಸ್ಥಿತಿ ಉಂಟಾಗಿತ್ತು. 'ಕಾವ್ಯೇರ ಅನಾದರ್' ಎಂಬ ಲೇಖನದಲ್ಲಿ ರವೀಂದ್ರರು ಬರೆದ ಮಾನವತಾ ಚಿತ್ರಣಕ್ಕೆ ಅವಕಾಶ ಇಲ್ಲದೆ ಹೋಗಿಲ್ಲ. ಚಂದ್ರ - ಚಂದ್ರಾಪೀಡನು ಇನ್ನೊಬ್ಬಳಲ್ಲಿ ಅನುರಕ್ತನಾಗಿರುವಾಗ ಪತ್ರಲೇಖೆಗೆ ಹೇಗನ್ನಿಸುತ್ತಿರಬೇಕು ? - ತಾನು ರೋಹಿಣಿಯೇ ಎಂದು ತಿಳಿದಿದ್ದರು ಕೂಡ. ಅಥವಾ, ಈ ಜನ್ಮವನ್ನು ಚಂದ್ರನು ಎತ್ತಬೇಕಾಗಿದೆ, ಹೇಗಾದರೂ ಬೇಗ ಮುಗಿದು ಹೋಗಲಿ ; ಈ ಜನ್ಮದ ಸುಖಸಂತೋಷಗಳನ್ನು ಚಂದ್ರನು ಹೇಗೆ ಬೇಕೊ ಹಾಗನುಭವಿಸಿಕೊಳ್ಳಲಿ ಎಂದು ಸಹಿಸಿಕೊಂಡಿದ್ದಾಳೋ !

ಗವನ್ನು ತಡೆಯಲಾರದೆ ಕಣ್ಣೀರು ಸುರಿಸುತ್ತ ಕೆಲಕಾಲವಿದ್ದು ಆಮೇಲೆ ಚಂದ್ರಾಪೀಡನಿಗೆ ತನ್ನ ಕತೆ ಹೇಳಿದಳು. ಈ ಕತೆ ಗಿಳಿಯ ಮೊದಲ ಜನ್ಮದಲ್ಲಿ ಪುಂಡರೀಕನಾಗಿದ್ದವನಿಗೆ ಸಂಬಂಧಿಸಿದ್ದು.

ಈ ತಾಪಸಿಯೇ ಮಹಾಶ್ವೇತೆ. ಹಂಸನೆಂಬ ಗಂಧರ್ವ ಮತ್ತು ಗೌರಿ ಎಂಬ ಅಪ್ಸರೆಯರಿಗೆ ಅವಳೊಬ್ಬಳೇ ಅಚ್ಚುಮೆಚ್ಚಿನ ಮಗಳು. ಕುಲಕ್ಕೆ ತಕ್ಕ ಚೆಲುವೂ ಗೆಲವೂ ಅವಳ ಯೌವನದಲ್ಲಿ ವಿಜೃಂಭಿಸುತ್ತಿದ್ದಾಗ ವಸಂತಮಾಸದಲ್ಲಿ ಒಂದು ದಿನ ತಾಯಿಯ ಜತೆಗೆ ಅಚ್ಛೋದ ಸರಸಿಗೆ ಮೀಯಲಿಕ್ಕೆಂದು ನಡೆದಿದ್ದಳು. ದಾರಿಯಲ್ಲಿ ಅಲೌಕಿಕವಾದ ಒಂದು ಸುಗಂಧ ಗಾಳಿಯಲ್ಲಿ ತೇಲಿ ಬಂದಿತು. ಅದೇ ದಿಕ್ಕಿನಲ್ಲಿ ಮುಂದುವರಿಯುತ್ತಿರುವಾಗ ಆ ಸುಗಂಧದ ಮೂಲವಾದ ಒಂದು ಪುಷ್ಪಮಂಜರಿಯನ್ನು ಒಬ್ಬ ಮುನಿಕುಮಾರನು ಧರಿಸಿ ಬರುತ್ತಿದ್ದದ್ದನ್ನು ಕಂಡಳು. ಆ ಮಂಜರಿಯ ಗಂಧವೂ ಸೌಂದರ್ಯವೂ ಆ ಮುನಿಕುಮಾರನ ಚೆಲುವಿಗೂ ನಿಲುವಿಗೂ ಸರಿಸಾಟಿಯಾಗಿದ್ದವು —

ಸ್ಮರಕಾಂತಾರತಘರ್ಮ ಬಿಂದು ಚಯಮೋ
ಮೀನಾಂಕ ಮತ್ತೇಭ ಚಾ
ಮರಮೋ ನಂದನಲಕ್ಷ್ಮಿಯೊಳ್ನಗೆಯೋ ತಾಂ
ಮಂದಾನಿಲಂ ತೆಂಕಣಿಂ
ಬರೆ ಚೈತ್ರಂ ಕೊಡುವರ್ಘ್ಯಲಾಜ ತತಿಯೋ
ಪೇಳೆಂಬಿನಂ ಪುಷ್ಪಮಂ
ಜರಿಯುಂ ತನ್ಮುನಿಕರ್ಣಪೂರಕಮನತ್ಯಾಶ್ಚರ್ಯದಿಂ ನೋಡಿದೆಂ

ಎಂದು ಮಹಾಶ್ವೇತೆ ಹೇಳುತ್ತಾಳೆ. ಆ ಮುನಿಯ ಯೌವನದಿಂದಲೂ ಚೆಲುವಿನಿಂದಲೂ ಅವಳಲ್ಲಿ ಕಾಮವಿಕಾರವೂ ಅವನ ತೇಜಸ್ಸಿನಿಂದ ಭಯವೂ ಅವನ ಆಶ್ರಮಕ್ಕೆ ತೋರಬೇಕಾದ ಗೌರವವೂ ಅವಳಲ್ಲಿ ಒಮ್ಮೆಲೇ ಮೂಡಿದವು. ಅವನ ಜತೆ ಅವನ ಗೆಳೆಯನೂ ಇದ್ದನು (ಅವನೇ ಕಪಿಂಜಲ ಮರು ಜನ್ಮದಲ್ಲಿ ಇಂದ್ರಾಯುಧ). ಮಹಾಶ್ವೇತೆ ಅವರಿಗೆ ನಮಸ್ಕರಿಸಿ ಕಪಿಂಜಲನೊಡನೆ ಅವರ ಪರಿಚಯವನ್ನು ಕೇಳಿದಳು. ಆ ಕುಸುಮ ಮಂಜರಿ ಎಲ್ಲಿಯದು ಎಂದೂ ಕೇಳಿದಳು. ಮುನಿಕುಮಾರನ ತಂದೆ ಶ್ವೇತಕೇತು, ತಾಯಿ ಲಕ್ಷ್ಮಿ, ಅವನ ಹೆಸರು ಪುಂಡರೀಕ, ಅವನು ಅಂದು ಸ್ನಾನಕ್ಕೆ ಬರುತ್ತಿರುವಾಗ ವನದೇವತೆಯೊಬ್ಬಳು ಬಂದು ಆ ಕುಸುಮ ಮಂಜರಿಯನ್ನು ತೊಡಿಸಿದಳು ಎಂದು ಕಪಿಂಜಲನು ಹೇಳಿದನು. ಈ ಮಾತು ನಡೆ

ಯುತ್ತಿದ್ದಾಗ ಮಹಾಶ್ವೇತೆಯಲ್ಲಿ ತಲೆದೋರಿದ ವಿಕಾರಗಳೇ ಪುಂಡರೀಕನಲ್ಲಿ ಕಾಣಿಸುತ್ತಿದ್ದವು. ಅವನು ಮುಂದೆ ಬಂದು —

ಎಳಸುತ್ತಿ ರ್ದಪೆ ಪುಷ್ಪ ಮಂಜರಿಗೆ ಕೊಳ್ಳೀಸುತ್ತಿದೇಕೆಂದು ಸಂ
ಚಳಿಸುತ್ತುಂ ನಿಜಕರ್ಣದಿಂ ತೆಗೆದು ಸೋಲ್ತೆಂ ಕೂಡು ನೀನೆನ್ನೊಳೆಂ
ದಳಿಮಾಲಾರವದಿಂದೆ ಪೇಳ್ವ ತೆರದಿಂ ಮತ್ಕರ್ಣದೊಳ್ ತಾರಕೋ
ಜ್ವಲಮಂ ರಂಜಿಪ ಪುಷ್ಪ ಮಂಜರಿಯುನ ತ್ಕೌತ್ಸುದಿಂದಿಕ್ಕಿದಂ.

ಅದನ್ನು ಅವಳ ಕಿವಿಯಲ್ಲಿ ತೊಡಿಸಲಿಕ್ಕೆ ಬಂದು ತಡವರಿಸಿ ಅವಳ ಕದಪಿನ ಸೋಂಕಿನಿಂದ ಮತ್ತಷ್ಟು ವಿಚಲಿತನಾದನು. ಅವನ ನಡುಗುವ ಕೈಯಿಂದ ಜಪಸರ ಕೆಳಗೆ ಬಿತ್ತು. ಅದನ್ನು ಮಹಾಶ್ವೇತೆ ಎತ್ತಿಕೊಂಡು ತಾನು ಧರಿಸಿಕೊಂಡಳು. ಅವನಿಗೆ ಅದರ ಎಚ್ಚರವೇ ಇರಲಿಲ್ಲ. ಅವನ ಈ ವಿಕಾರವನ್ನು ನೋಡಿ ಕಪಿಂಜಲನು ಅವನನ್ನು ನಿಂದಿಸಿದನು. ಅದಕ್ಕೆ ಪುಂಡರೀಕನು ನೀನೇನೂ ತಪ್ಪು ಭಾವಿಸಬೇಡ. ಅವಳು ನನ್ನನ್ನು ವಂಚಿಸಿದರೆ ನಾನು ಸಹಿಸುವುದಿಲ್ಲ ಎಂದು ಅವಳ ಬಳಿಗೆ ಬಂದು ಗದರಿಸಿ—

ಕುಡು ಚಪಳೆ ಜಪದ ಮಣಿಯುಂ
ಕುಡದಿನ್ನೊಂದಡಿಯುನಪ್ಪೊಡಂ ಪೋಗದಿರೆಂ
ದೊಡೆ ಕೇಳ್ದು ಜಪದ ಮಣಿ ಗೆ
ತ್ತೊಡನೆಯೆ ಹಾರಮನೆ ತೆಗೆದೆನೆನ್ನಯ ಕೊರಲಿಂ

ಅದನ್ನೂ ತಿಳಿಯದೆ ಪುಂಡರೀಕನು ತೆಗೆದುಕೊಂಡು ಹೊರಟು ಹೋದನು. ಇತ್ತ ಮಹಾಶ್ವೇತೆ,ಮನೆಗೇನೊ ಬಂದಳು. ಮನಸ್ಸೆಲ್ಲಾ ಹಿಂದೆಯೇ ಇದ್ದಿತು. ಹೀಗೆ ಚಿಂತಿಸುತ್ತಿರುವಾಗ ಅವಳ ಸಖಿಯಿಂದ ಪುಂಡರೀಕನ ಮಿತ್ರನು ಅವಳ ಪರಿಚಯವನ್ನು ಕೇಳಿದನೆಂತಲೂ ಪುಂಡರೀಕನ ಸಂದೇಶವೊಂದನ್ನು ಕೊಟ್ಟು ಹೋದನೆಂತಲೂ ತಿಳಿದಳು. ಆ ಸಂದೇಶವೇ

ದೂರಂ ಮುಕ್ತಾಲತಯಾ ಬಿಸಸಿತಯಾ ವಿಪ್ರಲೋಭ್ಯಮಾನೋ ಮೇ
ಹಂಸ ಇವ ದರ್ಶಿತಾಶೋ ಮಾನಸ ಜನ್ಮಾ ತ್ವಯಾ ನೀತಃ —ಎಂದು

ಈ ಸಂದೇಶವನ್ನು ನೋಡಿ ಮಹಾಶ್ವೇತೆಯ ಚಡ ಪಡಿಕೆ ಇನ್ನೂ ಹೆಚ್ಚಾಯಿತು. ಹೇಗೋ ಹಗಲು ಕಳೆಯಿತು. ಸಂಜೆಯಲ್ಲಿ ಮುನಿ ಕುಮಾರನ ಮಿತ್ರ ಕಪಿಂಜಲನು ಬಂದು ಪುಂಡರೀಕನು ಕಾಮವೇಗವನ್ನು ತಡೆಯಲಾರದೆ ಪ್ರಾಣಾಪಾಯದಲ್ಲಿದ್ದಾನೆಂದೂ ಮಹಾಶ್ವೇತೆ ಅವನನ್ನು ಹೇಗಾದರೂ ಬದುಕಿಸಬೇಕೆಂದೂ ಬೇಡಿಕೊಂಡನು. ಅಷ್ಟರಲ್ಲಿ ಮಹಾಶ್ವೇತೆಯ ತಾಯಿ ಬಂದದ್ದರಿಂದ ಅವನು ತಪ್ಪಿಸಿಕೊಂಡು

ಹೊರಟು ಹೋದನು. ಮಹಾಶ್ವೇತೆ ಕೆಲ ಹೊತ್ತು ವ್ಯಗ್ರಳಾಗಿದ್ದು ಆಮೇಲೆ ತಡೆಯಲಾಗದೆ ತನ್ನ ದಾಸಿ ತರಳಿಕೆಯೊಡನೆ ಮುನಿಕುಮಾರನನ್ನು ಹುಡುಕಿಕೊಂಡು ಹೋದಳು. ಬಲಗಣ್ಣು ಹಾರಿ ಅಪಶಕುನವಾಯಿತು. ಮುಂದೆ ಹೋಗುವಷ್ಟರಲ್ಲಿ ಗಂಡಸಿನ ಅಳುವ ದನಿ ಕೇಳಿಸಿತು. ಅಲ್ಲಿ ಹೋಗಿ ನೋಡಿದಾಗ ಪುಂಡರೀಕನ ಮೃತ ಶರೀರವನ್ನಿಟ್ಟುಕೊಂಡು ಕಪಿಂಜಲನು ಅಳುತ್ತಿದ್ದದ್ದು ಕಂಡಿತು. ಇದನ್ನು ಕಂಡು ಮಹಾಶ್ವೇತೆ ಮೂರ್ಛೆ ಹೋದಳು. ಎಚ್ಚೆತ್ತು ಪರಿಪರಿಯಿಂದ ತಾನೂ ಗೋಳಿಟ್ಟಳು.

ಕರುಣಿಸು ದೈವಮೆ, ಪಾಲಿಸು
ಹರಾದ್ರಿ, ರಕ್ಷಿಸೆಲೆ ರಾತ್ರಿ, ಶರಣಾಗು ಸರೋ
ವರಮೆ, ವನದೇವಿಯರಿರಾ
ನೆರೆದೆಲ್ಲರುಮೆನಗೆ ಪುರುಷಭಿಕ್ಷಮನಿಕ್ಕಿಂ

ಎಂದೆಲ್ಲ ಪ್ರಲಾಪಿಸಿ ಪುಂಡರೀಕನ ಶರೀರದೊಡನೆ ಸಹಗಮನಕ್ಕೆ ಸಿದ್ಧಳಾಗುತ್ತಿರುವಾಗ ಚಂದ್ರ ಮಂಡಲದಿಂದ ದಿವ್ಯಪುರುಷನೊಬ್ಬನು ಇಳಿದು ಬಂದು ಪುಂಡರೀಕನ ಶರೀರವನ್ನು ಎತ್ತಿಕೊಂಡು

ಬಗೆಗೆಟ್ಟು ಸಾವ ಬಗೆಯಂ
ಮಗಳೆ ಮಹಾಶ್ವೇತೆ ಬಗೆಯದಿರ್ ಕೂಡುವೆ ನೀಂ
ಮಗುಳೆಯುಮೀತನನೆನುತಂ
ಮಗುಳ್ದಾತಂ ಬೆರಸು ಗಗನ ಮಾರ್ಗಕ್ಕೊಗೆದಂ

"ಮಗಳೆ ಮಹಾಶ್ವೇತೆ ಸಾವಿನ ದಾರಿ ಹಿಡಿಯಬೇಡ. ಮತ್ತೆ ನೀನು ಇವನೊಡನೆ ಕೂಡುವ ಕಾಲ ಬರುವುದು" ಎಂದು ಆಶ್ವಾಸಿಸಿ ಪುಂಡರೀಕನ ಶರೀರವನ್ನು ಚಂದ್ರ ಮಂಡಲಕ್ಕೆ ತೆಗೆದುಕೊಂಡು ಹೋದನು. ಕಪಿಂಜಲನು ತನ್ನ ಗೆಳೆಯನನ್ನು ಬಿಟ್ಟಿರಲಾರದೆ ಅವನನ್ನು ಹಿಂಬಾಲಿಸಿ ಹೋದನು. ಅಂದಿನಿಂದ ಮಹಾಶ್ವೇತೆ ಬೇರೆಲ್ಲಿಯೂ ಹೋಗಲು ಮನಸ್ಸು ಬಾರದೆ ತಾಯಿ ತಂದೆಗಳನ್ನು ಬಿಟ್ಟು ಪುಂಡರೀಕನ ವಲ್ಕಲ, ಕಮಂಡಲು ಅಕ್ಷಾವಳಿಗಳನ್ನು ಧರಿಸಿ ಅವನ ಧ್ಯಾನದಲ್ಲಿಯೇ ಚಂದ್ರನ ಆಶ್ವಾಸನೆಯು ನಿಜವಾಗುವ ಪ್ರತೀಕ್ಷೆಯಲ್ಲಿ ಇದ್ದಳು. ಈ ಕತೆಯನ್ನು ಹೇಳಿ ಮಹಾಶ್ವೇತೆ

ಸೊಗಯಿಪ ಸಸಿ ಶರದದ ಬೆ
ಳ್ಮುಗಿಲೊಳ್ಪೊರೆಯಿಂದಮುಯ್ದೆ ಮುಸುಕಿರ್ದುದೆನಲ್
ಸೊಗಯಿಪ ದುಗುಲದ ಸೆರಗಂ
ಮೊಗಕ್ಕೆ ತೆಗೆದಾಗಳಿರದೆ ಗೋಳಿಟ್ಟತ್ತಳ್.

ಚಂದ್ರಾಪೀಡನೂ ಈ ಕತೆ ಕೇಳಿ ಮನಕರಗಿದವನಾಗಿ "ಒಯ್ಯನೆ ನಿರ್ಝರ ವಾರಿಯಂ ನಿಜ ಕರಾಂಬುಜದಿಂದನುವಿಸಿ ವದನಪ್ರಕ್ಷಾಳನಮಂ" ಮಾಡಿಸಿ...ಅವ ಳನ್ನು ಬಹು ವಿಧದಿಂದ ಸಂತಯಿಸಿ ನಿಮ್ಮ ತರಳಿಕೆ ಏನಾದಳು ಎಂದು ಕೇಳಿದನು.

ಇಲ್ಲಿ ಗಿಳಿಯ ಪುಂಡರೀಕ ಜನ್ಮದ ಕತೆ ಮುಗಿದು ಮತ್ತೆ, ವೈಶಂಪಾಯನ ಜನ್ಮದ ಕತೆ ಮೊದಲಾಗುತ್ತದೆ. ಅದಕ್ಕೆ ಚಂದ್ರಾಪೀಡ ಕಾದಂಬರಿಯರ ಭೇಟಿ ನಡೆಯಬೇಕು. ಮಹಾಶ್ವೇತೆ ಈ ಸಂದರ್ಭವನ್ನು ಹೀಗೆ ಪ್ರಾರಂಭಿಸುತ್ತಾಳೆ. ಮಹಾಶ್ವೇತೆಯ ಗೆಳತಿ ತರಳಿಕೆ ಕಾದಂಬರಿಯನ್ನು ಕಾಣಲು ಹೋಗಿದ್ದಾಳೆ. ಕಾರಣವೇನೆಂದರೆ ಮಹಾಶ್ವೇತೆ ಹೀಗೆ ಪ್ರಿಯವಿರಹದಿಂದ ಬೆಂದು ತಪೋನಿರತ ಳಾಗಿರುವಾಗ ಅವಳ ಜೀವದ ಗೆಳತಿಯಾದ ಕಾದಂಬರಿ ತಾನೂ ಕನ್ಯಾವ್ರತದಲ್ಲಿಯೇ ಇರುವೆನೆಂದು ನಿಶ್ಚಯಿಸಿದಳು. ಅವಳ ತಂದೆ ತಾಯಿಗಳು ಚಿಂತಾಕ್ರಾಂತರಾಗಿ ಮಹಾಶ್ವೇತೆಗೆ ಹೇಳಿಕಳಿಸಿದರು. ಅವಳಿಗೆ ಬುದ್ಧಿಹೇಳಿ ವಿವಾಹಕ್ಕೆ ಮನವೊಲಿಸು ವಂತೆ ತರಳಿಕೆಯನ್ನು ಅವಳ ಹತ್ತಿರ ಕಳಿಸಿದೆ; ಅಷ್ಟರಲ್ಲಿ ನೀವೂ ಇಲ್ಲಿ ಬಂದಿರಿ ಎಂದು ಮಹಾಶ್ವೇತೆ ಚಂದ್ರಾಪೀಡನಿಗೆ ಹೇಳಿದಳು.

ಮರುದಿನ ತರಳಿಕೆ ಬಂದು ತನ್ನ ಮಾತನ್ನು ಕಾದಂಬರಿ ಕೇಳುವುದಿಲ್ಲ ವೆಂದೂ ಮಹಾಶ್ವೇತೆಯೇ ಅಲ್ಲಿಗೆ ಹೋಗಬೇಕೆಂದೂ ಹೇಳುವಳು. ಮಹಾಶ್ವೇತೆ ಚಂದ್ರಾ ಪೀಡನನ್ನು ತನ್ನ ಜತೆಗೆ ಬರಬೇಕೆಂದೂ ಕಾದಂಬರಿಗೆ ಅವನು ಸಮಾಧಾನ ಹೇಳುವದು ಸಾಧ್ಯವಾದೀತೆಂದೂ ಹೇಳಿ ಅವನನ್ನು ತನ್ನ ಜತೆಗೆ ಕರೆದುಕೊಂಡು ಹೋದಳು.* ಕಾದಂಬರಿ ಚಂದ್ರಾಪೀಡರಲ್ಲಿ ಪ್ರಥಮ ದರ್ಶನದಲ್ಲಿಯೇ ಅನುರಾಗ ಮೂಡಿತು. ಅಷ್ಟರಲ್ಲಿ ಕಾದಂಬರಿಯ ತಂದೆ ತಾಯಿಗಳು ಮಹಾಶ್ವೇತೆಗೆ ಕರೆಯ ಕಳುಹಿದ್ದರಿಂದ ಅವಳು ಚಂದ್ರಾಪೀಡನ ಬೀಡಾರದ ಏರ್ಪಾಟು ಮಾಡಿ ಅವರನ್ನು ಕಾಣಲು ಹೋದಳು.

ಇತ್ತ ಚಂದ್ರಾಪೀಡನು ತನ್ನ ಬೀಡಾರದಲ್ಲಿಯೂ ಕಾದಂಬರಿ ತನ್ನ ಅಂತಃ ಪುರದಲ್ಲಿಯೂ ಒಬ್ಬರೊಬ್ಬರ ಧ್ಯಾನದಲ್ಲಿಯೇ ಇದ್ದರು. ಕಾದಂಬರಿ ಮದಲೇಖೆ ಯೆಂಬ ತನ್ನ ದಾಸಿಯ ಕೈಯಲ್ಲಿ ಶೇಷವೆಂಬ ಒಂದು ಮುತ್ತಿನ ಹಾರವನ್ನು ಚಂದ್ರಾಪೀಡನಿಗೆ ಕಾಣಿಕೆಯೆಂದು ಕಳಿಸಿದಳು. ಸ್ವಲ್ಪ ಹೊತ್ತಿನ ತರುವಾಯ ಚಂದ್ರೋದಯವಾಯಿತು. ಮನಸ್ಸು ತಡೆಯಲಾರದೆ ತಾನೇ ಚಂದ್ರಾಪೀಡನ ಬೀಡಾರಕ್ಕೆ ಕಾದಂಬರಿ ಬಂದಳು. ಸ್ವಲ್ಪ ಕಾಲ ಮಾತನಾಡುತ್ತಿದ್ದು ತಿರುಗಿ ಮನೆಗೆ ಹೋದಳು. ಚಂದ್ರಾಪೀಡನು ರಾತ್ರಿಯೆಲ್ಲವೂ "ಕಾದಂಬರಿ ದೇವಿಯ ನಿರಹಂಕಾರವಮುಮಂ ಮಹಾಶ್ವೇತೆಯ ನಿಷ್ಕಾರಣ ವತ್ಸಲತೆಯುಮಂ ಪರಿಜನದ

*ಮೂಲಕಥೆಯಲ್ಲಿ ಕರೆದುಕೊಂಡು ಹೋಗೆಂದು ಕೇಳುವವನು ರಾಜಕುಮಾರ.

ಮಹಾನುಭಾವತೆಯುಮಂ ಗಂಧರ್ವರಾಜಲೋಕದ ಸಮೃದ್ಧತೆಯುಮಂ ಕಿಂಪುರುಷವಿಷಯದ ರಮ್ಯತೆಯುಮಂ ಮನದೊಳ್ ಭಾವಿಸುತ್ತ" ಇದ್ದನಂತೆ. ಮರುದಿನ ಕಾದಂಬರೀ ಮಹಾಶ್ವೇತೆಯರ ಅನುಜ್ಞೆಯಿಂದ ಹೊರಟು ತನ್ನ ಸೈನ್ಯದ ಪಾಳೆಯಕ್ಕೆ ಬಂದು ಒಂದು ದಿನ ಇದ್ದನು. ಅಷ್ಟರಲ್ಲಿ ಚಂದ್ರಾಪೀಡನು ಹಿಂದೆ ಬಿಟ್ಟುಬಂದಿದ್ದ ಶೇಷ ಹಾರವನ್ನೂ ಕಾದಂಬರಿ ಕೊಟ್ಟ ಉಪಾಯನವನ್ನೂ ಕೇಯೂರಕನೆಂಬ ಕಾದಂಬರಿಯ ವಾರ್ತಾಹರನು ತಂದು ಚಂದ್ರಾಪೀಡನಿಗೆ ಒಪ್ಪಿಸಿ ತನ್ನ ಒಡತಿ ವಿರಹವನ್ನು ತಾಳಲಾರದೆ ಚಂದ್ರಾಪೀಡನಲ್ಲಿಗೆ ತನ್ನನ್ನು ಅಟ್ಟಿದ ಳೆಂದು ಹೇಳಿದನು. ಚಂದ್ರಾಪೀಡನು ಪತ್ರಲೇಖೆಯೊಡನೆ ಮತ್ತೆ ಕಾದಂಬರಿ ಯನ್ನು ಕಾಣಲಿಕ್ಕೆ ಹೋದನು. ಹಿಮಗೃಹದಲ್ಲಿ ಕಾದಂಬರಿಯನ್ನು ಕಂಡಾಗ ಅವಳ ಮತ್ತು ಅವಳ ಸಖಿಯರ ಮಾತುಗಳಿಂದ ಅವಳ ಪ್ರಣಯ ಸ್ಪಷ್ಟವಾಗಿದ್ದರೂ ಚಂದ್ರಾಪೀಡನು ಮಾತ್ರ "ಸಂದೇಹಡೋಲಾಧಿರೂಢ ಚಿತ್ತನಾಗಿ" ತನ್ನ ಪಾಳೆಯಕ್ಕೆ ತಿರುಗಿ ನಡೆದನು. ಕಾದಂಬರಿಯ ಇಚ್ಛೆಯಂತೆ ಪತ್ರಲೇಖೆಯನ್ನು ಅವಳ ಹತ್ತಿರ ಬಿಟ್ಟು ಹೋದನು.

ಅವನು ಪಾಳೆಯಕ್ಕೆ ಬರುವಷ್ಟರಲ್ಲಿ ಉಜ್ಜಯಿನಿಯಿಂದ ತಾರಾಪೀಡನ ಸಂದೇಶ ದೊಂದಿಗೆ ದೂತನೊಬ್ಬನು ಬಂದಿದ್ದನು. ದಿಗ್ವಿಜಯಕ್ಕೆ ಹೊರಟು ಬಹುಕಾಲ ವಾಯಿತು; ತಾಯಿಗೆ ಚಿಂತೆಯಾಗಿದೆ, ಕೂಡಲೆ ಹೊರಟು ಬರಬೇಕು ಎಂಬುದು ತಂದೆಯ ಆಜ್ಞೆ. ಕೆಲವೇ ಪರಿವಾರದವರನ್ನು ತೆಗೆದುಕೊಂಡು ಸೈನ್ಯದೊಡನೆ ವೈಶಂಪಾಯನನನ್ನು ಹಿಂದೆ ಬಿಟ್ಟು ಉಜ್ಜಯಿನಿಗೆ ಹೋದನು. ಮನಸ್ಸು ಹೇಮ ಕೂಟದಲ್ಲಿ ಕಾದಂಬರಿಯ ಹತ್ತಿರವೇ ಇತ್ತು. ಕೆಲವೇ ದಿನಗಳಲ್ಲಿ ಪತ್ರಲೇಖೆ ಬಂದು ಕಾದಂಬರಿಯ ವಿರಹ ವ್ಯಥೆಯನ್ನು ಬಣ್ಣಿಸಿ, ಅವನು ಅಲ್ಲಿಗೆ ಹೋಗ ಬೇಕೆಂದಳು. ಅವಳ ಹಿಂದೆಯೇ ಕೇಯೂರಕನೂ ಅದೇ ಸಂದೇಶದೊಡನೆ ಬಂದನು. ಚಂದ್ರಾಪೀಡನು ತನ್ನ ಸ್ಥಿತಿಯನ್ನು ತಂದೆ ತಾಯಿಗಳಿಗೆ ಹೇಳಲು ಸಂಕೋಚ ಪಟ್ಟು ಹೋಗಲೂ ಆರದೆ ಇರಲೂ ಆರದೆ, ವೈಶಂಪಾಯನನ ಸೈನ್ಯವು ತಿರುಗಿ ಬರುವ ದಾರಿಕಾಯುತ್ತ ಇದ್ದನು.

ಸೈನ್ಯವೇನೊ ಬಂದಿತು, ವೈಶಂಪಾಯನನು ಬರಲಿಲ್ಲ. ಸೈನ್ಯವೆಲ್ಲ ಹೊರಟು ನಿಂತಾಗ ಅವನು ಅಚ್ಛೋದ ಸರದ ಹತ್ತಿರ ಹೋಗಿ ಅಲ್ಲಿ ಮಂಕುಬಡಿದಂತೆ ನಿಂತುಬಿಟ್ಟನೆಂತಲೂ ಕರೆಯಲಿಕ್ಕೆ ಹೋದವರನ್ನೆಲ್ಲ ಗದರಿಸಿ ತನಗೆ ಇನ್ನು ಚಂದ್ರಾ ಪೀಡನನ್ನು ಕಾಣುವ ಭಾಗ್ಯವಿಲ್ಲ, ನೀವು ಹೊರಟು ಹೋಗಿ ಎಂದನೆಂತಲೂ ಚಂದ್ರಾ ಪೀಡನಿಗೆ ತಿಳಿಸಿದರು. ಚಂದ್ರಾಪೀಡನು ಶುಕನಾಸ ಮನೋರಮೆಯರಿಗೆ ಸಮಾ ಧಾನ ಹೇಳಿ ತಾನೇ ಹೋಗಿ ಅವನನ್ನು ಕರೆತರುವೆನೆಂದು ತಂದೆ ತಾಯಿಗಳ ಅನುಜ್ಞೆ

ಯನ್ನು ಪಡೆದು ಹೊರಟನು. ಈ ಕರ್ತವ್ಯ ಪಾಲನೆಯಲ್ಲಿಯೂ ತಾನು ಕಾದಂಬರಿಯನ್ನು ಕಾಣುವುದಕ್ಕೆ ಅವಕಾಶವಾಗುವದೆಂಬ ಆತುರವಿತ್ತಾದ್ದರಿಂದ ಎಲ್ಲಿಯೂ ನಿಲ್ಲದೆ ಪ್ರಯಾಣ ಮಾಡಿದನು. ದಾರಿಯುದ್ದಕ್ಕೂ ಕಾದಂಬರಿಯ ಸಮಾಗಮದ ಆನಂದವನ್ನು ಕಲ್ಪಿಸುತ್ತಲೂ ಅವಳ ಅಪ್ಪಣೆ ಪಡೆದು ಮದಲೇಖೆಯನ್ನು ವೈಶಂಪಾಯನನಿಗೆ ಮದುವೆ ಮಾಡಿಸುವದಾಗಿಯೂ ಧ್ಯಾನಿಸುತ್ತ ನಡೆದನು.

ಅಚ್ಛೋದ ಸರೋವರವನ್ನು ತಲುಪಿದಾಗ ಅಲ್ಲಿ ವೈಶಂಪಾಯನನ ಸುಳಿವೇ ಇಲ್ಲ. ಮಹಾಶ್ವೇತೆಯನ್ನು ವಿಚಾರಿಸೋಣ ಎಂದು ಹೋದರೆ ಅವಳು ಮುಖವನ್ನೇ ಎತ್ತದೆ ಕಣ್ಣೀರಿಡುತ್ತಿದ್ದಳು. ಕಾರಣವೇನೆಂದು ಕೇಳಿದ್ದಕ್ಕೆ ಅವಳು ಹೇಳಿದ ಕತೆ ಹೀಗಿತ್ತು ; ಕಾದಂಬರಿಯ ಅವಸ್ಥೆಯನ್ನು ಲೆಕ್ಕಿಸದೆ ಚಂದ್ರಾಪೀಡನೂ ಉಜ್ಜಯಿನಿಗೆ ಹೊರಟು ಹೋಗಲು ಮಹಾಶ್ವೇತೆ ಅಚ್ಛೋದ ಸರಸ್ಸಿಗೆ ಬಂದು ತನ್ನ ತಪದಲ್ಲಿ ನಿರತಳಾದಳು ; ಒಂದು ದಿನ ಚಂದ್ರಾಪೀಡನ ವಯಸ್ಸಿನ ಯುವಕನೊಬ್ಬನು ತನ್ನ ಆಶ್ರಮದ ಸುತ್ತ ಸುಳಿದಾಡ ಹತ್ತಿದನು. ಎಷ್ಟು ತಿರಸ್ಕರಿಸಿದರೂ ಹೋಗಲಿಲ್ಲ. ಅಲ್ಲಲ್ಲಿಯೇ ತಿರುಗಾಡುತ್ತಿದ್ದನು. ಒಂದು ಬೆಳದಿಂಗಳು ರಾತ್ರಿಯಲ್ಲಿ ಅವಳು ಪುಂಡರೀಕನನ್ನು ನೆನೆಯುತ್ತಿದ್ದಾಗ ಅವನು ಉನ್ಮತ್ತನಂತೆ ಗಳಹುತ್ತ

ಎಲೇ ಕುಮುದನೇತ್ರೆ ಮನ್ಮಥ ಸಹಾಯನೀ ಚಂದ್ರಮಂ
ಕೊಲಲ್ ಬಗೆದನೆನ್ನನಾರ್ತನನನಾಥನಂ ದುಃಖಿಯಂ
ಪಲುಂಬಿ ಮಱವೊಕ್ಕೆನಾಂ ನಿನಗಧೀನಮೀ ಜೀವಿತಂ
ವಿಲಂಬಿಸದೆ ರಕ್ಷಿಸೆನ್ನ ನಱಿಯೆಂ ಪ್ರತೀಕಾರಮಂ”

ಎಂದು ಅವಳನ್ನು ಹಿಡಿಯಲಿಕ್ಕೆ ಕೈಚಾಚಿದನು. ಆಗ ಮಹಾಶ್ವೇತೆ ದಿಗಿಲುಗೊಂಡು ಚಂದ್ರನಿಗೆ ಕೈಮುಗಿದು "ಪುಂಡರೀಕನನಂ ನೋಡಿದಂದಿನಿಂ ಮತ್ತೊರ್ವ ಪುರುಷನಂ ಮನದೊಳಾದೊಡಂ ಭಾವಿಸದಿರ್ದುದು ದಿಟಮಪ್ಪೊಡೆ ಈಯಳೀಕ ಕಾಮಿ ಗಿಳಿಯಾಗಿ ಪುಟ್ಟುಗೆ" ಎಂದು ಶಪಿಸಿದಳು.

ಕೂಡಲೆ ವೈಶಂಪಾಯನನು ಗತಪ್ರಾಣನಾಗಿ ನೆಲಕ್ಕೆ ಬಿದ್ದನು. ದುಃಖಿತರಾದ ಪರಿಜನರಿಂದ ಆತನು ನಿನ್ನ ಮಿತ್ರನೆಂದು ತಿಳಿಯಿತು ಎಂದು ಹೇಳಿ ಮಹಾಶ್ವೇತೆ ಕಣ್ಣೀರು ಸುರಿಸುತ್ತಿರುವಾಗ ಚಂದ್ರಾಪೀಡನು ಈ ಜನ್ಮದಲ್ಲಿ ಕಾದಂಬರಿಯ ಸಮಾಗಮದ ಸೌಖ್ಯ ತನಗಿಲ್ಲವೆಂದು ಎದೆಯೊಡೆದು ನೆಲಕ್ಕೆ ಬಿದ್ದನು.

ಅವನು ಮಹಾಶ್ವೇತೆಯ ಆಶ್ರಮಕ್ಕೆ ಬಂದದ್ದನ್ನು ತಿಳಿದು ಅವನನ್ನು ಕಾಣಲೆಂದು ಅಷ್ಟು ಹೊತ್ತಿಗೆ ಕಾದಂಬರಿ ಪತ್ರಲೇಖೆಯೊಡನೆ ಅಲ್ಲಿಗೆ ಬಂದಳು. ಇಲ್ಲಿ

ನಡೆದ ಅನರ್ಥವನ್ನು ಕಂಡು ಇಬ್ಬರೂ ಮೂರ್ಛಿತರಾದರು. ಕಾದಂಬರಿ ಎಚ್ಚತ್ತು ಬಗೆಬಗೆಯಿಂದ ಪ್ರಲಾಪಿಸಿ ಚಂದ್ರಾಪೀಡನ ಶರೀರವನ್ನು ತೊಡೆಯ ಮೇಲಿಟ್ಟು ಕೊಂಡು ಪ್ರಾಣತ್ಯಾಗ ಮಾಡಲುದ್ಯುಕ್ತಳಾದಳು. ಆಗ ಚಂದ್ರಮಂಡಲದಿಂದ ಒಂದು ದಿವ್ಯ ಧ್ವನಿಕೇಳಿಸಿತು. "ವತ್ಸೆ ಮಹಾಶ್ವೇತೆ ಹಿಂದೆ ನಾನು ನಿನ್ನನ್ನು ಆಶ್ವಾಸಿ ದಂತೆ ನಿನ್ನ ಪ್ರಿಯತಮ ಪುಂಡರೀಕನ ಶರೀರ ನನ್ನ ಹತ್ತಿರ ಸುರಕ್ಷಿತವಾಗಿದೆ. ಚಂದ್ರಾಪೀಡನ ಶರೀರವನ್ನು ಕಾದಂಬರೀ ದೇವಿಯು ಹೀಗೆಯೇ ಕಾಯ್ದು ಕೊಂಡಿರಲಿ, ನಿಮ್ಮಿಬ್ಬರ ಮನೋರಥಗಳೂ ಬೇಗನೆ ಪೂರ್ಣವಾಗುವುವು."

ಅಷ್ಟರಲ್ಲಿ ಪತ್ರಲೇಖೆಯು ಮೂರ್ಛೆಯಿಂದೆದ್ದು ಇಂದ್ರಾಯುಧಾಶ್ವವನ್ನು ಹಿಡಿದುಕೊಂಡು "ನಡೆ, ವಾಹನಮಿಲ್ಲದೆ ಚಂದ್ರಾಪೀಡನು ಏಕಾಕಿಯಾಗಿ ದೂರಂ ಎಯ್ದಲ್ ಎಮ್ಮನ್ನರ್ ಇರ್ಪುದು ಅನುಚಿತಂ" ಎಂದು ಅದರೊಡನೆ ಅಚ್ಛೋದ ಸರೋವರದಲ್ಲಿ ದುಮುಕಿದಳು. ಕೂಡಲೆ ಕಪಿಂಜಲನು ಸರೋವರದಿಂದ ಎದ್ದು ಬಂದು ತಾನು ಚಂದ್ರನೊಡನೆ ಹೋದಂದಿನಿಂದ ನಡೆದ ಕತೆಯನ್ನು ಹೇಳಿದನು. ಪುಂಡರೀಕನು ವಿರಹ ತಾಪದಲ್ಲಿ ಚಂದ್ರನನ್ನು ಎರಡುಸಲ ನೀನು ಮನುಷ್ಯನಾಗಿ ಹುಟ್ಟು ಎಂದು ಶಪಿಸಿದ್ದನಂತೆ, ಆಗ ಚಂದ್ರನು

ಇವನೆನಗೆ ನಿರಪರಾಧಂ
ಗವಿಚಾರದೆ ಶಾಪಮೀಯೆ ನೀನೂ ಸುಖದುಃ
ಖವನೆನ್ನೊಡ ನನುಭವಿಸೆಂ
ದಿವಂಗೆ ಮುನಿದಾನು ಮಂತುಶಾಪಂಗೊಟ್ಟೆಂ

ಅನುಭವಿಸು ಎಂದನಂತೆ. ಕಪಿಂಜಲನು ಚಂದ್ರನನ್ನು ಬೆನ್ನಟ್ಟಿ ಹೋದಾಗ ಚಂದ್ರನು ಅವನಿಗೆ ಹೇಳಿದನು – "ಪುಂಡರೀಕನ ಶರೀರದಲ್ಲಿ ಜೀವ ಸಂಚಾರವಾಗ ಬೇಕಾದರೆ ಅವನ ತಂದೆ ಶ್ವೇತಕೇತು ಆಯುಷ್ಕಾಮ ಹೋಮವನ್ನು ಮಾಡಲಿ." ಇದನ್ನು ತಿಳಿಸಲಿಕ್ಕೆಂದು ಕಪಿಂಜಲನು ಆತುರದಿಂದ ಹೋಗುವಾಗ ಆಕಾಶದಲ್ಲಿ ಒಬ್ಬ ವೈಮಾನಿಕನನ್ನು ದಾಟಿದನು. ವೈಮಾನಿಕನಿಗೆ ಇದು ಅವಿನಯವೆನ್ನಿಸಿ ಕುದುರೆಯಂತೆ ನೀನು ನನ್ನನ್ನು ದಾಟಿದ್ದರಿಂದ ನೀನು ಕುದುರೆಯಾಗಿ ಜನಿಸು ಎಂದು ಶಪಿಸಿದನು. ಕಪಿಂಜಲನು ಅವನ ಕ್ಷಮೆ ಕೇಳಿಕೊಂಡು ತಾನು ಕುದುರೆ ಯಾದರೂ ಚಿಂತೆಯಿಲ್ಲ ತನ್ನ ಗೆಳೆಯನ ಹತ್ತಿರವೇ ಇರುವಂತಾಗಲಿ ಎಂದು ಬೇಡಿ ಕೊಂಡನು. ಅದರಂತೆ ಪುಂಡರೀಕನ ಶಾಪದಿಂದ ಚಂದ್ರನು ಚಂದ್ರಾಪೀಡನಾಗಿ ಹುಟ್ಟಿದಾಗ ಪುಂಡರೀಕನು ಚಂದ್ರನ ಶಾಪದಿಂದ ವೈಶಂಪಾಯನನಾಗಿಯೂ ಕಪಿಂಜ ಲನು ವೈಮಾನಿಕನ ಶಾಪದಿಂದ ಇಂದ್ರಾಯುಧನಾಗಿಯೂ ಜನಿಸಿ ಒಟ್ಟಿಗೇ ಇದ್ದರು.

ಇದನ್ನು ಮಹಾಶ್ವೇತೆಗೆ ತಿಳಿಸಿ ತಾನು ಶ್ವೇತಕೇತುವಿನಕಡೆಗೆ ಹೋಗುವೆನು ಎಂದು ಕಪಿಂಜಲನು ಹೋದನು. ವೈಶಂಪಾಯನನಾಗಿ ತನ್ನ ಬಳಿಗೆ ಬಂದು ತನ್ನನ್ನು ಬಯಸಿದ್ದವನು ಪುಂಡರೀಕನೆಂದು ಕೇಳಿ ಮಹಾಶ್ವೇತೆಗಾದ ದುಃಖ ಹೇಳತೀರದು. ಆಕೆ ಹಾ ಮನಃಪ್ರಿಯ ಪುಂಡರೀಕ, ಜನ್ಮಾಂತರಾವಿಸ್ಮೃತ ಮದನುರಾಗ, ಮತ್ಪ್ರತಿಬದ್ಧ ಜೀವಿತ, ಮನ್ಮಯಸಕಲಜೀವಿತ ಲೋಕ ಎಂದುದ್ಗತಶೋಕೆಯಾಗಿ

ಮುನ್ನವದೊರ್ಮೆ ಪಾತಕಿಯೆನಂತಿರೆ ಕೊಂದವಳೆಂ ಭವಾಂತರೋ
ತ್ಪನ್ನನೆಯಾಗಿಯುಂ ಮದನುರಾಗದಿನೆಟ್ಟಿರೆ ಮತ್ತೆ ಕೊಂದೆನಾಂ
ನಿನ್ನನೆ ನಿನ್ನನಿಂತು ಮಗುೞ್ದುಂ ಮಗುೞ್ದುಂ ಕೊಲವೇಟ್ಪುದೆಂದು ಪೇ
ೞೆನ್ನನಿದಿಂತು ಪುಟ್ಟಿಸಿದನೇ ವಿಧಿ ರಕ್ಕಸಿಯುಂ ಮನಃಪ್ರಿಯಾ

ಎನ್ನುತ್ತಾ ಚಂದ್ರನ ಆಶ್ವಾಸನೆಯನ್ನು ನಂಬಿ ತನ್ನನ್ನು ತಾನು ಹೇಗೋ ಸಂತಯಿಸಿಕೊಂಡಳು.ಮಹಾಶ್ವೇತೆಯು ಕಾದಂಬರಿಯನ್ನು ಸಂತಯಿಸಿ ಚಂದ್ರಮೂರ್ತಿಯಾದ ಚಂದ್ರಾಪೀಡನ ಶರೀರವನ್ನು ಆರಾಧಿಸಬೇಕು. ಚಂದ್ರನ ಆಶ್ವಾಸನ ಸುಳ್ಳಾಗದು ಎಂದು ಹೇಳಿ ತಾನು ತನ್ನ ದಿನಚರ್ಯೆಯಲ್ಲಿ ತೊಡಗಿದಳು. ಚಂದ್ರಾಪೀಡ ವೈಶಂಪಾಯನರ ತಂದೆ ತಾಯಿಗಳು ಅಲ್ಲಿಯೇ ಬಂದು ತಪಶ್ಚರ್ಯೆಯಿಂದಿದ್ದರು. ಮಹಾಶ್ವೇತೆಯ ಶಾಪದಿಂದ ಗಿಳಿಯಾಗಿ ಹುಟ್ಟಿದ ವೈಶಂಪಾಯನನೇ ಇವನು ಎಂದು ಜಾಬಾಲಿಗಳು ತಾವು ಹೇಳುತ್ತಿದ್ದ ಕತೆಯನ್ನು ಮುಗಿಸಿದರು.

ಇದನ್ನು ಕೇಳಿ ಗಿಳಿಗೆ ತನ್ನ ಪೂರ್ವಜನ್ಮದ ಸ್ಮರಣೆಯಾಗಲು ತಾನು ಕಲಿತ ವಿದ್ಯೆಗಳೆಲ್ಲ ಮರಳಿ ಬಂದವು. ಆದರೂ ಅದಕ್ಕೆ ಪುಂಡರೀಕ ಜನ್ಮದಿಂದಲೂ ಬಂದ ಮಹಾಶ್ವೇತೆಯ ಮೋಹ ಹೋಗಲಿಲ್ಲ. ವೈಶಂಪಾಯನ ಜನ್ಮದ ಮಿತ್ರನಾದ ಚಂದ್ರಾಪೀಡನನ್ನು ಕಾಣುವ ಆತುರವಾಯಿತು. ಅವನು ಎಲ್ಲಿದ್ದಾನೆ ತಿಳಿಸಿ ಎಂದು ಜಾಬಾಲಿಗಳನ್ನು ಬೇಡಿಕೊಂಡಿತು. ನಿನಗೆ ಹಾರುವಶಕ್ತಿ ಬಂದಮೇಲೆ ಹೇಳುತ್ತೇನೆ ಎಂದು ಜಾಬಾಲಿಗಳು ಹೇಳಿದರು. ಅಷ್ಟರಲ್ಲಿ ಕಪಿಂಜಲನು ಬಂದು ನಡೆದ ಸಂಗತಿಗಳನ್ನೆಲ್ಲ ಗಿಳಿಗೆ ತಿಳಿಸಿ ಶ್ವೇತಕೇತುವಿನ ಹೋಮುಕರ್ಮಾದಿಗಳು ಮುಗಿಯುವವರೆಗೆ ಗಿಳಿ ಜಾಬಾಲಿಗಳ ಹತ್ತಿರವೇ ಇರಬೇಕೆಂದು ಹೇಳಿದನು. ಗಿಳಿ ಕಪಿಂಜಲರ ಸಮಾಗಮದ ಚಿತ್ರ ಹೃದಯವೇಧಕವಾದದ್ದು. ಅಂಥ ಪ್ರೀತಿ,ಸ್ನೇಹ ಲೋಕದಲ್ಲಿದೆಯೋ ಎನ್ನಿಸುತ್ತದೆ.

ಎತ್ತಿಕ ರಗಳಿಂದೆ ನಿಜಬಾಷ್ಪನಿರುದ್ಧ ಮೆನಿಪ್ಪ ಕಣ್ಗಳಿಂ
ದೊತ್ತಿ ಶರೀರದೊಳ್ ಪುಗಿಸಿಕೊಂಡಪನೆಂಬಿನವಾದ ಮಪ್ಪುತುಂ
ಚಿತ್ತದಲಂಪಿನಿಂ ಕಿಱುಳನಂತಿರಲೆನ್ನಯ ಮಾಯ್ದು ಕಾಲ್ಗಳಂ
ನೆತ್ತಿಯೊಳಿಟ್ಟುಕೊಂಡಬುತುಮಿರ್ದನಟಿಲ್ದೆನಸುಂ ಕಪಿಂಜಲಂ

ಗಿಳಿಗೆ ಆತುರ ಹೆಚ್ಚಾಗುತ್ತಲೇ ಇತ್ತು. ಒಂದುದಿನ ಇನ್ನೂ ರೆಕ್ಕೆ ಪೂರಾ ಬಲಿಯದಿದ್ದಾಗಲೇ ಹಾರಿ ಹೊರಟುಬಿಟ್ಟಿತು. ದಾರಿಯಲ್ಲಿ ಚಾಂಡಾಲನ ಬಲೆಯಲ್ಲಿ ಸಿಕ್ಕಿಬಿದ್ದಿತು. ಎಷ್ಟು ಬೇಡಿಕೊಂಡರೂ ಚಾಂಡಾಲನು ಅದನ್ನು ಬಿಡಲಿಲ್ಲ. ತಮ್ಮ ಹಟ್ಟಿಗೆ ತೆಗೆದುಕೊಂಡುಹೋಗಿ ಅವನು ನನ್ನನ್ನು ಈ ಚಾಂಡಾಲ ಕನ್ಯೆಗೆ ಒಪ್ಪಿಸಿದನು. ಅವಳು ನನ್ನನ್ನು ಇಲ್ಲಿ ತಂದಿದ್ದಾಳೆ ಎಂದು ಗಿಳಿ ಶೂದ್ರಕ ರಾಜನಿಗೆ ತನ್ನ ಕತೆಯನ್ನು ಹೇಳಿತು.

ರಾಜನು ವಿಸ್ಮಿತನಾಗಿ ಚಾಂಡಾಲ ಕನ್ಯೆಯನ್ನು ಕರೆಸಿ ವಿಚಾರಿಸಿದನು. ಆಕೆ ಶೂದ್ರಕನೇ ಚಂದ್ರಾಪೀಡನಾಗಿದ್ದ ಚಂದ್ರನೆಂದೂ ಗಿಳಿಯೇ ವೈಶಂಪಾಯನನಾಗಿದ್ದ ಪುಂಡರೀಕ ಎಂದೂ ತಾನು ಅವನ ತಾಯಿ ಲಕ್ಷ್ಮಿಯೆಂದೂ ಅವನ ಮೋಹ ಪರಂಪರೆಗೆ ಕೊನೆಯಾಗಲಿ, ಪಶ್ಚಾತ್ತಾಪ ಬರಲಿ ಎಂದು ತಾನು ಅವನನ್ನು ಚಾಂಡಾಲರ ಹಟ್ಟಿಯಲ್ಲಿ ತೊಗಲ ಪಂಜರದಲ್ಲಿಟ್ಟಿದ್ದಳೆಂದೂ, ಶ್ವೇತಕೇತುಗಳ ಹೋಮಕರ್ಮ ಮುಗಿಯುವುದು ಸಮೀಪಿಸಿದೆಯೆಂದೂ, ರಾಜನೂ ಗಿಳಿಯೂ ಈ ಶರೀರಗಳನ್ನು ತ್ಯಜಿಸಿ ತಮ್ಮ ಮೂಲ ಶರೀರಗಳನ್ನು ಹೊಂದಬಹುದೆಂದೂ ಹೇಳಿ ಆಕಾಶಕ್ಕೆ ಹಾರಿ ಹೋದಳು. ಶೂದ್ರಕನೂ ಗಿಳಿಯೂ ಕೂಡಲೆ ತಮ್ಮ ಶರೀರಗಳನ್ನು ತ್ಯಜಿಸಿದರು. ಅತ್ತ ಅಚ್ಛೋದ ಸರಸಿನಹತ್ತಿರ ಅದೇ ಕಾಲಕ್ಕೆ ಚಂದ್ರಾಪೀಡನ ಶರೀರದಲ್ಲಿ ಜೀವಸಂಚಾರವಾಯಿತು. ಚಂದ್ರಲೋಕದಿಂದ ಪುಂಡರೀಕನೂ ಇಳಿದನು. ಪ್ರಣಯಿಗಳ ಸಮಾಗಮವು ಚಂದ್ರನ ಆಶ್ವಾಸನೆಯಂತೆ ಈಡೇರಿತು.

*

ಜನ್ಮಾಂತರಗಳ ಚಮತ್ಕಾರಗಳ ಸರಪಣಿಯಾಗಿ ಪ್ರಸಿದ್ಧವಾಗಿದ್ದ ಈ ಕತೆಯನ್ನು ಹೇಳುವಲ್ಲಿ ಕೆಲವೇ ಬದಲಾವಣೆಗಳಿಂದ ಬಾಣನು ಇದನ್ನೊಂದು ಸುಸಂಬದ್ಧವಾದ ಕತೆಯಾಗಿಸಿರುವನಲ್ಲದೆ ಜೀವನದಲ್ಲಿ ಅಮೂಲ್ಯವೆನಿಸಿದ ಮೈತ್ರಿ, ಶ್ರದ್ಧೆ, ಪ್ರೀತಿಗಳ, ಶಕ್ತಿಯನ್ನೂ ಅವುಗಳಿಂದ ಜೀವನದಲ್ಲಿ ಮೂಡಬಹುದಾದ ಚೆಲುವನ್ನೂ ಹೃದಯಂಗಮವಾಗಿ ಚಿತ್ರಿಸಿದ್ದಾನೆ. ಪ್ರೀತಿಯೆಂದರೆ ಕ್ಷಣಿಕವಾದ ಇಂದ್ರಿಯ ವಿಕಾರವಲ್ಲ. ಅದಕ್ಕೆ ಜನ್ಮಾಂತರಗಳ ಮೂಲವಿರುತ್ತದೆ.

"ವ್ಯತಿಷಜತಿ ಪದಾರ್ಥಾನಾಂತರಃ ಕೋಽಪಿ ಹೇತುಃ"

ಎಂಬಲ್ಲಿ ಆ ಹೇತುವೇನೆಂಬದನ್ನು ತೋರಿಸಲಿಕ್ಕೆ ಯತ್ನಿಸಿದ್ದಾನೆ. ಪುಂಡರೀಕನನ್ನು ಜನ್ಮಾಂತರಗಳಲ್ಲಿಯೂ ಬಿಡದ ಮಹಾಶ್ವೇತೆಯ ಆಕರ್ಷಣೆಯು ಋಷಿಗಳ ದೃಷ್ಟಿಯಲ್ಲಿ ಮೋಹವೆನಿಸಿದರೂ ಅವನ ಮಟ್ಟಿಗೆ ಅದೊಂದು ಚೆಲುವಿನಲ್ಲಿ ಅಪಾರವಾದ ಶ್ರದ್ಧೆ. ಅದನ್ನು ಆರಾಧಿಸುವದಕ್ಕೆ ಮಹಾಶ್ವೇತೆ ಎಷ್ಟು ಕಾಲವಾದರೂ ತಪಶ್ಚರ್ಯೆಯಲ್ಲಿ ಇರಲಿಕ್ಕೆ ಸಿದ್ಧಳಾಗುತ್ತಾಳೆ. ಯಾರೂ ಯಾರಲ್ಲಿಯೂ ದೋಷ

ವನ್ನರಸದಿರುವ ಸಹೃದಯತೆಯೂ ಒಂದು ಜೀವನದ ಚೆಲುವನ್ನು ಹೆಚ್ಚಿಸುವ ಶಕ್ತಿಯಾಗಿದೆ. ಪುಂಡರೀಕನ ವಿಕಾರವನ್ನು ಕಪಿಂಜಲನು ನಿಂದಿಸಿದರೂ ಅವನ ದುಃಖವನ್ನು ಶಮನ ಮಾಡಲಿಕ್ಕೆ ತನ್ನ ಕೈಯಲ್ಲಾದ ಯತ್ನಗಳನ್ನೆಲ್ಲ ಮಾಡಿದನು. ಇನ್ನೊಂದು ಜನ್ಮದಲ್ಲಿ ಪಶುವಾಗಿ ಹುಟ್ಟಿದರೂ ಆ ಯತ್ನವನ್ನೇ ಮುಂದುವರಿಸಿ* ಕಡೆಗೆ ತನ್ನ ಗೆಳೆಯನ ಕಾಮನೆಯನ್ನು ಈಡೇರಿಸಿದನು. ಕಾದಂಬರಿ ಮಹಾಶ್ವೇತೆಯರ ಮೈತ್ರಿಯೂ ಪ್ರೀತಿಯ ಸಾಫಲ್ಯದಲ್ಲಿ ಮಹಾಶ್ವೇತೆಗಿದ್ದ ಶ್ರದ್ಧೆಯೂ ಕಾದಂಬರಿಯಲ್ಲಿಯೂ ಅಂಥ ಶ್ರದ್ಧೆ ವಿಶ್ವಾಸಗಳನ್ನು ಮೂಡಿಸಿ – ತನ್ನ ಪ್ರಿಯನ ಸಮಾಗಮವನ್ನು ಪಡೆಯುವಂತೆ ಮಾಡಿದವು. ಚಂದ್ರಾಪೀಡ ವೈಶಂಪಾಯನರ ಮೈತ್ರಿಯಲ್ಲಿಯೂ ವೈಶಂಪಾಯನನ ದೋಷಗಳನ್ನು ಚಂದ್ರಾಪೀಡನು ಎಣಿಸುವದಿಲ್ಲ. ಚಂದ್ರಾಪೀಡನ ತಂದೆ ತಾಯಿಗಳೂ ಎಣಿಸುವದಿಲ್ಲ. ಇಡಿಯ ಕತೆಯಲ್ಲಿ ದೋಷಗಳನ್ನೆಣಿಸಿದ್ದು ಒಂದೇ ಸಂದರ್ಭದಲ್ಲಿ – ವೈಶಂಪಾಯನನು ಅಚ್ಛೋದ ಸರಸಿನಿಂದ ಬಾರದೇ ಇದ್ದಾಗ ಅವನ ತಂದೆ ಶುಕನಾಸನು ಅವನನ್ನು ನಿಂದಿಸಿದ್ದು. ಅದರಿಂದಲೇ ಏನೋ ಪಾಪ ! ಎಲ್ಲರ ಮನೋರಥಗಳೂ ಪೂರ್ಣವಾಗಿ ಎಲ್ಲರಿಗೂ ಪ್ರಿಯ ಸಮಾಗಮವಾಗಿ ಕತೆ ಮುಗಿಯುವಾಗ ಶುಕನಾಸ ಮನೋರಮೆಯರಿಗೆ ಅವರ ಮಗ ತಿರುಗಿ ಬರಲಿಲ್ಲ. ಅವನು ಶ್ವೇತಕೇತುಗಳ ಆಶ್ರಮಕ್ಕೆ ಹೊರಟು ಹೋಗಿದ್ದಾನೆ. ಶ್ವೇತಕೇತು ತಾನು ವ್ರತಿಯಾಗಿದ್ದರೂ ತನ್ನ ಮಗುವಿನ ದೌರ್ಬಲ್ಯಗಳನ್ನು ಕ್ಷಮಿಸಿ ತಡೆದಿದ್ದ ಹೋಮ ಕರ್ಮಾದಿಗಳನ್ನು ಮುಗಿಸಿ ಅವನನ್ನು ಮರಳಿ ಪಡೆದನು.

ಈ ಪ್ರೀತಿ ಮೈತ್ರಿ ಸಹೃದಯತೆಗಳ ಕಾರಕಶಕ್ತಿ ಚಂದ್ರ. ಚಂದ್ರನು ಪರಮಾತ್ಮನ ಮನಸ್ಸು ಎಂದು ವೈದಿಕಪರಂಪರೆ ಹೇಳುತ್ತದೆ. ಮನುಷ್ಯರಲ್ಲಿ ಚಂದ್ರನು ಮನಸ್ಸಿನ ಅಭಿಮಾನಿ ದೇವತೆಯಂತೆ. ಚಂದ್ರನಿಂದ ಪುಂಡರೀಕನಿಗೆ ತಾಪವಾಗಿ ಪುಂಡರೀಕನು ಅವನನ್ನು ಶಪಿಸಿದರೂ ಚಂದ್ರನು ಮಾತ್ರ ಅವನನ್ನು ಕೈಬಿಡದೆ ನಡೆಸಿ ಕೊನೆಯಲ್ಲಿ ಮಹಾಶ್ವೇತೆಯ ಸಮಾಗಮವನ್ನು ಮಾಡಿಸಿದನು. ಚಂದ್ರಾಂಶ ಸಂಭೂತನಾದ ಚಂದ್ರಾಪೀಡನಲ್ಲಿಯೂ ಅದೇ ಸಹೃದಯತೆ ಕಾಣುತ್ತದೆ. ಇನ್ನೊಬ್ಬರ ನೋವು ಕಂಡರೆ ಅವನ ಹೃದಯ ಮಿಡಿಯುತ್ತದೆ. ಆದ್ದರಿಂದ ಎಲ್ಲರಿಗೂ ಅವನಲ್ಲಿ ವಿಶ್ವಾಸ. ತಾನು ಸುಖಪಡುವ ಮೊದಲು ಬೇರೆಯವರಿಗೆ ಸುಖವಾಗಬೇಕು ಎಂಬ ಹಂಬಲ. ಆದ್ದರಿಂದಲೇ ಮಹಾಶ್ವೇತೆ ಮನಬಿಚ್ಚಿ ತನ್ನ ದುಃಖವನ್ನು ಅವನ ಮುಂದೆ ತೋಡಿಕೊಳ್ಳುತ್ತಾಳೆ. ಕಾದಂಬರಿಯ ವಿರಹದಿಂದ ತಾನು ಎಷ್ಟೇ

*ಚಂದ್ರನಿಗೆ ಎರಡು ಜನ್ಮ ಮುಗಿಯುವವರೆಗೂ ಪುಂಡರೀಕನಿಗೆ ಬದುಕಿಲ್ಲ; ಬಾಳಿಲ್ಲ. ಮಹಾಶ್ವೇತಾ ಸಮಾಗಮವಿಲ್ಲ. ಅವರೆಗೂ ತನ್ನ ಮಿತ್ರನ ಸಮಾಧಾನವಿಲ್ಲ.

ಬೆಂಡಾಗಿದ್ದರೂ ಮೊದಲು ತನ್ನ ಮಿತ್ರ ವೈಶಂಪಾಯನನನ್ನು ಕಾಣಬೇಕು, ಅವನ ತಾಯಿ ತಂದೆಗಳನ್ನು ಸುಖಪಡಿಸಬೇಕು ಎಂಬ ನಿಜವಾದ ಆತುರ ಅವನಲ್ಲಿ ಕಾಣುತ್ತದೆ. ಕಾದಂಬರಿಯೂ ಅಷ್ಟೇ ; ತಾನು ಸುಖಪಡಬೇಕಾದರೆ ತನ್ನ ಗೆಳತಿ ಮಹಾಶ್ವೇತೆ ಮೊದಲು ಸುಖಿಯಾಗಬೇಕು, ಇಂತಹ ಪ್ರೀತಿ ಮೈತ್ರಿ ಶ್ರದ್ಧೆಗಳಿಂದ ಜೀವನವು ಹೇಗೆ ಸುಂದರವಾಗುವದೆಂಬುದನ್ನು ಚಿತ್ರಿಸಲಿಕ್ಕೆ ಈಹಳೆಯ ಕತೆಯನ್ನು ಬಾಣನು ಉಪಯೋಗಿಸಿದ್ದಾನೆ. ಕತೆಯ ಕಡೆಯಲ್ಲಿ ಪತ್ರಲೇಖೆಯೆಲ್ಲಿ ಎಂದು ನೆನಸಿಕೊಳ್ಳುತ್ತಾರೆ.ಅವಳು ಚಂದ್ರನ ಮಡದಿ ರೋಹಿಣಿ,ಪತಿ ಚಂದ್ರಾಪೀಡನಾಗಿ ನೆಲದಲ್ಲಿ ಹುಟ್ಟಿದಾಗ ಅವನ ಜೊತೆಗಿರಲು ಬಯಸಿ ಅವನಲ್ಲಿಗೆ ಬಂದಿದ್ದವಳು ಎಂದು ತಿಳಿದು ಬರಲು ಆಕೆಯಲ್ಲಿ ಎಲ್ಲರಿಗೂ ಭಕ್ತಿಯುಂಟಾಗುತ್ತದೆ. ರೋಹಿಣೀರಮಣ ಎಂಬ ಮಾತು ಸಾರ್ಥಕವಾಗುತ್ತದೆ. ಬಾಣನ ಸಮಕಾಲೀನವಾಗಿದ್ದ ಸಮಾಜದ ವೈಭವ ನಯ ನಾಜೂಕುಗಳು ಅವರ ಚಿತ್ರಣಕ್ಕೆ ಸಹಾಯಕವಾಗಿವೆ.

*

ಹೀಗೆ ಬಹು ಹಿಂದಿನ ಕಾಲದಿಂದಲೂ ಜನಜನಿತವಾಗಿದ್ದ ಒಂದು ಕಥೆಯನ್ನು ಒಪ್ಪ ಮಾಡಿಕೊಂಡು ಹೇಳಿದ್ದರೂ ಅದು ಬಾಣನ ಹೆಸರಿನಿಂದಲೇ ಖ್ಯಾತವಾಗಬೇಕಾದರೆ ಅದರ ಸಂವಿಧಾನಕ ಮುಖ್ಯವಲ್ಲ. ಬಾಣನ ರೀತಿ ಮುಖ್ಯವೆಂಬುದು ಕಾರಣ. ಸಂವಿಧಾನಕದಲ್ಲಿ ಒಂದು ಸಣ್ಣ ಬದಲಾವಣೆಯಿಂದ ಮಕರಂದಿಕೆಯ ತಂದೆಯು ನಿಷ್ಕಾರಣವಾಗಿ ಗಿಳಿಯ ಜನ್ಮ ಪಡೆಯುವ ಬದಲು ಮನೋರಥ ಪ್ರಭೆಯ ಪ್ರಿಯಕರನು ತನ್ನ ವರ್ಣಾಶ್ರಮಗಳಿಗೆ ಅನುಚಿತವಾದ ಚಾಪಲ್ಯದಿಂದ ಮತ್ತೆ ಮತ್ತೆ ಜನ್ಮತಾಳಿ ಕಷ್ಟಪಟ್ಟನೆಂದು ಹೇಳುವಲ್ಲಿ ಕಥೆಯ ನಾಯಕಿ ಕಾದಂಬರಿಯಾದರೂ ಮಹಾಶ್ವೇತೆಯ ಕಥೆಯೇ ಹೆಚ್ಚು ಮನೋಜ್ಞವೆನಿಸುವಂತಾದರೆ ಅದಕ್ಕೆ ಬಾಣಪ್ರತಿಭೆಯೇ ಕಾರಣ. ಆದುದರಿಂದಲೇ ನಾಗವರ್ಮನಾದರೂ ತನ್ನ ಪ್ರತಿಭೆಯನ್ನು ಕಥೆ ಹೇಳುವ ರೀತಿಯಲ್ಲಿಯೇ ತೋರಿಸಿದ್ದಾನೆ. ಸಂವಿಧಾನಕವನ್ನು ಎಲ್ಲಿಯೂ ಬದಲಾಯಿಸಿಲ್ಲ.

ನಾಗವರ್ಮನು ಬಾಣನ ಕೃತಿಯ ಪೂರ್ವಾಪರಗಳನ್ನೆಲ್ಲ ಅಭ್ಯಸಿಸಿದ್ದನೆಂದು ತಿಳಿಯುವದಕ್ಕೆ ಕಾರಣಗಳಿವೆ. ಬಾಣಭಟ್ಟನು ಈ ಕತೆಯನ್ನು ಮುಗಿಸದೆ ಕಾಲವಶನಾದಾಗ ಅವನ ಮಗ (ಹೆಸರು ಪುಲಿಂದ – ಪುಲಿನ – ಭೂಷಣ – ಭಟ್ಟನೆಂದು ಅನೇಕ ರೀತಿಯಾಗಿದೆ) ಅದನ್ನು ಮುಗಿಸಿ ಪ್ರಚುರಪಡಿಸಿದನೆಂಬ ಮಾತನ್ನು ಧನಪಾಲನೆಂಬ ಕವಿ ಹೀಗೆ ಹೇಳಿದ್ದಾನೆ —

ಕೇವಲೋಽಪಿ ಸ್ಫುರನ್ ಬಾಣಃ ಕರೋತಿ ವಿಮದಾನ್ ಕವೀನ್
ಕಿಂ ಪುನಃ ಕ್ಲೃಪ್ತಸಂಧಾನ ಪುಲಿಂದಕೃತ ಸನ್ನಿಧಿಃ

ಇದನ್ನೇ ನಾಗವರ್ಮನು —

ಅವಯುವದೆರ್ದೆಗೊಳ್ವುದಿದಾ
ರುವನೆಂದೊಡೆ ಬಾಣಕೃತಿ ಪುಳಿಂದನ ಸಂಧಾ
ನವನೆಯ್ದಿದತ್ತು ಮತ್ತಿನ
ಕವಿಕುಲದೆರ್ದೆಗೊಳ್ವುದೆಂಬುದೊಂದಚ್ಚರಿಯೆ ?

ಎಂದು ಹೇಳಿದ್ದಾನೆ. ಆದರೆ ಈಗ ಉಪಲಬ್ಧವಿರುವ ಸಂಸ್ಕೃತ ಕಾದಂಬರಿಯ ಪೂರ್ವಾರ್ಧ ಉತ್ತರಾರ್ಧಗಳನ್ನು ನಾಗವರ್ಮನ ಕಾದಂಬರಿಯ – 1892ನೆಯ ಇಸವಿಯ ಬಿ. ಮಲ್ಲಪ್ಪನವರ ಪ್ರಕಟನೆಯನ್ನು ನೋಡಿದರೆ ಬಾಣನ ಕೃತಿಯಾದ ಪೂರ್ವಾರ್ಧವೆಷ್ಟು ಅವನ ಮಗನ ಕೃತಿಯಾದ ಉತ್ತರಾರ್ಧವೆಷ್ಟು ಎಂಬಲ್ಲಿ ಸಂದೇಹ ಉಂಟಾಗುವಂತಿದೆ. ಪೂರ್ವಾರ್ಧ ಎನ್ನುವದಕ್ಕೆ ಅಲ್ಲಿ ಕಥೆಯು ಯಾವುದೇ ಒಂದು ಹಂತವನ್ನು ಮುಟ್ಟಿದೆಯೆಂಬಂತಿಲ್ಲ. ಇದನ್ನು ನಾಗವರ್ಮನು ತನ್ನ ದೊಬ್ಬನದೇ ಆದ ಕೃತಿಯಲ್ಲಿ ಸರಿಪಡಿಸಬಹುದಿತ್ತು. ಹಾಗೆ ಮಾಡಲಿಲ್ಲ. ಪೂರ್ವ ಭಾಗದ ಕೊನೆಯಲ್ಲಿ "ಕಂಡನರಸಂ ಕಾದಂಬರೀ ದೇವಿಯಂ" ಎಂದು ಹೇಳಿ ಕಾದಂಬರಿಯನ್ನು ವರ್ಣಿಸುವ ಎರಡು ಪದ್ಯಗಳಿವೆ. ಇದೇ ವರ್ಣನೆಯೇ ಉತ್ತರ ಭಾಗದ ಮೊದಲ ಪದ್ಯಗಳಲ್ಲಿ ಮುಂದುವರಿಯುತ್ತದೆ. ಕಾಶಿಯ ಸಂಸ್ಕೃತಗ್ರಂಥ ಮಾಲೆಯ 1965 ನೆಯ ಇಸವಿಯ ಆವೃತ್ತಿಯಲ್ಲಿ ಕಂಡುಬರುವ ಪೂರ್ವಾರ್ಧ ಉತ್ತರಾರ್ಧಗಳ ವಿಭಾಗವು 1892 ನೆಯ ಇಸವಿಯ ಮಲ್ಲಪ್ಪನವರ ಕರ್ಣಾಟಕ ಕಾದಂಬರಿಯಲ್ಲಿ ಉತ್ತರಭಾಗದ 317ನೆಯ ವಚನದಲ್ಲಿ"ಯುವರಾಜನೇ ಮದೀಯ ವಿರಹ ಮರಣ ಭಯ ಹರಣನಪ್ಪುದಕ್ಕೆ ಕಾರಣನೆಂದು ಕಾದಂಬರಿ ನುಡಿದು ಸಿರದಿರ್ಪ್ಪುದುಂ – ಎಂಬಲ್ಲಿ ಬರುತ್ತದೆ. ಈ ವ್ಯತ್ಯಾಸಕ್ಕೆ ಕಾರಣವೇನೆಂಬದನ್ನೂ ನಾಗವರ್ಮನಿಗೆ ಉಪಲಬ್ಧವಿದ್ದ ಪ್ರತಿಗಳಲ್ಲಿ ಬಾಣನದೆಂದು ತಿಳಿಯಲಾಗಿದ್ದ ಪೂರ್ವಭಾಗ ಈಗ ಪ್ರಚಲಿತವಾಗಿರುವ ಪೂರ್ವಭಾಗಕ್ಕಿಂತ ಕಡಮೆಯಾಗಿತ್ತೇ ಎಂಬದನ್ನೂ ಸಂಶೋಧಕರು ನಿರ್ಣಯಿಸಬೇಕು.

ಒಂದು ಅಂಶ ಮಾತ್ರ ಸ್ಪಷ್ಟವಾಗಿ ತೋರಿಬರುತ್ತದೆ ; ಬಾಣನ ಕೃತಿಯನ್ನು ಪರಿವರ್ತಿಸುವಲ್ಲಿ ನಾಗವರ್ಮನು ಅವಶ್ಯ ತೋರಿದಲ್ಲಿ ಸಂಕ್ಷೇಪಿಸುವ ಸ್ವಾತಂತ್ರ್ಯ ವಹಿಸಿದ್ದಾನೆ. ಇಂತಹ ಸ್ವಾತಂತ್ರ್ಯವನ್ನು ಉತ್ತರ ಭಾಗದಲ್ಲಿ ಇನ್ನೂ ಹೆಚ್ಚಾಗಿಯೇ ವಹಿಸಿದ್ದಾನೆ. ಮೇಲೆ ಹೇಳಿದ 317 ನೆಯ ವಚನಕ್ಕೂ 318 ನೆಯ ಕಂದಕ್ಕೂ

ನಡುವೆ ಸಂಸ್ಕೃತ ಮೂಲದಲ್ಲಿದ್ದ ಪತ್ರಲೇಖೆಯ ಹೇಳಿಕೆಯಲ್ಲಿ ಸುಮಾರು ನಾನೂರು ಪದಗಳಷ್ಟು ಭಾಗವನ್ನು ಕೈಬಿಟ್ಟಿದ್ದಾನೆ. ಇದರಿಂದ ನಷ್ಟವೇನೂ ಇಲ್ಲವೆಂದೇ ಹೇಳಬೇಕು.

ಜನ್ಮಾಂತರ ಮತ್ತು ಚಮತ್ಕಾರಗಳ ಕ ತೆ ಗ ಳು ಎಷ್ಟೋ ಇದ್ದರೂ ಈ ಕಾದಂಬರೀ ಕತೆಗೆ ಇರುವ ಖ್ಯಾತಿ ಆಕರ್ಷಣೆಗಳು ಬೇರೆ ಕತೆಗಳಿಗೆ ಇಲ್ಲ. ಮನುಷ್ಯನ ಒಂದು ಚಿರಂತನವಾದ ಮತ್ತು ವಿಚಿತ್ರವಾದ ಹಂಬಲ ಈ ಕತೆಯಲ್ಲಿ ಮೂರ್ತಿ ಮತ್ತಾಗಿದೆ. ಅದೆಂದರೆ ಚೆಲುವು ಅಪರೂಪದ್ದಾಗಿರಬೇಕು ಅಮರವೂ ಆಗಿರಬೇಕು ಎನ್ನುವದು. ಚೆಲುವಿನ ಕಲ್ಪನೆ ಅಮರವಾಗಿದ್ದು ಚೆಲುವಿನ ವಸ್ತುಗಳು ನಶ್ವರವಾಗಿರುವದರಿಂದ ಚೆಲುವು ಅಪರೂಪವಾಗಿರುವದು ಸೃಷ್ಟಿಯ ನಿಯಮ, ಇದರಿಂದ ಮಾನವನಿಗೆ ತೃಪ್ತಿಯಿಲ್ಲ. ಚೆಲುವನ್ನು ಪ್ರೇಮಿಸಿದ ಪುಂಡರೀಕ ಚಂದ್ರಾಪೀಡರು ಸತ್ತು ಸತ್ತು ಹುಟ್ಟಿ ಹುಟ್ಟಿ ಬಂದರೂ ಚೆಲುವಿನ ಮೂರ್ತಿಗಳಾದ ಮಹಾಶ್ವೇತೆ ಕಾದಂಬರಿಯರು ಚಿರಯೌವನೆಯರೇ ! ಈ ಆಭಾಸವು ಒಮ್ಮೆಯೂ ಗೋಚರಿಸದಂತೆ ಅದೊಂದು ಬೇರೆ ಲೋಕವನ್ನೇ ಸೃಷ್ಟಿಸಿದೆ ಕವಿಪ್ರತಿಭೆ.

ಆ ಪ್ರತಿಭೆಯ ಉಪಕರಣಗಳು ಬಾಣನ ಲೋಕಾನುಭವ, ಕಲ್ಪನಾವಿಲಾಸ, ಸಂಸ್ಕೃತ ಭಾಷೆಯ ಬಂಧಲಯಗಳ ಮೇಲಿನ ಅನ್ಯಾದೃಶವಾದ ಹಿಡಿತ. ಬಾಣನು ಜೀವಿಸಿದ ಕಾಲ ಭಾರತೀಯ ಸಂಸ್ಕೃತಿಯ ಅನೇಕ ಏರು ಪೇರುಗಳಲ್ಲಿ ಒಂದು ಉಚ್ಛ್ರಾಯದಕಾಲ. ಅವನು ಆಶ್ರಯಿಸಿದ ಚಕ್ರವರ್ತಿಯ ಓಲಗ ರಸಿಕತೆಗೂ ವೈಭವಕ್ಕೂ ಹೆಸರಾದದ್ದು. ಅಂದು ಸುಸಂಸ್ಕೃತರೆನಿಸಿದ ಭಾರತೀಯರ ಜೀವನದಲ್ಲಿ ವೈದಿಕ ಬೌದ್ಧ ಧರ್ಮಗಳೂ ಯೋಗಭೋಗಗಳೂ ಹಾಸುಹೊಕ್ಕಾಗಿದ್ದವು. ಆದರಲ್ಲಿ ಆದರ್ಶನೆನಿಸಬಲ್ಲ ಪುರುಷ ಚಂದ್ರಾಪೀಡ —

ಬಗೆಯೊಳೆ ಧೈರ್ಯಮಂ ಬಗೆದನಲ್ಲದೆ ಮನ್ಮಥ ಬಾಣಪೀಡೆಯಂ
ಬಗೆಯನೆ ಲಜ್ಜೆಯಂ ಬಗೆದನಲ್ಲದೆ ತನ್ನ ಶರೀರ ಕಾರ್ಶ್ಯಮಂ
ಬಗೆಯನೆ ಪೆರ್ಮೆಯಂ ಬಗೆದನಲ್ಲದೆ ಕಾಮವಿಕಾರ ವೇಗಮಂ
ಬಗೆಯನೆ ಭೂಭುಜಂ ಪಿರಿಯರಪ್ಪವರ್ಗಂತಿರೆ ದಲ್ನೆಗಳ್ತೆಗಳ್.

ಗುರುಹಿರಿಯರೊಡನೆ, ಗೆಳೆಯರೊಡನೆ ಅವನ ನಡವಳಿಕೆ ಸಹಜವಾದ ಔಚಿತ್ಯವುಳ್ಳದ್ದು. ಅದರ ಹೆಚ್ಚುಗಾರಿಕೆ ಅವನು ಸ್ತ್ರೀಯರೊಡನೆ ವರ್ತಿಸುವ ರೀತಿಯಲ್ಲಿದೆ.* ಪತ್ರಲೇಖೆ ಅವನ ಚಿರಸಹಚರಿ. ಈ ಜನ್ಮದಲ್ಲಿ ಅವನ ತಾಂಬೂಲಕರಂಕ

*ಕಿಂಪುರುಷ ವಿಷಯದಲ್ಲಿ ಅವನ ನಡತೆಯನ್ನು ನೋಡಿ - ಆಹೋ ಅಗ್ರಾಮ್ಯತಾಸಿದ್ಧಿಃ ಎಂದು ಮೆಚ್ಚಿಕೊಳ್ಳುತ್ತಾರೆ—ಸಂ.

ವಾಹಿನಿ, ಚೆಲುವೆ, ರಸಿಕಳು, ಯುವತಿ. ಆದರೆ ಇವರಿಬ್ಬರ ನಡುವಿನ ವ್ಯವಹಾರದಲ್ಲಿ ಸ್ವಾಮಿಸೇವಕಿ ಭಾವದ ಅಂತರವೂ ಇಲ್ಲ, ತರುಣ ಸ್ತ್ರೀ ಪುರುಷರಲ್ಲಿದ್ದಿರಬಹುದಾದ ಸಲಿಗೆಯೂ ಇಲ್ಲ. ಮಹಾಶ್ವೇತೆಯ ಚೆಲುವು ಯಾರನ್ನೂ ಧೃತಿಗೆಡಿಸಬಲ್ಲ ಶಕ್ತಿಯುಳ್ಳದ್ದು. ಜೀವನ ಮರಣಗಳನ್ನು ಮೀರಿದ ಅನುರಾಗ ಬಂಧನದಿಂದ ಅದರ ಶಕ್ತಿ ಇನ್ನೂ ಹೆಚ್ಚಾಗಿದೆ. ಅವಳ ಚೆಲುವಿನ ಆಕರ್ಷಣೆಯನ್ನು ತಿಳಿದೂ ಅವಳ ಸಂಯಮವನ್ನು ಗೌರವಿಸಿ ಅವಳೊಡನೆ ಚಂದ್ರಾಪೀಡನ ನಡವಳಿಕೆ ಮತ್ತೊಂದು ವಿಧದ ಸ್ತ್ರೀ ಪುರುಷ ಸಂಬಂಧವನ್ನು ತೋರಿಸುತ್ತದೆ. ಮದಲೇಖೆ ಕಾದಂಬರಿಯ ದಾಸಿ ಎಂದರೂ ಸಹಚರಿ. ಸ್ವಾಮಿಸೇವಕಭಾವಕ್ಕಿಂತ ಸಖ್ಯವೇ ಹೆಚ್ಚಾಗಿದೆ. ಇವಳೊಡನೆ ಚಂದ್ರಾಪೀಡನ ವ್ಯವಹಾರ ಪತ್ರಲೇಖೆಯೊಡನೆ ಅವನ ರೀತಿಗೆ ಸ್ವಲ್ಪ ಬೇರೆಯಾಗಿದೆ. ಪತ್ರಲೇಖೆಗಿದ್ದ ಸಾಮೀಪ್ಯ ಅವಳಿಗಿಲ್ಲ. ಕಾದಂಬರಿಯೊಡನೆ ವ್ಯವಹರಿಸುವಲ್ಲಿ ಚಂದ್ರಾಪೀಡನಿಗೆ ಸ್ತ್ರೀ ಪುರುಷ ಸಂಬಂಧದ ಭಾವನೆಗಳುಂಟಾದರೂ ತುಂಬಾ ಸಂಯಮದಿಂದ ಮುಂದುವರಿಯುತ್ತಾನೆ. ಆ ತರದ ಸುಸಂಸ್ಕೃತ ರಸಿಕ ಜೀವನಕ್ಕೆ ಇಂತಹ ಸಂಯಮ ಕಷ್ಟವಾಗದೆಂದು ತೋರುತ್ತದೆ. ಅಗ್ನಿಯನ್ನು ಶಾಖಕ್ಕೂ, ಬೆಳಕಿಗೂ, ಅಲಂಕಾರಕ್ಕೂ, ವಿನಾಶಕ್ಕೂ ನಾನಾರೀತಿಯಾಗಿ ಉಪಯೋಗಿಸುವಂತೆ ಸ್ತ್ರೀ ಪುರುಷರ ನಡುವಿನ ಸಹಜವಾದ ಆಕರ್ಷಣೆಯನ್ನು ಬೇರೆ ಬೇರೆ ಅಂತರದಲ್ಲಿ ಬೇರೆ ಬೇರೆ ರೀತಿಯಾಗಿ ಬಳಸುವ ಸಂಸ್ಕೃತಿಯು ಹೆಚ್ಚಳ ಲೈಂಗಿಕಾಸಕ್ತಿಯ ಯುಗದಲ್ಲಿ ಅರ್ಥವಾಗದು. ಅದು ಅಸಹಜವೆಂದರೆ ಇಂದಿನ ನಮ್ಮ ಸಂಸ್ಕೃತಿಗೆ ಊನವೇ ಹೊರತು ಅದಕ್ಕಲ್ಲ.

ಚಂದ್ರಾಪೀಡನ ಈ ಹಿರಿಮೆಯನ್ನು ಎತ್ತಿ ತೋರಿಸುವಂತೆ ವೈಶಂಪಾಯನನ ಚಂಚಲತೆ* ರೂಪಿತವಾಗಿದೆ. ಅದು ಕಥಾಸಂವಿಧಾನದಲ್ಲಿ ಅನಿವಾರ್ಯವೆಂದು ತೋರಿಸಿದ್ದು ಬಾಣನ ಸಂವಿಧಾನ ಕೌಶಲ. ತನ್ನ ಪೂರ್ವಜನ್ಮದಲ್ಲಿ ಪುಂಡರೀಕನಾಗಿದ್ದು ಮುನಿಕುಮಾರನಾಗಿದ್ದರೂ ಅವನಿಗೆ ಸಂಯಮವಿರಲಿಲ್ಲ. ಈ ಎರಡು ಜನ್ಮಗಳಲ್ಲಿ ಹೀಗೆ ಅಸಂಯಮದಿಂದ ಕಷ್ಟಪಟ್ಟು ಗಿಳಿಯಾಗಿ ಹುಟ್ಟಿದಾಗಲೂ ಅದೇ ಅಸಂಯಮ ಅವನನ್ನು ಕಾಡುತ್ತದೆ, ಇಂತಹ ಪುಂಡರೀಕನಲ್ಲಿ ಮಹಾಶ್ವೇತೆ ಮೆಚ್ಚಿದ್ದೇನು ? ಚೆಲುವು ಎನ್ನುವ ಉತ್ತರ ಸಾಲದು. ಮಹಾಶ್ವೇತೆ ತನ್ನ ಚೆಲುವಿನ, ಯೌವನದ, ಉನ್ಮಾದಕ್ಕೆ ಒಂದು ಆಶ್ರಯವೆಂಬಂತೆ ಪುಂಡರೀಕ ಅವ

*ಇದು ಪ್ರೇಮವಾದರೆ ಅದೂ ಪ್ರೇಮವೇ ಆಗಬಹುದು. ಮೂರು ಹುಟ್ಟುಗಳಲ್ಲಿ ಆರದ, ತೀರದ ಬಯಕೆ. ಪ್ರಕೃತಿ ಸ್ವಭಾವಾತ್ ಎಂಬ ಮಾತು ಕಾಯಾ, ವಾಚಾ, ಮನಸಾ, ಇಂದ್ರಿಯೈರ್ವಾ ಬುಧ್ಯಾ ಆತ್ಮನಾ ವಾ ಎಂದ ಮೇಲೆಯೂ ಹೇಳಿರುವ ಮಾತು. ಅದು ಲೋಕಸ್ವರೂಪವನ್ನು ಅರಿತವರು ನುಡಿದುದು. ಆ ನಿಷ್ಠೆಯೇ ಅದರ ಸಫಲತೆ—ಸಂ.

ಳಿಗೆ ಇದಿರಾದನು. ಅಲ್ಲಿ ದೃಢವಾಗಿ ನಿಂತಿರುವುದಕ್ಕೆ ಕಾರಣವಾದ ಯಾವ ಗುಣಗಳನ್ನೂ ಪುಂಡರೀಕನಲ್ಲಿ ತೋರಿಸಿಲ್ಲವಾದ್ದರಿಂದ ಮಹಾಶ್ವೇತೆ ಮೆಚ್ಚಿದ್ದು ಬೇರೆ ವ್ಯಕ್ತಿಯನ್ನಲ್ಲ ತನ್ನನ್ನೇ ಎಂದು ಹೇಳಬಹುದೆ ?

ಹೀಗೆ ತಮ್ಮನ್ನೇ ತಾವು ಮೆಚ್ಚಿಕೊಂಡು ಸಂಯಮದ ಏಕಾಗ್ರತೆಯಿಂದಿರುವದು ಕೆಲವು ವ್ಯಕ್ತಿಗಳಲ್ಲಿ ತೋರುವ ಯೌವನದ ಒಂದು ವಿಪರ್ಯಾಸ. ಹೀಗೆ ಹೇಳಿದರೆ ಅದು ಮಹಾಶ್ವೇತೆಗೆ ಅಪಚಾರವೆಂದು ತಿಳಿಯಬಾರದು. ಒಟ್ಟು ಕತೆಯಲ್ಲಿ ಮಹಾಶ್ವೇತೆಯ ಆಕರ್ಷಣೆಯೇ ಹೆಚ್ಚಿಗಿದ್ದರೂ ಅದಕ್ಕೆ ಕಾದಂಬರಿಯ ಹೆಸರು ಇಟ್ಟಿರಬೇಕಾದರೆ ಬಾಣನು ಪುಂಡರೀಕ ಮಹಾಶ್ವೇತೆಯರಿಗಿಂತ ಹೆಚ್ಚಾಗಿ ಚಂದ್ರಾಪೀಡ ಕಾದಂಬರಿಯರನ್ನು ಗೌರವಿಸಿದನೆಂಬದು ಸ್ಪಷ್ಟವಿದೆ. ಇದು ಅವನ ಸಮಕಾಲೀನ ಸಮಾಜದ ಸಂಸ್ಕೃತಿಯ ಪ್ರಭಾವ. ಹೀಗಿದ್ದೂ ಮಹಾಶ್ವೇತೆಯ ಪಾತ್ರದಲ್ಲಿ ಒಂದು ನಿಲುಕಲಾರದ ಚೆಲುವಿನ ಶಕ್ತಿಯನ್ನು ತುಂಬಿದ್ದಾನೆಂದರೆ ಅದು ಮನುಷ್ಯನ ಚಿರಕಾಲದ ವಿಪರ್ಯಾಸಕ್ಕೆ ಬಾಣನು ಹೊರತಾಗಿರಲಿಲ್ಲವೆಂಬುದೇ ಕಾರಣ. The desire of the moth for the star ಎಂದು ಶೆಲ್ಲಿಹೇಳಿದಂತೆ. ಈ ಮಂದಿರದಲ್ಲಿ ಕಾದಂಬರಿ ವಿಗ್ರಹವಾದರೂ ಮಹಾಶ್ವೇತೆಯೇ ಬೆಳಕು. ವಿಗ್ರಹಕ್ಕಿರುವ ಆಕಾರ ಮಿತಿಗಳು ಬೆಳಕಿಗಿಲ್ಲ. ವಿಗ್ರಹಕ್ಕೆ ನಮಸ್ಕರಿಸಿದರೂ ಬೆಳಕನ್ನೇ ನೋಡುತ್ತ ನಿಲ್ಲುತ್ತೇವೆ. "ಅತಿಧವಲಪ್ರಭಾಪರಿಗತ ದೇಹತಯಾ ಅಪರಿಸ್ಫುಟ ವಿಭಾವ್ಯಮಾನಾವಯವಾಮ್" ಎಂದು ಬಾಣನು ಹೇಳುತ್ತಾನೆ.

"ತಳತಳಿಸಿ ಪೊಳೆವ ಪಳುಕಿನ, ನಿಲಯದೊಳ ಮೃತಾಪ್ಪು ಜಲದೊಳಘ್ರ
ಕಪಟಲಂ
ಗಳಮರೆಯೊಳಿರ್ದಳೆನೆ ಮೆಯ್ವೆಳಗಿಂ ನೆಱೆಯಱಿಯಲಾದು
ದಿಲ್ಲಂಗನೆಯಂ

ಎಂದು ನಾಗವರ್ಮ ಹೇಳುತ್ತಾನೆ.

ಮಹಾಶ್ವೇತೆಯ ವರ್ಣನೆಯಲ್ಲಿ ಉದ್ದಕ್ಕೂ ಆಕೃತಿಗಿಂತ ಬೆಳಕಿಗೇ ಪ್ರಾಧಾನ್ಯವಿರುವದನ್ನು ಕಾಣಬಹುದು —

ಪೊಳೆವೆಳನೇಸರಿಂ ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಿಂ
ತಳೆದೆಳೆಮಿಂಚಿನೋಳ್ದಳಿರ್ಗಳಂತೆ ಕವಲ್ತು ಮೃಗಾಂಶ
ಮೌಳಿನಿ –
ರ್ಮಳಪದ ಭಸ್ಮರೇಣುಗಳೆನಲ್ನವ ಮಜ್ಜನ ವಾಃಕ –
ಣಂಗಳಂ
ತಳೆದು ಪೆಗಲ್ವರಂ ಬಳೆದು ರಂಜಿಸುಗುಂ
ಜಡೆಗಳ್ಮೃಗಾಕ್ಷಿಯಾ

ಅಂದಿನ ಸಮಾಜದಲ್ಲಿ ಚಂದ್ರಾಪೀಡನು ಆದರ್ಶ ಪುರುಷನಾಗಿದ್ದಂತೆ ಕಾದಂಬರಿ ಆದರ್ಶ ಯುವತಿ. ಇವರ ಚಿತ್ರಣದಲ್ಲಿ ಬಾಣನ ವಿದಗ್ಧತೆ ಕಂಡುಬಂದಂತೆ ಮಹಾಶ್ವೇತೆಯ ಚಿತ್ರಣದಲ್ಲಿ ಅವನ ಕಲ್ಪನಾವಿಲಾಸ ಸೂರೆಯಾಗಿದೆ. ಭಾಷೆಯ ಲಾಲಿತ್ಯವೂ ತಾಳ ಲಯಗಳೂ ಈ ಕಲ್ಪನಾವಿಲಾಸಕ್ಕೆ ಹೊಂದಿಕೊಂಡಿವೆ. ಇವುಗಳ ಪರಿವರ್ತನೆಯಲ್ಲಿ ನಾಗವರ್ಮನು ಬಾಣನಿಗೆ ಸರಿದೊರೆಯಾಗಿ ನಿಂತಿದ್ದಾನೆ. ಬಾಣನು ಬರೆದದ್ದು ಶಾಸ್ತ್ರಪರಿಭಾಷೆಯಲ್ಲಿ ಗದ್ಯವೆನಿಸಿದ್ದರೂ ಅದು ಒಂದು ತರ ಹದ ಮುಕ್ತಛಂದಸ್ಸಿನ ಪದ್ಯವೇ ಎನ್ನಬಹುದು. ಅದಕ್ಕೆ ಸಮೀಪವರ್ತಿಯಾ ದದ್ದು ನಾಗವರ್ಮನ ಚಂಪೂ ಪ್ರಕಾರವೇ, ಬಾಣನ ಗದ್ಯಲಯದ ಸವಿಯನ್ನು ಕಾಣಬೇಕಾದರೆ ಅದನ್ನು ಗಟ್ಟಿಯಾಗಿ ಓದಬೇಕು.* ಅದಕ್ಕೆ ಈಗ ಗದ್ಯವನ್ನು ಬರೆಯುವ ಅಥವಾ ಅಚ್ಚುಹಾಕಿಸುವ ರೀತಿ ಉಪಕಾರಿಯಾಗಿಲ್ಲ. ಈ ಕೆಳಗೆ ಅವ ತರಿಸಿದ ಭಾಗವನ್ನು ಈ ರೀತಿಯಾಗಿ ಬರೆದರೆ ಅದರ ಸವಿ ಸ್ಪಷ್ಟವಾದೀತೇನೊ ರಸಿಕರು ವಿಮರ್ಶಿಸಲಿ—

"ತಸ್ಯಾಚ ದಕ್ಷಿಣಾಮೂರ್ತಿಮಾಶ್ರಿತ್ಯಾಭಿಮುಖೀಮಾಸೀನಾಮ್
ಉಪರಚಿತ ಬ್ರಹ್ಮಾಸನಾಂ
ಅತಿವಿಸ್ತಾರಿಣಾ
ಸರ್ವದಿಙ್ಮುಖ ಪ್ಲಾವಕೇನ
ಪ್ರಲಯ ಪರಿಪ್ಲುತ ಕ್ಷೀರಪಯೋಧಿ ಪಾಂಡುರೇಣ
ಅತಿದೀರ್ಘಕಾಲ ಸಂಚಿತೇನ
ಸರ್ವತೋ ವಿಸರ್ಪತಾ ಪಾದಪಾಂತರ್ಸ್ಯೆ ಸ್ರಿಸ್ರೋಜಲನಿಭೇನ
ಪಿಂಡೀಭೂಯ ವಹತೇವ ದೇಹಪ್ರಭಾವಿತಾನೇನ
ಸಗಿರಿಕಾನನಂ ಚಂದ್ರಮಯಮಿವ ಕುರ್ವತೀಂ
ಅನ್ಯಥೈವ ಧವಲಯಂತೀಂ ಕೈಲಾಸಗಿರಿಂ
ಅಂತರ್ದೃಷ್ಟರಪಿ ಲೋಚನಪಥಪ್ರವಿಷ್ಟೇನ ಶ್ವೇತಿಮಾನಮಿವ
ಮನೋನಯಂತೀಂ
ಅತಿಧವಲಪ್ರಭಾ ಪರಿಗತ ದೇಹತಯಾ ಸ್ಫಟಿಕಗೃಹಗತಾಮಿವ
ದುಗ್ಧಸಲಿಲಮಗ್ನಾಮಿವ
ವಿಮಲ ಚೀನಾಂಶುಕಾಂತರಿತಾಮಿವ
ಆದರ್ಶತಲ ಸಂಕ್ರಾಂತಾಮಿವ
ಶರದಭ್ರ ಪಟಲ ತಿರಸ್ಕೃತಾಮಿವ
ಅಪರಿಸ್ಫುಟ ವಿಭಾವ್ಯಮಾನಾವಯವಾಮ್"

*ನಿಜವಾಗಿ ಸಾಹಿತ್ಯ ಕವಿತೆ ಎಂಬುದರಲ್ಲೆಲ್ಲ ಹಾಗೆ. ಕಣ್ಣೋದಿನಲ್ಲಿ ದೊರೆಯುವ ಸಂತೋಷಕ್ಕೆ ಮೀರಿದ್ದು – ಸಂ.

ಹೀಗೆಯೇ ನೂರಾರು ಪದಗಳಷ್ಟು ವಿಸ್ತರಿಸಿ ಕೊನೆಯಲ್ಲಿ

ನಿರ್ಮಮಾಮ್
ನಿರಹಂಕಾರಾಮ್
ನಿರ್ಮತ್ಸರಾಮ್
ಅಮಾನುಷಾಕೃತಿಮ್
ದಿವ್ಯತ್ವಾದಪರಿಜ್ಞಾಯಮಾನ ವಯಃಪರಿಮಾಣಾಮಪಿ
ಅಷ್ಟಾದಶವರ್ಷದೇಶೀಯಾಮಿವ ಉಪಲಕ್ಷಮಾಣಾಂ
ಪ್ರತಿಪನ್ನಪಾಶುಪತವ್ರತಾಂ
ಕನ್ಯಕಾಂ
ದದರ್ಶ*

ಎಂದು ಮುಗಿಯುವಲ್ಲಿ ಒಂದು ವಾದ್ಯವೃಂದವು ನಾನಾವಿಧವಾದ ತಾಳ ಲಯಗಳಲ್ಲಿ ಭೋರ್ಗರೆದು ಶಾಂತವಾದಂತೆ ಅನಿಸುತ್ತದೆ. ಹಾಗೆ ನೋಡಿದರೆ ಇಂತಹ ಕೃತಿಗಳನ್ನು ಒಬ್ಬರೇ ಕೂತು ತಮ್ಮಷ್ಟಕ್ಕೆ ತಾವೇ ರಚಿಸುತ್ತಿದ್ದರೊ ಅಥವಾ ರಾಜಾಸ್ಥಾನದಲ್ಲಿಯೊ ವಿದ್ವತ್ಸಭೆಯಲ್ಲಿಯೊ ಅನೇಕರು ಜತೆಯಾಗಿ ಒಬ್ಬರು ಪ್ರಾರಂಭಿಸಿದ ವಾಕ್ಯಸರಣಿಯನ್ನು ಬೇರೆ ಬೇರೆಯವರು ಬೇರೆ ಬೇರೆ ರೀತಿ ಯಾಗಿ ಮುಂದುವರಿಸಿ ಒಟ್ಟು ಕೃತಿಯ ಕರ್ತೃತ್ವವನ್ನು ವಾದ್ಯವೃಂದದ ಮುಖಂಡ ನಿಗೆ ಒಪ್ಪಿಸಿದಂತೆ ಒಪ್ಪಿಸುತ್ತಿದ್ದರೊ ಎಂದು ಊಹಿಸುವಂತಾಗುತ್ತದೆ. ಹಾಗಿಲ್ಲ ದಿದ್ದರೆ ಬಾಣನಂಥ ಸೂಕ್ಷ್ಮಗ್ರಾಹಿಯೂ ಔಚಿತ್ಯ ಪ್ರಜ್ಞೆಯುಳ್ಳವನೂ ಅನೇಕ ಸ್ಥಳಗಳಲ್ಲಿ ಇಂತಹ ಪದಸರಣಿಯನ್ನು ಅತಿಶಯವೆನಿಸುವಷ್ಟು ಬೆಳಸಿರಬಹು ದೆಂದು ನಂಬಲಿಕ್ಕಾಗುವದಿಲ್ಲ. ಇಂತಹ ಸಂದರ್ಭಗಳಲ್ಲಿ ನಾಗವರ್ಮನು ತನಗೆ ಉಚಿತವೆನಿಸಿದಂತೆ ಸಂಕ್ಷೇಪಗಳನ್ನೂ ಮಾರ್ಪಾಟುಗಳನ್ನೂ ಮಾಡಿಕೊಂಡಿದ್ದಾನೆ. ಸುಮಾರು ನಾನ್ನೂರು ಸಮಾಸಪದಗಳಿಂದ ಬಾಣನು ಮಾಡಿದ ಕಿರಾತನಾಯಕನ ವರ್ಣನೆಯ ಬಹುಭಾಗವನ್ನು ನೂರಾಇಪ್ಪತ್ತು ಪದಗಳ ಒಂದು ವಚನದಲ್ಲಿ ಸಂಗ್ರ ಹಿಸಿ ನಡುವೆ ಉಳಿದ ಭಾಗಗಳನ್ನು ಮೊದಲು ಒಂದು ವೃತ್ತದಲ್ಲಿಯೂ ಕಡೆಯಲ್ಲಿ ಒಂದು ವೃತ್ತ ಒಂದು ಕಂದ ಒಂದು ವಚನ ಎರಡು ಕಂದಗಳಲ್ಲಿ ಅಳವಡಿಸಿದ್ದಾನೆ. "ಅಪತ್ಯಮಿವ ವಿಂಧ್ಯಾಚಲಸ್ಯ ಅಂಶಾವತಾರಮಿವ ಕೃತಾಂತಸ್ಯ ಸಹೋದರಮಿವ ಪಾಪಸ್ಯ ಸಾರಥಿಮಿವ ಕಲಿಕಾಲಸ್ಯ" ಎಂಬ ಭಾಗವನ್ನು

*ವಾಲ್ಟರ್‌ಪೇಟರ್ ಎಂಬ ವಿಮರ್ಶಕರು ಬರೆದ ಮೋನ ಲಿಸ ಎಂಬ ಚಿತ್ರದ ವರ್ಣನೆಯನ್ನು ಹೀಗೆಯೇ ಅಚ್ಚು ಮಾಡಿದ್ದಾರೆ. ವೀರಶೈವ ವಚನಗಳನ್ನು ಹೀಗೆ ಅಚ್ಚು ಮಾಡಿರುವುದು ಈಚಿನಮಾರ್ಗ — ಸಂ.

ಪಡೆದಂ ವಿಂಧ್ಯ ನಗೇಂದ್ರ
ಕ್ಕೊಡವುಟ್ಟಿದನಂತಕಂಗೆ ನಂಟಂ ಪಾಪ
ಕ್ಕೊಡನಾಡಿ ಕಲಿಗೆನಿಪ್ಪ
ಪೊಡವಿಯೊಳಿನ್ನಾತನಿಂ ಭಯಂಕರನಾವಂ ?

ಎಂದು ಅನುವಾದಿಸಿದ್ದಾನೆ. ಮುಂದೆ "ಆಸೀಚ್ಚ ಮೇ ಮನಸಿ –" ಇತ್ಯಾದಿಯಾದ ಸ್ವಗತವನ್ನು ಬಿಟ್ಟುಬಿಟ್ಟಿದ್ದಾನೆ.

ಮರಿಗಿಳಿಯು ತನ್ನ ಅಸಹಾಯತೆಯನ್ನು ವರ್ಣಿಸುವಾಗ "ಅಜಾತ ಪಕ್ಷತಯಾ ಚ ನಾತಿಸ್ಥಿರತರ ಚರಣ ಸಂಚಾರಸ್ಯ ಮುಹುರ್ಮುಹುರ್ಮುಖೇನ ಪತತಃ ಮುಹು ಸ್ತಿರ್ಯಜ್‌ನಿಪತಂತಮಾತ್ಮಾನಮೇಕಯಾ ಪಕ್ಷಪಾಲ್ಯಾ ಸಂಧಾರಯತಃ ಕ್ಷಿತಿತಲ ಸಂಸರ್ಪಣಶ್ರಮಾತುರಸ್ಯ ಅನಭ್ಯಾಸವಶಾದೇಕಮಪಿ ದತ್ವಾಪದಮನವರತಮುನ್ಮುಖಸ್ಯ" ಇತ್ಯಾದಿ ದೂರಾನ್ವಯವುಳ್ಳ ಸಮಾಸಪದಗಳಲ್ಲಿ ಮೂಡಿಬರಲಾರದ ತೀವ್ರತೆಯು ನಾಗವರ್ಮನ

ಗಱಿಪಾರಲ್ಕಿಲ್ಲ ಕಾಲುಂ ಬಲಿಯವು ನಡೆಯಲ್ ವೆಟ್ಟಿತೆಂಬಂತೆ ಮೂಗಂ
ಮುಱಿವನ್ನಂ ಮುಂದೆ ಮುಗ್ಗಿ ತ್ತೆಡಬಲದೊಳಗಾಂ ಬೀಳುತುಂ ಪಕ್ಕಗೂಡಾ
ಗೊಱಗುತ್ತುಂ ಪೋಗಿ ಮಧ್ಯಾಹ್ನದ ಬಿಸಿಲಳುರಲ್‌ಕಣ್ಮಲರ್‌ನಟ್ಟು ಸುಯ್ಗಳ್
ಪೊಱಮಟ್ಟೊಂದೊಂದನಟ್ಟುತ್ತಿರೆ ಪಿರಿದುಮಳಲ್ದು ಎನ್ನೊಳಿಂತೆಂದೆನಾಗಳ್

ಎಂಬ ವೃತ್ತದಲ್ಲಿ ಮೂಡಿಬಂದಿದೆ. ಆ ವೃತ್ತದ ಗತಿಯು ಸಹ ಅದರಲ್ಲಿ ವರ್ಣಿಸಿದ ಚಲನೆಗೆ ಹೊಂದಿಕೊಂಡಿದೆ: ಸಾಮಾನ್ಯವಾಗಿ ಗಂಭೀರ ನಡೆಯುಳ್ಳ ಈ ವೃತ್ತವನ್ನು ಇಂತಹ ಮುಗ್ಗರಿಸಿನಡೆಯುವ ಕೃತಿಗೆ ಹೊಂದಿಸಿದ್ದು ನಾಗವರ್ಮನ ಶಬ್ದರಚನಾ ಚಾತುರ್ಯವೇ ಸರಿ. ಇದರಲ್ಲಿ ಆರಿಸಿದ ಶಬ್ದಗಳು ಆ ವೃತ್ತದ ಯತಿಸ್ಥಾನಗಳನ್ನು ಮುರಿಯುವದಲ್ಲದೆ ನಡುನಡುವೆ ಒಂದೊಂದು ತಡೆಯಾಗುವಂತೆ ವಾಕ್ಯಗಳು ಪೂರ್ತಿಯಾಗಿವೆ. ಬಾಣನ ಐದು ನೂರು ಪದಗಳಿಗೂ ಹೆಚ್ಚಾಗಿರುವ ಆಶ್ರಮದ ವರ್ಣನೆಯಲ್ಲಿ ಕಣ್ಣು ಕಿವಿ ಮೂಗುಗಳಿಗೆ ಗೋಚರಿಸುವ ವಸ್ತುಗಳನ್ನೂ ಕೇವಲ ಕಲ್ಪನಾ ವಿಲಾಸವೆನಿಸುವ ಶಬ್ದಾಲಂಕಾರ ಅರ್ಥಾಲಂಕಾರಗಳ ಚಮತ್ಕೃತಿಗಳನ್ನೂ ಒಂದೇ ವಾಕ್ಯದಲ್ಲಿ ಪೋಣಿಸಿದ ರಚನೆಯಲ್ಲಿ ನಿಲುಕದ ಸೌಂದರ್ಯ ಔಚಿತ್ಯಗಳು ನಾಗವರ್ಮನ ವೈವಿಧ್ಯಮಯವಾದ ರಚನೆಯಲ್ಲಿ ಕಂಡು ಬರುತ್ತವೆ.

ಅಂತುಟಜಾಂಗಣದೊಳ್
ಪಲತರದ ಫಲಂಗಳಿಂ
ಶ್ರುತಿಮುಖರ ಮುಖಂಗಳಪ್ಪ ಶುಕಸಾರಿಕೆಗಳಿಂ
ಮುನಿಕುಮಾರಕರನೆಳಸಿ ಮೆಲ್ಲ ಮೆಲ್ಲನೆ ನೆಕ್ಕುವೆಳೆ ವುಲ್ಲೆಗಳಿಂ
ಜರದಂಧ ತಾಪಸರಕೆಯ್ಯಪಿಡಿದೆಡಪಲೀಯದೆ
ನಡೆಯಿಸುವ ಚಪಲ ಮರ್ಕಟಂಗಳಿಂ
ಮುನಿಜನಂಗಳ್ಗೆ ಕೋಡುಗಳಿಂ ಕಂದಮೂಲಫಲಂ
ಗಳನಗುಳ್ದು ಕೊಡುವ ವನಹರಿಣಗಳಿಂ
ಕರಪುಷ್ಕರಂಗಳಿಂ ತಂದು ಪೂಗಿಡಗಳ್ಗೆ ನೀರೆರೆವ
ಮರಿಯಾನೆಗಳಿಂ
ಮುನಿಕುಮಾರಗ್ರ್ಗೆ ಹಂದಿಗೆಡ್ಡೆಯುಂ ದಾಡೆಯಿಂದುಗುಳ್ದು
ನೀಡುವ ವನ ವರಾಹಂಗಳಿಂ
ತಮ್ಮೆಱಂಕೆಯಗಾಳಿಯಿಂ ಪೊಗೆಯುಂ ನಂದಿಸಲೀಯದೆ
ಹೋಮಾನಲ ಪ್ರಜ್ವಲನಮನೆಸಗುವ ಸೋಗೆನವಿಲ್ಗಳಿಂ
ಸೊಗಯಿಸುವುದು

ಎಂಬಲ್ಲಿ ಒಟ್ಟಾಗಿ ಬರುವ ಮನುಷ್ಯರ ಮತ್ತು ಪಶುಪಕ್ಷಿಗಳ ಸಹಜೀವನದ ಚಿತ್ರವು ಕಲ್ಪನಾವಿಲಾಸವಾಗಿರದೆ ನಿಜವಾಗಿದ್ದರೆಷ್ಟು ಚೆನ್ನ ಎನ್ನುವಷ್ಟು ಸ್ಪೃಹಣೀಯವಾಗಿದೆ. ಮೇಲಿನ ವಚನವನ್ನು ಬರೆದಿರುವ ರೀತಿಯಲ್ಲಿಯೂ ಬಾಣನ ಗದ್ಯವಲ್ಲಿರುವ ಮುಕ್ತಛಂದದ ಲಯವನ್ನು ಕಾಣಬಹುದು. ವೃತ್ತಗಳ ಬಳಕೆಯಲ್ಲಿಯೂ ಕಾಣುವ ಈ ಚಮತ್ಕಾರಕ್ಕೆ ಮೇಲೆಯೇ ಒಂದು ಉದಾಹರಣೆಯನ್ನು ಕೊಡಲಾಗಿದೆ. ಇನ್ನೊಂದು —

ವನರುಹಕಾಂತಕುಟ್ಮಳ ಕಮಂಡಲು ರಾಜಿನಿ ಹಂಸಮಾಲಿಕಾ
ತನುಸಿತವಲ್ಕ ಭಾಜಿನಿ ಮೃಣಾಳಲತಾಲಲಿತೋಪವೀತರಂ
ಜಿನಿ ವಳಿತದ್ವಿರೇಫನಿವಹಾಕ್ಷಸಮಾಜಿನಿ ಶೋಕದಿಂ ಸರೋ
ಜಿನಿ ದಿನಕೃದ್ವಿಯೋಗಿನಿ ತಪಸ್ವಿನಿಯಂತೆವೊಲಾದವೊಪ್ಪಿದಳ್

ಇಲ್ಲಿ ವೃತ್ತದ ಯತಿಯನ್ನು ಲೆಕ್ಕಿಸದ ಒಳಪ್ರಾಸವೊಂದರ ಗತಿಯನ್ನು ಗಮನಿಸಬೇಕು.

ಚಂದ್ರಾಪೀಡನು ಕಿನ್ನರ ಮಿಥುನವನ್ನು ಬೆನ್ನಟ್ಟಿದಾಗ "ಅತ್ರಗೃಹ್ಯತೇ ಅತ್ರ ಗೃಹ್ಯತೇ, ಇದಂ ಗೃಹೀತಂ ಇದಂ ಗೃಹೀತಮ್, ಇತ್ಯತಿರಭಸಾಕೃಷ್ಟಚೇತಾ ಮಹಾ

ಜವತಯಾತುರಂಗಮಸ್ಯ ಮುಹೂರ್ತ ಮಾತ್ರೇಣ ಏಕಪದಮಿವಾಸಹಾಯಸ್ತ ಸ್ಮಾತ್ ಪ್ರದೇಶಾತ್ ಪಂಚದಶ ಯೋಜನ ಮಾತ್ರ ಮಧ್ವಾನಂ ಜಗಾಮ" ಎಂಬ ಸರಲ ವೃತ್ತಾಂತವನ್ನು ವಿಸ್ತರಿಸಿ —

ಪಿಡಿದಪನೀಗಳಾ ಪಿಡಿಯಲೆಯ್ದಿದನಾ ಪಿಡಿದಪ್ಪನೀಗಳಾ
ಪಿಡಿದನೆ ಕಿನ್ನರ ದ್ವಯಮನೆಂಬಿನೆಗಂ ಬಳಿಸಂದು ತನ್ನ ಸಂ
ಗಡದವರುಂ ಪರಿಗ್ರಹಮುಮೆಯ್ತರಲಾಱದೆ ಪಿಂದೆನಿಲ್ವಿನಂ
ಕಡುಪಿನೊಳಂದು ಬಿಟ್ಟನತಿಶೀಘ್ರದೆ ವಾಜಿಯನಾನೃಪೋತ್ತಮಂ

ಮಡದಲಿನೂಂಕಿ ವಾಜಿ ಗರುಡಂಗಮದಿರ್ಮ್ಮಡಿ ವಾಯುವಿಂಗೆ ಮೂ
ರ್ಮ್ಮಡಿಯೆನಿಪೊಂದು ತನ್ನ ಜವದಿಂ ಪರಿಯಲ್ಕೆ ಮುಹೂರ್ತಮಾತ್ರದೊಳ್
ಗಡ ಪದಿನೈದು ಯೋಜನಮನೊರ್ವನೆ ಸಂದಿಸಿ ಪೋದನಂದು ಪೇ
ರಡವಿಯೊಳಾತುರಂಗವದನರ್ಕ್ಕಳ ಬೆಂಬಳಿಯುಂ ಮಹೀಭುಜಂ

ಇಲ್ಲಿ ಶಬ್ದಗಳು ಕೊಂಚ ವಿಸ್ತಾರವಾಗಿದ್ದರೂ ಅವುಗಳ ಲಯ ನಾಗಾಲೋಟದಲ್ಲಿ ಓಡುವ ಕುದುರೆಯ ಗತಿಗೆ ಹೊಂದಿಕೊಂಡಂತೆ ಮನೋಜ್ಞವಾಗಿದೆ.

ಇಂತಹ ಸುಂದರವಾದ ಪದ್ಯಗಳಲ್ಲಿ ಆಯ್ದು ಕೆಲವನ್ನೇ ಉದಾಹರಿಸುವದು ದುಸ್ಸಾಹಸವೇ ಸರಿ. ಆದರೂ ಕೆಲವನ್ನು ಎತ್ತಿ ತೋರಿಸುವ ಸಾಹಸ ಮಾಡಿದ್ದೇನೆ

ಮಹಾಶ್ವೇತೆಯ ಯೌವನೋದಯದಲ್ಲಿ ಬಂದ ವಸಂತಕಾಲ

ಎಸೆವ ವಸಂತಮಾಸದೆ ವಸಂತಮನಾಂತ ಕುಜಾತ ಪಲ್ಲವ
ಪ್ರಸರದಿನಾವಸಂತಸಮಯಂ ಕುಸುಮಾವಳಿಯಿಂದೆ ಪಲ್ಲವಂ
ಮಿಸುಪಳಿಮಾಲೆಯಿಂ ಕುಸುಮಮಂಜರಿ ರಂಜಿಸುವಂತಿರಲ್ ವಿಜೃಂ
ಭಿಸಿದುದು ಯೌವನೋದಯವಿಲಾಸಮನುಕ್ರಮದಿಂ ಮದಂಗದೊಳ್

*

ಸಂಗ್ರಹವಾಗಿ ಅಚ್ಚುಕಟ್ಟಾಗಿ ಗದ್ಯದಲ್ಲಿಯೂ ಬಾಣನನ್ನು ಮಿರಿಸಿದ ಒಂದು ವಚನ —

ಅನಂತರಂ
ಉಸಿರೊಡನೆ ಮೆಯ್ಯಿಕ್ಕುವುದಂ ಮಱೆದು
ಪರಿದು, ಪತ್ತಲಪ್ಪಳಿಸಿ ಕಳವಳಿಸಿ ಕೊಂಕಿ
ಬಳಸುವೆಳಸುವಲರ್ಗಂಗಳಿಂ
ತದ್ರೂಪಲಾವಣ್ಯರಸಮನಳ್ಕರಿಂ ಬರೆಪೀರ್ವ್ವಂತೆ

ನಿನಗೊಳಗಾದೆನೆಂಬಂತೆ
ಮನಮನಂಗೈಯಲಿಕ್ಕಿ ತೋರ್ಪೆನೆಂಬಂತೆ
ತನ್ಮಯಮಾಗಲೊಡರಿಪೆನೆಂಬಂತೆ
ಮದನನಲೆದಪಂ ಕಾಯೆನ್ನನೆಂಬಂತೆ
ಶರಣ್ಬುಗುವೆನೆಂಬಂತೆ
ಮನದೊಳೆಡೆಗುಡೆಂದಳುಪಂ ತೋಱುವಂತೆ
ಕುಲಹೀನ ಕನ್ಯಾಜನೋಚಿತಮತಿಲಜ್ಜಾಕರಮನೋರಥ
ವಿದೆನಗೆ ತಕ್ಕುದಲ್ಲದುದಂ ನೆಗಳ್ದೆನೆಂದಱಿವೆನಾಗಿಯುಂ
ಅತ್ಯಾಸಕ್ತಿಯಿಂ ಮಱವಟ್ಟಂತೆಯುಂ
ಮಿಡುಕದೆ ನೋಡುತಿರ್ದೆನನ್ನೆಗಂ

ಮನೆಗೆ ಬಂದಮೇಲೆ ಮಹಾಶ್ವೇತೆ ಅಂತಃಪುರದ ಮಾಳಿಗೆಯನೇರಿ ಏಕಾಕಿಯಾಗಿ ಬೇರೆ ಎಲ್ಲವನ್ನೂ ಮರೆತು ಗವಾಕ್ಷೆಯಲ್ಲಿ ಮುಖವನ್ನಿಟ್ಟು ಅಲುಗಾಡದಂತಿದ್ದೆನು ಎಂಬ ಕ್ರಿಯೆಯು ಹಿಂದೆ ಇರುವ ಅನೇಕ ಮನೋವ್ಯಾಪಾರಗಳನ್ನು ಒಂದೇ ವಾಕ್ಯ ದಲ್ಲಿ "ಅಹಮ್" ಎಂಬ ಕರ್ತೃವಿಗೆ ವಿಶೇಷಣಗಳಾಗುವಂತೆ ವಿವರಿಸುವಲ್ಲಿ ಅವು ಗಳಲ್ಲಿ ಒಂದೊಂದರ ಸ್ವಾರಸ್ಯವನ್ನೇ ಆಸ್ವಾದಿಸಲಿಕ್ಕೆ ಆಸ್ಪದ ಸಿಗುವದಿಲ್ಲ. ನಾಗ ವರ್ಮನ ಚಂಪೂವಿನಲ್ಲಿ ಇದಕ್ಕೆ ತುಂಬಾ ಚೆನ್ನಾಗಿ ಆಸ್ಪದವಾಗಿದೆ. ಮೊದಲು ಅವ ನನ್ನು ಬಿಟ್ಟು ಬಂದ ದಿಕ್ಕನ್ನು ನೋಡಿದೆ ಎನ್ನುತ್ತಾಳೆ:

ತಾಮೇವದಿಶಂ ತತ್ಸನಾಥತಯಾ
ಪ್ರಸಾಧಿತಾಮಿವ ಕುಸುಮಿತಾಮಿವ
ಮಹಾರತ್ನನಿಧಾನಾಧಿಷ್ಠಿತಾಮಿವ ಅಮೃತರಸ ಸಾಗರ ಪೂರಪ್ಲಾವಿತಾಮಿವ
ಪೂರ್ಣಚಂದ್ರೋದಯಾಲಂಕೃತಾಮಿವ
ದರ್ಶನ ಸುಭಗಾಮೀಕ್ಷಮಾಣಾ

ಎಂಬಲ್ಲಿ ಆ ದರ್ಶನಸುಭಗತೆ ಅಲ್ಲಿ ನಿಜವಾಗಿ ಇತ್ತು ಎನ್ನುವದಕ್ಕಿಂತ ಅದು ಅವಳ ಮನೋವ್ಯಾಪಾರ ಎಂದು ಹೇಳುವದು ಹೆಚ್ಚು ಉಚಿತವೂ ಮನೋಜ್ಞವೂ ಆಗಿದೆ —

ಅದುಪೀಯೂಷ ಪಯೋಧಿಪೂರಲಹರೀ ಸಂತಾನದಿಂ ಚೆಲ್ವುವೆ
ತ್ತುದೊ ಮಾಣಿಕ್ಯ ನಿಧಾನದಿಂ ಸಮೆದು ತೋಱುತ್ತಿರ್ದುದೋ ಚಂದ್ರಬಿಂ
ಬದಿನೊಪ್ಪಂಬಡೆದತ್ತೊ ಮೇಣ್ ಪಸದನಂಗೊಂಡಿರ್ದುದೊ ಪೇೞಿನಲ್
ಪದೆದಾಂ ನೋಡಿದೆನಾತನಿರ್ದದೆಸೆಯಂ ನಟ್ಟಾಲಿ ಬೀೞ್ವನ್ನೆಗಂ

ಆಮೇಲೆ ಆ ದಿಕ್ಕಿನಿಂದ ಬರುವಗಾಳಿ ಗಂಧ ಶಬ್ದಗಳ ಪರಿಣಾಮವನ್ನು ಹೇಳುತ್ತಾಳೆ —

"ತಸ್ಮಾದ್ದಿಗಂತರಾದಾಗಚ್ಛಂತಮನಿಲಮಪಿ,
ಶಕುನಿಧ್ವನಿಮಪಿ ತದ್ವಾರ್ತ್ತಾಂ ಪ್ರಷ್ಟುಮೀಹಮಾನಾ"

ಆದೆಸೆಯಿಂ ಬರ್ಪೆಲರುಮ
ನಾದೆಸೆಯಿಂದೆಸೆವ ಕುಸುಮ ಪರಿಮಳಮುಮ ನಂ
ತಾದೆಸೆಯಿನೆಸೆವ ವಿಹಗ ನಿ
ನಾದಮುಮಂ ವಾರ್ತ್ತೆಗೇಳಲಾನೊಡರಿಸಿದೆಂ

ಆಮೇಲೆ ಅವನ ವೇಷರೂಪಗಳೆಲ್ಲಾ ಚೆನ್ನು ಎಂದು ಚಿಂತಿಸುತ್ತಿದ್ದಲ್ಲಿ ಬಾಣನು "ಸ್ಮರಜನಿತ ಪಕ್ಷಪಾತಾಂ ಚ" ಎಂದು ಹೇಳಿದ್ದು ಅನಾವಶ್ಯಕವೂ ಒಂದು ರೀತಿಯಲ್ಲಿ ಅಯುಕ್ತವೂ ಆಗಿದೆ. ಏಕೆಂದರೆ ಅದನ್ನು ಕವಿಹೇಳಬಹುದೇ ಹೊರತು ಮಹಾಶ್ವೇತೆ ಹೇಳಿರಲಾರಳು. ನಾಗವರ್ಮನಲ್ಲಿ ಹಾಗಿಲ್ಲ —

ಮತ್ತಂ
ಆತಂ ಕೈಕೊಂಡುದಱಿಂ ಋಷಿವೇಷಕ್ಕಗ್ರಾಮ್ಯತೆಯುಂ
ಆತನಂ ಪೊರ್ದಿದ ಜೀವನಕ್ಕೆ ಸೌಂದರ್ಯಮುಂ
ಆತನ ಕಿವಿಗವತಂಸಮಾದ ಪಾರಿಜಾತಕುಸುಮ
ಮಂಜರಿಗೆ ಮನೋಹರತೆಯುಂ
ಆತನಿರವಿಂದಮೆ ಸುರಲೋಕಕ್ಕೆ ರಮಣೀಯತೆಯುಂ
ಆತನ ರೂಪಸಂಪತ್ತಿಯಿಂ ಕುಸುಮಾಯುಧಂಗೆ ದುರ್ಜಯತ್ವಮುಂ

ಆದುದು ಎಂದು ಬಗೆಯುತ್ತ

ಆ ಸೌಭಾಗ್ಯನಿಧಿಯ ವಿಯೋಗದಿಂ ಜೀವ
ವಿಯೋಗಮಾಗದಿರ್ಕೆಂದು ತಗುಳ್ಚಿದ
ರಕ್ಷಾವಳಿಯಂತೆ ಕೊರಲೊಳಿಕ್ಕಿರ್ದಕ್ಷಾವಳಿಯುಂ
ಆತನ ರಹಸ್ಯಾಲಾಪದಂತೆ ಕಿವಿಗೆವಂದು ರಾಜಿಸುವ
ಪಾರಿಜಾತ ಕುಸುಮ ಮಂಜರಿಯುಂ
ಆತನ ಕರತಲಸ್ಪರ್ಶಸುಖದಿಂ ಕಪೋಲತಲ ಕದಂಬ ಮುಕುಳ
ಕರ್ಣಪೂರದಂತುಣ್ಮಿರ್ದ್ದ ಪುಳಕಮುಂ ಬೆರಸು
ಗದ್ಗದ ಚಿತ್ತೆಯೆನ್ ಏಕಾಕಿಯಾಗಿಪ್ಪುದುಂ

ಇದರ ಮುಂದೆ ಸಹ ಬಾಣನು "ತಾಂಬೂಲಕರಂಕವಾಹಿನೀ ಚಿರಾದಿವಾಗತ್ಯ"ಅಂದರೆ ತಡಮಾಡಿ ಬಂದಳೆನ್ನುವಲ್ಲಿ ನಾಗವರ್ಮನು "ಅನ್ನೆಗವೆನ್ನ ತಾಂಬೂಲ ಕರಂಕ ವಾಹಿನಿ ಮಕರಿಕೆ ಯೆಂಬಳ್ ಪೆಱಗೆ ಕಿಱಿದು ಬೇಗಂ ಮಿಾಯಲೆಂದು ನಿಂದನಂತರಂ ಮತ್ತಮಿಾಪಕ್ಕೆ ಬಂದು ಮೆಲ್ಲನಿಂತೆಂದಳ್"ಎಂದು ಮೇಲಿನ ವಚನವನ್ನೇ ಮುಂದು ವರಿಸಿದ್ದಾನೆ.

ಪುಂಡರೀಕನ ಶರೀರವನ್ನು ಚಂದ್ರನು ಎತ್ತಿಕೊಂಡು ಹೋದಮೇಲೆ ತನ್ನ ದಿನಚರ್ಯೆಯನ್ನು ವರ್ಣಿಸುತ್ತ ಮಹಾಶ್ವೇತೆಯು

ತಸ್ಯ ಜನಸ್ಯ ಅಶ್ರುಮೋಕ್ಷ ಮಾತ್ರೇಣ ಕೃತಜ್ಞತಾಂ ದರ್ಶಯಂತೀ
ತದನುರಾಗಕೃಶಮಿದ ಮಪುಣ್ಯಬಹುಲ ಮಸ್ತಮಿತಲಜ್ಜ ಮಮಂಗಲ
ಭೂತ ಮನೇಕ ಕ್ಲೇಶಾಯಾಸ ಸಹಸ್ರ ನಿವಾಸಂ ದಗ್ಧಶರೀರಕಂ
ಬಹುವಿಧೈರ್ನಿಯಮಶತೈಃಶೋಷಯಂತೀ ವನ್ಯೈಶ್ಚ ಫಲಮೂಲ
ವಾರಿಭಿರ್ವರ್ತಮಾನಾ

ಜಪವ್ಯಾಜೇನ ತದ್ಗುಣಗಣಾನಿವ ಗಣಯಂತೀ
ತ್ರಿಸಂಧ್ಯಮತ್ರಸರಸಿ ಸ್ನಾನಮುಪಸ್ಪೃಶಂತೀ
ಪ್ರತಿದಿನ ಮರ್ಚಯಂತೀ ದೇವಂ ತ್ರ್ಯಂಬಕಂ
ಅಸ್ಯಾಮೇವ ಗುಹಾಯಾಂ ತರಲಿಕಯಾ ಸಹ ದೀರ್ಘಂ ಶೋಕ
ಮಿಮಮನುಭವಂತೀ – ಸುಚಿರಂ ನ್ಯವಸಂ

ಇಷ್ಟುದ್ದವಾಗಿ ಹೇಳಿದ್ದಕ್ಕಿಂತ —

ಜಪದಿಂ ತಪದಿಂದೊಡಲಂ
ಕ್ಷಪಿಯಿಸಿದಪೆನೆಂದೊಡದು ಕೃತಜ್ಞತೆ ಗಡ ! ಚಿಃ
ಜಪವೆಣಿಸುವ ನೆವದಿಂದಂ
ನೃಪ ತದ್ಗುಣಗಣಮನೀಗಳೆಣಿಸುತ್ತಿರ್ದ್ದೆಂ

ಎಂಬದು ಸಂದರ್ಭೋಚಿತವೂ ಹೆಚ್ಚು ಪರಿಣಾಮಕಾರಿಯೂ ಆಗಿದೆ. ಅದ ರಂತೆಯೇ ತನ್ನಂತಹ ನಿರ್ಭಾಗ್ಯೆಯನ್ನೇನು ನೋಡಬಂದೆ ಎಂದು ಕೇಳುವಲ್ಲಿ ಸಹ–

ಅಯಶಕ್ಕೀಡಾದ ನಿರ್ಲಕ್ಷಣೆಯುನ್ ಅಶುಭೆಯುಂ ನಿಷ್ಫಲೋತ್ಪನ್ನೆಯುಂ ನಿ ರ್ದಯೆಯುಂ ನಿಃಸ್ನೇಹೆಯುಂ ನಿಸ್ತ್ರಪೆಯುನ್ ಅಸುಖೆಯುಂ ನಿಂದ್ಯೆಯುಂ ನಿಷ್ಫಲಪ್ರಾ ಣೆಯು ನಾದಂಕ್ರೂರೆಯುಂ ಬ್ರಾಹ್ಮಣಹನನ ಮಹಾಪಾಪಮುಂ ಗೆಯ್ದ ನಿಸ್ತ್ರಿಂ ಶೆಯುನ್ಎನ್ನಂ ಪಾಪೆಯುಂ ನೀಂ ಬೆಸಗೊಳೆಫಲಮೇಂ ಪೇೞ್ಮಹೀಪಾಲ ಚಂದ್ರಾ

ಎಂಬುದು* ಬಾಣನಿಗಿಂತ ಚೆನ್ನಾಗಿದೆ. ಮಹಾಶ್ವೇತೆಯ ವೃತ್ತಾಂತವು ಮುಗಿಯು ವಷ್ಟರಲ್ಲಿ ಸಂಜೆಯಾಯಿತೆಂಬಲ್ಲಿ ಬಾಣನ ವರ್ಣನೆಯನ್ನು ಪೂರಾ ಕೈಬಿಟ್ಟು ಚಿಕ್ಕ ದಾಗಿ —

ಜಳಜಭವಾಂಡಂ ಜಂಬೂ
ಫಳರಸದಿಂ ತೀವಿತೆಂಬಿನಿಂ ಜಗಮುಂ ಕೋ
ಕಿಳನಯನರುಚಿ ಕರಂ ಕ
ಣ್ಗೊಳಿಸಿರೆ ಪರ್ವಿದುದು ಸಾಂದ್ರಸಂಧ್ಯಾರಾಗಂ

ಎಂಬ ಪದ್ಯದಲ್ಲಿ "ಕೋಕಿಳನಯನರುಚಿ" ಯೊಂದು ಬಿಟ್ಟರೆ ಬಾಣಸದೇನೂ ಇಲ್ಲ. "ಜಂಬೂಫಳರಸದಿಂತೀವಿತೆಂಬ" ಉತ್ಪ್ರೇಕ್ಷೆ ಸುಂದರವಾಗಿದೆ.

ಉತ್ತರ ಭಾಗದ ಅನುವಾದದಲ್ಲಿಯಂತೂ ಸಂಕ್ಷೇಪಗಳೂ ಬದಲಾವಣೆಗಳೂ ಇನ್ನೂ ಹೆಚ್ಚಾಗಿವೆ. ಈ ಭಾಗಕ್ಕೆ ಬಾಣನ ಕೃತಿಯ ಶಕ್ತಿ ಇಲ್ಲವೆಂಬ ಕಾರಣ ಹೀಗಾ ಗಿರಬಹುದು. ಪತ್ರಲೇಖೆಯು ಕಾದಂಬರಿಯ ಸಂದೇಶದೊಡನೆ ಬಂದಾಗ "ಅಥ ಕಾದಂಬರೀ ಶರೀರಾದಿವಾಲಾಪ ಪದ್ಯೈರೇವ ಸಹಾಗತ್ಯ ಯುಗಪದ್ಗೃಹೀತೋ ಹೃದಯೇ ಮನ್ಯುನಾ ಕಂಠೇ ಜೀವಿತೇನಾಧರ ಪಲ್ಲವೇ ವೇಪಥುನಾ ಮುಖೇ ಶ್ವಸಿ ತೇನ ನಾಸಾಗ್ರೇ ಸ್ಫುರಿತೇನ ಚಕ್ಷುಷಿ ಚ ಬಾಷ್ಪೇಣ ಚ ತುಲ್ಯವೃತ್ತಿಭಿರ್ಭೂತ್ವಾ ಕಾದಂಬರ್ಯಾಃ ಕ್ಷರದ್ಬಾಷ್ಪವಿಕ್ಷೇಪ ಪರ್ಯಾಕುಲಾಕ್ಷರಮುಚ್ಚೈಃ ಪ್ರತ್ಯುವಾಚ! ಇತ್ಯಾದಿಯಾಗಿ ಸುಮಾರು ಮುನ್ನೂರು ಪದಗಳಲ್ಲಿ ಕೇವಲ "ಚಿರಾನುಭೂತಾತ್ಮ ಕಂಠಸಂಸರ್ಗಸುಭಗಂ ಹಾರಮಿಮಂ ಅಕೃತಪುಣ್ಯಸ್ಯ ಮೇ ತತ್‌ಕ್ಷಣ ಮೇವ ಕಂಠೇ ಕಾರಯಂತ್ಯಾ ಕಿಮಿವ ನಾವೇದಿತಮ್" ಇದರ ಸೂಚನೆಯನ್ನು ಮಾತ್ರ ಎತ್ತಿ ಕೊಂಡು —

ಪ್ರಮುದದೊಳೆನ್ನ ಕಂಧರದೊಳಂದಿರುಳಿಕ್ಕಿದ ತೋರಹಾರಮುಂ
ಹಿಮಗೃಹಕ ಪ್ರವೃತ್ತಕಮುಮಂತಿರೆ ನಿನ್ನಯಪೇಳ್ದ ಮಾತು ಮಾ
ರಮಣೆಯದೊಂದು ಭಾವಗತಮಂ ನೆಱೆಸೂಚಿಸೆ ಮತ್ತೆ ಸಂದೆಗಂ
ಸಮನಿಸಿತೆಂದೊಡಿನ್ನೆನಗದೊಂದು ವಿಮೋಹಿಪ ಶಾಪಮಾಗದೇ

ಎಂದು ಸಂಗ್ರಹಿಸಿದ್ದಾನೆ.

ಪತ್ರಲೇಖೆಯೊಡನೆ ಮಾತನಾಡುತ್ತಿರುವಾಗ ತಾಯಿ ವಿಲಾಸವತಿಯ ಕಡೆ ಯಿಂದ ಕರ ಬಂದಿತೆಂಬ ವೃತ್ತಾಂತವನ್ನು ಬಿಟ್ಟು ಬಿಟ್ಟು "ಪತ್ರಲೇಖೆಯೊಡನೆ

*ಅತಿಯಾಗಿ ತನ್ನನ್ನೇ ತೆಗಳಿಕೊಂಡಂತಿದ್ದರೂ — ಸಂ.

ನುಡಿಯುತ್ತಮಿರ್ದಾ ಪಗಲಂ ಕಳೆದು ಸಂಜೆಯುಪ್ಪುದುಂ" ಎಂದು ಮುಂದುವರಿಸಿ "ಶಯನತಲಕ್ಕೆ ವಂದುನ್ಮೀಲಿತ ನಯನನಾಗಿಯು ಮಪ್ರಾಪ್ತ ನಿದ್ರಾವಿನೋದನಾಗಿ" ಇರುವಾಗ "ವಿಶ್ರಾಂತೇನೇವ ಪಾದಪಲ್ಲವಚ್ಛಾಯಾಯಾಂ ಜಂಘಾನು ರೋಧಿ ರೋಹಿಣಾ ಲಗ್ನೇನೇವ ಸುಸಂಹತಯೋ ಊರ್ವೋಃ ; ಲಿಖಿತೇನೇವ ವಿಸ್ತಾರಿಣಿ ನಿತಂಬ ಫಲಕೇ, ಮಗ್ನೇನೇವ ನಾಭಿಮುದ್ರಾಯಾಂ, ಉಲ್ಲಸಿತೇನೇವ ರೋಮ ರಾಜ್ಯಾಂ, ಆರೂಢೇನೇವ ತ್ರಿವಲಿಸೋಪಾನಹಾರಿಣಿ ಮಧ್ಯಭಾಗೇ" ಇತ್ಯಾದಿ ಉಚಿತಾನುಚಿತಪ್ರವಾದ ಅಂಗ ಪ್ರತ್ಯಂಗಗಳ ಸ್ಮರಣೆಯನ್ನು ಕೈಬಿಟ್ಟು ಕೇವಲ "ಚಿತ್ರ ರಥ ನಂದನೆಯುಂ ನೆನೆಯುತ್ತ ಮಿರೆಯಿರೆ" ಎಂದಿರುವುದು ಹೆಚ್ಚು ಉಚಿತವಾಗಿದೆ.

ಚಂದ್ರಾಪೀಡನು ವೈಶಂಪಾಯನನ್ನು ಹುಡುಕಿಕೊಂಡು ಹೋಗುವುದೆಂದು ಗೊತ್ತಾದಮೇಲೆ "ಸುಹೃದ್ದರ್ಶನೋತ್ಸುಕ್ಯೇನ ಶಯನಗತೋಪಿ ಜಾಗ್ರದೇವ" ರಾತ್ರಿಯನ್ನು ಕಳೆಯುತ್ತಿರುವಾಗ ಬಂದ ಬೆಳದಿಂಗಳ ವರ್ಣನೆ ಮೂಲದಲ್ಲಿ ಸುಮಾರು ನಾನೂರು ಪದಗಳಷ್ಟಿದೆ. ಅದನ್ನು ಸಂಗ್ರಹವಾಗಿ ಅನುವಾದಿಸುವಲ್ಲಿ ಸುಂದರವಾದ ಎರಡು ವೃತ್ತಗಳು —

ಮೇಗೆನಿಸಿರ್ದ್ದುದೊಂದು ಸಕಲಗ್ರಹತೇಜಮನೊಯ್ಯನಿಂಗಿಸು
ತ್ತಾಗಸಮಂ ನೆಲಕ್ಕಿಳಿಪುತಿರ್ದಪನೀನೆಲನಂ ಹಿಮಾಂಶು ಮೇ
ಣಾಗಸಕೆತ್ತುತಿರ್ದ್ದಪನೆನಲ್ಕನಿತುಂ ಬಿಳಿದಾಗೆ ರೋದಸೀ
ಭಾಗಮನಾವಗಂ ತಗುಳೆ ಪರ್ಚ್ಚಿಸಿದಂ ನಿಜರಶ್ಮಿಜಾಲಮಂ

ಗಿರಿಶಿಖರಂಗ ಳೊಳ್ಪರೆದು ಸೌಧಗೃಹಂಗಳೊಳೊಂದಿ ರಥ್ಯೆಯೊ
ಳ್ಪರಿದು ಸರಸ್ತರಂಗಿಕೆಗಳೊಳೊರೆದಂಚೆಗಳೋಳಿವೆಳ್ಪಿನೊ
ಳ್ಬೆರಸಿ ಲತಾಂಗಿಯರ್ಕ್ಳಳ ಕದಂಪುಗಳೊಳ್ಪುದಿದಿಂದು ಕಾಂತದಿಂ
ಸುರಿವ ಜಲಂಗಳಿಂ ತೊಳೆದು ಪರ್ವ್ವಿದುವಿಂದು ಮರೀಚಿಮಾಲೆಗಳ್

ಚಂದ್ರಾಪೀಡನು ವೈಶಂಪಾಯನನ್ನೂ ಕಾದಂಬರಿಯನ್ನು ಕಾಣುವೆನೆಂದು ಮರಳಿ ಅಚ್ಛೋದ ಸರೋವರದ ಕಡೆಗೆ ಹೊರಟಾಗ ಪ್ರಾರಂಭವಾಗುವ ಮಳೆ ಗಾಲದ ವರ್ಣನೆ —

ಬಯಲೊಳ್ಪರ್ವುಗೆದೋರಿ ನುಣ್ಬಸಲೆಯೊಳ್ಮೆಯ್ದೋರಿ ನೀರ್ದಾಣದೊ
ಳ್ನಯಮಂ ಬೀರಿ ಮಹೀಧ್ರದೊಳ್ಮಸಕಮಂಕೈಗೊಂಡು ಶಾಖಾಸಮು
ಚ್ಚಯದೊಳ್ಸಂದಣೆಗೊಂಡು ತಾಳವನದೊಳ್ ಕಾರ್ಕಶ್ಯಮಂಮಾಡಿ ಕೊಂ
ಡುಯಥಾಸಾರನಿಪಾತಮುಣ್ಮಿದುದು ಮೇಘೋನ್ಮುಕ್ತಧಾರಾರವಂ

ಒಂದೊಂದು ಪದ್ಯದಲ್ಲಿಯೂ ಭಾವಕ್ಕೂ ವೃತ್ತದಲಯಕ್ಕೂ ಇರುವ ಹೊಂದಾಣಿಕೆಯನ್ನು ಕುರಿತು ಎಷ್ಟು ಉದಾಹರಣೆಗಳನ್ನು ಕೊಟ್ಟರೂ ಸಾಲದು.

ಮಹಾಶ್ವೇತೆಯ "ಯೌವನೋದಯ ವಿಲಾಸ"ದೊಡನೆ ಬಂದ ವಸಂತದ ವರ್ಣನೆಯಲ್ಲಿ "ಎಸೆವ ವಸಂತಮಾಸದೆ" ಎಂಬ ಪದ್ಯವನ್ನು ಮೇಲೆ ಉದಾಹರಿಸಿದೆನಷ್ಟೆ.ಅದರ ದ್ರುತಗತಿಯನ್ನು ಕೊನೆಯಲ್ಲಿ ಬರುವ ಇನ್ನೊಂದು ವಸಂತ ವರ್ಣನೆಯೊಡನೆ ಹೋಲಿಸಬಹುದು. ಈ ವಸಂತದಲ್ಲಿ ಮಹಾಶ್ವೇತೆಯ ತಪಶ್ಚರ್ಯೆ ಮುಗಿದಿದೆ. ಪುಂಡರೀಕನ ಶರೀರದಲ್ಲಿ ಜೀವಸಂಚಾರವಾಗುವದಿದೆ. ಈ ವಸಂತದಲ್ಲಿ ಯೌವನೋದಯದ ಉಕ್ಕು ಇಲ್ಲ. ಸುಖದುಃಖಗಳನ್ನು ಕಂಡುಂಡ ತುಂಬು ಮನಸ್ಸಿನ ತೃಪ್ತಿಯಿದೆ. ಅದಕ್ಕೆ ಅನುಕೂಲವಾದ ಗತಿ ಈ ವೃತ್ತದಲ್ಲಿದೆ —

ತಳಿರಿಂ ತಳ್ತಿತ್ತಶೋಕದ್ರುಮ ವೆಳಗೊನರಿಂದೊಂದಿತಿಮ್ಮಾವು ಬಲ್ಪೊಂ
ಬಳೆಯಿಂ ಬಳ್ಕಿತ್ತು ಕೊಂಗಚ್ಚಲರತುರುಗಲಂಪೇರಿಕೊಂಡಿದ್ದುದೆತ್ತಂ
ತಿಳಕಂ ಪೂಗೊಂಚಲಿಂದೊಂದಿದುದು ಕುರವಕಂ ಕಂಜಕಿಂಜಲ್ಕದಿಂ ಕ
ಣ್ಗೊಳಿಸಿತ್ತಬ್ಜಾಕರಂ ತಂಪಲೆವ ಮಲಯಮಂದಾನಿಲಾಂದೋಳದಿಂದಂ

ತೃಪ್ತಿಯ ತೂಕದಿಂದ ನಡೆಯುವ ಈ ವೃತ್ತಕ್ಕೆ ಕೆಳಗೆ ಉದಾಹರಿಸಿದ ಇನ್ನೊಂದನ್ನು ಹೋಲಿಸಬಹುದು. ಕಾದಂಬರಿ ಚಂದ್ರಾಪೀಡನ ಶರೀರವನ್ನು ಅಲಂಕರಿಸಿದ್ದಾಳೆ. ಅದಕ್ಕೆ ಜೀವ ಮರಳುವ ನಿರೀಕ್ಷೆಯಲ್ಲಿದ್ದಾಳೆ. ಎಂದೋ ಯಾವಾಗಲೋ ಎಂಬ ಕಳವಳದಿಂದಿದ್ದಾಳೆ. ಇಲ್ಲಿ —

ಅಳಿಪಿನೊದವಿಂ ನೀಡುಂ ಪೀರ್ವಂದದಿಂ ನಡೆನೋಡಿ ಸಂ
ಗಳಿಸೆ ನಿಡುಸುಯ್ ರೋಮಾಂಚಂ ಪೊಣ್ಮೆ ಘರ್ಮಜಲಂ ಪೊದ
ಳ್ದಿಳಿಯೆ ನಡುಗುತ್ತಕ್ಕಂ ಕಂಡಪ್ಪಳೆಂದು ಮೃಗಾಕ್ಷಿ ಪೆ
ಳ್ಪಳಿಸಿ ದೆಸೆಯಂ ನೋಡುತ್ತುಂ ಪೊರ್ದಿದಳ್ ನೃಪಚಂದ್ರನಂ

ಹೀಗೆ ಅಂಜುತ್ತ ಅಳುಕುತ್ತ ಅಪ್ಪಿದ ಶರೀರದಲ್ಲಿ "ಆಗಳ್ ತದಾಲಿಂಗನಾಮೃತ ವರ್ಷದಿಂ ಜೀವಂ ಬಂದು ರಾಜೇಂದ್ರಚಂದ್ರಂ ಪಸೆಯೊಳ್ ಮುನ್ ನಿದ್ರೆಗೆಯ್ದೆಟ್ಟುಜುವರಸನವೊಲ್" ಎಚ್ಚತ್ತನು.

ವಿಮರ್ಶೆಯಲ್ಲಿ ಸಾಮಾನ್ಯವಾಗಿ ಗುಣ ವರ್ಣನೆಯೊಡನೆ ಕೆಲವಾದರೂ ಕುಂದುಗಳನ್ನು ಎತ್ತಿ ತೋರಿಸುವದು ವಾಡಿಕೆ. ಆದರೆ ಇಲ್ಲಿ ಅದನ್ನು ಮಾಡುವದಕ್ಕೆ ಮನಸ್ಸಾಗುವದಿಲ್ಲ. ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಸತ್ವ ಬೇರೆ ಬೇರೆಯಾದುದರಿಂದಲೂ ಬಾಣನ ಸಮಕಾಲೀನ ಸಮಾಜದ ವರ್ಣನೆ ನಾಗವರ್ಮನಿಗೆ

ತುಂಬಾ ಹಳೆಯದಾದುದರಿಂದಲೂ ಎಷ್ಟೋಸೂಕ್ಷ್ಮ ಭಾವಗಳನ್ನು ಅನುವಾದದಲ್ಲಿ ಇಳಿಸಲಿಕ್ಕೆ ಆಗಿಲ್ಲ. ಅವನ್ನೆತ್ತಿ ಹೇಳುವದು ಅಭ್ಯಾಸದ ದೃಷ್ಟಿಯಿಂದ ಆವಶ್ಯವೆನಿಸಿದರೂ ರಸಗ್ರಹಣಕ್ಕೆ ಯಾವ ರೀತಿಯಿಂದಲೂ ಪೋಷಕವಲ್ಲ. ಚಂದ್ರನ ಕಲೆಗಳಂತೆ ಈ ನೃಪರೂಪ ಚಂದ್ರನ ಕತೆಯಲ್ಲಿಯೂ ಕಲೆಗಳಿದ್ದರೆ ಅದರಿಂದ ಒಟ್ಟು ಕೃತಿಗೆ ಕುಂದಿಲ್ಲ.

ಕ್ಷಿತಿಯೊಳ್ ಸೌವರ್ಣಕಾಂತಿ ಪ್ರಸರಮುಸದಳಂ ಪರ್ವೆ ಸಂದಿರ್ದುದಂತಾ
ಕೃತಿ ಮುನ್ನಂ ಬಾಣವಾಣೀಪ್ರಿಯನ ವಚನದಿಂ ಮತ್ತೆ ಕರ್ಣಾಟಭಾಷಾ
ಚತುರತ್ವಂ ಬೊರ್ದಿ ಕಾದಂಬರಿ ಪಸರಿಸಿ ರಾಜೇಂದ್ರ ಚಂದ್ರಾಂಕನೊಳ್ ಸಂ
ಗತಿವೆತ್ತಾದಂ ತ್ರಿಲೋಕೀಸಹಚರಿಯೆನೆ ತಾಂ ಸಂದುದಾಚಂದ್ರತಾರಂ

ಎಂಬ ಹೆಗ್ಗಳಿಕೆ ಸಂಪೂರ್ಣವಾಗಿ ಸಾರ್ಥಕವಾಗಿದೆ.

ಅನುಬಂಧ

ಗಿಳಿಯ ವೃತ್ತಾಂತ

ತಳಿರ್ಗಳಿಱುಂಬಿನಲ್ಲಿ, ತುದಿಗೋಡ ಮೊದಲ್ಗಳ ತಾಣದಲ್ಲಿ, ನಾ
ರ್ಗಳ ಪೊರೆಯಲ್ಲಿ, ಪೋಟ್ಗಳೆಡೆಯಲ್ಲಿ, ಕವಲ್ಗಣೆಯಲ್ಲಿ, ಸುತ್ತಲುಂ
ಗಿಳಿಗಳ ಪಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾ
ಕುಳಮನುರಾಗದಿಂ ಪಲವು ದೇಶದೊಳಿರ್ಪುವು ಬಂದು ಭೂಪತೀ

ಎಲವಂ ಮಡಲ್ತುದೆನೆ ಯೆಲೆ
ಕೆಲಕೆಲವಾಗಿರ್ದುವೆಲೆಯ ಪುದುವಿಂದವೆ ಕ
ಟ್ತಿಲಿಸಿದವೊಲಿರ್ಪುದಂದ
ಗ್ಗಲಿಸಿದ ಗಿಳಿವಿಂಡುಗಳ ಪೊದಳ್ದ ಪಸುರ್ಪಿಂ

ಅಂತಾ ಶುಕಸಂತತಿ ನಿ
ಶ್ಚಿಂತದಿನಿರ್ದಲ್ಲಿ ಜೀರ್ಣಕೋಟರ ವಿರಳಾ
ಭ್ಯಂತರದೊಳಿರ್ದುದೊಂದು ಶು
ಕಂ ತನ್ನಯ ಜಾಯೆವೆರಸು ಪರಿಣತವಯಸಂ

ಆ ವೃದ್ಧಶುಕಂಗೊರ್ವನೆ
ದೈವಾಧೀನದೊಳೆ ಪುಟ್ಟಿದೆಂ ಪಾಪಿಯೆನಿ
ನ್ನೇವೇಟ್ಟಿಪೆಂ ಪ್ರಸೂತ್ಯು
ದ್ಭಾವದಿನೆಮ್ಮವ್ವೆ ಕೞಿದಳಂತಾ ಕ್ಷಣದೊಳ್

ಅಂತು ಕೞಿಯೆ ಜಾಯಾವಿಯೋಗದಿಂ ದುಃಖಿತನಾಗಿಯುಮೆನ್ನ ತಂದೆ
ಪುತ್ರಸ್ನೇಹದಿಂದಳವಿಗೞಿದ ಹೃದಯ ಶೋಕಮನಡಂಗಿಸಿರ್ದು
ಮತ್ಪ್ರಾಣನ ಪ್ರಯತ್ನ ತತ್ಪರನಾಗಿ

ಕಟಿಲಲ್ ನಿಜತನುವೊಂದೆರ
ಡುಟಿಯಲ್ ಗಜಿ ವಿಟ್ಟುದ್ದು ಕುಟಿಯಲಾ ಕರ್ಣಂ ಜೋ
ಲ್ದಿಟಿಯಲ್ ಮುಯ್ಪುಗಳಾವಗ
ವಟಿಯಲ್ ಬಲವಾಜಿದಂತು ಮುಪ್ಪಿಂ ಪಾಜಿಲ್,

ಅಂತು ಮುಪ್ಪಿಂ ಪಾಜಿಲಾಜಿದೆ

ಪಕ್ಕಿಗಳಲ್ಲಿ ತಿಂದುಟಿದ ನೆಲ್ಲಗಳ ನುಚ್ಚುಗಳಂ ಫಲಂಗಳಂ
ಪಕ್ಕದೊಳಿರ್ದ ಗೂಡುಗಳಿನಾಯ್ದೆನಗಿಕ್ಕುವನಟ್ಕಿಜಿಂದೆ ತಾಂ
ಮಿಕ್ಕುದನುಂಡಪಂ ಕಡಿದು ನೆಲ್ಗಳನಂಟಿದ ತಾಟಿವಣ್ಣ ಬ
ಣ್ಣಕ್ಕೆಣೆಯಾದ ಚಂಚುಪುಟದಿಂದಮೆ ಮಜ್ಜನಕಂ ಮಹೀಪತೀ

ಅಂತಾತನೆನಗೆ ಕುಟುಕನಿಕ್ಕಿ ಮಿಕ್ಕುದಂ ತನಗಶನಮುಂ ಮಾಡಿ
ಜೀವಿಸುತ್ತಮಿರೆಯಿರೆ

ಚಕಿತೋದ್ಯತ್ಪಕ್ಷಿ ಪಕ್ಷಸ್ವನದೊಳಮುರ್ದ ಕೋಳಾಹಳಧ್ವಾನದಿಂ ಕೊ
ರ್ವಿ ಕರೀಂದ್ರೋದ್ಭೂತ ಫೂತ್ಕಾರದೆ ಪುದಿದು ಗುಹಾನೀಕ ಸುಪ್ತೋತ್ಥಸಿಂಹ
ಪ್ರಕರಪ್ರೋನ್ನಾದದಿಂ ತಳ್ತುಪಗತ ವನದೇವೀಚಯಸ್ವಾಂತಸಂತ್ರಾ
ಸಕರಂ ಪೊಣ್ಮಿತ್ತು ವಿಂಧ್ಯಂ ನಡುಗೆ ಘನರವಸ್ಪರ್ಧಿ ಕೈರಾತಘೋಷಂ

ಆಂ ಜನಕನೆಱಕೆಯೊಳಗಿ
ರ್ದಂ ಜುತ್ತುಂ ಕೇಳುತಿರ್ದೆನಿರ್ಪನ್ನೆವರಂ
ಬಿಂಜದಡವಿಯೊಳಗೆಲ್ಲಂ
ನಂಜಿನ ಮುಟಿಕೊಂಡು ಬಿಟ್ಟ ತೆಱನಾಯ್ತಾಗಳ್

ಅದು ಮೊಟಗು ಮಾಣ್ದ ಕಾರ್ಗಾ
ಲದ ಮುಗಿಲದು ಕಡೆಪಮುಡುಗಿದಂಬುಧಿಯೆಂಬಂ
ದದಿನಡವಿ ಮೂಗುವಟ್ಟಿ
ರ್ದುದು ಬೇಟೆಯೊಳಾದ ಕಳಕಳಂ ಪಿಂಗುವಿನಂ

ಅಂತಾ ಕಳಕಳರವಮಡಂಗಲೊಡನೆಯುದ್ಭೂತವಿಸ್ಮಯನಾಗಿ ತಂದೆಯಿರಿಸಿದ
ಪಕ್ಷಸಂಪುಟದೊಳಗಣಿಂ ಪೊಱಮಟ್ಟೆದೇನೆನುತ್ತಮಾಂ ಪೊಟಲೊಳಗಿರ್ದ
ಮೆಲ್ಲನೆ ನಿಳ್ಕಿನಿಳ್ಕಿ ಪೆಳ್ಪಳಿಸಿ ನೋಟ್ಪನ್ನೆಗಮಲ್ಲಿ –

ಜರೆಯಿಂದಂ ಪುರ್ಬುಜೋಲಲ್ ತೆರೆ ತರತರದಿಂದುಣ್ಮಿಪೊಣ್ಮಲ್ಕೆ ಗಂಟಲ್
ಮುರಿದತ್ತೊಂದೊಂದಱೊಳ್ ತಳ್ತೊಗೆಯೆ ಸೆರೆಗಳೊತ್ತಂಬದಿಂಬರ್ಪಕೆಮ್ಮಿಂ

ಬಿರಿಯಲ್ ಬೆಟ್ಟಂಗಳಾ ಬಟ್ಟೆಯೊಳಿನಿತಡಗುಂ ತನ್ನ ಕಯ್ಯಾರದೆಂದಾ
ತುರಿಸುತ್ತುಂ ಭ್ರಾಂತಿಯಿಂದೆನ್ನಯ ಮರದಡಿಯೊಳ್ನಿಂದನೊರ್ವಂ ಪುಳಿಂದಂ

ನಿಂದು ಕಣ್ಗಳಿಂ ಶುಕನಿಕಾಯದ ಜೀವಮನೆಯ್ದೆ ಪೀರ್ವವೊಲಾ ಮರನಂ
ನೋಡುತ್ತು ಮದನೇಕತಾಳೋತ್ಸೇಧಮು ಮಭ್ರಂಕಷಮುಂ ದುರಾ
ರೋಹಮುಮಪ್ಪೊಡಂ ಬಗೆಯದೆ ಬಳಸಿದ ಬಳ್ಳಿವಿಡಿದಡರ್ದೇಱಿ –

ಜಳಜದ ಮೊಗ್ಗೆಯಂತೆ ಮುಗುಳಂತೆಳವಕ್ಕೆಯ ಕಾಯ್ಗಳಂತೆ ಶಾ
ಲ್ಮಲಿ ಕುಸುಮಂಗಳಂತೆ ತರುನೀಡ ನಿಕಾಯದಿನೆಲ್ಲವಾಗಳಾ
ಗಳೆ ಗಱಿವೊಯ್ವ ಕಣ್ದೆಱೆವ ತುಪ್ಪುಳೆಡರ್ವ ಕೆಂಪನಾಳ್ವ ಕೋ
ಮಳ ಶುಕಶಾಬಕ ಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ

ಪಱಿದುವು ಗಱಿ ಚಂಚುಗಳುಂ
ಮುಱಿದುವು ತಲೆ ನಡುಗುತಿರ್ದುವೆನ್ನದೆ ತರದಿಂ
ಬಱಿಗೆಯ್ಯುತಿರ್ದನಾ ಮಾ
ಯ್ದುಱುಗುಲಿ ಕರ್ವೇಡನಲ್ಲಿ ಮುದುಗಿಳಿಗಳುಮಂ

ಅಂತವೆಲ್ಲವನೊಡನೊಡನೆ ಗಂಟಲಂ ಮುಱಿದು ನೆಲಕ್ಕೀಡಾಡುತ್ತಿರ್ದ
ಬೇಡನಂ ತೊಟ್ಟನೆ ನೋಡಿ ಪ್ರಾಣಾಪಹಾರಮು ಮಪ್ರತೀಕಾರಮುಮಪ್ಪ
ಕಷ್ಟಮಂ ಕಂಡು ಭಯಂಗೊಂಡು

ಬಸವಳಿದು ಕಣ್ಣ ನೀರಿಂ
ದೆಸೆಗೆಟ್ಟಲೆ ಮಗನೆ ನಿನ್ನನಿನ್ನಾರ್ ಕಾಯ
ಲ್ಕೆ ಸಮರ್ಥರೆನುತ್ತಾಗಳ್
ಬಿಸುಸುಯ್ದುಂ ನೋಡಿ ಜನಕನೆನ್ನಯ ಮೊಗಮಂ

ನಿನ್ನಯ ತಾಯಸುಯ್ವ ಪದದೊಳ್ ಜವನಕ್ಕಟ ನೋಡು ಕಂದ ಬಂ
ದೆನ್ನುಮನಂತೆ ಕೂಡಿದೊಡನೊಕ್ಕಲುವೋಗಿಸನೇಕೆ ಬಯ್ತೆನಾಂ
ನಿನ್ನನೆ ನೋಡಿ ಶೋಕಮನಡಂಗಿಸಿ ಬಾೞ್ಕೆಯೆ ಲೇಸೆನುತ್ತುಮಿ
ರ್ಪನ್ನೆಗಮಮ್ಮ ನಿನ್ನನೊಡಗೊಂಡು ಮುಟುಂಗುವ ಕಾಲಮಾದುದೋ

ಎಂದು ಸೈರಿಸಲಾಱದೆ

ಇೞಿಕಿ ತೊಡೆಯೆಡೆಯೊಳೆನ್ನಂ
ಪಱಿದೆಱಕೆಗಳಿಂದೆ ಮುಚ್ಚಿ ಮೋಹದೆ ತಾತಂ

ಮಱುಗುತ್ತಿರ್ಪಿನಮೆಯ್ದಿದ
ನಱಗುಲಿ ಕರ್ವೇಡ ನೆನ್ನ ಪೊಟಲಿಂಗಾಗಳ್

ಅಡಸುವ ಕಾಳದಂಡ ಮೆರೆಗೊಳ್ವಸಿತೋರಗಮೆಂಬ ಶಂಕೆ ನೂ
ರ್ಮಡಿಸಿರೆ ಕಾಡ ಪಂದಿಗಳ ಬಲ್ಣಣದಿಂ ಪೊಲಸಂಟಿ ನಾರ್ವ ಜೇ
ವೊಡೆಗಳ ಪುಣ್ಗಳಿಂ ತೊರೆವ ನೆತ್ತರ ಕಯ್ ನಡುಗಲ್ಕೆ ನೀಡಿ ಕೀ
ೞಿಡೆಯಿಡೆ ಗಂಟಲಂ ಮುಱಿದನೊರ್ವನಯೆ ನಿರ್ಘೃಣನೆನ್ನ ತಂದೆಯಂ

ಬೆಱಿತ್ತುಳಿದೆನಾಗಿಯುಂ ತನು
ಕಿಱಿದಾಗಿಯುಮತ್ತು ಮಾಯುಮುಂಟಾಗಿಯು ಮೇ
ಣಱಿಯಂ ಕಾಣಂ ತಂದೆಯು
ಗಱಿಯೊಳಗಿರ್ದವನನೆನ್ನನಂದು ನೃಶಂಸಂ.

ಮಹಾಶ್ವೇತೆ - ಪುಂಡರೀಕ

ಆಗಳೊರ್ವ ವಸಂತದೊಳುಳ್ಳಲರ್ದ ನವನಳಿನ ಕುಮುದ ಕುವಲಯ ಕಲ್ಹಾ
ರಂಗಳಿಂ ಕಣ್ಗೊಳಿಪಚ್ಛೋದ ಸರಸಿಗೆ ಜನನಿವೆರಸು ಮಜ್ಜನಕ್ಕೆಂದುನಡೆತಂದು
ನೋಟ್ಪಲ್ಲಿ ಮುಂದೆ ಮುನಿಕುಮಾರನೊರ್ವನೆಯ್ತರುತಿರೆ

ಕರತಳಮೊಂದಱೊಳ್ ಮಣಿಕಮಂಡಲು ನಾಳಸಮೇತಮಪ್ಪ ಕೇ
ಸರಫಲದಂತಿರಿರ್ದುದು ಮನೋಜವಿನಾಶದಿನಟ್ಟಿ ತನ್ಮನೋ
ಹರಿಯ ಪೊದಳ್ದ ಕಣ್ಬನಿಗಳಂತಮಲಸ್ಫಟಿಕಾಕ್ಷಮಾಲೆ ಸುಂ
ದರತರಮಾದುದೊಂದು ಕರಪಲ್ಲವದೊಳ್ ಮುನಿಪಾಗ್ರಗಣ್ಯನಾ.

ನವಯೌವನದೊಳ್ ಗುಣದೋ
ಷವಿಚಾರಮನಿಂತು ಮಾಡಲೀಯದ ಭಾವೋ
ದ್ಭವನಿಂ ಪರವಶೆಯಾದೆಂ
ನವಕುಸುಮಾಸವದೆ ಸೊರ್ಕಿದಳಿನಿಯ ತೆಱದಿಂ

ನಿಯತೇಂದ್ರಿಯನೊಳ್ ತೇಜೋ
ಮಯನೊಳ್ ರೂಪೈಕ ಪಕ್ಷಪಾತದೆ ನೆಱೆ ನೀ
ತಿಯನುೞಿದು ಮುನಿಪನೊಳ್ ನಿ
ರ್ಭಯನಂಗಜನೆನ್ನನಿಂತಿರಲ್ ಸೋಲಿಕುಮೇ.

ಪಲಬರ್ ಕಾಂತೆಯರೊಲ್ದು ಪೋದರೊಳರೆಂತುಂ ಕಾಂತರೊಳ್ ಬೇಟವ
ಗ್ಗಲಿಸಲ್ ಕಾಣದೆ ಲಜ್ಜೆಗೆಟ್ಟರೊಳರಿಂತೀ ಲೋಕದೊಳ್ ರೂಪುಗಾ
ಣಲೊಡಂ ತೊಟ್ಟನೆ ಲಜ್ಜೆಗೆಟ್ಟಱಿವುಗೆಟ್ಟೆನ್ನಂತೆ ಕಣ್ಗೆಟ್ಟು ಪೇ
ಟಿಿಲವಿಂದಿಂತೆರ್ದೆಗೆಟ್ಟರಾರೆನುತುಮತ್ಯೌತ್ಸುಕ್ಯಮಂ ತಾಳ್ದಿದೆಂ

ಅಂತಾಶ್ಚರ್ಯಮಂ ತಳೆದು ನನ್ನ ನಾನೆ ಸಂತೈಸಿ

ಎನ್ನೆವರಂ ಸಚೇತನೆಯೆನೆನ್ನೆವರಂ ಲಘುವಾಗದಿರ್ಪೆನೋ
ಅನ್ನೆಗಮೀಗಳೀ ಯೆಡೆಯಿನಾಂ ತೊಲಗಿರ್ಪುದು ಕಜ್ಜಮಲ್ಲದಂ
ದೆನ್ನಯ ಮನ್ಮಥೋಚಿತ ವಿಕಾರಮ ನೀಕ್ಷಿಸಿ ಸೋಲ್ತಳಕ್ಕಟಾ
ಎನ್ನದೆ ಶಾಪಮಂ ಕುಡುವನಂತುಟೆ ಕೋಪಿಗಳಲ್ತೆ ತಾಪಸರ್

ಎಂದು ಪೋಗಲುದ್ಯೋಗಂಗೆಯ್ದು ನಿಖಿಳಜನಪೂಜಾರ್ಹರನವಜ್ಞೆಗೆಯ್ಯ ಲಾಗದೆಂದು

ತೊಳಗುವ ಚಿನ್ನಪೂಗಳಲಕಾವಳಿಯೊಳ್ ಮಿಱುಗಲ್ ಕಪೋಲಮಂ
ಡಳತಲದೊಳ್ ತೆಱಂಬೊಳೆಯೆ ಕೋಮಲಪಲ್ಲವ ಕರ್ಣಪೂರ ಮಂ
ಜುಳಮಣಿಕುಂಡಲಂ ಪೆಗಲೊಳಾಡೆ ಮರಳ್ದೆ ವೆಯಿಕ್ಕದಾಂ ಮನಂ
ಗೊಳಿಪ ಮುನೀಂದ್ರ ನಾನನಮನೀಕ್ಷಿಸುತಂ ಪೊಡವಟ್ಟೆನಟ್ಕಱಿಂ

ತದನಂತರಂ

ಮದನಂ ದುರ್ಜಯನಿಂದ್ರಿಯಂಗಳನಿವಾರ್ಯಂಗಳ್ ವಸಂತಂ ಮದ
ಪ್ರದನಾ ಸ್ಥಾನವತೀವರಮ್ಯಮೆನಗಂ ದುಃಖಂಬರಲ್ವೇಟ್ಕುಮ
ಪ್ಪುದಱಿಂ ಭಾವಿಸಿ ಮದ್ವಿಕಾರಮನೆ ನೋಡುತ್ತಿರ್ಪುದುಂ ಗಾಳಿಗೊ
ಡ್ಡಿದ ದೀಪಾಂಕುರದಂತೆ ತನ್ಮುನಿಯುಮಂ ಕಾಮಂ ಚಲಂ ಮಾಡಿದಂ.

ಅಂತು ಮಾಡೆ

ಪೆಸರೇನಾರ್ಗೀತನೀ ಜವ್ವನಿಗ ತವಸಿ ತೊಟ್ಟಿರ್ಪ ಕರ್ಣಾವತಂಸಂ
ಪೊಸತೀ ಲೋಕಕ್ಕಿದಾವಂಘ್ರಿಪದ ಪೊಳೆವ ಪೂಗೊಂಚಲಿಂದಾದುದೋ ನೀಂ
ಬೆಸಸಲ್ವೇಟ್ಕಿಂತಿದಂ ಕೌತುಕ ಮನೆನಗೆನುತ್ತಂ ನಮಸ್ಕಾರಪೂರ್ವಂ
ಬೆಸಗೊಂಡೆಂ ತನ್ಮುನೀಂದ್ರಾನುಚರಮುನಿಯನಾನಂದದತಿ ಪ್ರೀತಿಯಿಂದಂ

ಅಂತು ಬೆಸಗೊಳೆ

ಬೆಸಗೊಳ್ವುದಱಿಂದಿದನು
ದ್ದೆಸಮಾವುದು ತರುಣಿ ನಿನಗೆ ಕೌತುಕಮೆನೆ ಕೇ

ಳುಸಿರ್ದಪೆನೆಂದಾ ಮುನಿಪಂ
ನಸುನಗುತಂ ಪೇಟಲಾಗಳುದ್ಯತನಾದಂ

ಅದೆಂತೆನೆ ಶ್ವೇತಕೇತು ಮಹಾಮುನಿಗಂ ಲಕ್ಷ್ಮಿಗಂ ಕುಮಾರಂ ಪುಂಡರೀಕನೆಂ ಬೊನೀತಂಗೆ ಶೈಶವಂ ಪತ್ತುವಿಡಲೊಡಮಖಿಳವಿದ್ಯಾ ಕಲಾಪದೊಳ್ ಪರಿಣ ತನಂ ಮಾಡಿ ಯತಿತ್ವಮಂ ಕಯ್ಕೊಳಿಸೆ ತದನುಷ್ಠಾನ ಪರಾಯಣನಾದ ಮಹಾನುಭಾವನೀತಂಗೀವ್ರತವಿರುದ್ಧಮಪ್ಪ ಕುಸುಮ ಮಂಜರಿಯೆಂತು ಬಂದುದೆಂಬೆಯಪ್ಪೊಡೆ

ಇಂದು ಚತುರ್ದಶಿಯಪ್ಪುದ
ಱಿಂದಂ ಕೈಲಾಸವಾಸಿಯಂ ಕಾಣಲ್ಕಾ
ನಂದದೆ ದಿವದಿಂದಿರ್ಬರು
ವೊಂದಾಗಿ ಬರುತ್ತುಮಿರ್ಪುದುಂ ತತ್‌ಕ್ಷಣದೊಳ್

ವನದೇವತೆಯೊರ್ವಳ್ ಬಂದು ಪೊಡವಟ್ಟು ಭುವನತ್ರಯಾಭಿರಾಮಮಪ್ಪ ನಿನ್ನ ಸೌಕುಮಾರ್ಯಕ್ಕೆ ತಕ್ಕಲಂಕಾರಮಿ ದಿವ್ಯಕುಸುಮಮಂಜರಿಯನವತಂಸಂ ಮಾಡಿ ಪಾರಿಜಾತ ಜನ್ಮಮಂ ಸಫಲಂ ಮಾಟ್ಪುದೆಂದು ಬಿನ್ನವಿಸೆ ನಿಜರೂಪ ಸ್ತುತಿಗೆ ಲಜ್ಜಿಸಿ ಕೇಳದಂತೆ ಪೋಗೆ ಮತ್ತಂ ಬೆನ್ನನೆ ಪತ್ತಿ
ಬರುತಿರ್ಪುದು ಮಾಂ ಕಂಡು ಕಾರುಣ್ಯದಿಂದೀ ಕಾಂತೆಗೆ ಸಂತೋಷಂ
ಮಾಡಿಮೆನಲಿದೇಕೆ
ಬೇಡವೇಡೆನೆಯುಂ ಕಿವಿಯೊಳ್ ತೊಡರ್ಚಿ ಪೋದಳೀ ಕುಸುಮಂಜರಿಯನೆಂದು
ಸಹಚರಮುನಿ ಪೇಟೆ ಪುಂಡರೀಕಂ ದರಹಸಿತಾಧರ ಕಪೋಲತಲನಾಗಿ

ಎಳಸುತ್ತಿರ್ದಪೆ ಪುಷ್ಪಮಂಜರಿಗೆ ಕೊಳ್ಳೀ ಸುತ್ತಿದೇಕೆಂದು ಸಂ
ಚಳಿಸುತ್ತಂ ನಿಜಕರ್ಣದಿಂ ತೆಗೆದು ಸೋಲ್ತೆಂ ಕೂಡು ನೀನೆನ್ನೊಳೆಂ
ದಳಿ ಮಾಲಾರವದಿಂದೆ ಪೇಟ್ವ ತೆಱದಿಂ ಮತ್ಕರ್ಣದೊಳ್ ತಾರಕೋ
ಜ್ಜ್ವಲಮಂ ರಂಜಿಪ ಪುಷ್ಪಮಂಜರಿಯನತ್ಯೌತ್ಸುಕ್ಯದಿಂದಿಕ್ಕಿದಂ

ಇಂ ಪೇಟ್ಪುದೇನನೆನ್ನ ಕ
ದಂಪಿನ ನಸುಸೋಂಕಿನೊಂದು ಸುಖದಿಂದಾದಂ
ಕಂಪಿಸುತಿರೆ ಕರತಳದಿಂ
ದಂ ಪೋದತ್ತಕ್ಷಮಾಲೆ ನಾಣ್ಚೆರಸಾಗಳ್

ಅಂತು ಪೋದೊಡಮುಱಿಯದಿರಲಾನಾ ಅಕ್ಷಾವಳಿಯುಂ ನೆಲಕೆ ಬೀೞ್ವಿನಂ
ಪಿಡಿದು ತೊಳಗುವ ಹಾರಮುಂ ತಳೆವಂತೆ ಕೊರಲೊಳ್ ತಳೆದು ಸುಖಮುಂ
ತಳೆಯಲ್ [ದೆನ್]

ಕಾದಂಬರಿ : ಚಂದ್ರಾಪೀಡರ ಪ್ರಥಮ ಸಂದರ್ಶನ

ಇದು ನಾರೀಮಯಮಪ್ಪ ಲೋಕಮಿದು ಬೇಱೊಂದಂಗನಾದ್ವೀಪಮಿಂ
ತಿದು ನಿಷ್ಪೂರುಷಜೀವಲೋಕಮಿದು ಸರ್ಗಕ್ಕೆಂದು ಪದ್ಮೋದ್ಭವಂ
ಸುದತೀರತ್ನ ಸಮೂಹಮುಂ ಪದಪಿಸಿಂ ಬಯ್ಚಿಟ್ಟ ಭಂಡಾರಮ
ಪ್ಪುದೆನಲ್ ಸಂದಣಿಸಿರ್ದ ಸುಂದರಿಯರಂ ಕಂಡಂ ನರೇಂದ್ರಾತ್ಮಜಂ

ಎರಡುಂ ಪಕ್ಕದೊಳೋಲಗಕ್ಕೆ ಪದಪಿಂ ಬಂದಿರ್ದ ಕಾಂತಾಜನೋ
ತ್ಕರರತ್ನಾಭರಣ ಪ್ರಭಾಪ್ರಸರವಾದಂ ತಳ್ತು ತದ್ವೀಥಿಕಾಂ
ತರದೊಳ್ ಪೆರ್ಬೊನಲಂದದಿಂ ಪರಿಯೆ ಕಂಡಂತಾ ಪ್ರಭಾಪೂರದೊಳ್
ಭರದಿಂ ತಾನಿದಿರೀಸುವಂತೆ ನಡೆದಂ ಭೂಪಾಲ ವಿದ್ಯಾಧರಂ

ಪೊಳೆಯುತ್ತಿರ್ಪ ಮಹಾವರಾಹ ವದನೋದ್ಯದ್ದಂಷ್ಟ್ರಮುಂ ನಿಮ್ಮ ನಿಂ
ದಳೊ ಭೂಕಾಂತೆಯೆನಲ್ಕೆ ನೀಲವಸನಪ್ರಚ್ಛನ್ನ ಪರ್ಯಂಕಮುಂ
ಡಳದೊಳ್ ಬೆಳ್ಪೆಸೆದಿರ್ದ ಕೌಳುಡೆಯನೊಂದಂ ನಿಮ್ಮ ಕುಳ್ಳಿರ್ದ ಕೋ
ಮಳೆಯುಂ ದೂರದೆ ನೋಡಿ ಕಂಡನರಸಂ ಕಾದಂಬರೀ ದೇವಿಯುಂ

ಅಂತಿರ್ದ ಗಂಧರ್ವರಾಜನಂದನೆಯನತಿದೂರದೊಳ್ ವಿಸ್ಮಿತಾಂತರಂಗನಾಗಿ
ನೋಡಿ

ಇವಳಂ ನೋಡಲ್ ಪಡೆದೆ
ನ್ನ ವಿಲೋಚನಮಾವ ನೋಂಪಿಯುಂ ನೋಂತುವೊ ಮಾ
ಯ್ದ್ದ ವಿಧಾತ್ರನೇಕೆ ವಿರಚಿಸ
ನೊ ವಿಲೋಚನಮಯಮೆನಲ್ ಮದಿಂದ್ರಿಯಚಯಮುಂ

ಬಗೆಯೊಳ್ ಪಿರಿದುಂ ಕೌತುಕ
ಮೊಗೆಯಲ್ಕನ್ಯೋನ್ಯಮೊಲ್ದು ನೋಡುತ್ತಿರ್ಪ
ನ್ನೆಗಮೊರ್ವೊರ್ದಲಿರ್ವರ ದಿ
ಟ್ಟಿಗಳುಂ ಸಮದಿಟ್ಟಿಯಾದುವಂತಾ ಕ್ಷಣದೊಳ್

ಅಂತು ನೋಡಿ

ಈತಂ ಕೇಯೂರಂ ಪೇ
ೞ್ದಾತಂ ಪುಗುತರ್ಪನೆಂದೆನುತ್ತುಂ ತದ್ರೂ
ಪಾತಿಶಯಕ್ಕಚ್ಚರಿವ
ಟ್ಟಾ ತರುಣಿಯುಮಂತೆ ಬಿಡದೆ ನೋಡುತ್ತಿರ್ದಳ್

ಒದವೆ ಪುಲಕಾಂಕುರಂಗಳ್
ಮೊದಲೊಳ್ ಭೂಷಣದ ರವಮೆರಡನೆಯ ಸೂಚಿಮು
ನ್ನಿದಿರೇೞೆ ತಾಂ ಬೞಿಕ್ಕಿರ
ದಿದಿರೆೞ್ದಳ್ ತರಳನಯನೆ ಸಂಭ್ರಮದಿಂದಂ

ಪಲವು ದಿವಸಕ್ಕೆ ಕಂಡೊ ಗೆ
ದೊಲವಿಂ ಬಿಗಿಯಪ್ಪಿದಳ್ ಮಹಾಶ್ವೇತೆಯನಾ
ಲಲನೆ ಮಹಾಶ್ವೇತೆಯುಮಾ
ಲಲನೆಯನನುರಾಗದಿಂದ ಮಪ್ಪಿದಳಾಗಳ್

ಅನಂತರಂ ಮಹಾಶ್ವೇತೆ ಕಾದಂಬರಿಯನಿಂತೆಂದಳ್ ಚಂದ್ರಾಪೀಡನೆಂಬೀ ಮಹಾನುಭಾವಂ ಭಾರತ ವರ್ಷದ ರಾಜನುಂ ಕ್ಷಪಿತ ಪ್ರಜಾಪೀಡನುಮೆನಿಸಿದ ತಾರಾಪೀಡ ನರೇಂದ್ರಂಗೆ ನಂದನಂ ದಿಗ್ವಿಜಯಪ್ರಸಂಗದಿಂ ಬೞಿಸಂದೀ ಪ್ರದೇಶಕ್ಕೆ ಬಂದನಲ್ಲದೆಯುಂ ಪರಿತ್ಯಕ್ತ ಸಕಲಸಂಗೆಯಾಗಿ ಕಲ್ಲೆರ್ದೆಯಳೆನಿ ಸಿದೆನ್ನಂ ಕಾಣಲೊಡನೆ ಸ್ವಭಾವ ಸರಳತೆಯನಪ್ಪುಕಯ್ದು ನಿಜಗುಣದಿಂ ನಿಷ್ಕಾರಣಬಂಧುವುಂ ನಿರ್ನಿಮಿತ್ತ ಮಿತ್ರನುಮೆನಿಸಿದನೀ ಮರ್ತ್ಯಲೋಕದ ಸಫಲತೆಯುಮಂ, ಸೌಭಾಗ್ಯದ ಭಾಗ್ಯಮುಮಂ ಮನುಷ್ಯರಗ್ರಾಮ್ಯತೆಯು ಮಂ ನೀನುಂ ಕಾಣ್ಬೆಯೆಂದೆಂತಾನುಮಿಲ್ಲಿಗೊಡಗೊಂಡು ಬಂದೆಂ

ಅರಸನನಾಂ ಕಂಡಱಿಯೆಂ
ಪರಿಚಯಮಿಲ್ಲೆನ್ನೊಳೆಂದು ಮಿಗೆ ತಾಂ ನಾಣ್ಚು
ತ್ತಿರದಿಂದೆನ್ನೊಳದೆಂತಂ
ತಿರೆ ನೀಂ ನೆಗೞ್ವುದು ನಿರಂತರಂ ಕಮಲಮುಖೀ

ಎಂದು ಮಹಾಶ್ವೇತೆ ಕಾದಂಬರಿಗಱಿಪುವುದುಂ ಚಂದ್ರಾಪೀಡನುಂ ಕಯ್ಗಳಂ ಮುಗಿಯೆ ಸರ್ವಾಂಗಪುಳಕಮಂ ತಳೆದು

ಪಿರಿದೊಂದಟ್ಕಱಿೊಳೊಲ್ದು ನೋಟ್ಪವಳ ದೀರ್ಘಾಂಪಾಂಗದೇಶಕ್ಕೆ ಚೆ
ಚ್ಚರವಾಗಳ್ ಪರಿತಂದ ಸೇದೆಯೊದವಲ್ ಘರ್ಮೋದಬಿಂದೂತ್ಕರಂ
ಸುರಿಯುತ್ತಿರ್ಪುದು ಕಣ್ಣ ಪಾಪೆಗೆಲೆ ನೋಡೆಂಬಂದದಿಂ ಸ್ನೇಹನಿ
ರ್ಭರವಾ ಕಾಂತೆಗೆ ಭೋರೆನಲ್ ಸುರಿದುವಾನಂದಾಶ್ರುಬಿಂದೂತ್ಕರಂ

ಅನಂತರಂ ಪರಿಜನಂ ಸಂಭ್ರಮಂಬೆರಸು ತಂದು ಶಯನತಳಶಿರೋಭಾಗದೊಳಿ ಕ್ಕಿದ ಹೇಮಪದಾಂಕಿತಾಸನದೊಳರಸಂ ಕುಳ್ಳಿರೆ ಕಾದಂಬರಿ ಮಹಾಶ್ವೇತೆ ಯೊಡನೆ ನಿಜಪರ್ಯಂಕದೊಳ್ ಕುಳ್ಳಿರ್ಪುದುಂ ಮಹಾ ಶ್ವೇತೆಯ ಕಣ್ಣಱಿದು ವೇಣುರವಂಗಳುಮಂ ವೀಣಾನಾದಂಗಳುಮಂ ಗೀತಸ್ವನಂಗಳುಮಂ ಮಾಗಧಿ ಯರಜಯಶಬ್ದಂಗಳುಮಂ ಪ್ರತೀಹಾರಿಯರ್ ನಿವಾರಿಸುತ್ತುಮಿರ್ದರನ್ನೆಗಂ

ಪ್ರಿಯದಿಂ ಕಾಂತೆ ಮಹಾಶ್ವೇ
ತೆಯ ಕಾಲಂ ತಾನೆ ಕರ್ಚಿ ಪದಪಿಂದೆ ನಿಜ
ಪ್ರಿಯಸಖಿಯೆನಿಸಿದ ಮದಲೇ
ಖೆಯೊಂಬಳಿಂ ನೃಪನಕಾಲ್ಗಳಂ ಕರ್ಚಿಸಿದಳ್

ಅನಂತರಂ ತಾಂಬೂಲಪ್ರದಾನೋದ್ಯತೆಯಾದ ಕಾದಂಬರೀದೇವಿಯುಂ ಮಹಾ ಶ್ವೇತೆಯಿಂತೆಂದಳ್

ಭುವನಾಧೀಶ್ವರಸುತನಭಿ
ನವಾಗತಂ ಮಾನ್ಯನಪ್ಪನಾರಾಧ್ಯನೆ ದಲ್
ನವಗೆಲ್ಲ ತೆಱದಿನದಱಿಂ
ದವೀವುದರಸಂಗೆ ಮುನ್ನಮಿಾ ತಂಬುಲಮಂ

ಎಂದು ನುಡಿಯೆ

ಆನಕ್ಕ ನಾಣ್ಚುವೆಂ ಪಿಡಿ
ನೀನೆ ನೃಪಂಗಿಕ್ಕು ತಂಬುಲಮನಱಿವೆನೆ ಪೇ
ಟೀನುಮನಾನೆಂದತಿ ಲ
ಜ್ಜಾನತಮುಖಿಯಾಗಿ ಕಾಂತೆ ಮೆಲ್ಲನೆ ನುಡಿದಳ್

ಅಂತು ನುಡಿಯೆ ಮಹಾಶ್ವೇತೆ ಮತ್ತಮಾಗ್ರಹಿಸೆ ತಂಬುಲಂ ಗುಡಲುಜ್ಜು ಗಂಗೆಯ್ದು

ಬೆಮರಿಂ ಮುಟುಗಿದಪೆಂ ಸಂ
ಭ್ರಮದಿಂ ಬಿಟ್ಟಪ್ಪೆನರಸ ಕಯ್ಯುಗ್ಗಡು ನೀಂ ಬೇ
ಗಮೆನಿಪ್ಪ ತೆಱದೆ ತಾಂಬೂ
ಲ ಮಿಳಿತಮಂ ಕಾಂತೆ ನೀಡಿದಳ್ ನಿಜಕರಮಂ

ಆಗಳ್ ಪಂಚೇಂದ್ರಿಯ ವೃತ್ತಿಗಳೆ ಬೇಱೆ ಬೇಱೆ ರೂಪಂದಳೆದುವೆನಿಪಂಗುಳಿಗಳಿಂ ಮನಂಗೊಳಿಸುವ ಕರಕಮಲಂಗಳಂ ಚಂದ್ರಾಪೀಡಂ ನೀಡೆ

ಎನಸುಂ ಮುಂದೆ ನಖಾಂಶು ನಿಳ್ಕೆ ನೃಪಹಸ್ತಾನ್ವೇಷಣಂಗೆಯ್ವವೊಲ್
ನಿನಗೆನ್ನಂ ಬಿಡದುಣ್ಮೆದೀ ಬೆಮರೆ ಕಯ್ನೀರಾಗಿರಲ್ ತೋರ್ಕೆಗೊ
ಟ್ಟನನಂಗಂ ಪಿಡಿ ನಿನ್ನ ಕಯ್ಯೆಡೆಯನೊಂದಿರ್ದಪ್ಪುದಿನ್ನೆನ್ನ ಜೀ
ವನವೆಂಬಂದದಿನಿಕ್ಕಿದಳ್ ನಡುಗುತುಂ ತನ್ವಂಗಿ ತಾಂಬೂಲಮಂ

ಅನಂತರಂ ಮಹಾಶ್ವೇತೆಗಂ ತಾಂಬೂಲಂಗೊಟ್ಟಳನ್ನೆಗಮೊರ್ವಂ ಕಂಚುಕಿ ಬಂದು ಗಂಧರ್ವರಾಜನುಂ ಮದಿರಾಮಹಾದೇವಿಯುಂ ನಿಮ್ಮಂ ನೋಡಲುತ್ಕಂಠರಾಗಿ ಕರೆಯಟ್ಟಿದರೆಂಬುದುಂ ಮಹಾಶ್ವೇತೆ ಪೋಗಲುದ್ಯೋಗಂಗೆಯ್ದು ರಸಂಗಿರ್ಕೆದಾಣ ಮಾವುದೆಂದು ಕಾದಂಬರಿಯಂ ಬೆಸಗೊಳ್ವುದುಮಾಕೆಯಿಂತೆಂದಳ್

ಮೊದಲೀಯರಸನನಾಂ ಕಾ
ಣ್ಬುದುಮೆನ್ನಯ ತನುವುಮೆನ್ನದಲ್ತೆನೆ ಮನೆಯಾ
ರದು ನೃಪತಿಗೆಲ್ಲಿ ಬಗೆ ಬ
ರ್ಪುದಾವೆಡೆ ಭವನ್ಮನೋಜ್ಞಮಲ್ಲಿಯೆ ನಿಲಿಸಿಂ

ಎಂದಳು.

ಮಹಾಶ್ವೇತೆಯ ಶಾಪ

ಅದಯನೆನಿಪ್ಪ ಮನ್ಮಥನ ದುರ್ಜಯವೃತ್ತಿಯದೊಂದು ಪಾ
ಪದ ಫಲದಿಂ ವಿಧಾತೃವಶದಿಂ ಭವಿತವ್ಯತೆಯಿಂದಮಿಂತು ಮಾ
ಣದೆ ದಿವಸಕ್ಕಮಿಲ್ಲಿಗಸದಾಗ್ರಹದಿಂದಮೆ ಬಂದು ಪೊರ್ದಲ
ಣ್ಮದೆ ಮದನಾತುರಂ ಸುಟಿವನೆನ್ನಯ ಕಣ್ಬೊಲದೊಳ್ ನಿರಂತರಂ

ಅಂತು ಸುಟಿಯುತ್ತುಮಿರಲೊರ್ಮೆ ಯಾಮಿನೀಯಾಮತ್ರಯ ಸಮಯದೊಳ್ ಚಂದ್ರಿಕಾ ಪಯಃಪೂರಮನ್ ಇಂದುಮಯೂಖಂಗಳ್ ಸುರಿಯೆ

ತರಳಿಕೆ ಮಱೆದು ನಿದ್ರೆಗೆಯ್ದಳ್. ಎನಗೆ ನಿದ್ರೆ ಬಾರದೆ ಸಂತಪ್ತ ಶರೀರೆಯಾಗಿ ಗುಹೆಯಂ ಪೊಱಮಟ್ಟೆನ್. ಅನ್ನೆಗಂ

ಅಲರ್ದಚ್ಫೋದ ನವೋತ್ಪಲ ಪ್ರಸರದಿವ್ಯಾಮೋದದೊಳ್ ಸಂದು ನಿ
ರ್ಮಲ ಚಂದ್ರದ್ಯುತಿ ವರ್ಷಹರ್ಷಿತ ಚಕೋರಾನಂದ ವಾರ್ಬಿಂದು ಸಂ
ಕುಲದೊಳ್ ಮಿಂದು ಚಲಲ್ಲತಾವಳಿಗೆ ಲಾಸ್ಯಾರಂಭಮಂ ತಂದು ತ
ಣ್ಮಲರರೂದುತ್ತಿರಲಾನದರ್ಕೆಳಸಿ ಪಟ್ಟಿರ್ದೆಂ ಶಿಲಾಪಟ್ಟದೊಳ್

ಅಂತು ಪಟ್ಟಿರ್ದು

ಮಿಸುಗುವ ಚಂದ್ರಮಂಡಲದಿನಂದಿೞಿತಂದನ ದಿವ್ಯವಾಣಿಯುಂ
ಪುಸಿಯೆನಿಸಿತ್ತು ಮಾಯ್ದನಗೆ ಪಾಪಿಗೆ ಮೇಣ್ ದಯೆಯಿಂದ ಜೀವಿತ
ವ್ಯಸನಿನಿಯಂತೆ ಜೀವಿಸುತ ಮಿರ್ಕೆವಳೆಂದು ಮಹಾತ್ಮನೆನ್ನನಾ
ಱಿಸಿದನದೆಂತುಮೆನ್ನಯ ಸಮಾಹಿತಮಿಂತು ವಿಳಂಬಿಸಿರ್ಕುಮೋ

ತನುವನದೊರ್ಮೆಯುಂ ಮಗುೞ್ದು ತೋಱಿಸಲಾಱನೆ ಪುಂಡರೀಕ ದೇ
ವನನಿರದೆತ್ತಿಕೊಂಡು ಗಗನಕ್ಕೆ ಪರಾಸುವನಾವನಕ್ಕೆ ಭೋಂ
ಕನೆ ಪಿಡಿದುಯ್ದ ನೇವನೊ ಮನಃಪ್ರಿಯನಕ್ಕಟ ಜೀವಿಸುತ್ತುಮೆಂ
ತೆನಗೆ ಕೃಪಾಬ್ಧಿ ತಾರನೆ ಕಪಿಂಜಲಕಂ ಪ್ರಿಯನೊಂದು ವಾರ್ತೆಯುಂ

ಎಂದಿವು ಮೊದಲಾಗಿ ಪಲವುಮಾಲಜಾಲಂಗಳನೆನ್ನೊಳ್ ಚಿಂತಿಸುತ್ತುಮಿರ್ಪನ್ನೆಗಂ ಆ ದ್ವಿಜಕುಮಾರಂ ಎನ್ನನಪ್ಪುವೞಿಯಾಸೆಯಿಂ ದೂರದೊಳ್ ನಿಮಿರ್ವ ನಿಡು ತೋಳ್ಗಳುಂ ತನ್ನೊಳ್ ತೋಱೆ ಯುಕ್ತಾಯುಕ್ತ ವಿವೇಕಕ್ಕೆ ಪಿಂತೆಗೆದುನ್ಮತ್ತನಂತಚ್ಚ ಬೆಳ್ದಿಂಗಳೊಳೊಯ್ಯನೊಯ್ಯನೆ ಬರುತಿರ್ದನನಾಂ ದೂರದೊಳ್ ಕಂಡು ಭಯಂಗೊಂಡು

ಎಲೆ ಕೇಡಾಯ್ತೆನಗೋವೊ ಮತ್ತಮಿವನೆನ್ನಂ ಕಯ್ಯೊಳಂ ಬಂದು ಮು
ಟ್ಟಲೊಡಂ ಪತ್ತುವಿಡಲ್ಕೆವೇೞ್ಕುವಸುವಂ ಮೆಯ್ಯೊಡ್ಡಿದೆಂ ದುಃಖಸಂ
ಕುಲಕೋರಂತಿರೆ ಪುಂಡರೀಕನನೆ ಮತ್ತಂ ಕಾಣ್ಬೆನಾನೆಂದೆ ನಿ
ಷ್ಫಲಮಾಯ್ತಕ್ಕಟ ಮಂದಭಾಗ್ಯೆಗೆನಗಿಂತೀ ಪ್ರಾಣಸಂಧಾರಣಂ

ಎಂದೆನ್ನೊಳೆ ಬಗೆಯುತಿರ್ದೆನ್ ಅನ್ನೆಗವಾತನೆಯ್ದೆವಂದುಎನ್ನನಿಂತೆಂದಂ

ಎಲೇ ಕುಮುದನೇತ್ರೆ ಮನ್ಮಥಸಹಾಯನೀ ಚಂದ್ರಮಂ
ಕೊಲಲ್ ಬಗೆದನೆನ್ನನಾರ್ತನನಾಥನಂ ದುಃಖಿಯುಂ
ಪಲುಂಬಿ ಮಱೆವೊಕ್ಕೆ ನಾಂ ನಿನಗಧೀನಮೀ ಜೀವಿತಂ

ವಿಲಂಬಿಸದೆ ರಕ್ಷಿಸೆನ್ನನಱಿಯೆಂ ಪ್ರತೀಕಾರಮಂ.

ಅದಂ ಕೇಳಲೊಡನೆನ್ನನೆತ್ತಿಯೊಳುರಿಮುಸಗಿದಂತಾಗೆ ಕಿನಿಸು ಕೆಯ್ಗ ಣ್ಮೆ ಕಣ್ಗ ಳಿಂದುಗುತರ್ಪ ಕಣ್ಬನಿಗಿಡಿಗಳಿಂದುರಿಪುವಂತೆ ಅವನಂ ನೀಡುಂ ನೋಡುತ್ತಾ ವಿಷ್ಟೆಯಂತೆನ್ನನಾನಱಿಯದೆ–

ನುಡಿವನ್ನ ಮೆನ್ನನೀಪರಿ
ಸಿಡಿಲೇತಕೆ ಕೆಡೆದುದಿಲ್ಲ ನಿನ್ನಯ ಸಿರದೊಳ್
ಉಡುಗಿದುದಿಲ್ಲಮುಸಿರ್ ನೂ
ರ್ಮಡಿಯೆನಲೀ ಜಿಹ್ವೆ ಬಿರಿದುದಿಲ್ಲ ದುರಾತ್ಮಾ

ಎಂದು ನುಡಿದು ಒಡನೆ ಚಂದ್ರಾಭಿಮುಖಿಯಾಗಿ ಕಯ್ಗಳಂ ಮುಗಿದು ಮಹಾಭಾಗ, ಸಕಲಭುವನ ಚೂಡಾಮಣಿಯಪ್ಪ ರೋಹಿಣೀ ರಮಣ, ಪುಂಡ ರೀಕನ ನಾಂ ನೋಡಿದಂದಿನಿಂ ಮತ್ತೊರ್ವ ಪುರುಷನಂ ಮನದೊಳಾದೊಡಂ ಭಾವಿಸದಿರ್ದುದು ನನ್ನಿಯಪ್ಪೊಡೀಯಳೀಕಕಾಮಿ ಗಿಳಿಯಾಗಿ ಪುಟ್ಟುಗೆಂದು ಶಪಿಸಲೊಡನೆ

ಸಹಿಸಲಸಹ್ಯಮಪ್ಪ ಮದನಜ್ವರವೇಗದೆ ಮೇಣ್ ನಿಜಾಘ ದು
ರ್ವಹ ಪರಿಪಾಕದಿಂದ ಬಗೆಯಲಲ್ಲದೊಡೆನ್ನಯ ತೀವ್ರಶಾಪವಾ
ಜ್ಞಹಿಮೆಯಿನಾತನಂದು ಕಡಿದಿಕ್ಕಿದ ಪೆರ್ಮರನಂತೆವೋಲದೇ
ನಹಹ ನಿರೂಪಿಪೆಂ ಕೆಡೆದು ಪೊಂದಿದನಾ ಯಿಳೆಯಲ್ಲಚೇತನಂ.

ಕಂಪಿಂಜಲ ಮತ್ತು ಗಿಳಿ

ಬಱಲೆ ಪೆಗಲಿಂ ಚಂಚದ್ವಲ್ಕಾಂಚಲಂ ಪೆಗಲಿಂಗೆ ಬಂ
ದೆಱಲೆ ಜಡೆಗಳ್ ಮುಯ್ಪಿಂ ಯಜ್ಞೋಪವೀತಮದೊಯ್ಯನಂ
ದಿಱಿಯೆ ಪರಿಪಟ್ಟೋರಂತಾಕಾಶಮಾರ್ಗದೆ ಬಂದು ಪಾ
ಡಱಿದ ಸಖನಂ ಮುಂದಾಂ ಕಂಡೆಂ ಕಪಿಂಜಲನಂ ನೃಪಾ

ಅಂತು ಕಂಡು ಕಣ್ಣ ನೀರ್ಗಳುಣ್ಮೆ ಭೋಂಕನಿದಿರೇಱಲುಜ್ಜುಗಂಗೆಯ್ಸೆನ್ನ ಕೆಳೆಯನಪ್ಪ ಕಪಿಂಜಲನ ನಿಂತೆಂದೆಂ

ದೊರೆಕೊಂಡತ್ತು ಭವದ್ವಯಾಂತರದೊಳೀಗಳ್ ಕಾಣ್ಕೆ ಕಂಡೇನೊ ಚೆ
ಚ್ಚರಮೆಟ್ಟಿದಪ್ಪುವ ಕುಳ್ಳಿರಲ್ ಕುಡುವ ನಿನ್ನೀ ಸೇದೆವಟ್ಟಂಗಮಂ
ಕರದಿಂದೆತ್ತಿ ಬಱಲ್ಕೆಯುಂ ಕಳೆವುದರ್ಕಾಂ ನೋಂತೆನಿಲ್ಲಣ್ಣ ನೀಂ
ಬರೆಯುಂ ಪಾಪಿಯೆನೇವೆನೆಂದು ಪಿರಿದುಂ ಶೋಕಾಂಧನಾಗಿರ್ಪಿನಂ

ಎತ್ತಿ ಕರಂಗಳಿಂದೆ ನಿಜಬಾಷ್ಪ ನಿರುದ್ಧಮೆನಿಪ್ಪ ಕಣ್ಗಳಿಂ
ದೊತ್ತಿ ಶರೀರದೊಳ್ ಪುಗಿಸಿಕೊಂಡಪನೆಂಬಿನವಾದವುಪ್ಪುತುಂ
ಚಿತ್ತದಲಂಪಿನಿಂ ಕಿಱುಳನಂತಿರಲೆನ್ನಯ ಮಾಯ್ದ ಕಾಲ್ಗಳಂ
ನೆತ್ತಿಯೊಳಿಟ್ಟುಕೊಂಡಟುತುಮಿರ್ದನಟಿಲ್ದೆನಸುಂ ಕಪಿಂಜಲಂ

ಅಂತಟುತಿರ್ದನಂ ವಾಙ್ಮಾತ್ರಪ್ರತೀಕಾರನೆನಿಂತೆಂದೆಂ

ಮೊದಲೊಳ್ ಪಱಿದಯ್ ಸಂಸಾ
ರದ ತೊಡರಂ ನಿಂದೆ ಮುಕ್ತಿಪದದೊಳ್ ನಿನಗಿಂ
ತಿದು ತಕ್ಕುದೆ ಮೂಢರ ಮಾ
ರ್ಗದಿನೆನಗೆ ಜಡಂಗಿದೇಕೆ ಶೋಕಂಗೆಯ್ವಯ್

ಜನಕಂ ಕುಶಲದಿನಿರ್ದನೆ
ನೆನೆವನೆ ಮಾಯ್ದೆನ್ನ ವಾರ್ತೆಗೇಳ್ದೆನೆಂದಂ
ಮನದೊಳ್ ಖೇದಿಸಿದನೆ ಮುನಿ
ದನೆ ಪೇಟೆಂದೆನ್ನ ಕೆಳೆಯನಂ ಬೆಸಗೊಂಡೆಂ

ಅನ್ನೆಗಂ ಹಾರೀತ ಶಿಷ್ಯೋಪನೀತಪಲ್ಲವಾಸನದೊಳ್ ಕುಳ್ಳಿರ್ದು ತನ್ನ ತೊಡೆಯ ಮೇಲೆನ್ನನಿರಿಸಿ

ತಂದೆಗೆ ಕುಶಲಂ ನಮಗಾ
ದಂದಮುಮಂ ದಿವ್ಯಚುಕ್ಷುವಱಿದಿರ್ದಂ ನೀ
ನೊಂದರ್ಕಂ ಚಿಂತಿಸಬೇ
ಡೆಂದು ಕಪಿಂಜಲಕನೆನಗೆ ಮುಗುಟ್ದಂ ನುಡಿದಂ

ಆಂ ತುರಂಗತ್ವಮುಂ ಪತ್ತುವಿಟ್ಟು ತಂದೆಯಲ್ಲಿಗೆ ವಂದೆನನ್ನೆಗಮನತಿದೂರದೊಳುದ್ಬಾಷ್ಪದೃಷ್ಟಿಯುಂ ವಿಷಣ್ಣದೀನವದನನುಂ ಸಭಯನುಮಾಗಿ ಪೋದರ್ಲೆನ್ನಂ ಕಂಡು

ಬಿಡು ನೀನಂಜಿಕೆಯುಂ ಕಪಿಂಜಲಕ ದೋಷಂ ನಿನ್ನದಲ್ತೇಕೆ ಪೇಟ್
ಸೆಡೆವಯ್ ದೋಷಮಿದೆನ್ನದೆಂದು ಮಱುಗುತ್ತಿರ್ದುಂ ಮಗಂ ಪುಟ್ಟಿದಾ
ಗಡೆ ಮಾಡಲ್ ಬಗೆದಂದೆನಿಲ್ಲಿನಿಸುಮಾಯುಷ್ಕಾಮುಮಂ ಯಜ್ಞಮಂ
ತಡವಂ ಮಾಡಿದೆನೀಗಳಿಂದೆ ಬಗೆ ನೀಂ ತತ್ಕಾರ್ಯಸಂಸಿದ್ಧಿಯಂ

ಒಂದನೆಯ ನಾಗವರ್ಮ, ಭಾಗ - 3

ಛಂದೋಂಬುಧಿ

ಡಾ॥ ಡಿ. ಎಸ್. ಕರ್ಕಿ

ಛಂದೋಂಬುಧಿ

ಲಕ್ಷಣ ಗ್ರಂಥ ಯಾವುದೇ ಇರಲಿ, ಅದು ರಚನೆಗೊಳ್ಳುವ ಮುನ್ನ ಅದಕ್ಕೆ ಸಂಬಂಧಿಸಿದ ಸಾಹಿತ್ಯ ಸಾಕಷ್ಟು ನಿರ್ಮಾಣವಾಗಿರುತ್ತದೆ; ಸಾಕಷ್ಟು ನಿರ್ಮಾಣ ವಾಗಿರುವುದು ಆವಶ್ಯಕ. ಯಾವುದೇ ಭಾಷೆಯ ಕಾವ್ಯ ಸಾಮಾನ್ಯವಾಗಿ ಮೊದಲು ಪದ್ಯಮಯವಾಗಿರುತ್ತದೆ. ಕಾವ್ಯಗಳಲ್ಲಿ ಸ್ಪಂದಿಸುತ್ತ ಬಂದ ವಿವಿಧ ಛಂದೋ ಬಂಧಗಳನ್ನು ಲಕ್ಷಣಿಸುವ ಶಾಸ್ತ್ರ ಛಂದಃಶಾಸ್ತ್ರ. ಆ ಆ ಭಾಷೆಯ ಛಂದಸ್ಸು ಆ ಆ ಭಾಷೆಯ ಜಾಯಮಾನವನ್ನು ಆ ಆ ಭಾಷೆಯ ಸಾಹಿತ್ಯದ ವಿಶಿಷ್ಟ ಪ್ರಭಾವ ಗಳನ್ನು ಅನುಸರಿಸಿ ರಚಿತವಾದರೆ ಅದು ಸ್ವಾಭಾವಿಕ. ಏಕೆಂದರೆ ಯಾವುದೇ ಭಾಷೆಯ ಯಾವುದೇ ಒಂದು ಪದ್ಯ ಆ ಭಾಷೆಗೆ ವಿಶಿಷ್ಟವಾದ ಸ್ವರಸಂಯೋಜನೆ ಗಳನ್ನು ಅಥವಾ ಆ ನುಡಿಯ ಎಳೆತ-ಸುಳಿತಗಳನ್ನು ಒಳಗೊಂಡಿರುತ್ತದೆ. ಆ ನುಡಿ ಪಡೆದ ಪ್ರಭಾವಗಳನ್ನು ಮೈಗೂಡಿಸಿಕೊಂಡಿರುತ್ತದೆ. ನಾಗವರ್ಮನು ಕನ್ನಡ ಛಂದಸ್ಸಿನ ಬಗೆಗೆ ರಚಿಸಿದ ಛಂದೋಂಬುಧಿಯನ್ನು, ಈ ಮೂಲ ಮಾತುಗಳ ಬೆಳಕಿನಲ್ಲಿ ವಿವೇಚಿಸುವದು ಅಗತ್ಯ.

ಛಂದೋಂಬುಧಿಯ ಹಿನ್ನೆಲೆ

ಛಂದೋಂಬುಧಿಯನ್ನು ಬರೆದವನು ಮೊದಲನೆಯ ನಾಗವರ್ಮ. ಅವನ ಕಾಲ ಕ್ರಿ. ಶ. ಸುಮಾರು 990. ಆ ಮುನ್ನವೇ ಕನ್ನಡದಲ್ಲಿ ಪದ್ಯ ಸಾಹಿತ್ಯ ಸಾಕಷ್ಟು ನಿರ್ಮಾಣವಾಗಿತ್ತು. ನಾಗವರ್ಮನ ಪರಿಶೀಲನೆಗೆ ವಸ್ತುವನ್ನೊದಗಿಸಿದ ಸಾಹಿತ್ಯವದು. ಛಂದೋಂಬುಧಿಯ ರಚನೆಗೆ ದೊರೆತ ಪರಿಶೀಲನೆಯ ವಸ್ತು ಸುಮಾರು ಮೂರು ಶತಮಾನಗಳ ಅವಧಿಯಲ್ಲಿ ರಚಿತವಾಗಿದ್ದ ಕನ್ನಡ ಪದ್ಯ ಶಾಸನಗಳ, ಪದ್ಯಗ್ರಂಥಗಳ, ಹಾಗೂ ಕಾವ್ಯ ಕೃತಿಗಳ ಮೊತ್ತ. ಈವರೆಗೆ ದೊರೆತ ಕನ್ನಡ ಪದ್ಯ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದವೆಂದರೆ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ ಮತ್ತು ಶ್ರವಣಬೆಳುಗೊಳದ ಶಾಸನ. (ಸು. ಕ್ರಿ.ಶ. 700.) ಬಾದಾಮಿಯ ಕಪ್ಪೆಅರಭಟ್ಟನ ಶಾಸನದಲ್ಲಿ ತ್ರಿಪದಿಗಳಿವೆ. ಶ್ರವಣಬೆಳುಗೊಳದ ಶಾಸನದಲ್ಲಿ ವೃತ್ತಗಳಿವೆ. ಎಂದರೆ ಕ್ರಿ.ಶ. 700 ರಷ್ಟು ಹಿಂದೆಯೇ ತ್ರಿಪದಿಯೊಡನೆ

ವರ್ಣವೃತ್ತಗಳೂ ಕನ್ನಡ ಶಾಸನಗಳಲ್ಲಿ ಬರವಣಿಗೆಗೆ ಇಳಿದಿದ್ದವು ಎಂದಂತಾಯಿತು.

ಈ ಅವಧಿಯಲ್ಲಿ ಶಾಸನ ಸಾಹಿತ್ಯವಲ್ಲದೆ, ನೃಪತುಂಗನ ಕವಿರಾಜಮಾರ್ಗ, ಸುವರ್ಣಯುಗದ ಪಂಪ, ಪೊನ್ನ, ರನ್ನರ ಚಂಪೂಕಾವ್ಯ ಕೃತಿಗಳು ಸಮಾವೇಶವಾಗುತ್ತವೆ. ಲಕ್ಷಣ ಗ್ರಂಥರಚನೆಯ ದೃಷ್ಟಿಯಿಂದಲೂ ಕವಿರಾಜಮಾರ್ಗವು ನಾಗವರ್ಮನಿಗೆ ವಿಶೇಷ ಮಾರ್ಗದರ್ಶನ ನೀಡಿರಬೇಕು. ಲಕ್ಷಣಗಳ ಸಾಮಾನ್ಯ ನಿರೂಪಣೆಗಾಗಿ ಕವಿರಾಜಮಾರ್ಗಕಾರ ಹಾಗೂ ನಾಗವರ್ಮ ಕಂದಪದ್ಯವನ್ನು ಮಾಧ್ಯಮವಾಗಿ ಬಳಸಿದ ಸಂಗತಿಯೂ ಲಕ್ಷಿಸಬೇಕಾದುದು. ಯತಿ ಹಾಗೂ ಪ್ರಾಸಗಳ ವಿಚಾರವಾಗಿ ಕವಿರಾಜಮಾರ್ಗದಲ್ಲಿ ಬಂದ ಮಾತುಗಳು ಛಂದೋಂಬುಧಿಯಲ್ಲಿ ಇದ್ದಕ್ಕಿದ್ದಂತೆ ನಿಂತಿವೆ. ಕನ್ನಡ ಕಾವ್ಯಗಳಲ್ಲಿ ಸಮಾವೇಶವಾಗುತ್ತ ಬಂದ ವರ್ಣವೃತ್ತಗಳ ನಿರೂಪಣೆಯಲ್ಲಿ ಸಂಸ್ಕೃತ ಛಂದೋಗ್ರಂಥಗಳು ನಾಗವರ್ಮನಿಗೆ ನೆರವಿತ್ತಿರಲು ಸಾಕು. ಕವಿರಾಜಮಾರ್ಗದ ಹಾಗೂ ಪಂಪ, ರನ್ನರ ಚಂಪೂಕೃತಿಗಳ ನಡುವಣ ಗಡುವಿನಲ್ಲಿ ಲಿಖಿತವಾದ ಕೆಲವು ಶಿಲಾಶಾಸನಗಳಲ್ಲಿ 'ಖ್ಯಾತಕರ್ಣಾಟಕ' ವೃತ್ತಗಳೆಂದು ಹೆಸರು ತಳೆದ ಚಂಪಕಮಾಲೆ, ಉತ್ಪಲಮಾಲೆ, ಶಾರ್ದೂಲ ಹಾಗೂ ಮತ್ತೇಭ ವಿಕ್ರೀಡಿತ, ಸ್ರಗ್ಧರೆ, ಮಹಾಸ್ರಗ್ಧರೆಗಳು ಬಹಳಷ್ಟು ಬಳಕೆಗೊಂಡುದುಂಟು. ಪಂಪ, ಪೊನ್ನ, ರನ್ನರ ಚಂಪೂಕಾವ್ಯಗಳಲ್ಲಂತೂ ಕಂದ, ವೃತ್ತಗಳ ನಡು ನಡುವೆ ವಿರಳವಾಗಿ ರಗಳೆ, ತ್ರಿಪದಿ, ಪಿರಿಯಕ್ಕರ ಮೈದೋರಿವೆ. ಈ ಮೂರು ಶತಮಾನಗಳಲ್ಲಿ ಆಗಾಗ ರಚಿತವಾಗಿ ಕನ್ನಡ ಜನಪದದ ನಾಲಗೆಯ ಮೇಲೆ ಆಡುತ್ತ ಬಂದಿರಬಹುದಾದ ಹಾಡುಗಳಲ್ಲಿ ತ್ರಿಪದಿ, ಅಕ್ಕರ, ಚೌಪದಿ, ಛಂದೋವತಂಸ ಮೊದಲಾದ ಅಚ್ಚಗನ್ನಡ ಗತಿಗತ್ತುಗಳು ಕಿವಿಯಿಂದ ಕಿವಿಗೆ ನಾಲಗೆಯಿಂದ ನಾಲಗೆಗೆ ಇಳಿದು ಬಂದು ನಾಗವರ್ಮನ 'ಕರ್ಣಾಟಕ ವಿಷಯ ಜಾತಿ'ಯ ನಿರೂಪಣೆಗೆ ನೆರವಾಗಿದ್ದರೆ ಅದು ಸ್ವಾಭಾವಿಕ; ಹೀಗೆ ಕನ್ನಡ ಕಾವ್ಯಗಳಲ್ಲಿ ಸೇರುತ್ತಬಂದ ಮಾರ್ಗ, ದೇಸಿ, ಛಂದ ('ವೃತ್ತ', 'ಜಾತಿ', 'ಕರ್ಣಾಟಕ ವಿಷಯ ಜಾತಿ') ಈ ಮೂರು ಪ್ರಕಾರದ ಛಂದಸ್ಸಿನ ಪರಿಶೀಲನೆಗೆ ಹಾಗೂ ನಿರೂಪಣೆಗೆ ದಾರಿಯಾಯಿತು. ಇದು ನಾಗವರ್ಮನ ಛಂದೋಂಬುಧಿಯ ನೆಲೆ; ಹಾಗೂ ಹಿನ್ನೆಲೆ. ಈ ವರೆಗೆ ತಿಳಿದಂತೆ ಛಂದೋಂಬುಧಿಯೇ ಕನ್ನಡ ಛಂದೋಗ್ರಂಥಗಳಲ್ಲಿ ಗಣ್ಯವಾದ ಪ್ರಥಮ ಪ್ರಮಾಣಗ್ರಂಥ.

ಕನ್ನಡದಲ್ಲಿ ರಚನೆಗೊಳ್ಳುತ್ತ ಬಂದ ಎಲ್ಲ ಬಗೆಯ ಕಾವ್ಯಗಳನ್ನು ಛಂದಸ್ಸಿನ ದೃಷ್ಟಿಯಿಂದ ಅವಲೋಕಿಸಿದರೆ ಅವುಗಳಲ್ಲಿ ನುಡಿದ ನಾದದ ನಾಡಿಯಲ್ಲಿ ಒಟ್ಟು ಮೂರು ಶ್ರುತಿಗಳಿವೆ. ಒಂದು ಚಂಪೂಕಾವ್ಯಗಳಲ್ಲಿ ವಿಶೇಷವಾಗಿ ಸ್ಪಂದಿಸಿದ ವರ್ಣ

ವೃತ್ತ ಛಂದಸ್ಸು; ಇನ್ನೊಂದು ಕಂದ ಪದ್ಯಗಳ ರೂಪದಲ್ಲಿ ಹೆಚ್ಚು ಕಡಮೆ ಅದೇ ಪ್ರಮಾಣದಲ್ಲಿ ಬಳಕೆಯಾದ ಮಾತ್ರಾಗಣ ಛಂದಸ್ಸು; ರಗಳೆ ಹಾಗು ಷಟ್ಪದಿಗಳದೂ ಮಾತ್ರಾಗಣ ಛಂದಸ್ಸೇ. ಮೂರನೆಯ ಪ್ರಕಾರವೆಂದರೆ ಅಚ್ಚಗನ್ನಡ ಮಟ್ಟುಗಳ ಎಂದರೆ ಕರ್ಣಾಟಕ ವಿಷಯ ಜಾತಿಗೆ ಸಂಬಂಧಿಸಿದ ಛಂದೋಬಂಧಗಳ ನಾಡಿಯಾಗಿ ನುಡಿಯುವ 'ಅಂಶಗಣ' ಛಂದಸ್ಸು. ಛಂದೋಂಬುಧಿಯಲ್ಲಿ ಈ ಮೂರೂ ಬಗೆಯ ಛಂದಸ್ಸಿಗೆ ಲಕ್ಷಣ ರಚನೆ, ಉದಾಹರಣೆ ದೊರೆತಿದೆ.

ವೃತ್ತದ್ದು ಮೊದಲನೆಯ ಛಂದಸ್ಸು. ಹಳಗನ್ನಡ ಚಂಪೂಕೃತಿಗಳಲ್ಲಿ ವಿಶೇಷ ವಾಗಿ ಬಳಕೆಗೊಂಡ ವೃತ್ತಗಳೆಂದರೆ 'ಖ್ಯಾತಕರ್ಣಾಟಕ' ಎಂದು ಒಟ್ಟಾಗಿ ಹೆಸರು ತಳೆದ 6 ವೃತ್ತಗಳು.

ಅದರಂತೆ ಮಲ್ಲಿಕಾಮಾಲೆ, ತರಳ, ಮಾಲಿನಿ, ಪೃಥ್ವೀ, ಹರಿಣಿ, ಶಿಖರಿಣಿ, ಮೊದಲಾದ ವೃತ್ತಗಳು ಕೂಡ ಕನ್ನಡ ಕಾವ್ಯಗಳಲ್ಲಿ ಗಣ್ಯವಾದ ಎಡೆಪಡೆದಿವೆ. ಮೂರು ಮೂರು ಅಕ್ಷರಗಳಿಗೆ ಒಂದೊಂದು ಗಣ ಎಂಬ ಲೆಕ್ಕದಂತೆ ವೃತ್ತಗಳನ್ನು ಲಕ್ಷಣಿಸುವ ಸಂಪ್ರದಾಯ ಆವರೆಗಾಗಲೆ ಏರ್ಪಟ್ಟಿತ್ತು. ಆದುದರಿಂದ ಅವಕ್ಕೆ ವರ್ಣಗಣ ವೃತ್ತ ಎಂಬ ಹೆಸರು ಪ್ರಾಪ್ತವಾಗಿದೆ. ಯಾವುದೇ ಒಂದು ವರ್ಣ ವೃತ್ತವು ಅದೇ ರೀತಿಯ ಅಷ್ಟಷ್ಟೆ ಗಣಗಳನ್ನು ಕ್ರಮವಾಗಿ ಉಳ್ಳ ನಾಲ್ಕು ಚರಣ ಗಳನ್ನು ಒಳಗೊಂಡಿರುತ್ತದೆ. ವೃತ್ತ ಛಂದಸ್ಸಿನ ಶ್ರುತಿಯಲ್ಲಿ ಯತಿ ಪ್ರತೀತಿಗೆ ಬರುತ್ತದೆ. ಆನುದರಿಂದ ವರ್ಣವೃತ್ತಗಳ ಸಂಬಂಧದಲ್ಲಿ ಯತಿಯ ಪ್ರಸ್ತಾಪವಿರು ತ್ತದೆ. ಅದೆಷ್ಟೋಸಲ ಯತಿ ಭೇದವು ವೃತ್ತಭೇದಕ್ಕೆ ಕಾರಣವಾಗುತ್ತದೆ. 'ಚಂಪಕಮಾಲಾ'ವೃತ್ತ ಹಾಗು 'ಉತ್ಪಲಮಾಲಾ' ವೃತ್ತಗಳು ಒಟ್ಟಿಗೆ ಒಂದೇ ಲಯದವಾಗಬೇಕಿದ್ದರೂ ಒಂದರ ('ಚಂಪಕಮಾಲಾ'ವೃತ್ತದ) ಪ್ರತಿ ಚರಣವೂ ಉತ್ಪಲದ ಆದಿಗುರು ಒಡೆದು ಎರಡು ಲಘುಗಳಾಗಿ ಲಘು ಅಕ್ಷರದಿಂದ ಪ್ರಾರಂಭ ವಾಗುತ್ತದೆ; ಇದೇ ವಿಧಾನದಲ್ಲಿ ಶಾರ್ದೂಲ ಮತ್ತೇಭ, ಸ್ರಗ್ಧರೆ, ಮಹಾಸ್ರಗ್ಧರೆ ನಿರ್ಮಾಣವಾಗಿರುತ್ತವೆ. ಇದರಿಂದಾಗಿ ಇವುಗಳಲ್ಲಿ ಗಣ ವ್ಯತ್ಯಾಸವೂ ಯತಿ ವ್ಯತ್ಯಾಸವೂ ಆಗುತ್ತವೆ.

ಇನ್ನು ಎರಡನೆಯದಾದ ಮಾತ್ರಾವೃತ್ತ ಕ್ರಮವು ಅತಿ ನಿರ್ಬಂಧದಿಂದ ಒಂದಿಷ್ಟು ಮುಕ್ತವಾದ ಕ್ರಮ. ಮಾತ್ರಾಗಣಕ್ರಮಕ್ಕೆ ಸೇರಿದ ಯಾವುದೇ ಬಂಧದಲ್ಲಿ ಸ್ವರ ಪರಿಮಾಣದ ದೃಷ್ಟಿಯಿಂದ ಅದರ ಗಣ–ಗಣಗಳು ಒಟ್ಟಿನಲ್ಲಿ ಸಮ ವಾಗಿದ್ದರೆ ಸಾಕು; ಮಾತ್ರಾಗಣಗಳಲ್ಲಿ ಗುರು ಲಘುಗಳ ಕ್ರಮ ಹೀಗೆಯೇ ಇರ ಬೇಕೆಂಬ ನಿರ್ಬಂಧವಿಲ್ಲ.

ಉದಾಹರಣೆ :

ತಾನಾ : ಗಿಯೆಶ್ಯೈ: ಶವಮಂ : ಕಳೆದಳು
ನಾನಾ : ಭರಣಂ: ರಂಜಿಸೆ : ಬೆಳೆದಳು

ಈ ಚರಣಗಳಲ್ಲಿ ಹೊಂದಿಕೊಂಡಿರುವ ಗಣಗಣಗಳು ಗಾತ್ರದಲ್ಲಿ ಸಮಸಮಾನವಾಗಿವೆ. ಆದರೆ ಗಣಗಣಗಳಲ್ಲಿ ಸೇರಿಕೊಂಡು ಮಾತ್ರೆಗಳು ಒಂದೇ ರೀತಿಯ ಗುರು, ಲಘುಗಳವಲ್ಲ. ವರ್ಣವೃತ್ತಗಳು ಮೂರು ಮೂರು ಅಕ್ಷರಗಳ ಕಟ್ಟುನಿಟ್ಟಿನ ಮೇಲೆ ನಿಂತಿದ್ದರೆ ಮಾತ್ರಾಗಣ ಬಂಧಗಳು ಅಂತರ್ಘಟನೆಯ ನೆಲೆಯಲ್ಲಿ ಒಂದಿಷ್ಟು ಬಿಡುಗಡೆಯ ಕಲೆಯನ್ನು ಅಳವಡಿಸಿಕೊಂಡಿರುತ್ತವೆ. ಮಾತ್ರಾಗಣಗಳು 3, 4, 5 ಮಾತ್ರೆಗಳ ಪ್ರಮಾಣದವು. ಕನ್ನಡದಲ್ಲಿ ಚಂಪೂಗ್ರಂಥ ಬಹುವಾಗಿ ಬಳಸುವ ಕಂದ, 4 ಮಾತ್ರೆಯ ಗಣಗಳದು: ಎರಡು ಗುರ್ವಕ್ಷರದ್ದಾಗಬಹುದು, ನಾಲ್ಕು ಲಘುಗಳಿಂದಾಗಬಹುದು.

ಮೂರನೆಯ ಪ್ರಕಾರವಾದ ಅಂಶಗಣಭಂದವು ರಾಗದ ದೃಷ್ಟಿಯಿಂದ ಇನ್ನೂ ಹೆಚ್ಚು ಸ್ವಚ್ಛಂದವಾದುದು. ಗಣಗಣಗಳಲ್ಲಿ ಇಂತಿಷ್ಟೇ ಅಕ್ಷರಗಳೆಂಬ ಕಟ್ಟುನಿಟ್ಟು ಇಲ್ಲಿ ಇಲ್ಲ. ಅದರ ಗಣಗಳು ಇಷ್ಟಿಷ್ಟೇ ಮಾತ್ರೆಗಳೆಂಬ ನಿರ್ಬಂಧವೂ ಇಲ್ಲ. ಅಕ್ಷರಗಳಿಂದ ಹೊರಡುವ ಸ್ವರಾಂಶಗಳ ಜೋಡಣೆಯು ಲಯಕ್ಕೆ ಅನುಸಾರವಾಗಿ ಹೇಗೆ ಬೇಕೊ ಹಾಗೆ ಒಳಯೋಜನೆಯಲ್ಲಿ ಧಾಟಿಗೆ ಸುಗಮವಾಗಿ ಹೊಂದಿಕೊಳ್ಳಲು ಇಲ್ಲಿ ಅನುಕೂಲವುಂಟು. ಇದು ಈ ಅಂಶಗಣಕ್ರಮದ ವಿಶಿಷ್ಟ ಲಕ್ಷಣ. ಅಂಶಗಣಕ್ರಮದ ಬಗೆಗೆ ಕೆಳಗಣ ಪದ್ಯವನ್ನು ಪರಿಶೀಲಿಸಬೇಕು :

ನಾಭಿಯಿಂ: ದೇಳಿಸಿ: ಎದೆಯೊಳೋ: ಲಾಡಿಸಿ
ಶೋಭೆಯು: ಮಾಡಿಕಂ: ಠದೊಳು
ಆಭೂಪ: ಮೆಚ್ಚಿರಾಗಿಸಿದರು: ಶ್ರೀದೇವಿ
ಶೋಭನ: ವನುಪಾಡು: ವಂತೆ

ಇದು ಸಾಮಾನ್ಯವಾಗಿ ಹಾಡುವುದಕ್ಕೆ ಒಗ್ಗುವುದರಿಂದ ಲಘು ಗುರುವಾಗಿ, ಗುರು ಲಘುವಾಗಿ ಉಚ್ಚಾರವಾಗಬಲ್ಲದು.

ಪರಂಪರೆ ಮತ್ತು ಪರಿಸರ

ಪರಂಪರೆ ಹಾಗೂ ಪರಿಸರಗಳು ನಾಗವರ್ಮನಿಗೆ ತುಂಬ ಅನುಕೂಲವಾಗಿದ್ದುವೆಂದು ಭಾವಿಸಲು ಆಸ್ಪದವಿದೆ. ಪರಂಪರೆಯ ದೃಷ್ಟಿಯಿಂದ ತನ್ನ ಮುತ್ತಜ್ಜ ಮುತ್ತಜ್ಜಿಯರನ್ನು ಮೊದಲುಮಾಡಿಕೊಂಡು ತಂದೆ ತಾಯಿಗಳವರೆಗೆ ನಾಗವ

ರ್ಮನು ತನ್ನ ಮನೆತನದ ಗುಣಶೀಲಗಳ ಬಗೆಗೆ ಹಾಗೂ ವಿದ್ಯಾಭಿರುಚಿಯ ಬಗೆಗೆ ಛಂದೋಂಬುಧಿಯ ಪ್ರಥಮಾಧಿಕಾರದ ಆರಂಭದಲ್ಲಿ ಪ್ರಸ್ತಾಪಮಾಡಿದ್ದಾನೆ. ಆತನ ಮುತ್ತಜ್ಜ ವೆಣ್ಣಮಯ್ಯ 'ಗುಣನಿಧಿಯಾಗಿದ್ದಂತೆ ವೇದಾಗಮಗಳಲ್ಲಿ' 'ನಿಪುಣ'ನಂತೆ. ಮುತ್ತಜ್ಜಿ ಕೌಂಡಿಕಬ್ಬೆ 'ಗುಣಾನ್ವಿತೆ;' 'ಸಜ್ಜನಿಕೆಯಲ್ಲಿ' ಮಿಗಿಲಾದವಳು. ಅಜ್ಜ ದಾಮಯ್ಯ ಜನರ ಹೆಗ್ಗಳಿಕೆಯನ್ನು ಗಳಿಸಿದ್ದ. ಅಜ್ಜಿ ಕುಂದಕಬ್ಬೆ 'ಕುಲವನಿತೆ' 'ಗುಣವ್ರಾತೆ'; ತಂದೆ ವೆಣ್ಣಮಯ್ಯನು 'ಲೌಕಿಕ–ವೈದಿಕ' ಶಾಸ್ತ್ರ ವಿವೇಕ ಕಲಾಭಿಜ್ಞ, ತಾಯಿ ಪೋಟಿಕಬ್ಬೆ 'ಗುಣವ್ರಾತೆ' 'ಪತಿಭಕ್ತಿಯುತೆ'. ಇಂತಹ ತಾಯಿತಂದೆಗಳ ಹಿರಿಯ ಮಗ 'ವಾಕ್‌ಶ್ರೀಪತಿ' ಹಾಗೂ ಸತ್ಕವಿ ನಾಗವರ್ಮ. ಅಭಿಮಾನಕ್ಕೆ ಆಸ್ಪದ ನೀಡುವ ಗೃಹ ಪರಂಪರೆಯಲ್ಲವೆ ಇದು ?

ನಾಗವರ್ಮನ ಪರಿಸರವೂ ಅಷ್ಟೇ ಚೆನ್ನಾದುದು. ಗಂಗರ ರಾಜಮನೆತನದ ರಕ್ಕಸಗಂಗನ ಸಂಪರ್ಕವನ್ನು ಪಡೆದ ಸುದೈವ ಅವನದು.ಅವನ ಗುರುಗಳೋ ಸುಪ್ರಸಿದ್ಧರಾಗಿದ್ದ ಅಜಿತಸೇನರು. ಅಂತಃಕರಣಪೂರ್ವಕವಾಗಿ ಆಶ್ರಯವಿತ್ತವನು 'ನೃಪ' 'ಅಣ್ಣ' 'ರಾಯ' ಎಂದು ಜನರಿಂದ ಪ್ರೀತಿಯ ಹಾಗು ಆದರದ ಹೆಸರು ಗಳಿಸಿದ ಚಾವುಂಡರಾಯ. ಚಾವುಂಡರಾಯನು ಸಾಹಿತ್ಯಪಕ್ಷಪಾತಿಯಾಗಿದ್ದುದಲ್ಲದೆ ಸ್ವತಃ ಸಾಹಿತ್ಯ ರಚನೆ ಮಾಡಿದವನು. ಮೇಲಾಗಿ ನಾಗವರ್ಮನು ವೈದಿಕ ಹಾಗೂ ಜೈನ ಸಂಪ್ರದಾಯಗಳನ್ನು ಹಿತವಾಗಿ ಸಮಾವೇಶಮಾಡಿಕೊಂಡ ವಾತಾವರಣದಲ್ಲಿ ಬೆಳೆದು ಬಂದ ಪಂಡಿತಕವಿ. ಸಾಹಿತ್ಯದ ಹಿನ್ನೆಲೆ; ಮನೆತನದ ಒಳ್ಳೆಯ ಪರಂಪರೆ ಹಾಗೂ ಉತ್ತೇಜನಕರವಾದ ಪರಿಸರಗಳನ್ನು ಪಡೆದ 'ವಾಕ್‌ಶ್ರೀಪತಿ'ಯಾದ ನಾಗವರ್ಮನಿಗೆ ಛಂದೋಂಬುಧಿಯಂತಹ ಲಕ್ಷಣ ಗ್ರಂಥವನ್ನು ರಚಿಸುವುದು ಸುಲಭ ಸಾಧ್ಯವಾಯಿತು ಎನ್ನಬಹುದು.

ನಾಗವರ್ಮನ ಕವಿತ್ವ ಶಕ್ತಿಯನ್ನೂ ಅವನ ವಿಶಾಲ ಧರ್ಮದೃಷ್ಟಿಯನ್ನೂ ಛಂದೋಂಬುಧಿಯ ಪ್ರಾರಂಭದ ಪ್ರಾರ್ಥನಾ ಪದ್ಯಗಳು ಎತ್ತಿ ತೋರುವಂತಿವೆ. ವಿಷ್ಣು, ಶಿವ, ಪಾರ್ವತಿ, ಗಣಪತಿ, ಸರಸ್ವತಿ, ಹಾಗೂ ಸೂರ್ಯದೇವ ಇವರೆಲ್ಲರಿಗೂ ಆತನ ವಂದನೆ ಸಂದಿದೆ. ನಿರರ್ಗಳವೂ ಸುಭಗವೂ ಆದ ಆತನ ಭಾಷಾಶೈಲಿಯನ್ನು ಪದಮೈತ್ರಿಯನ್ನು ಹೃದ್ಯವಾದ ಈ ಪದ್ಯಗಳು ಸುಳುಹುಗಾಣಿಸುತ್ತವೆ. ಶಿವ-ಪಾರ್ವತಿಯರನ್ನು ಸ್ತುತಿಸುವ ಪದ್ಯಗಳು ಶಬ್ದಚಿತ್ರಗಳಾಗಿವೆ. ಸರಸ್ವತಿಯ ಬಗೆಗೆ ಬಳಸಿದ ವಿಶೇಷಣಗಳು ಮನಂಬುಗುವುವು. ಪಂಪನಂತೆ ವೆಂಗಿಪಳುವಿನಿಂದ ಬಂದವನು ಸೈಯಡಿಯ ನಾಗವರ್ಮ; ಆತನು ಇಟ್ಟ 'ಅಡಿ'ಗೆ 'ಸೈ' ಎನ್ನುವಂತಾಗುತ್ತದೆ.

ಛಂದೋಂಬುಧಿಯ ರೂಪರೇಷೆ

ನಾಗವರ್ಮನ ಛಂದೋನಿರೂಪಣೆ ಆರು ಅಧಿಕಾರಗಳಲ್ಲಿದೆ. ಪ್ರಥಮಾಧಿಕಾರವು ಪೀಠಿಕೆಯ ಜೊತೆಗೆ ಅಕ್ಷರಗಣಗಳ ಪರಿಚಯ, ಅವನ್ನು ಪಡೆಯುವ ರೀತಿ; ಪ್ರಸ್ತಾರ, ಸಂಜ್ಞೆ, ಯತಿ, ಪ್ರಾಸಗಳ ಪ್ರಸ್ತಾಪ; ವರ್ಣವೃತ್ತಗಳಿಗೆ ಸಂಬಂಧಿಸಿದ 26 ಛಂದಗಳ ನಾಮನಿರ್ದೇಶನ; ಜೊತೆಗೆ ಕರ್ಣಾಟಕ ವಿಷಯ ಜಾತಿಯ ಹತ್ತು ಮಟ್ಟುಗಳ ಹೆಸರುಗಳ ಮಾಲೆ—

ದ್ವಿತೀಯಾಧಿಕಾರವು ವರ್ಣವೃತ್ತಗಳಿಗೆ ಮೀಸಲು. 'ಉಕ್ತೆ' ಎಂಬ ಛಂದದೊಳ್ ಒಂದಕ್ಕರಂ ಪಾದಮಾಗಿ ಪುಟ್ಟುವ ವೃತ್ತಗಳನ್ನು ಮೊದಲುಮಾಡಿಕೊಂಡು ಉತ್ಕೃತಿಯೆಂಬ ಛಂದದೊಳ್ ಇಪ್ಪತ್ತಾರಕ್ಕರಂ ಪಾದಮಾಗಿ ಉಳ್ಳ ವೃತ್ತಗಳವರೆಗೆ ವಿವಿಧ ಸಮವೃತ್ತಗಳು ಲಕ್ಷಣ ಲಕ್ಷ್ಯ ಸಹಿತವಾಗಿ ನಿರೂಪಿತವಾಗಿವೆ.*

ತೃತೀಯಾಧಿಕಾರದಲ್ಲಿ ಮಾಲಾವೃತ್ತ, ಅರ್ಧಸಮವೃತ್ತ, ವಿಷಮವೃತ್ತ ಶ್ಲೋಕ, ವೈತಾಳಿ, ಜಾತಿಗಾಥೆ, ರಗಳೆ, ದಂಡಕ ಇವುಗಳ ಸ್ಥೂಲ ಪರಿಚಯ ಬಂದಿದೆ.

ಚತುರ್ಥಾಧಿಕಾರವು 'ಮಾತ್ರುಛಂದ'ಗಳಿಗೆ ಮೀಸಲು ಕಂದ, ಆರ್ಯೆ, ಗೀತಿಕೆ, ಸಂಕೀರ್ಣ, ದುವಯಿ, ಬಂಧಗಳು ಕಂದಪದ್ಯಗಳಲ್ಲಿ ಲಕ್ಷಿಣಿಸಿವೆ.

ಪಂಚಮಾಧಿಕಾರದಲ್ಲಿ 'ಕರ್ನಾಟಕ ವಿಷಯ ಜಾತಿ'ಯ ಪಿರಿಯಕ್ಕರ ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿರಿಯಕ್ಕರ, ತ್ರಿಪದಿ, ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಉತ್ಸಾಹ, ಷಟ್ಪದಿಗಳನ್ನು ಲಕ್ಷ್ಯ ಲಕ್ಷಣಾನ್ವಯವಾಗಿ ನಿರೂಪಿಸಲಾಗಿದೆ. ಮೊದಲಲ್ಲಿ ಈ ಮಟ್ಟುಗಳಲ್ಲಿ ಅಳವಡುವ ಬ್ರಹ್ಮ, ವಿಷ್ಣು, ರುದ್ರಗಣಗಳ ಹಾಗು ಅವುಗಳ ಪ್ರಕಾರಗಳ ಸ್ಥೂಲ ಪರಿಚಯ ಬಂದಿದೆ.

ಷಷ್ಠಾಧಿಕಾರದಲ್ಲಿ ಷಟ್ಪ್ರತ್ಯಯಗಳ–ಎಂದರೆ ಛಂದಸ್ಸಿಗೆ ಸಂಬಂಧಿಸಿದ ಗಣಕಾಂಶಗಳ-ವಿವರಣೆ ಬಂದಿದೆ. ವೃತ್ತಗಳು ಹೀಗೆಯೇ ಇರಬೇಕೆಂಬುದನ್ನು ಮನಗಾಣಲು

---

*ಮೊದ ಮೊದಲು ಬರೆದವರು 6 ಅಕ್ಷರಗಳ ಛಂದದಿಂದ ತೊಡಗಿ 26ರ ವರೆಗೂ ಪ್ರತಿಪಾದಿಸಿದರು. ಆ ಬಳಿಕ ಅವರು 1 ರಿಂದ 6ರ ವರೆಗೂ ಸೇರಿಸಿ ಕೊರೆ ಕಾಣದಂತೆ ಮಾಡಿದರು. 6 ಅಕ್ಷರಗಳು ಗಾಯತ್ರಿ ಅಥವು ನಾಲ್ಕು - 24 ಅಗುತ್ತವೆ. ವೇದದಲ್ಲಿ ಗಾಯತ್ರಿಯಲ್ಲಿ 8 ಅಕ್ಷರಗಳಿದ್ದು 3 ಪಾದಗಳಿದ್ದು - 24 ಅಕ್ಷರಗಳು.

ಕೆಲವು ಪ್ರತ್ಯಯಗಳನ್ನು ಎಂದರೆ ಪ್ರಮಾಣಗಳನ್ನು ಈ ಕೊನೆಯ ಅಧಿಕಾರದಲ್ಲಿ ತಿಳಿಯಪಡಿಸಲಾಗಿದೆ.*

ನಾಗವರ್ಮನ ವಿಷಯ ನಿರೂಪಣೆ ಒಟ್ಟಿನಲ್ಲಿ ಅಚ್ಚುಕಟ್ಟಾಗಿದೆ. ಮೇಲಾಗಿ ಛಂದೋಂಬುಧಿಯನ್ನು ತನ್ನ ಹೆಂಡತಿಗೆ ಹೇಳಿದಂತೆ ನಿರೂಪಿಸಿದುದರಿಂದ ಅವನ ಶಾಸ್ತ್ರಗ್ರಂಥ ಒಂದಿಷ್ಟು ಸರಸವೂ ಆಗಿದೆ. ವಿಷಯ ನಿರೂಪಣೆಗಾಗಿ ನಾಗವರ್ಮನು ಸಾಮಾನ್ಯವಾಗಿ ಕಂದಪದ್ಯಗಳನ್ನು ಬಳಸಿದ್ದಾನೆ. ಪದ್ಯರಚನೆಗೆ ಕಂದವು ಸುಲಭ ವಾಗಿದ್ದಂತೆ ವಿಷಯ ವಿವೇಚನೆಗೆ ಅನುಕೂಲವೂ ಅಹುದು.

ವಿಷಯ ಪ್ರವೇಶ

ಈವರೆಗೆ ಹೇಳಿದುದು ಛಂದೋಂಬುಧಿಯ ಪೀಠಿಕೆಯಾಯಿತು. ಇನ್ನು ನೇರ ವಾದ ವಿಷಯ ವಿವೇಚನೆಯ ಮಾತು.

ಇಂದುಧರನು ಉಮೆಗೆ ಹೇಳಿದ ಛಂದಸ್ಸನ್ನು ಪಿಂಗಳನು ಈ ಲೋಕದಲ್ಲಿ ಬಿತ್ತರಿಸಲಾಗಿ ಅದನ್ನೇ ತಾನು ತನ್ನ ಹೆಂಡತಿಗೆ ಹೇಳಿದುದಾಗಿ ನಾಗವರ್ಮನು ವಿಷಯವನ್ನು ಆರಂಭಿಸಿದ್ದಾನೆ.

ಮೊದಲಲ್ಲಿ ಅವನು ಹೆಸರಿಸಿದ ಮ, ಯ, ರ, ಸ, ತ, ಜ, ಭ, ನ – ಈ ಎಂಟು ಪ್ರಕಾರದ ಅಕ್ಷರಗಣಗಳ ಸ್ವರೂಪವನ್ನು ಹಾಗೂ ಸಂಕೇತಗಳನ್ನು ಕ್ರಮವಾಗಿ ಕೆಳಗೆ ನಿರ್ದೇಶಿಸಲಾಗಿದೆ.

ಗಣ	ಪ್ರಸ್ತಾರ [ಬಳಸಿರುವ ಸಂಜ್ಞೆ]	ವಿವರ	ಸಂಕೇತ
ಮಗಣ	– – –	ಸರ್ವಗುರು	ಧಾತ್ರಿ (ಪೃಥ್ವಿ)
ಯಗಣ	ᴗ – –	ಆದಿಲಘು	ತೋಯ (ಜಲ)

*ಅವು ಕ್ರಮವಾಗಿ ಪ್ರಸ್ತಾರ, ನಷ್ಟ, ಉದ್ದಿಷ್ಟ, ಲಗಕ್ರಿಯೆ, ಸಂಖ್ಯಾನ, ಅಧ್ವಯೋಗ ಎಂಬವು.
ಪ್ರಸ್ತಾರ - ಗುರು ಲಘು ವಿವರದಲ್ಲಿ ಒಂದೊಂದು ಛಂದಸ್ಸನ್ನು ವಿಭಾಗಿಸುವುದು. ಎಷ್ಟೆಷ್ಟು ವೃತ್ತ ಎಂಥೆಂಥವಾಗುವುವು ಎಂದು ತಿಳಿಸುವಂತೆ.
ನಷ್ಟ - ಯಾವುದಾದರೂ ಛಂದದ ಇಷ್ಟನೆ ವೃತ್ತ ಕೆಟ್ಟಿದೆ. ಅದರ ಲಘುಗಳ ಸ್ವರೂಪವೇನು ?
ಉದ್ದಿಷ್ಟ - ಇಂಥ ಛಂದಸ್ಸಿನಲ್ಲಿ ಕಂಡ ಪಾದವು ಪ್ರಸ್ತಾರಕ್ರಮದಲ್ಲಿ ಎಷ್ಟನೆಯದು.
ಲಗಕ್ರಿಯೆ - ಯಾವುದಾದರೂ ಛಂದದಲ್ಲಿ + 1 ಲಘು ಗುರು ಇರುವ ವೃತ್ತ ಎಷ್ಟು 2 ಗ ಇರುವು ವೆಷ್ಟು ಇತ್ಯಾದಿ.
ಸಂಖ್ಯಾನ – ಆಯಾ ಛಂದಸ್ಸಿನಲ್ಲಿ ವೃತ್ತಸಂಖ್ಯೆ ಎಷ್ಟು ಎಂದು.
ಅಧ್ವಯೋಗ - ಆಯಾ ಛಂದಸ್ಸಿನ ಪ್ರಸ್ತಾರವನ್ನು ಹಾಕಲು ಎಷ್ಟು ಅಗಲ ಎಷ್ಟು ಉದ್ದ ಸ್ಥಳ ಬೇಕು ?

ರಗಣ	– ∪ –	ಮಧ್ಯಲಘು	ಶಿಖಿ (ತೇಜ)
ಸಗಣ	∪ ∪ –	ಅಂತ್ಯಗುರು	ವಾಯು
ತಗಣ	– – ∪	ಅಂತ್ಯಲಘು	ಆಕಾಶ
ಜಗಣ	∪ – ∪	ಮಧ್ಯಗುರು	ಆದಿತ್ಯ
ಭಗಣ	– ∪ ∪	ಆದಿಗುರು	ಚಂದ್ರ
ನಗಣ	∪ ∪ ∪	ಸರ್ವಲಘು	ಸ್ವರ್ಗ

ಈ ಗಣಗಳಲ್ಲಿ ಮೊದಲಿನ ಐದು ಪಂಚಮಹಾಭೂತಗಳ ಹೆಸರುಗಳು ಉಳಿದ ಮೂರು ಗಣಗಳಿಗೆ ಸೂರ್ಯ, ಚಂದ್ರ, ಸ್ವರ್ಗ ಇವು ಸಂಕೇತ.*

ಯತಿ ಪ್ರಸ್ತಾಪ

ನಾಗವರ್ಮನು ಯತಿಯ ಮಾತನ್ನೆತ್ತಿ ಕವಿರಾಜಮಾರ್ಗಕಾರನು ಹೇಳಿದಂತೆ "ಯತಿಯೆಂಬುದುಸಿರ್ದಾಣಂ" ಎಂದು ಹೇಳಿ, "ಯತಿಕೆಡೆ ಕವಿತಾಭಿಧಾನಮೇನೆಸೆದಪುದೇ ?" ಎಂದು ಕೇಳುತ್ತಾನೆ. ಸಂಸ್ಕೃತದ ವೃತ್ತಛಂದಸ್ಸಿನ ಅತಿ ಪ್ರಭಾವದಿಂದಾಗಿ ಈ ಮಾತನ್ನು ಅವನು ಆಡಿರಬಹುದೇನೋ. ಅನೇಕ ವರ್ಣವೃತ್ತಗಳಲ್ಲಿ ಲಯವು ಹೆಚ್ಚಾಗಿ ಜೀಕುವುದರಿಂದ ಅವುಗಳ ಸಂಬಂಧದಲ್ಲಿ 'ಉಸಿರ್ದಾಣ'ವೆಂಬ ಅರ್ಥದಲ್ಲಿ ಯತಿಯ ಪ್ರಸ್ತಾಪ ಅನಿವಾರ್ಯ. ಆದರೆ ಮಾತ್ರಾಗಣ ಬಂಧಗಳ ವಿಷಯದಲ್ಲಾಗಲಿ ಕರ್ಣಾಟಕ ವಿಷಯ ಜಾತಿಯ ಅಂಶಗಣದ ಮಟ್ಟುಗಳ ಸಂಬಂಧದಲ್ಲಾಗಲಿ 'ಯತಿ'ಯು ಉಸಿರ್ದಾಣವಾಗಿ ಬರಬೇಕಿಲ್ಲ; ಅವುಗಳ ಲಯ ಸಾಮಾನ್ಯವಾಗಿ ಸಮಪ್ರವಾಹದಲ್ಲಿ ಸಾಗುವುದರಿಂದ 'ಉಸಿರ್ದಾಣ' ಎಂಬ ಅರ್ಥದಲ್ಲಿ ಅದರ ಪ್ರಸ್ತಾಪ ಅನಾವಶ್ಯಕ. ಬಹುಶಃ ಈ ಸಂಗತಿಯನ್ನು ಗಮನಿಸಿಯೇ ಅವನು 'ಯತಿ' ಕೆಲವರ ಅಭಿಪ್ರಾಯದಲ್ಲಿ 'ಶ್ರುತಿಸುಭಗಂ' ಎಂಬ ಮಾತನ್ನು ಹೇಳಿದಂತಿದೆ. ಅಚ್ಚ ಕನ್ನಡ ಮಟ್ಟುಗಳಲ್ಲಿ ಯತಿ ಯಾವಾಗಲೂ 'ಶ್ರುತಿಸುಭಗ'ವಾಗಿರುತ್ತದೆ. ಕರ್ಣಾಟಕ ವಿಷಯ ಜಾತಿಯ ಮಟ್ಟುಗಳನ್ನು ಲಕ್ಷಣಿಸುತ್ತ ಜಯಕೀರ್ತಿಯು ತನ್ನ ಛಂದೋನುಶಾಸನದಲ್ಲಿ ಪಿರಿಯಕ್ಕರದ ಸಂದರ್ಭದಲ್ಲಿ "ಪಾದೇ ಪಾದೇऽತ್ರ ಪ್ರತಿಗಣಮಪಿ ಯತಿರ್ಲಕ್ಷ್ಯತೇ ಸರ್ವೇಷಾಮಕ್ಷರಾಣಾಂ" ಎಂದು ಹೇಳಿದ ಮಾತು ಅಂಶಗಣಾನ್ವಯವಾದ ಎಲ್ಲ ಅಚ್ಚಗನ್ನಡ ಮಟ್ಟುಗಳಿಗೆ ಅನ್ವಯಿಸುತ್ತದೆ. ಈ ಮಟ್ಟು

*ಛಂದೋಂಬುಧಿಯ 'ಗ' ಪ್ರತಿಯಲ್ಲಿ ಈ ಬಗೆಗೆ ಒಂದು ಪದ್ಯವಿದೆ :

ಮಗಣಂ ಭೂಮಿಯೆನಿಕ್ಕುಂ
ಯಗಣಂ ಜಲ ರಗಣ ಮಗ್ನಿ ಸಗಣಂ ವಾತಂ
ತಗಣಾಂಬರ ಜಗಣಾರ್ಕಂ
ಭಗಣಂ ಶಶಿ, ನಗಣ ನಾಕಮಂಬುಜವದನೇ

ಗಳ ಶ್ರುತಿಯಲ್ಲಿ ಒಂದೊಂದು ಗಣಕ್ಕೂ ಸಹಜವಾದ ಹಾಗು ಸೂಕ್ಷ್ಮವಾದ ಯತಿ ಪ್ರತೀತಿಗೆ ಬರುತ್ತದೆ ಎಂಬುದನ್ನು ಪರೀಕ್ಷಿಸಿ ಅರಿಯಬಹುದು.*

ಪ್ರಾಸ ವಿಚಾರ

ಕವಿರಾಜಮಾರ್ಗಕಾರನು ಪ್ರಾಸದ ವಿಚಾರವಾಗಿ ಹೇಳಿದ ಕೆಲವು ಮುಖ್ಯ ಮಾತುಗಳನ್ನು ನಾಗವರ್ಮನು ಚೆನ್ನಾಗಿ ಗಮನಿಸಿದ್ದಾನೆ. ಯಾವುದೊಂದು ಪದ್ಯದ ಮೊದಲ ಪಾದದಲ್ಲಿ ಬರುವ ಎರಡನೆಯ ಅಕ್ಷರವನ್ನು ಆ ಪದ್ಯದ ಇತರ ಪಾದಗಳಲ್ಲಿಯೂ ಇಡುವುದು ಕನ್ನಡ ಪದ್ಯಗಳಿಗೆ ವಿಶಿಷ್ಟವಾದ ಆದಿಪ್ರಾಸ; "ನುತಶಬ್ದಾಲಂಕಾರದೊಳ್ ಅತಿಶಯಂ ಅದು ಕನ್ನಡಕ್ಕೆ ಸತತಂ ಪ್ರಾಸಂ" ಎಂದು ಹೇಳಿದ ಕವಿರಾಜಮಾರ್ಗಕಾರನ ಅಭಿಪ್ರಾಯವನ್ನೇ ನಾಗವರ್ಮನು ತಳೆದಿದ್ದಾನೆ. ಕನ್ನಡಕ್ಕೆ ಈ ಆದಿಪ್ರಾಸ ಅತಿಶಯವಾದುದು. ಆದರೆ ಅದು ಸತತವೆಂದು ಖಚಿತ ವಾಗಿ ಹೇಳಲಿಕ್ಕಾಗದು. ಏಕೆಂದರೆ ಹಳಗನ್ನಡ ಕಾವ್ಯಗಳಲ್ಲಿ ಅಲ್ಲಲ್ಲಿ ಸುಳಿದು ಬಂದ ಒಂದೆರಡು ರಗಳೆಗಳಲ್ಲಿ ಆದಿಪ್ರಾಸವಿಲ್ಲ; ಅಂತ್ಯಪ್ರಾಸ ಮಾತ್ರ ಮುಖ್ಯ. ಕನ್ನಡ ನುಡಿಯ ಹಾಡುಗಳಲ್ಲಿ, ಜನಪದ ಗೀತೆಗಳಲ್ಲಿ ಆದಿಪ್ರಾಸವು ಮೊದ ಲಿಂದಲೂ ಸಾಮಾನ್ಯವಾಗಿ ನುಡಿಯ ಮೋಡಿಯನ್ನು ಅನುಸರಿಸಿ ಬಂದಿದೆ.†

ಸಮವರ್ಣ ವೃತ್ತಗಳ ವಿಚಾರ

ಛಂದೋಂಬುಧಿಯಲ್ಲಿ ವರ್ಣ ಸಮವೃತ್ತಗಳ ಲಕ್ಷಣ ನಿರೂಪಣೆ ಅಚ್ಚು ಕಟ್ಟಾಗಿ, ವಿವರವಾಗಿ ಬಂದಿದೆ. ತುಂಬ ದೀರ್ಘವಾದ ದ್ವಿತೀಯಾಧಿಕಾರವು ಈ ಸಮವೃತ್ತಗಳ ನಿರೂಪಣೆಗೆ ಮೀಸಲಾಗಿದೆ. "ಒಂದು ಅಕ್ಷರವು ಒಂದು ಪಾದ ವಾಗಿರುವ 'ಉಕ್ತೆ' ಎಂಬ ವೃಂದದ 'ಶ್ರೀ' ವೃತ್ತವನ್ನು ಮೊದಲುಮಾಡಿಕೊಂಡು 'ಉತ್ಕೃತಿ' ಎಂಬ ಛಂದದಲ್ಲಿ 26 ಅಕ್ಷರಗಳು ಒಂದೊಂದು ಪಾದದಲ್ಲಿ ಸೇರಿರುವ 'ವನಲತೆ'ಯವರೆಗೆ ಅನೇಕ ವೃತ್ತಗಳ ಲಕ್ಷಣ ನಿರೂಪಣೆ ಸಂಸ್ಕೃತ ಸಂಪ್ರ

---

*ಮಾತ್ರಾಗಣರಚನೆ ಖಚಿತ ತಾಳದ ಪೆಟ್ಟು ಬೀಳುವಂತೆ ವಿಭಕ್ತವಾಗುತ್ತವೆ.ಪ್ರಾಸಾದಿ ಶಬ್ದಾಲಂ ಕರಣದ ವಿಜೃಂಭಣೆಗೂ ಅವಕಾಶಕೊಡುತ್ತದೆ. ಅಕ್ಷರ ಗಣವೃತ್ತ ಬಂಧಗಳಿಗೆ ಮಾತ್ರ ವ್ಯಾಪ್ತಿ ಉಳ್ಳದ್ದು ಯತಿಯ ಪ್ರಸ್ತಾಪ. — ಸಂ.

†ಕನ್ನಡದ ಆದಿಪ್ರಾಸದ ಬಗೆಗೆ ಸಿಂಹ, ಗಜ, ವೃಷಭ, ಶರಭ, ಅಜ, ಹಯಗಳೆಂಬ ಆರು ಪ್ರಕಾರದ ಪ್ರಾಸಗಳನ್ನು ವಿನುತ, ಶಾಂತ, ಉಪನತ, ಸಮೀಪಗತ, ಅನುಗತ, ಅಂತಗತ ಎಂಬ ಪ್ರಾಸ ವಿನ್ಯಾಸಗಳನ್ನು ನಿರೂಪಿಸುವ ಕವಿರಾಜಮಾರ್ಗದ ಪದ್ಯಗಳು 'ಛಂದೋಂಬುಧಿ'ಯ 'ಗ' ಪ್ರತಿಯಲ್ಲಿ ಇದ್ದಕ್ಕಿದ್ದಂತೆ ಮೂಡಿಬಂದ ಸಂಗತಿ ಕುತೂಹಲವನ್ನುಂಟುಮಾಡದಿರದು. ಈ ವಿವಿಧ ಆದಿಪ್ರಾಸದ ಬಗೆಗೆ ಕವಿರಾಜಮಾರ್ಗದಲ್ಲಿ ಉದಾಹರಣೆಗಳು ದೊರೆಯುತ್ತವೆ.

ದಾಯಕ್ಕೂ ಕನ್ನಡ ಚಂಪೂ ಕಾವ್ಯಪರಂಪರೆಗೂ ಅನುಗುಣವಾಗುವಂತೆ ನಾಗ ವರ್ಮನು ಮಾಡಿದ ವೃತ್ತಗಳ ಆಯ್ಕೆಯಲ್ಲಿ ಔಚಿತ್ಯದೃಷ್ಟಿ ಕಾಣುವುದು. ವಿಷಯದ ಮೇಲೆ ಅವನಿಗಿರುವ ಹಿಡಿತವೂ ಅವನ ಪದ್ಯರಚನಾಶಕ್ತಿಯೂ ಎದ್ದು ಕಾಣುತ್ತವೆ. ಆ ವೃತ್ತಗಳನ್ನು ಲಕ್ಷಣಿಸುವ ಪದ್ಯಗಳು ಲಕ್ಷ್ಯಗಳೂ ಆಗಿವೆ; ಕನ್ನಡಕ್ಕೆ ವಿಶಿಷ್ಟ ವಾದ ಆದಿಪ್ರಾಸವನ್ನು ಒಳಗೊಂಡಿವೆ; ಇದು ಗಮನಾರ್ಹವಾದ ಸಂಗತಿ. ಸಂಸ್ಕೃತ ವಲ್ಲಿ ಅಷ್ಟೊಂದು ಬಳಕೆಯಲ್ಲಿರದ, ಆದರೆ ಕನ್ನಡದಲ್ಲಿ ತುಂಬಾ ರೂಢವಾಗಿರುವ ಒಂದೆರಡು ವೃತ್ತಗಳನ್ನು ನಾಗವರ್ಮನು ಸ್ವತಂತ್ರವಾಗಿ ನಿರೂಪಿಸಿರುವಂತಿದೆ. ಒಂದೊಂದೂ ವೃತ್ತದ ಲಕ್ಷಣ ಲಕ್ಷ್ಯ ಸಮೋಪೇತವಾದ ಪದ್ಯದಲ್ಲಿ ನಾಗವರ್ಮನು ಒಂದೊಂದು ಸುಂದರವಾದ ವಿಶೇಷಣವನ್ನು ಬಳಸಿ ತನ್ನ ಪತ್ನಿಯನ್ನು ಸಂಬೋಧಿಸಿ ವೃತ್ತದ ಲಕ್ಷಣ ಹೇಳಿದ್ದಾನೆ.

ಖ್ಯಾತ ಕರ್ಣಾಟಕವೃತ್ತಗಳೆಂದು ಗಣ್ಯವಾದ ಆರು ವೃತ್ತಗಳೂ ಇವು ಗಳ ಜೊತೆಗೆ ಕನ್ನಡ ಚಂಪೂ ಕೃತಿಗಳಲ್ಲಿ ವಿರಳವಾಗಿಯಾದರೂ ಎಡೆಪಡೆದ ಮಲ್ಲಿಕಾ ಮಾಲೆ, ತರಳ, ಮಾಲಿನಿ, ಶಿಖರಿಣಿ, ಹರಿಣಿ, ಪೃಥ್ವೀ ಖಚರಪ್ಲುತ, ಉಜ್ಜ್ವಳ, ವಸಂತ ತಿಲಕ, ರಥೋದ್ಧತ, ಇಂದ್ರವಜ್ರ, ಉಪೇಂದ್ರ ವಜ್ರ ಮೊದಲಾದ ಹತ್ತಾರು ವೃತ್ತಗಳೂ ನಾಗವರ್ಮನ ಛಂದೋಂಬುಧಿಯಲ್ಲಿ ಸರಳವಾಗಿ ಸುಭಗ ವಾಗಿ ಲಕ್ಷಣ ಪಡೆದಿವೆ.

ಚಂಪಕ, ಉತ್ಪಲ ಮಾಲೆಗಳಂತೆ, ಶಾರ್ದೂಲ, ಮತ್ತೇಭ ವಿಕ್ರೀಡಿತಗಳಂತೆ, ಸ್ರಗ್ಧರೆ ಮಹಾಸ್ರಗ್ಧರೆಗಳಂತೆ, ಮಲ್ಲಿಕಾ ಮಾಲೆ ತರಳವೃತ್ತ ಇವೂ ಅಂಥುದೇ ಒಂದು ಜೋಡಿ. ಮಲ್ಲಿಕಾಮಾಲೆ ಹಾಗೂ ತರಳವೃತ್ತಗಳ ಬಳಕೆ ಸಂಸ್ಕೃತ ಕಾವ್ಯ ಗಳಿಗಿಂತ ಕನ್ನಡ ಕಾವ್ಯಗಳಲ್ಲಿ ಹೆಚ್ಚು. ಅವುಗಳ ಸುಲಲಿತವಾದ ಲಯವು ಮಾತ್ರೆ ಗಳ ಲೆಕ್ಕಾಚಾರಕ್ಕೆ ಸಹ ಸುಖವಾಗಿ ಹೊಂದಿಕೊಳ್ಳುವುದೇ ಇದಕ್ಕೆ ಕಾರಣವಾಗಿ ದ್ದೀತು.

"ಮಲ್ಲಿಕಾ ಮಾಲೆಯೆಂಬುದು ನಿಶ್ಚಯಂ ಕವಿರಾಜಹಂಸ ವಿನಿರ್ಮಿತಂ" ಎಂದು ನಾಗವರ್ಮನು ಹೇಳಿದುದರಲ್ಲಿ ವಿಶೇಷವಾದ ಅರ್ಥವೂ ಔಚಿತ್ಯವೂ ಕಾಣಿಸುತ್ತದೆ. ಅದರಂತೆಯೇ ತರಳವೃತ್ತವನ್ನು ಲಕ್ಷಣಿಸುತ್ತ........ "ಸಂದುದಿಂತಿದು ನಾಗವರ್ಮ ವಿನಿರ್ಮಿತಂ; ತರಳಲೋಚನೆ ನಾಮದಿಂ ತರಳಂ ಕವೀಂದ್ರ ಜನಸ್ತುತಂ" ಎಂದು ಮೆಚ್ಚುಕೆಯೊಡನೆ ಹೇಳಿದ ಮಾತಿನಲ್ಲಿಯೂ ಔಚಿತ್ಯವುಂಟು.

ವರ್ಣವೃತ್ತಲಕ್ಷಣ ನಿರೂಪಣೆಗೆ ನಾಗವರ್ಮ ಬಳಸಿದ ಸಂಕೇತಗಳು:—

ಸ್ಥಳಾಭಾವದ ದೃಷ್ಟಿಯಿಂದ ಇಲ್ಲಿ ಖ್ಯಾತ ಕರ್ನಾಟಕ ವೃತ್ತಗಳ ಲಕ್ಷಣ ಗಳನ್ನು ಮಾತ್ರ ಹೇಳುವುದು ಸಾಧ್ಯ.

1. ಚಂಪಕಮಾಲೆಯು ಪ್ರತಿ ಪಾದದಲ್ಲಿ
ತ್ರಿದಶ, ರವಿ, ಇಂದ್ರ, ಭಾಸ್ಕರ, ಗಣತ್ರಿತಯ, ಅಗ್ರದೊಳ್ ಅಗ್ನಿ (ಎಂದರೆ–ನ,ಜ,ಭ,ಜ,ಜ,ಜ,ರ) ಗಣಗಳು–ಕಿಟೆಲ್ ನಾ.ಛಂ II–206.

2. ಉತ್ಪಲಮಾಲೆಯು ಪ್ರತಿ ಚರಣದಲ್ಲಿ ಶೀತಕರ, ಅನಲ, ಇಂದ್ರಪುರ, ಚಂದ್ರ, ಶಶಾಂಕ, ಹುತಾಶನಂ ಲಗೋಪೇತಮೊಡಂಬಡುತ್ತಿರೆ. ರುದ್ರರ ಸಂಖ್ಯೆಯೊಳಾಗೆ ವಿಶ್ರಮಂ (ಭ, ರ, ನ, ಭ, ಭ, ರ ಗಣಗಳು ಮುಂದೆ ಒಂದು ಲಘು ಮತ್ತು ಒಂದು ಗುರು 11 ರಲ್ಲಿ ಇರುತ್ತವೆ)
ಅದೇ. II–203

3, ಮತ್ತೇಭ ವಿಕ್ರೀಡಿತದ ಪ್ರತಿಪಾದದ ಗಣವಿನ್ಯಾಸ:–
ಶ್ವಸನ, ಇಂದು, ಜ್ವಲನ, ಅಮರ, ಅವನಿ, ಜಲಂ, – ಈ ಗಣಗಳ, (ಸ, ಭ, ರ, ನ, ಮ, ಯ ಗಣಗಳು) + ಮುಂದೆ ಒಂದು ಲಘು ಹಾಗು ಒಂದು ಗುರು.
ಅದೇ. II–202

4. ಶಾರ್ದೂಲ ವಿಕ್ರೀಡಿತದ ಪ್ರತಿಚರಣದ ಗಣಯೋಜನೆ –
ಉರ್ವೀ ಮಾರುತ, ಭಾಸ್ಕರ, ಅನಿಲ, ವಿಯದ್ವಂದ್ವ (ಮ, ಸ, ಜ, ಸ, ತ, ತಗಣಗಳು; + ಕೊನೆಯಲ್ಲಿ ಗುರು.)
ಅದೇ. II–200

5. ಸ್ರಗ್ಧರೆಯು ಪ್ರತಿ ಪಾದದಲ್ಲಿರುವ ಗಣವಿನ್ಯಾಸ ಹೀಗೆ :
"ಭೂಮಿ ಜ್ವಾಲೇಂದು ದೇವಾಧಿಪ ಪುರಗಣದಿಂ ಮುಂತೆ ತೋಯ ತ್ರಯಂಗಳ್" (ಎಂದರೆ ಮ, ರ, ಭ, ನ, ಯ, ಯ, ಯ, ಗಣಗಳು)
ಅದೇ. II–207

6. ಮಹಾಸ್ರಗ್ಧರೆಯು ಪ್ರತಿ ಚರಣದಲ್ಲಿರುವ ಗಣಗಳ ಕ್ರಮ ಹೀಗೆ "ಮರುದಾಕಾಶದ್ವಯೇಂದ್ರಾನಿಲ ಹುತವಹಯುಗ್ಮ ಅಂಗಜಾರಾತಿ ಯರ್ಕಳ್" — (ಎಂದರೆ ಸ, ತ, ತ, ನ, ಸ, ರ, ರ, ಗಣಗಳು, + ಮುಂದೆ ಒಂದು ಗುರು)
ಅದೇ. II–210

ಕನ್ನಡ ಕಾವ್ಯಗಳಲ್ಲಿ ಬಳಕೆಗೊಂಡ ಇನ್ನುಳಿದ ವರ್ಣವೃತ್ತಗಳ ಲಕ್ಷಣಗಳನ್ನೆಲ್ಲ ಈ ಎಲ್ಲ ವರ್ಣವೃತ್ತಗಳ ಕ್ರಮದ ಸಂಬಂಧದಲ್ಲಿ ಹಾಗೂ ಅವುಗಳ ನಾಮ ನಿರ್ದೇಶನ ಸಂಬಂಧವಲ್ಲಿ ನಾಗವರ್ಮನ ಛಂದೋಂಬುಧಿಗೂ ಜಯಕೀರ್ತಿಯ

ಛಂದೋನುಶಾಸನಕ್ಕೂ ಸಾಕಷ್ಟು ಸಾಮ್ಯ ಕಂಡುಬರುತ್ತದೆ. ನಾಗವರ್ಮನು ಲಕ್ಷ್ಯ ಲಕ್ಷಣ ಸಮೋಪೇತವಾಗಿ 'ವೃತ್ತ'ಗಳನ್ನು ಲಕ್ಷಣಿಸಿದ್ದರೆ ಜಯಕೀರ್ತಿ ಸಂಸ್ಕೃತ ಛಂದೋಲಕ್ಷಣಕಾರರ ಬಳಿವಿಡಿದು ಸೂತ್ರ ರೂಪದಲ್ಲಿ ಲಕ್ಷಣಿಸಿದ್ದಾನೆ.*

ವರ್ಣವೃತ್ತಗಳಲ್ಲಿ ಮಾತ್ರಾಗಣ ಬಂಧ

ಕೆಲವು ವರ್ಣವೃತ್ತಗಳಲ್ಲಿ ಮಾತ್ರಾಗಣಾನ್ವಯವಾದ ಛಂದೋಗತಿಗಳನ್ನು ಗುರುತಿಸಬಹುದು. ಈ ಬಗೆಯ ಬಂಧಗಳು ಕೆಲವು ಕನ್ನಡ ಪದ್ಯಗಳಲ್ಲಿ ಮೈದೋರಿದುದುಂಟು. ಆದ್ದರಿಂದ ಅವು ಕನ್ನಡಕ್ಕೆ ಪ್ರಿಯವಾಗಿರಬೇಕು.

'ಲಲಿತಪದ' ವೃತ್ತವು ಈ ಬಗೆಯ ಒಂದು ಛಂದೋಬಂಧ. ಮಾತ್ರಾಗಣದ ಲೆಕ್ಕಾಚಾರದಂತೆ ಅದರಲ್ಲಿ ಕಾಣುವ ಗಣಯೋಜನೆ ಹೀಗೆ :

ಕುಲಿಶಧರ : ಪುರದಿನಪ : ಮಾರುತ ಹ : ರಾಂತಂ	5 : 5 : 5: 4
ನೆಲಸಿನಿಲೆ : ಯತಿದಶದೊ : ಳಿರ್ದೊಡೆ ನಿ : ತಾಂತಂ	5 : 5 : 5 : 4
ಸಲೆನೆಲಕೆ : ಪಿರಿದುದಿದ : ನೋಡಬಲೆ : ಸಂತಂ	5 : 5 : 5 : 4
ಲಲಿತಪದ : ಮುಚಿತಪದ : ಯುಕ್ತಮತಿ : ಕಾಂತಂ	5 : 5 : 5 : 4

ಅದೇ. II – 183

ನಡುಗನ್ನಡ ಹಾಗೂ ಹೊಸಗನ್ನಡ ಪದಗಳಲ್ಲಿ ಈ ಬಗೆಯ ಮಾತ್ರಾ ಗಣಾನ್ವಯವಾದ ಪದ್ಯಗಳು ಕಣ್ಣಿಗೆ ಬೀಳುತ್ತವೆ.

ಛಂದೋಂಬುಧಿಯಲ್ಲಿ ನಿರೂಪಿತವಾದ ಮಂದಾನಿಲ ವೃತ್ತವನ್ನು ಅದೇ. II – 127) ಇದೇ ದೃಷ್ಟಿಯಿಂದ ಪರಿಶೀಲಿಸಿದರೆ ಅದರಲ್ಲಿ ನಾಲ್ಕು ನಾಲ್ಕು ಮಾತ್ರೆಗಳ ನಾಲ್ಕು ನಾಲ್ಕು ಗಣಗಳ ಯೋಜನೆಯ್ತು, ಎಂದರೆ ನಿಯತವಾದ ಮಂದಾನಿಲ ರಗಳೆಯ 4 : 4 : 4 : 4 ರ ಗಣಯೋಜನೆಯಿದೆ. ಇದರಿಂದಾಗಿಯೇ ಮಂದಾನಿಲ ರಗಳೆಗೆ ಈ ಹೆಸರು ಬಂದಿರಬಹುದೋನೊ !

ಶೀತಕ : ರೋ ರ್ವಿ : ಮಾರುತ : ಚೇತೋ
ಜಾತ ಹರರ್ ಬಂದಿರ್ದೊಡ ದೇತುಂ
ಭೂತಳ: ಮೆಲ್ಲಂ: ಗಂಡುದಿ: ದೆತ್ತಂ: ನೀತಿಯು : ತೇ ಮಂ: ದಾನಿಲ ವೃತ್ತಂ

ಇಲ್ಲಿ ಅಕ್ಷರ ಸಂಖ್ಯೆ ಗಣನಿಯುತಿ ಎರಡೂ ಕ್ರಮವಾಗಿವೆ. ಎಲ್ಲ ಪಾದಗಳೂ ಎರಡೂ ಗುರುಗಳಿಂದ ಕೊನೆಗೊಳ್ಳುತ್ತವೆ. ಆದಿಪ್ರಾಸ ಎಲ್ಲಕ್ಕೂ ಇದೆ, ಅಂತ್ಯಪ್ರಾಸ 3 – 4 ಕ್ಕೆ ಮಾತ್ರ ಇದೆ.

---

*ಅನುಬಂಧ ನೋಡಿ

ಮಣಿಗಣನಿಕರ, ದೋಧಕ ಮೊದಲಾದ ಮತ್ತೆ ನಾಲ್ಕಾರು ವೃತ್ತಗಳ ಶ್ರುತಿ ಗತಿಗಳು ನಿಯತ ಮಂದಾನಿಲ (ರಗಳೆಯ) ಲಯವನ್ನೇ ನೆನಪಿಗೆ ತರುತ್ತವೆ. ಗುರು ಲಘುಗಳ ವಿನ್ಯಾಸದ ವ್ಯತ್ಯಾಸದಿಂದಾಗಿ ಈ ವೃತ್ತಗಳಿಗೆ (ವರ್ಣವೃತ್ತದ ದೃಷ್ಟಿ ಯಿಂದ) ಬೇರೆ ಬೇರೆ ಹೆಸರುಗಳು ರೂಢವಾಗಿವೆ; ಅಷ್ಟೇ.

ಕನ್ನಡದಲ್ಲಿ ರೂಢವಾಗಿರುವ ಮಾತ್ರಾಗಣಾನ್ವಯವಾದ ಒಂದೆರಡು ಮಂದಾ ನಿಲ ಪ್ರಭೇದಗಳನ್ನೂ ಕೆಲವು ವರ್ಣವೃತ್ತಗಳಲ್ಲಿ ಗುರುತಿಸಬಹುದು. ಉದಾಹರಣೆ ಗಾಗಿ 3 : 5 : 3 : 5 ಈ ಗಣಯೋಜನೆಯನ್ನೊಳಗೊಂಡ 'ಮಂದಾನಿಲ'ದ ಪ್ರಭೇದವು 'ಸ್ವಾಗತ'ವೆಂಬ ಹೆಸರಿನ ವರ್ಣವೃತ್ತದಲ್ಲಿ ಕಾಣಬರುತ್ತದೆಯಾದರೂ ಅದರ ನಡೆಯೂ ಯತಿಸ್ಥಾನವೂ ಏಕೊ ಏನೊ ಕನ್ನಡದ ನಡೆಯಾಗಿ ಕಾಣಿಸದು ಉದಾ: ಏಗಳ್ಗಂ ಯತಿದಿ. ಶಾಗಜ. ದೊಳನಿಂ । 5 : 3 : 4 : 4.

ಮತ್ತಕೋಕಿಲ ಅಥವಾ 'ನಿರುಪಮ' ವೃತ್ತವು ಲಯದಲ್ಲಿ ಹಾಗೂ ಮಾತ್ರಾ ಗಣದ ವಿನ್ಯಾಸದಂತೆ 'ಸ್ವಾಗತ'ವನ್ನೇ ಹೋಲುತ್ತದೆ. ಅದರ ಗಣಯೋಜನೆ ಯನ್ನೂ ಉದಾಹರಣೆಯನ್ನೂ ಕೆಳಗಣ ಲಕ್ಷಲಕ್ಷ್ಯ ಪದ್ಯ ಎತ್ತಿ ತೋರುತ್ತದೆ. (ಆದರೆ ಯತಿ ಎರಡು ಗಣನೆಯಲ್ಲಿ ಬೇರೆ ಬೇರೆ) ಮತ್ತಕೋಕಿಲದ ದನಿಯು ಅದ ರಲ್ಲಿ ಮಾರ್ದನಿಗೊಡುವಂತೆ ಭಾಸವಾಗುತ್ತದೆ. (ಉದಾ. ನಿರುಪಮಂ ಕೆಳದಿ ಮತ್ತ ಕೋಕಿಲದ 3 5 : 3 5 : ಅಥವಾ 5 : 3 : 5 : 3 :)'ನಿರುಪಮ' ವೃತ್ತದ ಲಕ್ಷಣ – ಲಕ್ಷ್ಯ ಪದ್ಯದಲ್ಲಿ ಗುರುತು ಮಾಡಿತೋರಿದಂತೆ ಮಾತ್ರಾಗಣಗಳನ್ನು ಹೊರಡಿಸಬಹುದು.

ಸುರಪು : ರೇಂದುದಿವ : ಸಾಧಿ : ಪಾಗ್ನಿಗಳ್	3 : 5 : 3 : 5
ಬರೆ ದಿ : ನೇಶಹಯು : ದೊಳ್ವಿ : ರಾಮುಮಾ	3 : 5 : 3 : 5
ಗಿರೆ ಪೆ : ಸರ್ನೆಗಳೆ : ಪಿಂಗ : ಳೋಕ್ತಿಯೊಳ್	3 : 5 : 3 : 5
ನಿರುಪ : ಮಂ ನಿರುಪ : ಮಾನ : ವಿಭ್ರಮಂ	3 : 5 : 3 : 5

ಅದೇ. II - 153

ಮಾತ್ರಾಗಣದ ಲೆಕ್ಕಾಚಾರದಂತೆ 3: 5: 4: 4 ರ ಗಣಯೋಜನೆ ಕಾಣುವ ಮಂದಾನಿಲದ ಇನ್ನೊಂದು ಪ್ರಭೇದ ದ್ರುತಪದ. ಕೆಳಗಣ ಪದ್ಯವನ್ನು (ಅದೇ. 132) ಲಯಾನುಸಾರವಾಗಿ ಹೇಳಿದರೆ ದ್ರುತಪದದ ಬೆಡುಗು ಗಮನಕ್ಕೆ ಬಾರದಿರದು.

ಶತಮು: ಖೇಂದು ರವಿ: ತೋಯಮು: ಪಾಗಲ್ ? 3 : 5 : 4 : 4 – 16

42 — 4 —

ಯತಿಪ : ದಂ ನಿಲವು : ದಂತಿಯೊ : ಳೆಕ್ಕಂ 3 : 5 : 4 : 4 – 16

ಶತದ : ಳಾಯತವಿ : ಲೋಚನೆ : ವೃತ್ತಂ 3 : 5 : 4 : 4 – 16

ದ್ರುತಪ : ದಂ ದ್ರುತಪ : ದೋಕ್ತಿಗ : ಳಿಂದಂ 3 : 5 : 4 : 4 – 16

ಅದೇ. 2 – 154

ಮಂದಾನಿಲದ ಈ ವಿವಿಧ ಛಂದೋಗತಿಗಳನ್ನು ನಮ್ಮ ಕವಿಗಳು ರಗಳೆಗಾಗಿ ಬಳಸಿರುವದುಂಟು. ವೃತ್ತಗಳ ಹಾಗೂ ಮಾತ್ರಾಗಣ ಬಂಧಗಳು – ಎಂದರೆ 'ವೃತ್ತ' ಹಾಗೂ 'ಜಾತಿ' – ಒಮ್ಮೊಮ್ಮೆ ಒಂದೇ ನಾದದ ಗತಿಯಲ್ಲಿ ಸಾಗುವದು ಗಮನಕ್ಕೆ ಬರುತ್ತದೆ. ಕೊನೆಯ ನಿಲವಿನಲ್ಲಿ ವಿವಿಧ ಛಂದೋಗತಿಗಳು ಒಂದೇ ಧಾಟಿಯ ನೆಲೆಯನ್ನು ನಿಲುಕುತ್ತವೆ, ಎಂದು ಹೇಳಬಹುದೇನೊ !

'ವೃತ್ತ' ಎಂಬುದು ಸಮವೃತ್ತವನ್ನೇ ಸಾಮಾನ್ಯವಾಗಿ ಸೂಚಿಸುತ್ತದೆ. ಆದರೆ ಎಲ್ಲ ವರ್ಣವೃತ್ತಗಳೂ ಸಮವೃತ್ತಗಳಲ್ಲ.?

ಸಮವೃತ್ತಗಳ ನಿರೂಪಣೆಗೆ ಮೀಸಲಾದ ದ್ವಿತೀಯ ಅಧಿಕಾರವನ್ನು ನಾಗವರ್ಮನು

ಶ್ರೀಪದವುಂ ಸಮವೃತ್ತ ನಿ
ರೂಪಣ ಸಮಯದೊಳೆ ತಂದು ಮೊದಲಿಟ್ಟೆನದಂ
ಚಾಪಳಲೋಚನೆ ಬಹ್ವಾ
ಳಾಪದೊಳೇಂ ಕೇಳೆ ಕೆಳದಿ ನಿನಗಭ್ಯುದಯಂ

ಎಂದು ಪ್ರಾರಂಭಿಸಿ .... ಶ್ರೀಮತ್ ಕವಿರಾಜಹಂಸ ವಿರಚಿತಮಪ್ಪ ಛಂದೋಂಬುಧಿಯೊಳ್ ಸಮವೃತ್ತ ವಿವರಣ ನಾಮ ದ್ವಿತೀಯಾಧಿಕಾರಂ ಸಮಾಪ್ತಂ ಎಂದು ಮುಕ್ತಾಯಗೊಳಿಸುತ್ತಾನೆ.

*

ಸಮವೃತ್ತಗಳ ಲಕ್ಷಣ ನಿರೂಪಣೆಯ ತರುವಾಯ ತೃತೀಯ ಅಧಿಕಾರದಲ್ಲಿ ನಾಗವರ್ಮನು ಮಾಲಾವೃತ್ತಗಳತ್ತ ತನ್ನ ಗಮನವನ್ನು ಹರಿಸಿದ್ದಾನೆ. ಮಾಲಾವೃತ್ತಗಳಲ್ಲಿ ಲಲಿತವೃತ್ತ ಹಾಗೂ ಕುಸುಮರಸ ವೃತ್ತಗಳನ್ನು ಲಕ್ಷಣಿಸಿದ್ದಾನೆ. ಈ ಮಾಲಾವೃತ್ತಗಳ ಲಕ್ಷಣವನ್ನುಕೂಡ ಅವನು 'ಮ, ಯ, ರ, ಸ, ತ, ಜ, ಭ, ನ, ಗಣಗಳ ಸಂಕೇತಗಳಾದ ಪೃಥ್ವೀ, ಜಲ, ತೇಜ,

ವಾಯು, ಆಕಾಶ, ಸೂರ್ಯ, ಚಂದ್ರ, ಸ್ವರ್ಗ – ಈ ಹೆಸರುಗಳನ್ನು ಬಳಸಿ ಹೇಳಿದ್ದಾನೆ. 'ಲಲಿತ ವೃತ್ತ'ದಲ್ಲಿ ಐದೈದು ಮಾತ್ರೆಗಳ ಏಳು ಗಣಗಳು ಮುಂದೆ ಕೊನೆಯಲ್ಲಿ 4 ಮಾತ್ರೆಗಳ ಒಂದು ಗಣ ಅಥವಾ 3 ಗುರು ಬರುತ್ತವೆ. ಎಂಬು ದನ್ನು ಪರಿಶೀಲಿಸಿ ಅರಿಯಬಹುದು. ಅಥವಾ 5 – 5 ಸಂಯುಕ್ತ ಮಾತ್ರೆಗಳ ಖಂಡ 3, ಒಂದು 5 ಮಾತ್ರೆಯದು, ಒಂದು 4 ರದು. ಆದರೆ ಇದು ಖಚಿತವಾದ 30 ಅಕ್ಷರಗಳಪಾದ.

ಪ್ರಾಸವಿನ್ಯಾಸವನ್ನು ಪರಿಶೀಲಿಸಿದರೆ ಪ್ರತಿಚರಣವನ್ನು ಹೀಗೆ ಇರಿಸ ಬಹುದು :

ತಾನೆ ಶಶಿ ಸೂರ್ಯ ಪವ
ಮಾನ ಸುರ ಶೀತಕರ
ಭಾನು ಮರುದಿಂದ್ರವಿಧು ತೋಯದೆ ವಿರಾಮ ಸ್ಥಾನ

ಈ ರೂಪದಲ್ಲಿ ಇರಿಸಿದರೆ ಲಲಿತವೃತ್ತದ ಎರಡು ಚರಣಗಳು ಕುಸುಮ ಷಟ್ಪ ದಿಯ 5 × 3 ಒಂದು ಪದ್ಯವನ್ನು ಸಮೀಪವಾಗಿ ಹೋಲುವದೆಂಬುದು ಗಮನಕ್ಕೆ ಬಾರದಿರದು. ಕುಸುಮ ಷಟ್ಪದಿಯಲ್ಲಿ ಲಲಿತರಗಳೆಯಲ್ಲಿ, ಸೀಸಪದ್ಯಗಳಲ್ಲಿ – ಬೇಂದ್ರೆಯವರ ಉಯ್ಯಾಲೆಯಲ್ಲಿ ಸೀಸಪದ್ಯದಲ್ಲಿ. ಇದೇ ಲಯದ ವಿವಿಧ ಬಗೆ ಗಳನ್ನು ಕಾಣುತ್ತೇವೆ.

ತಾನೆ ಶಶಿ ಸೂರ್ಯ ಪವಮಾನ ಸುರ ಶೀತಕರ
ಭಾನು ಮರು ದಿಂದ್ರ ವಿಧು ತೋಯದೆ ವಿರಾಮ
ಸ್ಥಾನಮೆಸೆಗುಂ ಪದವಿತಾನದೊಳನುಕ್ರಮದೆ
ನೀನರಿವುದೀ ಲಲಿತ ವೃತ್ತಮನಿದಂ ಚಂ ....

ಮಾಲೆಗಳಂತೆ ಉದ್ದವಾಗಿರುವ ಚರಣಗಳನ್ನು ಒಳಗೊಂಡಿರುವುದರಿಂದ ಈ ವೃತ್ತಗಳನ್ನು 'ಮಾಲಾವೃತ್ತ' ಎಂದು ಕರೆಯುವ ಸಂಪ್ರದಾಯವೂ ಉಂಟಾಗಿರ ಬಹುದು. ಮಾತ್ರಾಗಣಗಳ ಲೆಕ್ಕಾಚಾರದಂತೆ ಸುಸೂತ್ರವಾಗಿ ಸುಗಮವಾಗಿ ಲಯ ಹೊರಡುವ ಈ ವೃತ್ತಗಳನ್ನು ಮಾತ್ರಾವೃತ್ತಗಳಲ್ಲಿ ಅಡಕ ಮಾಡಲು ಬರುವಂತಿದೆ.

ಮಾಲಾವೃತ್ತಗಳ ತರುವಾಯ ನಾಗವರ್ಮನ ದೃಷ್ಟಿ ಅರ್ಧಸಮ ವೃತ್ತ

ಗಳತ್ತ ಸುಳಿದಿದೆ. ಅರ್ಧಸಮ ವೃತ್ತಗಳಿಗೆ ಸಂಬಂಧಿಸಿದ ಅಚ್ಯುತಕವೃತ್ತ, ದಿವಿಜ ಕಲ್ಪಲತಾವೃತ್ತ, ಕವಿಪ್ರಭವೃತ್ತಗಳು ಕನ್ನಡದಲ್ಲಿ ಬಳಕೆಯಾಗಿಲ್ಲ.

ಅರ್ಧಸಮವೃತ್ತದಿಂದ ವಿಷಮವೃತ್ತಗಳಿಗೆ ಸಾಗಿದೆ ನಾಗವರ್ಮನ ಗಮನ. ವಿಷಮವೃತ್ತಗಳಲ್ಲಿ ಉದ್ಗತವೃತ್ತ, ಉದ್ಗತಾಭೇದವೃತ್ತ, ತ್ರಿಪದೋನ್ನತಿವೃತ್ತ, ಪದಚತುರೂರ್ಧ್ವವೃತ್ತ ಇವುಗಳನ್ನು ಲಕ್ಷಣಿಸಿ —

"ಇಂತಸಮವೃತ್ತಂಗಳನೇಕಮಕ್ಕುಂ" ಎಂದು ಹೇಳಿ ಅಷ್ಟಕ್ಕೆ ಕೈಬಿಟ್ಟಿದ್ದಾನೆ. ಈ ವೃತ್ತಗಳೂ ಕನ್ನಡದಲ್ಲಿ ಬಳಕೆಯಾದಂತೆ ಕಂಡುಬರುವುದಿಲ್ಲ. ತದನಂತರ ನಾಗ ವರ್ಮನು 'ಅನುಷ್ಟುಭ್'; 'ವೈತಾಳೀಯ'; ಜಾತಿಗಾಥೆಗಳನ್ನು ಅವಸರವಸರ ದಿಂದ ಕಲಸುಮೇಲೋಗರದ ಬಗೆಯಲ್ಲಿ ಎಡೆಮಾಡಿದ್ದಾನೆ. ಮುಂದೆ ಅದೇ ಅವಸರದ ಬಗೆಯಲ್ಲಿ 'ರಘಟಾ' (ರಗಳೆ) ಬಂಧಗಳ ಸಾಮಾನ್ಯ ಲಕ್ಷಣಗಳನ್ನು ಹೇಳಿದ್ದಾನೆ.

ರಗಳೆ

ರಘಟಾ ಬಂಧ ಅಥವಾ ರಗಳೆ ಕನ್ನಡ ಕಾವ್ಯಗಳಲ್ಲಿ ವಿಶೇಷವಾಗಿ ಮೈದೋರಿದ ಛಂದಸ್ಸು. ನಮ್ಮ ಅತ್ಯಂತ ಪ್ರಾಚೀನ ಕಾವ್ಯಗಳಲ್ಲಿ ರಗಳೆ ಎಡೆಪಡೆದುದುಂಟು. ಪಂಪ, ಪೊನ್ನ, ರನ್ನರು ತಮ್ಮ ಚಂಪೂ ಕಾವ್ಯಗಳಲ್ಲಿ ಅದನ್ನು ಅಲ್ಲಲ್ಲಿ ಬಳಸಿ ಅದರ ಬಗೆಗಳ ಸುಳುಹುಗಾಣಿಸಿದ್ದಾರೆ; ಉತ್ಸಾಹ, ಮಂದಾನಿಲ, ಲಲಿತ, ಈ ಎಲ್ಲ ರೂಪ ಗಳಲ್ಲೂ ಅವರ ಕಾವ್ಯಗಳಲ್ಲಿ ರಗಳೆ ರೂಪದೋರಿದೆ. ಮಾರ್ಗದಿಂದ ನಮ್ಮ ಕಾವ್ಯ ದೇಸಿಯತ್ತ ತಿರುಗುತ್ತಿದ್ದ ಗಡುವಿನಲ್ಲಿ ಹರಿಹರನು ಅದನ್ನು ಇಡಿಯ ಕಾವ್ಯಗಳಲ್ಲಿ ನಿರರ್ಗಳವಾಗಿ ಬಳಸಿ ರಗಳೆಯ ಸವಿಯನ್ನು ಕಿವಿಗೆತ್ತಿ ಕೇಳಿಸಿದ ಶ್ರೇಯಸ್ಸು ಸಣ್ಣ ದಲ್ಲ. ಆ ಮಾತಂತಿರಲಿ : ನಾಗವರ್ಮನ ಛಂದೋಂಬುಧಿ ರಚನೆಗೊಳ್ಳುವ ಮುನ್ನ ಹಾಗೂ ರಚನೆಗೊಳ್ಳುತ್ತಿದ್ದ ಕಾಲದಲ್ಲಿ ಕವಿಗಳು ಅದನ್ನು ಕಾವ್ಯಗಳಲ್ಲಿ ಬಳಸಿದ ಸಂಗತಿ ನಿಸ್ಸಂದೇಹವಾದುದು. ಹೀಗೆ ತನ್ನ ಕಾಲದಲ್ಲಿ ಪ್ರಚಲಿತವಿದ್ದ ಈ ಛಂದಸ್ಸಿನ ಕಡೆಗೆ ನಾಗವರ್ಮನು ತಕ್ಕಷ್ಟು ಅವಧಾನವನ್ನು ಪೂರೈಸಲಿಲ್ಲವೆಂದೇ ಹೇಳಬೇಕು. ರಗಳೆಯ ಲಕ್ಷಣ ನಿರೂಪಣೆಗೆ ಅವನು ರಚಿಸಿದ ಪದ್ಯಗಳು ಒಂದೊ ಎರಡೊ ; ಅಷ್ಟೇ. ಅವನು ರಗಳೆಯನ್ನು ಲಕ್ಷಣಿಸಿದ ರೀತಿ ಲಕ್ಷಣ–ಲಕ್ಷ್ಯ ಸಮೋ ಪೇತವಾದ ರೀತಿ ಕೂಡ ಅಲ್ಲ. ಒಂದು ಕಂದಪದ್ಯದಲ್ಲಿ ರಗಳೆಯ ಸಾಮಾನ್ಯ ಲಕ್ಷಣ ಹೇಳಿದ್ದಾನೆ ; ಇನ್ನೊಂದರಲ್ಲಿ – ಅದು ಅವನ ಕಂದಪದ್ಯವೇ ಆದರೆ ರಗಳೆಯ ಮೂರು ಮುಖ್ಯ ಭೇದಗಳಾದ ಉತ್ಸಾಹ, ಮಂದಾನಿಲ, ಲಲಿತಗಳನ್ನು ಹೆಸರಿಸಿ ಒಂದೊಂದರಲ್ಲಿ ಹೊರಡುವ ಒಟ್ಟು ಮಾತ್ರೆಗಳ ಸಂಖ್ಯೆಯನ್ನು ಹೇಳಿ ಮುಗಿಸಿದ್ದಾನೆ. ಅಂತೂ ಗಡಿಬಿಡಿಯ ಪ್ರಶ್ನೆಗೆ ಗಡಿಬಿಡಿಯ ಉತ್ತರ.

ಅದೇನೆ ಇರಲಿ ; ಕಂದಪದ್ಯದ ಮುಖಾಂತರ ಅವನು ಹೇಳಿದ ರಗಳೆಯ ಲಕ್ಷಣಗಳು ಇಂತಿವೆ : —

1) ರಗಳೆಯ ಚರಣ ಚರಣಗಳಲ್ಲಿ ಮಾತ್ರೆಗಳು
ಗಣವಿಪರ್ಯಾಸದೊಡನೆ ಎಣೆಪದಗಳಲ್ಲಿ ಕೂಡಿರುತ್ತವೆ.

2) ರಗಳೆ ಒಳ್ಪೆಸೆದು ಮಾತ್ರೆ ಸರಿಯಾಗಿ ತಾಳದ
ಗಣನೆಗೆ ಒಡಂಬಟ್ಟಿರುತ್ತದೆ.

ಜಯಕೀರ್ತಿ ಛಂದೋನುಶಾಸನದ ಸಂಜ್ಞಾಪ್ರಕರಣದಲ್ಲಿ ರಗಳೆಯನ್ನು ಪ್ರಸ್ತಾಪಿಸುತ್ತ ಸಾಮಾನ್ಯವಾಗಿ ಇದೇ ಮಾತುಗಳನ್ನು ಹೇಳಿರುವನು.

(1) ಸ್ವಚ್ಛಂದವಾಗಿರುವದೇ ರಗಳೆಯ ಸಂಜ್ಞೆ
(ಸ್ವಚ್ಛಂದ ರಘಟಾ ಸಂಜ್ಞಾ)

(2) ಮಾತ್ರಾಕ್ಷರ ಸಮೋದಿತವಾಗಿರುತ್ತದೆ,
ಸುಶ್ರಾವ್ಯವಾಗಿರುತ್ತದೆ.

(3) ರಗಳೆ ಪಾದದ್ವಂದ್ವ ಸಮಾಕೀರ್ಣವಾಗಿರುತ್ತದೆ. ಎಂಬ ಒಂದು ವಿವರವನ್ನು ಜಯಕೀರ್ತಿ ಹೆಚ್ಚಿಗೆ ಹೇಳಿದ್ದಾನೆ. * ಅಂತ್ಯಪ್ರಾಸದ ದೃಷ್ಟಿಯಿಂದ ಈ ಮಾತನ್ನು ಅವನು ಹೇಳಿದಂತಿದೆ. ರಗಳೆಯ ಬಗೆಗೆ ಜಯಕೀರ್ತಿ ಹೇಳಿದುದು ಕೂಡ ಇಷ್ಟೇ.

ನಾಗವರ್ಮನು ರಗಳೆಯನ್ನು ಮಾತ್ರಾವೃತ್ತಗಳ ನಿರೂಪಣೆಗೆ ಮೀಸಲಾದ ಚತುರ್ಥಾಧಿಕಾರದಲ್ಲಿ ಸಮಾವೇಶ ಮಾಡದೆ ಸಂಕೀರ್ಣವಾಗಿರುವ ತೃತೀಯ ಅಧಿಕಾರದಲ್ಲಿ ಏಕೆ ಒಳಪಡಿಸಿದನೊ ತಿಳಿಯದು. ಅದೇನೇ ಇರಲಿ, ಅಷ್ಟೊಂದು ಅಚ್ಚುಕಟ್ಟಾಗಿ ಸೂತ್ರಿಸಿದ ತೃತೀಯಾಧಿಕಾರವು ದಂಡಕದ ಪ್ರಸ್ತಾಪದೊಡನೆ ಮುಗಿಯುತ್ತದೆ.

ನಾಗವರ್ಮನ ಕಾಲದಲ್ಲಿಯೋ ಪ್ರಚಲಿತವಾಗಿದ್ದ ರಗಳೆಯ ಬಗೆಗೆ ಇನ್ನೂ ಹೆಚ್ಚಿಗೆ ತಿಳಿದುಕೊಳ್ಳುವುದು ಆವಶ್ಯಕವಾಗಿರುವುದರಿಂದ ಇಲ್ಲಿ ಹೆಚ್ಚಿನ ವಿವರಗಳನ್ನು ಪೂರೈಸಬಹುದು :

* ಒಂದು ರೀತಿ, ರಗಳೆ ದ್ವಿಪದೀಮಾಲೆ. ಪ್ರಾಕೃತ ಕಡವಕಗಳನ್ನೂ ನೋಡಿ — ಸಂ.

ರಗಳೆಯೂ ಮಾತ್ರಾಗಣಗಳ 'ಜಾತಿ' ಛಂದಸ್ಸು.

ಕನ್ನಡದಲ್ಲಿ ರಗಳೆಗೆ ಪದ್ಯದ ಕಟ್ಟು ಇಲ್ಲ. ಎರಡೆರಡು ಚರಣಗಳಿಗೆ ಅಂತ್ಯ ಪ್ರಾಸವನ್ನೊಳಗೊಂಡು ಅನೇಕ ಚರಣಗಳಲ್ಲಿ ಒಂದೇ ಗತಿಯಲ್ಲಿ ಹರಿಯುವ ಛಂದಸ್ಸು ಅದು. ಹರಿಹರ ಕವಿಯು ತನ್ನ ಕಥನ ಕಾವ್ಯಕೃತಿಗಳಿಗಾಗಿ ರಗಳೆಯನ್ನು ನಿರರ್ಗಳವಾಗಿ ಬಳಸಿದ ಸಂಗತಿ ಗಮನಾರ್ಹವಾದುದು.

ರಗಳೆಯ ಪ್ರಕಾರಗಳು ಮುಖ್ಯವಾಗಿ ಮೂರು. ಉತ್ಸಾಹ, ಮಂದಾನಿಲ, ಲಲಿತ.

ಉತ್ಸಾಹ ರಗಳೆ

ಉತ್ಸಾಹ ರಗಳೆಯು ಮೂರು ಮೂರು ಮಾತ್ರೆ ಗಣಗಳದು. ಅದು ಎರಡು ರೂಪಗಳಲ್ಲಿ ಕಣ್ಣಿಗೆ ಬೀಳುವುದುಂಟು. ಚರಣ ಚರಣದಲ್ಲಿ ಮೂರು ಮೂರು ಮಾತ್ರೆಗಳ 4 ಗಣಗಳುಳ್ಳದ್ದು ಒಂದು. ಚರಣ ಚರಣದಲ್ಲಿ 8 ಗಣಗಳನ್ನುಳ್ಳ ರೂಪ ಇನ್ನೊಂದು. ಮೊದಲನೆಯ ರೂಪಕ್ಕೆ ಒಂದು ಉದಾಹರಣೆ.

ಅ ದ ಟಿ: ಬ ಳ ಸಿ: ದುಪ ವ: ನಂಗ	—	3: 3: 3: 3
ಳುದಿತ: ಕೋಕಿ: ಲಸ್ವ: ನಂಗ		3: 3: 3: 3
ಳೆಸೆವ: ಶೋಕ: ಚೂತ: ವನದ		3: 3: 3: 3
ಮಿಸುಪ: ವಕುಳ: ತಿಳಕ: ವನದ		3: 3: 3: 3

(ರನ್ನನ ಅಜಿತಪುರಾಣ)

ಉತ್ಸಾಹ ರಗಳೆಯ ಇನ್ನೊಂದು ರೂಪಕ್ಕೆ ಉದಾಹರಣೆ :

ಶಶಿಯ· ಬೆ ಳ ಗ: ನೆ ಳೆ ದು: ಕೊಂಡು: ರ ವಿ ಯ: ರುಚಿಯ: ನಾಳಿ: ಗೊಂಡು
ಮಿಸುಪ: ಮಿಂಚಿ: ನೊಳಗೆ: ಪೊಳೆವ: ಬಣ್ಣ: ಮಂ ಕ: ಳಲ್ಚಿ: ಕೊಂಡು.

ಈ ಉತ್ಸಾಹ ರಗಳೆ ಎಂಟೆಂಟು ಗಣಗಳುಳ್ಳದ್ದು.

ಮಂದಾನಿಲ ರಗಳೆ

ಮಂದಾನಿಲ ರಗಳೆಯ ನಿಯತವಾದ ಗತಿಯಲ್ಲಿ ನಾಲ್ಕು ನಾಲ್ಕು ಮಾತ್ರೆ ಗಳ 4 ಗಣಗಳು ಅಳವಟ್ಟಿರುತ್ತವೆ.

ಪ್ರಸ್ತಾರ :	ಗಣವಿನ್ಯಾಸ	ಒಟ್ಟುಮಾತ್ರೆ
ಸಸಿಕಳೆ: ಯಿಂದದಿ: ಕೌಮುದಿ: ಯಿಂದದಿ —	4: 4: 4: 4 –	16
ಬಿಸಕಂ: ದದಕುಂ: ದದಮುಗು: ಳಿಂದದಿ	4: 4: 4: 4 –	16
ತಳೆದಳು: ಪದ್ಮಾ: ವತಿ ವಿ: ಭ್ರಮಮುಂ	4: 4: 4: 4 –	16
ತಳೆದಳು: ನವಯೌ: ವನ ಭೂ: ಷಣಮುಂ	4: 4: 4: 4 –	16

ಮಂದಾನಿಲ ರಗಳೆಯ ವಿನ್ಯಾಸದಲ್ಲಿ ಮಾಡಿಕೊಂಡ ಒಂದು ಪ್ರಭೇದವೂ ಅಲ್ಲಲ್ಲಿ ಕಾಣುತ್ತದೆ: ಈ ಮಂದಾನಿಲದ ಪ್ರಭೇದವನ್ನು ಕೆಳಗಣ ಉದಾಹರಣೆ ಯಿಂದ ಗುರುತಿಸಬಹುದು: ಈ ಪ್ರಭೇದದಲ್ಲಿ 4: 4: 4: 4: ಈ ಬಗೆಯ ಗಣ ವಿನ್ಯಾಸದ ಬದಲು 3: 5: 4: 4: ಈ ಬಗೆಯ ಗಣಯೋಜನೆ ಬಳಕೆಯಾಗಿದೆ.*

ಪ್ರಸ್ತಾರ	ಗಣವಿನ್ಯಾಸ	ಒಟ್ಟುಮಾತ್ರೆ
ಬಿನ ದೊ ಳೆತ್ತಲುಂ: ಸುಳಿವರ: ಗಿಳಿಗಳೆ —	3: 5: 4: 4: –	16
ಜಿನುಗಿ: ರಾಗದಿಂ: ದಂ ಮೊಱೆ: ವಳಿಗಳೆ —	3: 5: 4: 4: –	16

'ಮಂದಾನಿಲ' ರಗಳೆಗೆ 'ಮಂದಾನಿಲ' ವೆಂಬ ಹೆಸರು ಪ್ರಾಪ್ತವಾಗಿದ್ದರೂ ಅದರಗತಿ ತ್ವರಿತವಾದ ಗತಿಯೆಂಬುದು ಅದರ ಲಯದ ನಡೆಯಿಂದ ಗಮನಕ್ಕೆ ಬರುತ್ತದೆ.

ಲಲಿತ ರಗಳೆ

ಲಲಿತ ರಗಳೆ ನಿಜವಾಗಿ ಲಲಿತವಾದ್ದು. ಐದು ಐದು ಮಾತ್ರೆಗಳ ನಾಲ್ಕು ನಾಲ್ಕು ಗಣಗಳದ್ದು.

ಪ್ರಸ್ತಾರ	ಗಣವಿನ್ಯಾಸ	ಒಟ್ಟು ಮಾತ್ರೆ
ತೆನೆವಾಲ: ನುಂಡು ಬೆಳೆ: ವರಗಿಳಿಗ: ಳುರ್ಕಿನಿಂ	— 5: 5: 5: 5 –	20
ಕೊನೆರಂ ಕ: ದುರ್ಗಂಕೆ ಕೂ: ಗುವ ಪಿಕದ; ಸೊರ್ಕಿನಿಂ	— 5: 5: 5: 5 –	20

(ಆದಿ ಅಂತ್ಯ ಎರಡು ಪ್ರಾಸಗಳೂ ಇವೆ)

ಲಲಿತ ರಗಳೆಯ ಛಂದೋಗತಿ ನಿಧಾನವಾಗಿ ಸಾಗುವ ಗತಿಯೂ ಅಹುದು; ಭಾಷಾಭಿವ್ಯಕ್ತಿಗೂ ಅನುಕೂಲವಾದುದು. ಹರಿಹರ ತನ್ನ ಬಸವದೇವರಾಜ ರಗಳೆ,

*ಇದು ಆಗ ಎಂಟು ಮಾತ್ರೆಗಳ ಎರಡು ಸಂಯುಕ್ತಗಣಗಳೂ ಆಗಬಲ್ಲವು - ಸಂ.

ನಂಬಿಯಣ್ಣನ ರಗಳೆ ಮೊದಲಾದ ಶ್ರೇಷ್ಠ ರಗಳೆಯ ಕಾವ್ಯಗಳಿಗಾಗಿ ಅದನ್ನು ಬಳಸಿದುದನ್ನು ನೆನೆಯಬೇಕು.

*

ಛಂದೋಂಬುಧಿಯ ಚತುರ್ಥಾಧಿಕಾರವು ಕಂದ, ಆರ್ಯೆ, ಗೀತಿಕೆ, ಸಂಕೀರ್ಣ ದುವಯಿ – ಈ ಮಾತ್ರಾಗಣ ಛಂದೋಬಂಧಗಳ ಲಕ್ಷಣ ನಿರೂಪಣೆಯನ್ನು ಒಳಗೊಂಡಿದೆ.

ಕಂದ

ಕಂದ ಪದ್ಯವು ನಾಲ್ಕು ಚರಣಗಳ ಬಂಧ....ನಾಲ್ಕು. ಮಾತ್ರೆಗಳ ಎರಡು ಸರಿಯಾದ ಯುಗ್ಮಗಳಿಂದ ಕೂಡಿದ್ದು ಒಂದೊಂದು ಯುಗ್ಮದಲ್ಲಿ ನಾಲ್ಕು ಮಾತ್ರೆಯ ಗಣಗಳು 3 ಮತ್ತು 4 ಮಾತ್ರೆಯ ಗಣಗಳು 5 ಹೀಗೆ ಒಟ್ಟು ಎಂಟು ಗಣಗಳುಳ್ಳದ್ದು; ನಾಗವರ್ಮನು ಸಂಕ್ಷಿಪ್ತವಾಗಿ ಹಾಗೂ ಸರಿಯಾಗಿ ಕಂದ ಪದ್ಯವನ್ನು ಲಕ್ಷಣಿಸಿದ್ದಾನೆ. ಅವನ ಲಕ್ಷಣವನ್ನು ಅರಳಿಸಿ ಕಂದದ ಸ್ವರೂಪವನ್ನು ಕೆಳಗಣಂತೆ ಕಣ್ಣಿಗೆತ್ತಿ ತೋರಬಹುದು.* ಹೀಗೆ—

1 ನೆಯ ಚರಣದಲ್ಲಿ – 3 ಚತುರ್ಮಾತ್ರಾಗಣಗಳು
4×3 – 12 ಮಾತ್ರೆಗಳು.

2 ನೆಯ ಚರಣದಲ್ಲಿ – 5 ಚತುರ್ಮಾತ್ರಾಗಣಗಳು
4×5 - 20 ಮಾತ್ರೆಗಳು.

3 ನೆಯ ಚರಣದಲ್ಲಿ – 3 ಚತುರ್ಮಾತ್ರಾಗಣಗಳು
- 12 ಮಾತ್ರೆಗಳು.

4 ನೆಯ ಚರಣದಲ್ಲಿ – 5 ಚತುರ್ಮಾತ್ರಾಗಣಗಳು
- 20 ಮಾತ್ರೆಗಳು.

ಜಯಕೀರ್ತಿಯೂ – ಹೆಚ್ಚು ಕಡಮೆ ಇದೇ ಬಗೆಯಾಗಿ ಕಂದದ ಲಕ್ಷಣವನ್ನು ಹೇಳಿದ್ದಾನೆ. ಕಂದದ ಪ್ರತಿಯುಗ್ಮವೂ (ಎಂದರೆ 2 ನೆಯ ಮತ್ತು 4 ನೆಯ

---

*ಅನ್ಯಕೃತವೆಂದು ತೋರುವ ಆದರೆ ಛಂದೋಂಬುಧಿಯಲ್ಲಿ ಸೇರಿಕೊಂಡು ಬಂದಿರುವ ಕಂದದ ಲಕ್ಷಣ ಪದ್ಯ :

ಪನ್ನೆರಡು ಮಾತ್ರೆ ಮೊದಲೊಳ್
ಸನ್ನುತಮಿರ್ಪತ್ತು ಮಾತ್ರೆಯೆರಡನೆಯಡಿಯೊಳ್
ಇನ್ನಿಪ್ಪುವುಮೀ ತೆಱದಿಂ
ಬಿನ್ನಣಮೇಂ ಕಂದಲಕ್ಷಣಂ ಕಮಲಮುಖೀ

ಚರಣಗಳು) ಗುರುವಿನಲ್ಲಿ ಕೊನೆಗೊಳ್ಳುತ್ತವೆ. ಎಂಬ ಒಂದು ಮಾತನ್ನು ಅವನು ಹೆಚ್ಚಿಗೆ ಹೇಳಿದ್ದಾನೆ, ಅಷ್ಟೇ. ಒಟ್ಟಿನಲ್ಲಿ ನಾಗವರ್ಮ ಹಾಗೂ ಜಯಕೀರ್ತಿಗಳು ಹೇಳಿದ ಕಂದದ ಲಕ್ಷಣ ನಿರ್ದಿಷ್ಟವಾಗಿದ್ದಂತೆ ನಿರ್ದುಷ್ಟವೂ ಆಗಿದೆ.

ಹಳಗನ್ನಡ ಕಾವ್ಯಗಳ ನೆಯ್ಗೆಯಲ್ಲಿ ವೃತ್ತಗಳೊಡನೆ ಕಂದಪದ್ಯಗಳು ಹಾಸು ಹೊಕ್ಕಾಗಿ ಸೇರಿಕೊಂಡಿವೆ ಎಂಬುದನ್ನು ನೆನೆದರೆ ಕನ್ನಡದಲ್ಲಿ ಕಂದಪದ್ಯದ ಮಹತಿಯು ಕಲ್ಪನೆಯಾದೀತು.

ಕಂದಪದ್ಯದ ಸರಳಗತಿಗೆ ಒಂದು ಉದಾಹರಣೆ :

ಸುರತರುವಿನಂತೆ ಸುಜನರ
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ
ಕರಕಿರಣದಂತೆ ಹಂಪೆಯ
ಹರಿದೇವನ ಕಾವ್ಯಮಖಿಲ ಸೇವ್ಯಂ ನವ್ಯಂ
(ಹರಿಹರ – ಗಿರಿಜಾಕಲ್ಯಾಣ)

ಕಂದಪದ್ಯದ ಯಾವುದೇ ವಿಷಮಗಣವು (1ನೆಯ, 3ನೆಯ, 5ನೆಯ, 7ನೆಯ ಗಣ)ಜಗಣ (⏑ – ⏑) ವಾಗಿರಬಾರದು ಎಂಬ ಒಂದು ಹೆಚ್ಚಿನ ಮಾತನ್ನು ಕಂದದ ಲಕ್ಷಣದ ಬಗೆಗೆ ಇಲ್ಲಿ ಹೇಳಬಹುದು.*

ಆರ್ಯೆ

ಆರ್ಯೆಯ ಮೊದಲನೆಯಪಾದದಲ್ಲಿ ಹನ್ನೆರಡು, ಎರಡನೆಯ ಪಾದದಲ್ಲಿ ಹದಿನೆಂಟು, ಮೂರನೆಯ ಪಾದದಲ್ಲಿ ಹನ್ನೆರಡು, ಕೊನೆಯ ಪಾದದಲ್ಲಿ ಹದಿನೈದು ಹೀಗೆ ಮಾತ್ರೆಗಳ ವಿನ್ಯಾಸವಿದೆ.

ಆರ್ಯೆಗೂ ಕಂದಕ್ಕೂ ಹತ್ತಿರದ ಹೋಲಿಕೆಯೆಂಬುದನ್ನು ಸಹಜವಾಗಿ ಅರಿಯಬಹುದು. ಆದರೆ ಒಂದು ಪ್ರಕಾರದ ಆರ್ಯಾಗೀತಿ ಅಥವಾ ಸ್ಕಂದಕ.

ಗೀತಿಕೆ

ಗೀತಿಕೆಯಲ್ಲಿ ಆರ್ಯೆಯ ಪೂರ್ವಾರ್ಧ ದ್ವಿಪದದಂತೆ ಆಗಿ ಬರುತ್ತದೆ. ಅದರ ಅಪರಾರ್ಧಪಾದಯುಗವೂ ಹಾಗೆಯೇ ಇರುತ್ತದೆ ಎಂಬ ಅರ್ಥ ಹೊರಡುವಂತೆ ನಾಗವರ್ಮ ಹೇಳಿದ ಗೀತಿಕೆಯ ಲಕ್ಷಣ ಅಷ್ಟು ಸ್ಪಷ್ಟವಾಗಿಲ್ಲ. ಕನ್ನಡ ಕಾವ್ಯಗಳಲ್ಲಿ ಬಳಕೆಯಾದುದು ತೀರ ವಿರಳವೆಂದೇ ಹೇಳಬೇಕು. ಕವಿರಾಜಮಾರ್ಗದಲ್ಲಿ ಗೀತಿಕೆ ಎಂಬ ಹೆಸರಿನಲ್ಲಿ ಹಲವು ಪದ್ಯಗಳು ದೊರೆಯುತ್ತವೆ. ಅವುಗಳ ಬೆಳಕಿನಲ್ಲಿ ಗೀತಿ

*6ನೆಯ ಗಣ ಸರ್ವಲಘು ; ಅಥವಾ ಮೊದಲ ಲಘು ಬಳಿಕ ಯತಿ ಉಳ್ಳದ್ದು — ಸಂ.

ಕೆಯ ಲಯ ಲಕ್ಷಣಗಳು ಹಿಡಿತಕ್ಕೆ ಸಿಕ್ಕಬಹುದೇನೊ! ಇದಕ್ಕೆ ತಕ್ಕ ಪರಿಶೀಲನೆ ಬೇಕು.*

ಸಂಕೀರ್ಣ

ಕಂದದ ಪೂರ್ವಾರ್ಧಕ್ಕೆ ಆರ್ಯೆಯ ಅಪರಾರ್ಧವನ್ನು ಜೋಡಿಸಿದರೆ ಸಂಕೀರ್ಣ (ಸುಸಂಕೀರ್ಣ) ರೂಪುಗೊಳ್ಳುವುದೆಂದು ನಾಗವರ್ಮ ಹೇಳಿದ್ದಾನೆ. 'ಸಂಕೀರ್ಣ'ವೆಂಬ ಹೆಸರು ಹೀಗೆ ಅನ್ವರ್ಥಕವಾಗಿದೆ.

ಆರ್ಯೆಯ ಅರ್ಧಪದ್ಯ ಹಾಗೂ ಆರ್ಯಾಗೀತೆಯ ಅರ್ಧಪದ್ಯ ಇವುಗಳ ಒಂದು ಬಗೆಯ ಜೋಡಣೆಯಿಂದ 'ಸಂಕೀರ್ಣ' ರೂಪುಗೊಳ್ಳುವುದಾಗಿ ಜಯಕೀರ್ತಿ ತಿಳಿಸಿದ್ದಾನೆ.

ಸಂಕೀರ್ಣವು ಕನ್ನಡದಲ್ಲಿ ಬಳಕೆಯಾದಂತೆ ತೋರುವುದಿಲ್ಲ.

ದುವಯಿ

ನಾಗವರ್ಮ ಹೇಳಿದ ದುವಯಿಯ ಲಕ್ಷಣ ತೊಡಕಾಗಿದೆ.
ಅದರಿಂದ ದುವಯಿಯ ರೂಪರಾಗಗಳ ಸಂಪೂರ್ಣ ಕಲ್ಪನೆಯಾಗದು. ದ್ವಿಪದಿ ಎಂಬ ಅರ್ಥದಲ್ಲಿ 'ದುವಯಿ' ರೂಪಗೊಂಡಿರಬಹುದು. ಕನ್ನಡ ಕಾವ್ಯಗಳಲ್ಲಿ ದುವಯಿ ಬಹುಶಃ ಕಂಡಿಲ್ಲ.

ಕಂದ ಮತ್ತು ಆರ್ಯೆಗಳ ಸಂಬಂಧದಿಂದಾಗಿ ಈ ಸ್ಕಂಧ ಜಾತಿಯ ನಿರೂಪಣೆ ಸಾರ್ಥಕವೆನ್ನಬಹುದು.

ಕರ್ನಾಟಕ ವಿಷಯ ಜಾತಿ

ನಾಗವರ್ಮನ ಛಂದೋಂಬುಧಿಯ ಪಂಚಮಾಧಿಕಾರವು ಕರ್ಣಾಟಕ ವಿಷಯ ಜಾತಿಗೆ – ಎಂದರೆ ಅಚ್ಚಗನ್ನಡ ಮಟ್ಟುಗಳ (ಛಂದೋಬಂಧಗಳ) ನಿರೂಪಣೆಗೆ ಮೀಸಲಾಗಿದೆ. ಈ ಅಚ್ಚಗನ್ನಡ ಮಟ್ಟುಗಳ ಲಕ್ಷಣ ನಿರೂಪಣೆಯ ಸಂಬಂಧ ದಲ್ಲಿ ಅವನು ಮಾಡಿದ ಕಾರ್ಯ ಸ್ವತಂತ್ರವಾದುದೆಂಬುದರಲ್ಲಿ ಸಂದೇಹವಿರದು. ಇದು ಛಂದಃಪ್ರಪಂಚಕ್ಕೆ ಅದರಲ್ಲೂ ಕನ್ನಡ ಛಂದಸ್ಸಿಗೆ ನಾಗವರ್ಮನು ನೀಡಿದ ವಿಶಿಷ್ಟ ಕಾಣಿಕೆ.

*ಈಚೆಗೆ ಶ್ರೀ ಶಿವರಾಮ ಐತಾಳರು ಅದನ್ನು ವಿವರವಾಗಿ ಪರಿಶೀಲಿಸಿದ್ದಾರಾದರೂ ಇದು ಹೀಗೇ ಸರಿ ಎಂದು ನಿರ್ಧರಿಸುವುದಾಗಿಲ್ಲ. ನಡೆ ಅಷ್ಟು ನಿಯತವಾಗಿ ಸುಭಗವಾಗಿ ಕಾಣಿಸದು. ಅದನ್ನು ಓದುತ್ತಿದ್ದ ರೀತಿ ಗೊತ್ತಾದರಾದೀತು. — ಸಂ.

'ಕರ್ಣಾಟಕ ವಿಷಯ ಜಾತಿ'ಯಲ್ಲಿ ಸಮಾವೇಶವಾದ ಎಲ್ಲ ಛಂದೋಬಂಧಗಳಲ್ಲಿ ಸಹಜವಾಗಿ ಸ್ಪಂದಿಸುವ ಗಣಗಳನ್ನು ಅಂಶ ಅಥವಾ ದೇವಗಣಗಳು ಎಂಬ ಹೆಸರಿನಿಂದ ಕರೆಯುವುದುಂಟು. ಅಚ್ಚ ಕನ್ನಡ ಮಟ್ಟುಗಳಿಗೆ ಸಂಬಂಧಿಸಿದ ಅಂಶಗಣವು ವೃತ್ತಛಂದಸ್ಸಿನ ವರ್ಣ (ಅಕ್ಷರ) ಗಣವೂ ಅಲ್ಲ: ಮಾತ್ರಾಛಂದಸ್ಸಿಗೆ ಸಂಬಂಧಿಸಿದ ಮಾತ್ರಾಗಣವೂ ಅಲ್ಲ. ಅಂಶಗಣದ ಮೂಲ ಘಟಕವು ಸಾಮಾನ್ಯವಾಗಿ ಒಂದು ಗುರು (–) ವಿಗೆ ಸಮಾನವಾಗುವ ಅಂಶ. ಉದಾಹರಣೆಯ ದೃಷ್ಟಿಯಿಂದ ಕೆಳಗಣ ಸಾಂಗತ್ಯ ಪದ್ಯವನ್ನು ಲಯಾನುಸಾರವಾಗಿ ಪರಿಶೀಲಿಸಿದರೆ ಅಂಶದ ಹಾಗು ಅಂಶಗಣದ ಕಲ್ಪನೆಯಾದೀತು.

ಅಂದುಗೆ : ಗಳ ದನಿ : ಕಟಿಸೂತ್ರ : ಕಿಂಕಿಣಿ
ವೃಂದ ಝು : ಣೀ ಝುಣಿ : ರೆನಲು
ಹಿಂಡುವ : ರಿವ ಹಂಸ : ಗಳ ಝುಂಕಿ : ಸುತ ನಡೆ
ತಂದರು : ರಾಯ ನಿ : ದ್ದೆಡೆಗೆ.

ಲಯಾನುಸಾರವಾಗಿ ಈ ಪದ್ಯವನ್ನು ಹೇಳಿದರೆ ಅದರ ಚರಣಗಳ ಮಧ್ಯೆ ಮಧ್ಯೆ : ಗುರುತು ಮಾಡಿದಂತೆ ಗ ಣ ಗ ಳು ಸಹಜವಾಗಿ ಹೊರಡುವುದು ಕಾಣುತ್ತದೆ. ಉದಾಹರಣೆಗಾಗಿ ಮೇಲಿನ ಪದ್ಯದ ಮೊದಲ ಚರಣದಲ್ಲಿ –

ಅಂದುಗೆ : ಗಳದನಿ : ಕಟಿ ಸೂತ್ರ : ಕಿಂಕಿಣಿ – ಈ ನಾಲ್ಕು ಗಣಗಳಲ್ಲಿ ಲಯಾನುಸಾರವಾಗಿ ಹೊರಡುವ ಅಂಶಗಳನ್ನು ಕೆಳಗೆ ಗುರುತು ಮಾಡಿದ ರೀತಿಯಲ್ಲಿ ಎತ್ತಿ ತೋರಬಹುದು.

ಅಂ. ದು. ಗೆ : ಗಳ.ದ.ನಿ : ಕಟಿ.ಸೂ.ತ್ರ : ಕಿಂ.ಕಿ.ಣಿ ಇಲ್ಲಿ ಒಂದೊಂದು ಗಣ ಮೂರು ಮೂರು ಅಂಶಗಳನ್ನು ಒಳಗೊಂಡಿದೆ. ಉದಾಹರಣೆಗಾಗಿ 'ಅಂದುಗೆ' ಈ ಗಣದಲ್ಲಿ ಅಂ. ದು. ಗೆ ಹೀಗೆ ಮೂರು ಅಂಶಗಳು : ಗಳದನಿ : ಈ ಗಣದಲ್ಲಿ ಗಳ. ದ.ನಿ ಹೀಗೆ ಮೂರು ಅಂಶಗಳು. 'ಅಂಶಗಣ'ದ ಪ್ರಕಾರಗಳು ಮೂರು. ಬ್ರಹ್ಮ, ವಿಷ್ಣು, ರುದ್ರ ಎಂದು ಅವಕ್ಕೆ ಹೆಸರು. ನಾಗವರ್ಮನು ಹೇಳಿದಂತೆ ಬ್ರಹ್ಮಗಣದಲ್ಲಿ ನಾಲ್ಕು ಬಗೆಗಳಿವೆ.

	ಹೆಸರು	ಸಂಜ್ಞೆ	ಅಂಕಗಳು.
1	ಬ್ರಹ್ಮಂ	— : —	ಎಲ್ಲಾ
2	ದ್ರುಹಿಣಂ	⏑⏑ : —	
3	ಧಾತೃ	— : ⏑	
4	ಸುರಪ	⏑⏑ : ⏑	ಎರಡೆರಡು ಅಂಶಗಳು

ವಿಷ್ಣುಗಣದಲ್ಲಿ ಎಂಟು ಬಗೆಗಳಿರುತ್ತವೆ.

1	ಗೋವಿಂದಂ	— : — : —	
2	ಜಲಜಾಕ್ಷಂ	∪∪ : — : —	ಎಲ್ಲಾ
3	ಮಾಧವಂ	— : ∪ : —	
4	ಸ್ಮರಪಿತಂ	∪∪ : ∪ : —	ಮೂರು
5	ಕಂಸಾರಿ	— : — : ∪	ಮೂರು
6	ನರಕಾರಿ	∪∪ : — : ∪	
7	ಶ್ರೀಪತಿ	— : ∪ : ∪	ಅಂಶಗಳು
8	ಮುರರಿಪು	∪∪ : ∪ : ∪	

ರುದ್ರಗಣದಲ್ಲಿ ಹದಿನಾರು ಬಗೆಗಳುಂಟು :—

1	ಗಂಗಾಧೀಶಂ	— : — : — : —	
2	ಗಿರಿಜಾಕಾಂತಂ	∪∪ : — : — : —	
3	ನೀಲಕಂಠಂ	— : ∪ : — : —	
4	ವೃಷಭಲಕ್ಷ್ಮಂ	∪∪ : ∪ : — : —	
5	ಕಾಮಾಂತಕಂ	— : — : ∪ : —	
6	ಪ್ರಮಥಾಧಿಪಂ	∪∪ : — : ∪ : —	ಎಲ್ಲಾ
7	ಶೂಲಧರಂ	— : ∪ : ∪ : —	
8	ಪುರಮಥನಂ	∪∪ : ∪ : ∪ : —	ನಾಲ್ಕು
9	ಕಂದರ್ಪಾರಿ	— : — : — : ∪	ನಾಲ್ಕು
10	ಮದನಧ್ವಂಸಿ	∪∪ : — : — : ∪	
11	ಚಂದ್ರಮೌಳಿ	— : ∪ : — : ∪	ಅಂಶಗಳು
12	ಭುಜಗಧಾರಿ	∪∪ : ∪ : — : ∪	
13	ಭೂತಾಗ್ರಣಿ	— : — : ∪ : ∪	
14	ತ್ರಿಜಗದ್ಗುರು	∪∪ : — : ∪ : ∪	
15	ಕಾಮರಿಪು	— : ∪ : ∪ : ∪	
16	ಮದನರಿಪು	∪∪ : ∪ : ∪ : ∪	

ಈ ಕ್ರಮದಲ್ಲಿ ಗಣದ ಮೊದಲಲ್ಲಿ ಲಯಕ್ಕೆ ಅನುಸಾರವಾಗಿ ಒಂದು ಅಂಶ (–) ಅಥವಾ ಎರಡು ಲಘುಗಳಿರಬಹುದು. ಗಣದ ಮಧ್ಯದಲ್ಲಿ ಅಥವಾ ಕೊನೆಯಲ್ಲಿ

ಬರುವ ಒಂದು ಲಘು ಒಂದು ಗುರುವಿನ ವಿಸ್ತಾರಕ್ಕೆ ಹರಡಿ ಒಂದು ಅಂಶವನ್ನು ಸೂಚಿಸಬಹುದು.* ಹಾಗೆಯೇ ಲಯಾನುಸಾರವಾಗಿ ಒಂದು ಗುರು ಒಂದೇ ಅಂಶ ವನ್ನು ಪ್ರತಿನಿಧಿಸಬಹುದು. ಅಂತೂ ಲಯಾನುಸಾರವಾಗಿ ಅಕ್ಷರಗಳು ತ್ವರಿತಗತಿ ಯಿಂದ ಉಚ್ಚಾರಪಡೆಯುತ್ತವೆ. ಅಥವಾ ನಿಧಾನವಾಗಿ ಉಚ್ಚಾರ ಪಡೆಯುತ್ತವೆ. ಹೀಗೆ ಲಯಕ್ಕೆ ಹೊಂದಿಕೆಯಾಗುವಂತೆ ಉಚ್ಚಾರಣೆಯಲ್ಲಿ ಯಾವುದೇ ಎರಡು ಲಘುಗಳು ಕೂಡಿ ತ್ವರಿತವಾದ ಸ್ವರಗತಿಯಲ್ಲಿ ನುಡಿಯುವುದಕ್ಕೆ ಅವಕಾಶವಿರು ತ್ತದೆ. ಈ ಎಲ್ಲ ಗಣಗಳ ಸ್ವರೂಪವನ್ನು ಹಾಗೂ ಅವುಗಳನ್ನು ಪಡೆಯುವ ಕ್ರಮವನ್ನೂ ನಾಗವರ್ಮನು ನಿಚ್ಚಳವಾಗಿ ತಿಳಿಸಿದ್ದಾನೆ. ಈ ಅಂಶ ಅಥವಾ ತ್ರಿಮೂರ್ತಿ ಗಣಗಳ ಮೇರೆಗೆ ನಾಗವರ್ಮನು ಅಕ್ಕರ, ತ್ರಿಪದಿ, ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ, (ಮೂಲ) ಷಟ್ಪದಿ ಹೀಗೆ 'ಕರ್ಣಾಟಕ ವಿಷಯ ಜಾತಿ'ಯ ಎಲ್ಲ ಮಟ್ಟುಗಳ ಲಕ್ಷಣಗಳನ್ನು ನಿರೂಪಿಸಿ ದ್ದಾನೆ. ನಾಗವರ್ಮನ ವಿಶಿಷ್ಟ ಗತಿ ಮತಿಗಳು ಇಲ್ಲಿ ಕೃತಿಗಿಳಿದಿವೆ ಎನ್ನಬಹುದು. ಕನ್ನಡ ನುಡಿಯ ಜಾಯಮಾನವನ್ನು ಅನುಸರಿಸುವ ಈ ಎಲ್ಲ ಮಟ್ಟುಗಳನ್ನೂ ಲಕ್ಷಣ ಲಕ್ಷ್ಯ ಸಮೋಪೇತವಾಗಿ ಆತನು ನಿರೂಪಿಸಿದ್ದಾನೆ.

ತೆಲುಗಿನಲ್ಲಿ ಈ ಗಣಗಳಿಗೆ ಸೂರ್ಯ, ಇಂದ್ರ, ಚಂದ್ರ ಎಂದೂ ಜಯ ಕೀರ್ತಿಯಲ್ಲಿ ರತಿ, ಮದನ, ಶರ ಎಂದೂ ಹೆಸರಿವೆ.

ಜಯಕೀರ್ತಿ ಕೂಡ ತನ್ನ ಛಂದೋನುಶಾಸನದ ಸಪ್ತಮೋಧಿಕಾರದಲ್ಲಿ ಕರ್ಣಾ ಟಕ ವಿಷಯ ಜಾತಿಯ ಮಟ್ಟುಗಳನ್ನೂ ಲಕ್ಷಣ ಲಕ್ಷ್ಯಗಳೊಡನೆ ನಿರೂಪಿಸಿ ದ್ದಾನೆ. (ಅನುಬಂಧ ನೋಡಿ).

ಈ ಅಚ್ಚಗನ್ನಡ ಮಟ್ಟುಗಳನ್ನು ಒಂದೊಂದಾಗಿ ಎತ್ತಿಕೊಂಡು ಪರಿಶೀಲಿ ಸೋಣ.

ಅಕ್ಕರ

ಅಕ್ಕರದಲ್ಲಿ ಐದು ಪ್ರಕಾರಗಳು: ಪಿರಿಯಕ್ಕರ, ದೊರೆಯಕ್ಕರ, ನಡುವಣ ಕ್ಕರ, ಎಡೆಯಕ್ಕರ, ಕಿರಿಯಕ್ಕರ. ತೆಲುಗಿನಲ್ಲಿ ಇವನ್ನು ಮಹಾಕ್ಕರ, ಸಮಾನಾಕ್ಕರ, ಮಧ್ಯಮಾಕ್ಕರ, ಅಂತರಾಕ್ಕರ, ಅಲ್ಪಾಕ್ಕರ ಎನ್ನುತ್ತಾರೆ.

ಪಿರಿಯಕ್ಕರ

ಹೆಸರೇ ಸೂಚಿಸುವಂತೆ ಪಿರಿಯಕ್ಕರವು ಅಕ್ಕರಗಳಲ್ಲಿ ದೊಡ್ಡದು. ನಾಗ ವರ್ಮನು ಅದನ್ನು ಹೀಗೆ ಲಕ್ಷಣಿಸಿದ್ದಾನೆ.

---

*ಗುರು ಲಘು ಎಂಬ ಎಣಿಕೆ ಕೂಡ ಇಲ್ಲಿ ಸಲ್ಲದು. ಸ್ವರೂಪವನ್ನು ತಿಳಿಸಲು ಗಲ ಗುರುತಿಸಿದೆ.

— ಸಂ.

ಮೊದಲೊ : ಳಜಗಣಂ : ಕುಂದದೆ : ಬರ್ಕತ್ತು : ಮಯ್ಯುದ್ದಗ :
ಣಂಗಳೆ : ವಿಷ್ಣುವಕ್ಕುಂ
ತುದಿಯೊ : ಳೆಂಬಾ : ತಾಣದೊ : ಳೆಲ್ಲಿಯುಂ : ಕಂದರ್ಪ :
ರಿಪುಗಣಂ : ನೆಲಸಿನಿಲ್ಕೆ
ಪದದೊ : ಳೆರಡೆಂಬ : ಸಂಖ್ಯೆಯೊ : ಳಾಜಿಜಿಾೊ : ಳ ಜಗಣಂ :
ಸಮವಾಯ : ಮಪ್ಪೊಡಕ್ಕುಂ
ಸದಮ : ಳೇಂದುನಿ : ಭಾನನೆ : ನಾಕಿಗ : ನಿಷ್ಟದಿ : ನಿಂತಿದು :
ಪಿರಿಯಕ್ಕರಂ
(ಅದೇ. V – 307)

ಈ ಲಕ್ಷಣದಂತೆ ಪಿರಿಯಕ್ಕರದ ಪ್ರತಿಚರಣದಲ್ಲಿ ಮೊದಲು ಬ್ರಹ್ಮಗಣವು ಆ ಬಳಿಕ (ನಡುವೆ) ಐದು ವಿಷ್ಣುಗಣಗಳು ತುದಿಯಲ್ಲಿ 1 ರುದ್ರಗಣ ನೆಲಸಿ ನಿಲ್ಲುತ್ತವೆ. ಇದು ನಿಯತ.

ಪಿರಿಯಕ್ಕರದ ಗಣಯೋಜನೆ: ಎಂದರೆ,

1	5	1	= 7

ಬ್ರಹ್ಮ : ವಿಷ್ಣು : ವಿಷ್ಣು : ವಿಷ್ಣು : ವಿಷ್ಣು : ವಿಷ್ಣು : ರುದ್ರ

ಒಟ್ಟು ಏಳು ಗಣಗಳ ಚರಣ ತನ್ನ ಛಂದೋನುಶಾಸನ'ದಲ್ಲಿ (7 – 8) ಜಯಕೀರ್ತಿ ಪಾದ ಪಾದಗಳಲ್ಲಿ ಪ್ರತಿಗಣಕ್ಕೆ ಯತಿ ಪ್ರತೀತಿ ಇದೆ ಎಂಬ ಒಂದು ಮಾತು ಅವನ ಲಕ್ಷಣದಲ್ಲಿ ಹೆಚ್ಚಿಗೆ ಬಂದಿದೆ.

ಪಂಪ, ಪೊನ್ನ, ನಾಗವರ್ಮ I ಮೊದಲಾದ ಕವಿಗಳು ತಮ್ಮ ಕಾವ್ಯಗಳಲ್ಲಿ ವಿರಳವಾಗಿಯಾದರೂ ಪಿರಿಯಕ್ಕರವನ್ನು ಬಳಸಿದ್ದಾರೆ. ಪಿರಿಯಕ್ಕರದ ಸುಗಮ ಗೇಯಲಯದಲ್ಲಿ ಕನ್ನಡ ಶಬ್ದಗಳು ಹದುಳವಾಗಿ ಪೊಂದಿಕೊಳ್ಳುತ್ತವೆ.*

ಬೀರ ದಳವಿಯ ನನ್ನಿಯ ಚಾಗದ ಶಾಸನಂ ಚಂದ್ರಾರ್ಕ ತಾರಂಬರಂ
ಮೇರು ನಿಲ್ವಿನಂ ನಿಲವೇಟ್ಟುಂ ಕಾವ್ಯಕ್ಕೆ ತಾನಿತ್ತ ಶಾಸನ ದಗ್ರಹಾರಂ
ಸಾರ ಮೆಂಬಿನಂ ಪೆಸರಿಟ್ಟು ತಾನೀಯೆ ಹರಿಗನ ಧರ್ಮಭಂಡಾರದಂತೆ
ಸಾರ ಮಾದುದು ಬಿಟ್ಟಗ್ರಹಾರಮಾ ಬಚ್ಚೆಸಾಸಿರದೊಳಂ ಧರ್ಮಪುರಂ
— ಪಂಪಭಾರತ

---

*ಬೇಂದ್ರೆ, ಸೇಡಿಯಾಪು ಕೃಷ್ಣಭಟ್ಟ, ಮೊದಲಾದ ಆಧುನಿಕ ಕವಿಗಳು ಪಿರಿಯಕ್ಕರವನ್ನು ಪ್ರಯೋಗಿಸಿದ್ದಾರೆ. ಬೇಂದ್ರೆಯವರ 'ಸಖೀಗೀತ' ಪಿರಿಯಕ್ಕರದ ಗತಿಯಲ್ಲಿದೆ 'ಸಖೀಗೀತ'ದ ಮೊದಲ ಚರಣಗಳನ್ನು ಪರಿಶೀಲಿಸಿದರೆ ಅವೆರಡೂ ಪಿರಿಯಕ್ಕರದ ಒಂದು ಚರಣಕ್ಕೆ ಸುಮಾರು ಸರಿಹೋಗುವವೆಂಬುದನ್ನು ಅರಿಯಬಹುದು.

1 2 3 4
ಸಖಿ : ನಿನ್ನ ಸಖ್ಯದ ಆಖ್ಯಾನ ಕಟುಮಧುರ
5 6 7
ವ್ಯಾಖ್ಯಾನ ದೊಡಗೂಡಿ ವಿವರಿಸಲೇ*

ದೊರೆಯಕ್ಕರ

ದೊರೆಯಕ್ಕರದಲ್ಲಿ ಪ್ರತಿ ಚರಣದಲ್ಲಿ ಎರಡು ವಿಷ್ಣುಗಣಗಳು ಮುಂದೆ ಒಂದು ಬ್ರಹ್ಮಗಣ ಆ ಬಳಿಕ ಎರಡು ವಿಷ್ಣುಗಣ ಮುಂದೆ ಒಂದು ಬ್ರಹ್ಮಗಣ ಹೀಗೆ ಒಟ್ಟು(ಆರು)ಗಣಗಳು.(ಅದೇ. V – 243)ದೊರೆಯಕ್ಕರದ ಗಣವಿನ್ಯಾಸ ಹೀಗೆ :

ವಿ : ವಿ : ಬ್ರ ; ವಿ : ವಿ : ಬ್ರ.

ಸಮಾನಾಕ್ಷರವೆಂಬ ಹೆಸರಿನಲ್ಲಿ ಜಯಕೀರ್ತಿಯೂ ದೊರೆಯಕ್ಕರವನ್ನು ಲಕ್ಷಣಿಸಿದ್ದಾನೆ. (ಛಂದೋನುಶಾಸನ 7 – 7) ಈಗ ದೊರೆತ ಯಾವ ಕಾವ್ಯದಲ್ಲಿಯೂ ದೊರೆಯಕ್ಕರ ಕಾಣಿಸಿಲ್ಲ.

ನಡುವಣಕ್ಕರ

ಚರಣದ ಮೊದಲಲ್ಲಿ ಬ್ರಹ್ಮಗಣ, ಮಧ್ಯೆ ಮೂರು ವಿಷ್ಣುಗಣಗಳು ಕೊನೆಯಲ್ಲಿ ರುದ್ರಗಣ ಬರುತ್ತವೆ. (ಛಂದೋಂಬುಧಿ – V – 244) ಎಂದರೆ

ನಡುವಣಕ್ಕರದ ಗಣವಿನ್ಯಾಸ ಹೀಗೆ :

ವಿ : ಬ್ರ : ವಿ : ವಿ : ರು.

ಇದು ಯಾವ ಕಾವ್ಯದಲ್ಲಿಯೂ ಬಳಕೆಯಾಗಿಲ್ಲ.

ಎಡೆಯಕ್ಕರ

ಪ್ರಾರಂಭದಲ್ಲಿ ಒಂದು ಬ್ರಹ್ಮಗಣ, ಮಧ್ಯದಲ್ಲಿ ಎರಡು ವಿಷ್ಣುಗಣಗಳು, ಪಾದಾಂತ್ಯದಲ್ಲಿ ಒಂದು ರುದ್ರ ಗಣ – ಹೀಗೆ ಎಡೆಯಕ್ಕರದ ಪ್ರತಿಪಾದದಲ್ಲಿ ನಾಲ್ಕು ಗಣಗಳು ಬರುತ್ತವೆ. (ಛಂದೋಂಬುಧಿ V - 245).

*ಇಲ್ಲಿ ಸಖಿ ಎಂಬುದನ್ನು ಅನಾಗತವಾಗಿ ಅಥವಾ ಹುಸಿಯಾಗಿ, ಸಂಬೋಧನೆಯಾಗಿ ಎಣಿಸಬೇಕಾಗುತ್ತದೆ. 4 ನೆಯ ಗಣವನ್ನು ಅತಿ ವಿಷ್ಣು ಅಥವಾ ರುದ್ರ ಎಂದು ಭಾವಿಸಬೇಕಾಗುತ್ತದೆ. ಕರ್ತೃವಿನಿಚ್ಛೆಯಿಂ ವಿಷ್ಣುವಿಗೆ ಬದಲು ಬ್ರಹ್ಮ ಬರಬಹುದು ಎಂದಿದೆ ; ಬ್ರಹ್ಮಕ್ಕೆ ಬದಲು ವಿಷ್ಣುವೂ ಬೇರೆಲ್ಲಿಯೋ ರುದ್ರವೂ ಬರಬಹುದು. ಅಥವಾ ಕಟುಮಧುರ ಎಂಬುದನ್ನೋದುವಾಗ ಅದನ್ನು 3 ಅಂಶಗಳನ್ನಾಗಿ ಮಾಡಿ ತ್ವರಿತವಾಗಿ ಓದಬೇಕು. ಅದನ್ನು ಬೇಕಾದರೆ ಅತಿವಿಷ್ಣು ಎಂದುಕೊಂಡರೆ ನಾಲಗೆ ಅದನ್ನು ಹಾಗೆ ನುಡಿಯುತ್ತದೆ —ಸಂ.

ಬ್ರ : ವಿ : ವಿ : ರು.

ಇದೇ ಅರ್ಥ ಗಣವಿನ್ಯಾಸ ತಿಳಿವಂತೆ, ಜಯಕೀರ್ತಿ (7 - 5) ಇದನ್ನು ಅಂತರಾಕ್ಷರ ಎನ್ನುತ್ತಾನೆ.

ಕಿರಿಯಕ್ಕರ

ಅಕ್ಕರದ ಎಲ್ಲ ಪ್ರಭೇದಗಳಲ್ಲಿ ಕಿರಿಯಕ್ಕರ ಕಿರಿದು.

ಪೊಡೆಯಲ : ರಿರ್ಬರುಂ : ಮೊದಲೊಳಿಕ್ಕೆ
ಜಡೆಯಶಂ : ಕರನೊರ್ವಂ : ತುದಿಯೊಳಿಕ್ಕೆ
ಮಡದಿ ಕೇಳ್ : ಮೂಱಿಂತು : ಗಣಮೆಸೆದಿರ್ಕೆ
ಗಡಕಿರಿ : ಯಕ್ಕರ : ಕ್ಕಿದೆ ಲಕ್ಷಣಂ.

3 ಗಣಗಳುಳ್ಳದ್ದು ಅದು. ಗಣವಿನ್ಯಾಸ ಹೀಗೆ – ವಿ : ವಿ : ರು.

ಗಣವಿನ್ಯಾಸದಂತೆ ಕಿರಿಯಕ್ಕರಕ್ಕೆ ಸೊಗಸಾದ ಲಯ ಹೊರಡುವುದೆಂಬುದನ್ನು ದನಿಯೆಳೆದು ಅರಿಯಬಹುದು.

ಅಲ್ಪಾಕ್ಷರ ಎನ್ನುವಲ್ಲಿ (ಛಂದೋನುಶಾಸನ - 7 - 4) ಲಕ್ಷಣದಲ್ಲಿ ಅದರ ಗೇಯುತೆಯ ಮಾತು ಎದ್ದು ಮೂಡಿದೆ.

ಕನ್ನಡ ನುಡಿಯ ಜಾಯಮಾನಕ್ಕೆ ತುಂಬ ಸರಿಹೋಗುತ್ತ ನಿಜವಾಗಿ ಗೇಯುವಾದ 'ಕಿರಿಯಕ್ಕರ'ವು ಯಾವ ಕಾವ್ಯದಲ್ಲಿಯೂ ಸುಳುಹುದೋರದೆ ಇರುವುದು ಆಶ್ಚರ್ಯ.

ಅಕ್ಕರದ ಈ ಐದೂ ಪ್ರಭೇದಗಳಿಗೆ ಅನ್ವಯಿಸುವ ಸಾಮಾನ್ಯ ಸಂಗತಿಗಳು :

(1) 'ಅಕ್ಕರ'ದ ಐದೂ ಮಟ್ಟುಗಳು ನಾಲ್ಕು ನಾಲ್ಕು ಪಾದಗಳ ಛಂದೋಬಂಧಗಳು.

(2) ಎಲ್ಲವೂ ವಿಷ್ಣುಗಣ ಪ್ರಧಾನವಾದವು. ಈ ಎಲ್ಲ ಮಟ್ಟುಗಳು ನಾಗವರ್ಮನ ಕಾಲದಲ್ಲಿ ಜನಪದ ಹಾಡುಗಳ ನಾಡಿಗಳಾಗಿ ನುಡಿಯುತ್ತಿರಲು ಸಾಕು.

ತ್ರಿಪದಿ

ಬಿಸರು ಹೋ : ದ್ಭವಗಣಂ : ರಸದಶ : ಸ್ಥಾನದೊಳ್
ಬಿಸರುಹ : ನೇತ್ರ : ಗಣಮೆ ಬ : ರ್ಕುಳಿದುವು
ಬಿಸರುಹ : ನೇತ್ರೇ : ತ್ರಿಪದಿಗೆ.

(V- 299)

ಎಂದು ನಾಗವರ್ಮನು ತ್ರಿಪದಿಯ ಲಕ್ಷಣವನ್ನು ಹೇಳಿದ್ದಾನೆ. ಎಂದರೆ ಇಲ್ಲಿನ (ಒಟ್ಟು 11 ಗಣಗಳಲ್ಲಿ) 6 ನೆಯ ಮತ್ತು 10 ನೆಯವು ಬ್ರಹ್ಮಗಣಗಳು ; ಉಳಿದುವೆಲ್ಲ ವಿಷ್ಣು. ಅದು ಇದನ್ನು ಹೋಲುತ್ತದೆ.

ಕರಕರಾಬ್ಧಿತ್ರ್ಯಂಶ ಚರಣಾದಿಗ್ರಸರತಿಃ
ಸ್ಮರಮಯೀಲಾದಿ ಗಿರಿ ಹರಾಂಶಾಚಾಂತ
ವಿರಮಣಾಚ್ಚಿತ್ರಾ ತ್ರಿಪದಿಕಾ — ಎಂಬುದು ಜಯಕೀರ್ತಿಯ ಲಕ್ಷಣ.

ಈ ಚಿತ್ರಾ ತ್ರಿಪದಿಯಲ್ಲಿ ಆರನೆಯ ಮತ್ತು 11 ನೆಯ ಗಣಗಳು ಎರಡು ಲಘು ಗಳಿಂದ ಆರಂಭವಾಗುತ್ತವೆ. 7 ನೆಯ ಮತ್ತು 11 ನೆಯ ಗಣಕ್ಕೆ ವಿರಾಮ ಬರು ತ್ತದೆ. ಈ ಎರಡು ಹೆಚ್ಚಿನ ವಿವರಗಳು ಜಯಕೀರ್ತಿಯ ಚಿತ್ರಾ ತ್ರಿಪದಿಯ ಲಕ್ಷಣ–ಲಕ್ಷ್ಯ ಪದ್ಯದಲ್ಲಿ ಬಂದಿವೆ.

ತ್ರಿಪದಿಯ ಸಾಮಾನ್ಯ ಗಣವಿನ್ಯಾಸ ಹೀಗೆ :—

ವಿಷ್ಣು : ವಿಷ್ಣು : ವಿಷ್ಣು : ವಿಷ್ಣು
ವಿಷ್ಣು : ಬ್ರಹ್ಮ : ವಿಷ್ಣು : ವಿಷ್ಣು
ವಿಷ್ಣು : ಬ್ರಹ್ಮ : ವಿಷ್ಣು.

ನಾಗವರ್ಮನು 'ಚಿತ್ರಲತೆ' ಎಂಬ ಹೆಸರಿನಲ್ಲಿ ಹಾಗೂ ಜಯಕೀರ್ತಿಯು ವಿಚಿತ್ರಾ (ಛಂ - ಶಾ - 7 - 10) ಎಂಬ ಹೆಸರಿನಲ್ಲಿ ಹೇಳಿದ ತ್ರಿಪದಿಯ ಪ್ರಭೇದಗಳು ಒಂದನ್ನೊಂದು ಹೋಲುತ್ತವೆ. ಅವೆರಡರಲ್ಲೂ ಕೊನೆಯ ಗಣವು ವಿಷ್ಣುವಲ್ಲ;– ರುದ್ರ.

ನಾಗವರ್ಮನು 'ಚಿತ್ರ' (ಛಂದೋಂಬುಧಿ V - 249) ಎಂಬ ಹೆಸರಿನ ಇನ್ನೊಂದು ತ್ರಿಪದಿಯನ್ನು ಲಕ್ಷಿಸುತ್ತ ಅದರಲ್ಲಿ ಮೊದಲನೆಯ ಗಣ ವಿಷ್ಣು ವಲ್ಲ, – ರುದ್ರ ಎಂದು ಹೇಳಿದ್ದಾನೆ. ನಾಗವರ್ಮನ ಲಕ್ಷಣ–ಲಕ್ಷ್ಯ ಪದ್ಯದಿಂದ ಲಯ ಅಷ್ಟೊಂದು ಸುಗಮವಾಗಿ ಹೊರಡುವುದಿಲ್ಲ. ಈ ಬಗೆಯ ತ್ರಿಪದಿಗಳು ಜನಪದದಲ್ಲಿ ವಿರಳವಾಗಿ ಕಣ್ಣಿಗೆ ಬೀಳುತ್ತವೆ.

*

ಕನ್ನಡ ಹಾಡುಗಳ ಮೂಲ ಛಂದಸ್ಸು ತ್ರಿಪದಿ ಎಂದು ಸಾಧಾರವಾಗಿ ಹೇಳಬಹುದು. ಹಳಗನ್ನಡ ಕಾವ್ಯಗಳಲ್ಲಿ ತ್ರಿಪದಿ ವಿರಳವಾಗಿಯಾದರೂ ಬಳಕೆ ಗೊಂಡಿದೆ. ಜನಪದ ಗೀತಗಳಲ್ಲಿ ಅದು ಪ್ರಧಾನ ಸ್ಥಾನವನ್ನು ಪಡೆಯುತ್ತ ಬಂದಿದೆ. ತ್ರಿಪದಿಯು ರಚನೆಯ ದೃಷ್ಟಿಯಿಂದ ಸುಲಭವಾಗಿದ್ದು ಹಾಡುವುದಕ್ಕೆ ತುಂಬ ಅನುಕೂಲವಾದುದು.

ತ್ರಿಪದಿಯಿಂದ ಸಾಂಗತ್ಯ ರೂಪಗೊಂಡಿತು ಎಂದು ಹೇಳುವುದುಂಟು. ಹಾಡುವಾಗ ತ್ರಿಪದಿಯ ಮೂರು ಚರಣಗಳಲ್ಲಿ 2ನೆಯ ಚರಣವನ್ನು ಪುನರಪಿ ಹೇಳುವ ಸಂಪ್ರದಾಯದಿಂದಾಗಿ ಈ ಅಭಿಪ್ರಾಯ ಮೂಡಿಬಂದಂತೆ ಕಾಣುತ್ತದೆ. ಲಯದ ದೃಷ್ಟಿಯಿಂದ ತ್ರಿಪದಿಗೂ ಸಾಂಗತ್ಯಕ್ಕೂ ಹತ್ತಿರದ ಸಂಬಂಧವುಂಟೇನೊ ನಿಜ. ಆದರೆ ಎರಡರ ಗಣಯೋಜನೆಯೂ ರಾಗಲಹರಿಯೂ ಬೇರೆ ಬೇರೆ. ತ್ರಿಪದಿಯ 2 ನೆಯ ಚರಣವನ್ನು ಪುನರಪಿ ಬರೆದು ನಾಲ್ಕು ಚರಣಗಳಲ್ಲಿ ಅದನ್ನು ಇಟ್ಟು ಈ ಮಾತನ್ನು ಮನಗಾಣಬಹುದು.

ತ್ರಿಪದಿಯ ಸಾಮಾನ್ಯರೂಪ ಹೀಗೆ :

ಸರದಾರ : ಬರುವಾಗ : ಸುರಿದಾವ : ಮಲ್ಲಿಗಿ
ದೊರಿ ನನ್ನ : ತಮ್ಮ : ಬರುವಾಗ : ಯಾಲಕ್ಕಿ
ಗೊನಿಬಾಗಿ : ಹಾಲ : ಸುರಿದಾವ (ಗರತಿಯ ಹಾಡು)

ತ್ರಿಪದಿಯ ಮೂರು ಚರಣಗಳಲ್ಲಿ 2 ನೆಯ ಚರಣವನ್ನು ಪುನರಪಿ ಹೇಳಿದರೆ: ನಾಲ್ಕು ಚರಣಗಳಾಗಿ ಅದು ಹೀಗೆ ರೂಪ ತೋರುವುದು :

ಸರದಾರ : ಬರುವಾಗ : ಸುರಿದಾವ : ಮಲ್ಲಿಗಿ
ದೊರೆ ನನ್ನ : ತಮ್ಮ : ಬರುವಾಗ
ದೊರೆ ನನ್ನ : ತಮ್ಮ : ಬರುವಾಗ : ಯಾಲಕ್ಕಿ
ಗೊನೆಬಾಗಿ : ಹಾಲ : ಸುರಿದಾವ

ಇದರೊಡನೆ ಸಾಂಗತ್ಯದ ಗಣಯೋಜನೆಯನ್ನು ಇಟ್ಟು ನೋಡಿದರೆ, ತ್ರಿಪದಿ ಹಾಗೂ ಸಾಂಗತ್ಯಗಳ ಗಣಯೋಜನೆಯಲ್ಲಿರುವ ವ್ಯತ್ಯಾಸ ಸಹಜವಾಗಿ ಗೊತ್ತಾದೀತು.

ಸಾಂಗತ್ಯದ ರೂಪ :— **ಗಣವಿನ್ಯಾಸ :**

ನೋಟರಾ : ಯನಮೇಲೆ : ನೆನಹುರಾ : ಗದ ಮೇಲೆ
— ವಿಷ್ಣು : ವಿಷ್ಣು : ವಿಷ್ಣು : ವಿಷ್ಣು
ನೀಟತಂ : ತಿಯಮೇಲೆ : ಬೆರಳು — ವಿಷ್ಣು : ವಿಷ್ಣು : ಬ್ರಹ್ಮ
ಚಾಟುಗಾ : ತಿಯರುಭಾಂ : ದಸಿಕೆಯ : ನೊಂಕಿ ಸ
— ವಿಷ್ಣು : ವಿಷ್ಣು : ವಿಷ್ಣು : ವಿಷ್ಣು
ಘಾಟಿಕೆ : ಯಿಂದ ಹಾ : ಡಿದರು. — ವಿಷ್ಣು : ವಿಷ್ಣು : ಬ್ರಹ್ಮ

ತ್ರಿಪದಿಯ 2 ನೆಯ ಚರಣವನ್ನು ಪುನರಪಿ ಇಟ್ಟು ತ್ರಿಪದಿಯನ್ನು ನಾಲ್ಕು ಚರಣಗಳ ರೂಪದಲ್ಲಿ ತೋರಿದಾಗ 2 ನೆಯ ಮತ್ತು 4 ನೆಯ ಚರಣಗಳು ವಿಷ್ಣುಗಣದಲ್ಲಿ ಕೊನೆಗೊಳ್ಳುತ್ತವೆ. ಆದರೆ ಸಾಂಗತ್ಯದ 2 ನೆಯ ಮತ್ತು 4 ನೆಯ ಚರಣಗಳು ಬ್ರಹ್ಮಗಣದಲ್ಲಿ ಕೊನೆಗೊಳ್ಳುತ್ತವೆ.

ನಾಗವರ್ಮನ ಛಂದೋಂಬುಧಿಯಲ್ಲಿ ಸಾಂಗತ್ಯದ ಸುಳುಹು ಇಲ್ಲ. ಆತನ ಕಾಲದಲ್ಲಿ ಸಾಂಗತ್ಯ ಬಳಕೆಯಲ್ಲಿ ಬಂದಿರಲಾರದೆಂದು ತೋರುತ್ತದೆ. ಆತನ ತರುವಾಯ ಬರು ಬರುತ್ತ 'ದೇಸಿ' ಪ್ರಚುರವಾದಂತೆ ಸಾಂಗತ್ಯದ ಕಾವ್ಯಗಳು ಹೆಚ್ಚು ಹೆಚ್ಚಾಗಿ ರಚಿತವಾಗತೊಡಗಿದುವು.* 'ಕುಮಾರ ರಾಮನ ಸಾಂಗತ್ಯ' ಕನಕದಾಸರ 'ಮೋಹನ ತರಂಗಿಣಿ' ರತ್ನಾಕರ ವರ್ಣಿಯ 'ಭರತೇಶವೈಭವ' ಇವೇ ಮೊದಲಾದ ಉತ್ತಮ ಸಾಂಗತ್ಯ ಕಾವ್ಯಗಳು ಈ ಮಾತಿಗೆ ನಿದರ್ಶನವಾಗಿ ನಿಂತಿವೆ.

ಏಳೆ

'ಏಳೆ'ಗೆ ನಾಗವರ್ಮನು ಹೇಳಿದ ಲಕ್ಷಣ ಲಕ್ಷ್ಯಪದ್ಯವು ಪಾಠಾಂತರಕ್ಕೆ ಒಳಗಾಗಿದೆ. ಅವುಗಳಲ್ಲಿ ಒಳ್ಳೆಯದು ಇದು :

ಭುಜಗಪಕ್ಷ : ಪುರಗಣ : ವ್ರಜದೊಳಾ : ಱಿಱಿೊಳಕ್ಕುಂ
ಮಜಗಣ : ಮೇಳೆ : ಗಿಭಗತೀ

ಈ ಪಾಠಾಂತರದಂತೆ ಏಳೆಯ ಲಯವು ಸುಗಮ ; ಅರ್ಥ ಅನುಕೂಲ. ಏಳು ಗಣಗಳ ಮೊತ್ತವಾದ ಏಳೆಯಲ್ಲಿ 6 ನೆಯ ಗಣ ಬ್ರಹ್ಮ. ತ್ರಿಪದಿಯ ಎರಡನೆಯ ಚರಣದ ಮೂರನೆಯ ಗಣ ಪೂರ್ತಿಯಾಗುವ ವರೆಗಿನ ಭಾಗ ಏಳೆ : ಹೀಗೆ ತ್ರಿಪದಿಗೂ ಏಳೆಗೂ ನಿಕಟ ಸಂಬಂಧವಿದೆ : ತಮಿಳಿನ ಮೂಲಬಂಧವಾದ 'ಕುಱಳ್' ಛಂದವನ್ನು 'ಏಳೆ' ಹತ್ತಿರವಾಗಿ ಹೋಲುತ್ತದೆ.

ತ್ರಿಪದೀತ್ರ : ತೀಯಾಂಹ್ರಾ : ವಪಮುಂಚ : ತ್ಕೇಲೇತಿ
ಸುಪಠಿತಾ : ಗೇಯ : ವಿದಜನ್ಯೈಃ

ಎಂದು ಜಯಕೀರ್ತಿ 'ಏಳೆ' ಯನ್ನು ಸಂಕ್ಷಿಪ್ತವಾಗಿ ಆದರೆ ಹೆಚ್ಚು ನಿಚ್ಚಳವಾಗಿ ಲಕ್ಷಣಿಸಿ ತ್ರಿಪದಿಗೂ 'ಏಳೆ'ಗೂ ಇರುವ ಸಂಬಂಧವನ್ನು ಎತ್ತಿ ತೋರಿಸಿದ್ದಾನೆ.

ಜನಪದ ಹಾಡುಗಳಲ್ಲಿ ತ್ರಿಪದಿಗಳ ಮಧ್ಯೆ ಮಧ್ಯೆ 'ಏಳೆ' ಅಲ್ಲಲ್ಲಿ ಮೂಡಿದೆ. ವಿಶೇಷತಃ ಅದು ಸಂವಾದದ ಸಂದರ್ಭದಲ್ಲಿ ಸುಳಿದು ಬರುವುದನ್ನು ಕಾಣುತ್ತೇವೆ.

---

*ದೇಪರಾಜನ ಸೊಬಗಿನ ಸೋನೆ (?) ಶಿಶುಮಾಯಣನ ತ್ರಿಪುರದಹನ ಸಾಂಗತ್ಯ, ಅಂಜನಾಚರಿತೆ ಇತ್ಯಾದಿ — ಸಂ.

ಉದಾಹರಣೆ :

ನುಡಿ : ಮಳೆಯಾರ : ಬಂದೀತೋ : ಹೊಳೆಯಾರ : ತುಂಬೀತೋ
ಹೇಗೆ ಬರ : ಲಣ್ಣ : ಮದುವಿಗೆ

ಮಾರ್ನುಡಿ : ಚಿನ್ನದ : ಹರಿಗೋಲ್ಗೆ : ರನ್ನದ : ಹುಟ್ಹಾಕಿ
ಜೋಕೇಲಿ : ನಿನ್ನ : ಕರೆದೊಯ್ವೆ

(ಗರತಿಯ ಹಾಡು)

ಚೌಪದಿ

ನಾಲ್ಕು ಪಾದಗಳ ಮಟ್ಟು. ನಾಗವರ್ಮ ಹೇಳಿದಂತೆ ಚೌಪದಿಯ ಪ್ರತಿ ಪಾದದಲ್ಲಿ ಒಂದು ವಿಷ್ಣುಗಣದ ಮುಂದೆ ಒಂದು ರುದ್ರಗಣ ಬರುತ್ತದೆ. ಈ ಬಗೆಗೆ ನಾಗವರ್ಮನ ಲಕ್ಷಣ ಲಕ್ಷ್ಯ ಪದ್ಯ ಹೀಗಿದೆ :

ಮದನನ : ತಂದೆಯು : ಮುಂ
ದೊದವಿರೆ : ಶಂಕರನೊ
ಳೊದವಿರೆ : ಸಂದುದು : ನೋ
ಡಿದು ಸತಿ : ಚೌಪದಿಗೆ.

(ಛಂ. V – 309)

ಚತುಷ್ಪದಿಕಾ ಚೌಪದಿಯ ಲಕ್ಷಣವನ್ನು ಜಯಕೀರ್ತಿ ಹೆಚ್ಚು ನಿಚ್ಚಳವಾಗಿ ಹೇಳಿದ್ದಾನೆ. ಅವನ ಲಕ್ಷಣದಲ್ಲಿ ಚೌಪದಿಯ ಪಾದಗಳ ಸಂಖ್ಯೆಯ ಸ್ಪಷ್ಟ ನಿರ್ದೇಶನ ವಿದೆ.

'ಕರ್ಣಾಟಕ ವಿಷಯ ಜಾತಿಯ' ಎಲ್ಲ ಮಟ್ಟುಗಳಲ್ಲಿ ಚೌಪದಿ ಅತ್ಯಂತ ಕಿರಿಯ ಗಾತ್ರದ ಮಟ್ಟು. ಅದರ ಪ್ರತಿ ಪಾದದಲ್ಲಿ ಒಂದು ವಿಷ್ಣುಗಣದ ಮುಂದೆ ಒಂದು ರುದ್ರಗಣ ; ಹೀಗೆ ಎರಡೇ ಗಣಗಳು. ಚೌಪದಿಗೆ ಗೇಯ ಲಯವಿದೆ. ಚೌಪದಿಯನ್ನು ತ್ವರಿತಗತಿಯಲ್ಲಿಯೂ ಹೇಳಬಹುದು ; ನಿಧಾನವಾದ ಗತಿಯಲ್ಲಿಯೂ ಹೇಳಬಹುದು.

ಛಂದೋವತಂಸ

ಛಂದೋವತಂಸದ ಬಗೆಗೆ ನಾಗವರ್ಮನು ಹೇಳಿದ ಲಕ್ಷಣವು ಇಬ್ಬಗೆಯ ಅರ್ಥ ಕೊಡುವುದರಿಂದ ಸಂದೇಹ ತಲೆದೋರಿದೆ. ನಾಗವರ್ಮನ ಲಕ್ಷಣ ಲಕ್ಷ್ಯ ಪದ್ಯ ಪಾಠಾಂತರಗಳಿಗೆ ಪಕ್ಕಾಗಿದೆ. ಉತ್ತಮಪಾದವನ್ನು ಪರಿಶೀಲಿಸಿದರೆ ಅದರ ಗಣವಿನ್ಯಾಸ ಹೀಗೆ :

ಗಣವಿನ್ಯಾಸ

ಮಂದರ : ಧರಗಣ : ಮೆಸೆದಿರ್ಕೆ : ಮೊದಲೊಳ್				
	ವಿಷ್ಣು	ವಿಷ್ಣು	ವಿಷ್ಣು	ಬ್ರಹ್ಮ
ಬಂದಿರೆ : ನಾಲ್ಕಕೆ : ಬಿಸರುಹ : ಜನ್ಮಂ				
	ವಿಷ್ಣು	ವಿಷ್ಣು	ವಿಷ್ಣು	ಬ್ರಹ್ಮ
ಸಂದುದು : ಲಕ್ಷಣ : ಮೀತೆಱ : ದಿಂದಂ	"	"	"	"
ಛಂದೋವ : ತಂಸಕೆ : ಮದಗಜ : ಗಮನೇ				
	"	"	"	"

ಛಂದೋವತಂಸದ ಲಕ್ಷಣ (ಛಂ. ಶಾ. 7-16)ವನ್ನು ಜಯಕೀರ್ತಿ ಬೇರೆರೀತಿ ಹೇಳಿದ್ದಾನೆ. ಮೊದಲನೆಯ ರೀತಿಯ ಛಂದೋಗತಿಯುಳ್ಳ ಛಂದೋವತಂಸವು ದಾಸರ ಹಾಗೂ ಶರಣರ ಅನುಭವ ಪದಗಳಲ್ಲಿ ಬಳಕೆಯಾಗಿದೆ. ಒಂದು ಉದಾಹರಣೆ:

=ವಿ		ವಿ		=ವಿ		ಬ್ರ
ಕೆಂದಳಿರ	:	ನಖಶಶಿ	:	ಬಿಂಬಪದ	:	ಪದ್ಮ
ಅಂದುಗೆ	:	ಯಿಟ್ಟವ	:	ನ್ಯಾರೆ ಪೇ	:	ಳಮ್ಮ
ಅಂದು ಕಾ	:	ಳಿಂಗನ	:	ಪೆಡೆಯೊಳು	:	ತುಳಿದ
ನಂದನ	:	ಕಂದ ಮು	:	ಕುಂದ ಕಾ	:	ಣಮ್ಮ

— ಪುರಂದರದಾಸರು

ಅಕ್ಕರಿಕೆ

ಅಕ್ಕರಿಕೆಯ ಲಕ್ಷಣವನ್ನು ನಾಗವರ್ಮನು ಹೀಗೆ ಹೇಳುತ್ತಾನೆ :

ಮುರರಿಪು : ಬೊಮ್ಮಂ : ಮುರರಿಪು : ಬೊಮ್ಮಂ : ಮುರರಿಪು : ಶೂಲಧರಂ
ಚರಣಚ : ತುಷ್ಕಂ : ಖರಗಣ : ಮುಕ್ಕಂ : ಸುರುಚಿರ : ಮಾತ್ರೆಗಳಿಂ
ನಿರುಪಮ : ದಿಂದಂ : ಪರಿಮಿತ : ಮಪ್ಪಂ : ತಿರೆಯುತಿ : ಯಾಱಱೊಳಂ
ಬರೆತರ : ಳಾಕ್ಷೀ : ಧರೆಯೊಳಿ : ದೆತ್ತಂ : ಕರಮೆಸೆ : ವಕ್ಕರಿಕೆ.

(ಛಂದೋಂಬುಧಿ V - 254)

ಇದೇ ಪ್ರಾಸವಿನ್ಯಾಸದೊಂದಿಗೆ ಜಯಕೀರ್ತಿ 'ಅಕ್ಷರಿಕಾ' ಎಂಬ ಹೆಸರಿನಿಂದ 'ಅಕ್ಕರಿಕೆ'ಯ ಲಕ್ಷಣವನ್ನು ಹೇಳಿದುದು ಗಮನಾರ್ಹ. ಆದರೆ ಕುತೂಹಲ ಜನಕವಾಗಿದೆ. ಜಯಕೀರ್ತಿ ಅಕ್ಕರಿಕೆಯ ಲಕ್ಷಣವನ್ನು ಅಂಶಗಣಾನ್ವಯವಾಗಿ ಹೇಳುವುದರ ಜೊತೆಗೆ ಮಾತ್ರೆಗಳ ಮಾತನ್ನೂ ಎತ್ತಿದ್ದಾನೆ.

ಸ್ಮರರತಿ : ಪೂರ್ವಂ : ಸ್ಮರರತಿ : ಮಧ್ಯಂ : ಸ್ಮರಯುಗ : ಗುರುನಿಧನಮ್
ಚರಣ ಚ : ತುಷ್ಕಂ : ಸ್ಥಿರತರ : ಚತುರು : ತ್ತ್ರಶತ : ಮಾತ್ರಮಿದಮ್
(7 – 18)

ಅಂಶಗಣದಂತೆ ಗಣವಿನ್ಯಾಸ ಹೀಗೆ :

ವಿ : ಬ್ರ : ವಿ : ಬ್ರ : ವಿ : ರು.

ಮಾತ್ರಾಗಣದಂತೆ :

ಪ್ರತಿಚರಣಕ್ಕೆ $4 \times 6 + 2 = 26$ ಹೀಗೆ 4 ಪಾದಗಳಿಗೆ ಒಟ್ಟು 104 ಮಾತ್ರೆಗಳು. ಅಂಶಗಣದಂತೆ ಅಕ್ಕರಿಕೆಗೆ ನಿಧಾನವಾದ ಲಯ ಹೊರಡುತ್ತದೆ. ಮಾತ್ರಾಗಣದಂತೆ ತ್ವರಿತ ಲಯವುಂಟಾಗುತ್ತದೆ. ತ್ವರಿತಗತಿಯ ಲಯವು ಹೆಚ್ಚು ಸುಗಮ. 'ಅಕ್ಕರಿಕೆ'ಯ ಛಂದೋಗತಿ ಕಿವಿಗೆ ಹಿತವಾಗಿ ಕೇಳಿಬರುತ್ತದೆ. ಕನ್ನಡ ಗೀತಗಳಲ್ಲಿ ಇದು ವಿರಳವಾಗಿ ಬಳಕೆಯಾಗಿದೆ.

ಮದನವತಿ

ಮದನನ : ತಂದೆಯ : ಗಣಮವು : ವಿಷಯದೊ : ಳಿರೆಗುರು ಮುಂ
ದೊದವಿರೆ : ಪದದೊಳ : ಮದರವೊ : ಲಪ್ಪುದು : ಹರಪದಮುಂ
ವಿದಿತ ಮು : ಪೇಂದ್ರ ಚ : ತುಷ್ಟಯ : ದತ್ತಲ : ಬುಜವದನೇ
ಮದನ ಹ : ರತ್ರಯ : ದಿಂಹರಿ : ಕಡೆಪಡೆ : ಮದನವತೀ

ಇಲ್ಲಿ ಎರಡು ಬಗೆಯ ಲಕ್ಷಣಗಳು ಕಾಣುತ್ತವೆ.

(1) ಮದನವತಿಗೆ (ಪ್ರತಿಪಾದದಲ್ಲಿ) 5 ವಿಷ್ಣುಗಣಗಳು ಮುಂದೆ ಒಂದು ಗುರುವರ್ಣ. (ಅಥವಾ ಅತಿವಿಷ್ಣು ಕಡೆಯದು.)

(2) ಮದನವತಿಗೆ (ಪ್ರತಿಪಾದದಲ್ಲಿ) 4 ವಿಷ್ಣುಗಣಗಳು ಮುಂದೆ ಒಂದು ರುದ್ರಗಣ.

ಮದನವತಿಯ ಲಕ್ಷಣವನ್ನು ಹೇಳುವುದರ ಜೊತೆಗೆ ಜಯಕೀರ್ತಿ ಮಾತ್ರಾಗಣದಂತೆಯೂ ಹೇಳಿದ್ದಾನೆ. ಮದನವತಿಯು "ಪ್ರತಿಪಾದಂ ದ್ವಾವಿಂಶತಿ (22) ಮಾತ್ರಾ" ಎಂದು ಹೇಳಿದ್ದಾನೆ ಮದನವತಿಯನ್ನು ತ್ವರಿತ ಗತಿಯಲ್ಲಿ ಹೇಳಿದರೆ ಮಾತ್ರಾಗಣಗಳ ಪ್ರತೀತಿಯುಂಟಾಗುತ್ತದೆ.*

---

*ಮಾತ್ರಾಗಣಾನ್ವಯವಾದ ಮದನವತಿಯ ಉದಾಹರಣೆಗಳು ಹೊಸಗನ್ನಡದಲ್ಲಿ ದೊರೆಯುತ್ತವೆ. ಉದಾ : ಬೇಂದ್ರೆಯವರ 'ನಾದಲೀಲೆ'ಯ 'ಋತುಗಾನ'ಗಳನ್ನು ಪರಿಶೀಲಿಸಬಹುದು.

ಉತ್ಸಾಹ

ಭೂಹಿ : ತಾರ್ಥ : ವೆನಿಸು : ವಜನ : ಗಣಮು : ವೆಯ್ದಿ : ಸಪ್ತ : ಸಂ
ದೋಹ : ಮತ್ತ : ಲೊಂದು : ಗುರು ಬೆ : ಡಂಗ : ನಾಟ್ಟಿ : ನಿಲೆ ಲ : ಯ
ಗ್ರಾಹಿಯಾಗಿ : ಮಧುರ : ವಚನ : ರಚನೆ : ವೆತ್ತು : ಬಂದೊ : ಡು
ತ್ಸಾಹ : ಮೆಂಬ : ಪೆಸರೊ : ಳೆಸೆವು : ದಬ್ಜ : ಪತ್ರ : ಲೋಚನೇ

(ಛಂದೋಂಬುಧಿ V – 257)

ಎಂದರೆ – ಉತ್ಸಾಹದ ಪ್ರತಿಪಾದದಲ್ಲಿ ಏಳು ಬ್ರಹ್ಮಗಣಗಳ ಮೊತ್ತದ ಕೊನೆಯಲ್ಲಿ ಒಂದು ಗುರು ಬೆಡಗಿನಲ್ಲಿ ಬಂದು ನಿಲ್ಲುತ್ತದೆ ; ಉತ್ಸಾಹವು ಲಯಗ್ರಾಹಿ ರಚನೆಯಲ್ಲಿ ಮಧುರವಚನಗಳನ್ನು ಒಳಗೊಂಡಿರುತ್ತದೆ.

ಉತ್ಸಾಹವನ್ನು ಅಂಶಗಣಾನ್ವಯವಾಗಿ ಹೇಳಿದರೆ ನಿಧಾನ ಗತಿಯು ಪ್ರತೀತಿಗೆ ಬರುತ್ತದೆ. ಮಾತ್ರಾಗಣದಂತೆ ಹೇಳಿದರೆ ಅದರ ಗತಿ ತ್ವರಿತ. ಜಾನಪದ ಹಾಡುಗಳಲ್ಲಿ ಉತ್ಸಾಹ ಲಯವು ಸುಳುಹುದೋರಿದುದುಂಟು. ಉದಾ: ಒಂದು ಚರಣ ಸಾಕು.

ರಾಗೀ : ಬೀಸೋ : ರಾಜ್ಯಾ : ದೊಳಗೆ : ರಂಗ : ನೋ : ಡ ಣ್ಣ : ಬಲುಕೆಂ : ಪೋ

ಷಟ್ಪದಿ

ಷಟ್ಪದಿಯೆಂದಾಗ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ, ಎಂಬ ಹೆಸರಿನಲ್ಲಿ ಸಾಂಪ್ರದಾಯಿಕವಾಗಿ ಇಳಿದು ಬಂದ ಆರು ಷಟ್ಪದಿಗಳು ನೆನಪಿಗೆ ಬರುತ್ತವೆ. ಆದರೆ ನಾಗವರ್ಮನ ಕಾಲದಲ್ಲಿ ಬಳಕೆಯಲ್ಲಿದ್ದ ಷಟ್ಪದಿ ಒಂದೇ ಒಂದು. ಅನುಕೂಲತೆಗಾಗಿ ಅದನ್ನು 'ಮೂಲ' ಷಟ್ಪದಿ ಎಂದು ಕರೆಯಬಹುದು.

ಷಟ್ಪದಿಯ ಬಗೆಗೆ ನಾಗವರ್ಮನು ಲಕ್ಷಣ ಪಾಠಾಂತರಗಳಲ್ಲಿ ಒಳ್ಳೆಯದೆಂದು ಕಾಣುವ ಪದ್ಯವನ್ನು ಇಲ್ಲಿ ಉದಾಹರಿಸಿದೆ.

	ಗಣವಿನ್ಯಾಸ
ಮಂದರ : ಧರಗಣ	ವಿ : ವಿ
ಬಂದಿರ್ಕಾ : ಡಿಂತ್ಯದೊಳ್	ವಿ : ವಿ
ಕುಂದದೆ : ನೆಲಸುಗೆ : ಮದನಹ ರಂ	ವಿ : ವಿ : ರು
ಇಂದುನಿ : ಭಾನನೆ	ವಿ : ವಿ
ಮುಂದಣ : ತೆಜನುಮೀ	ವಿ : ವಿ
ಯಂದಮೆ : ಯಾಗಿರೆ : ಷಟ್ಪದಿ ಕೇಳ್	ವಿ : ವಿ : ರು

ಈ ಲಕ್ಷಣದಂತೆ ಷಟ್ಪದಿಯ ಮೊದಲಲ್ಲಿ (ಎಂದರೆ ಅರ್ಧಪದ್ಯಕ್ಕೆ) 6 ವಿಷ್ಣು ಗಣಗಳು ಕೊನೆಗೆ ಒಂದು ರುದ್ರಗಣ ಬರುತ್ತವೆ. ಮುಂದಣ ಅರ್ಧಪದ್ಯದಲ್ಲಿಯೂ ಹೀಗೆಯೇ (6 ವಿಷ್ಣುಗಣಗಳು, ಕೊನೆಯಲ್ಲಿ ಒಂದು ರುದ್ರ)

ಜಯಕೀರ್ತಿಯಲ್ಲಿಯೂ ಇದೇ ಲಕ್ಷಣವಿದೆ.

ಶಾರ್ಙ್ಗದೇವನು 'ಸಂಗೀತರತ್ನಾಕರ'ದಲ್ಲಿ ಹೇಳಿದ ಷಟ್ಪದಿಯ ಲಕ್ಷಣವು ಇದಕ್ಕೆ ಅನುಸಾರವಾಗಿದೆ.

ಮೂಲಷಟ್ಪದಿಗೆ ಒಂದು ಉದಾಹರಣೆ :

ಅದುಪರ : ಮಾಸ್ಪದ
ಮದುಪುಣ್ಯ : ಸಂಪದ
ಮದುಮಹಾ : ಭ್ಯುದಯವಿ : ಲಾಸವಾ : ಸಂ
ಅದುದಿವ್ಯ : ಮದುಸೇವ್ಯ
ಮದುಸೌಮ್ಯ : ಮದುರಮ್ಯ
ಮದುಸುಖಾ : ಧಾರಸಂ : ಸಾರಸಾ : ರಂ.

(ಶಾಂತಿನಾಥನ ಸುಕುಮಾರ ಚರಿತೆ)

ಅಂಶಗಣದ ಮೂಲಷಟ್ಪದಿಯಿಂದ ಕಾಲಕ್ರಮದಲ್ಲಿ ಮಾತ್ರಾಗಣಾನ್ವಯವಾದ ಕುಸುಮ ಷಟ್ಪದಿಗೆ ದಾರಿಯಾಗಿರಬೇಕು. ಮೇಲೆ ಉದಾಹರಿಸಿದ ಷಟ್ಪದಿಯಲ್ಲಿ ಎಷ್ಟು ವಿಷ್ಣುಗಣಗಳು ಐದೈದು ಮಾತ್ರೆಗಳವು ಎಂಬುದನ್ನು ಗಮನಿಸಬೇಕು.*

*

ಒಟ್ಟಿನಲ್ಲಿ ಕನ್ನಡ ಕಾವ್ಯಗಳಲ್ಲಿ ಹಾಗೂ ಹಾಡುಗಳಲ್ಲಿ ತನ್ನ ಕಾಲದವರೆಗೆ ಎಂದರೆ ಕ್ರಿ.ಶ. 10ನೆಯ ಶತಮಾನದ ಕೊನೆ ಕೊನೆಯವರೆಗೆ ಬಳಕೆಯಾಗುತ್ತ ಬಂದಿದ್ದ ಛಂದೋಬಂಧಗಳನ್ನು ಒಂದು ಕ್ರಮದಲ್ಲಿ ಹೊಂದಿಸಿ ಅವುಗಳನ್ನು ಬಹುಮಟ್ಟಿಗೆ ಲಕ್ಷ್ಯ ಲಕ್ಷಣೋಪೇತವಾಗಿ ನಿರೂಪಿಸಿದ ಹಿರಿಮೆ ನಾಗವರ್ಮನದು. ಈ ದೃಷ್ಟಿಯಿಂದ ನಾಗವರ್ಮನ ಛಂದೋಂಬುಧಿ ಕನ್ನಡದಲ್ಲಿ ಪ್ರಥಮ ಹಾಗು ಪ್ರಮುಖ ಛಂದೋಗ್ರಂಥ. ಛಂದಸ್ಸಿನ ಬಗೆಗೆ ಅದರಲ್ಲೂ ಕನ್ನಡ ಛಂದಸ್ಸಿನ ಬಗೆಗೆ ನಾಗವರ್ಮನು ಮಾಡಿದ ಆಳವಾದ ಅಭ್ಯಾಸವನ್ನೂ, ಯೋಜಕಶಕ್ತಿಯನ್ನೂ

*ನಾಗವರ್ಮನ ತರುವಾಯ ನಡುಗನ್ನಡದ ಅವಧಿಯಲ್ಲಿ ರೂಪಗೊಂಡ ಒಟ್ಟು ಆರು ಸಾಂಪ್ರದಾಯಿಕ ಷಟ್ಪದಿಗಳಲ್ಲಿ ಕಾವ್ಯಗಳಿಗಾಗಿ ಬಳಕೆಯಾದವೆಂದರೆ ಎರಡು ; ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳು. ಉಳಿದವು ಬಿಡಿಪದಗಳಿಗಾಗಿ ಹಾಗು ಗೀತಗಳಿಗಾಗಿ ಬಳಕೆಯಾಗಿವೆ.

ಸೂಚಿಸುವುದರ ಜೊತೆಗೆ ಆತನ ಸ್ವತಂತ್ರ ಪರಿಶೀಲನೆಯನ್ನೂ ಸ್ವಂತ ಗತಿ ಮತಿಗಳನ್ನೂ ಛಂದೋಂಬುಧಿ ಎತ್ತಿ ತೋರುತ್ತದೆ.

ತನ್ನ ವಿಷಯ ನಿರೂಪಣೆಗಾಗಿ ನಾಗವರ್ಮನು ಬಳಸಿದ ಶೈಲಿ ಅದಕ್ಕೆ ಹವಣಾಗಿ ಹೊಂದಿಕೊಂಡಿದೆ. ವಿವಿಧ ವೃತ್ತಗಳನ್ನೂ ಛಂದೋಬಂಧಗಳನ್ನೂ ಮಟ್ಟುಗಳನ್ನೂ ಸಂಕ್ಷಿಪ್ತವಾಗಿ ಹಾಗೂ ತಕ್ಕಮಟ್ಟಿಗೆ ನಿಚ್ಚಳವಾಗಿ ಲಕ್ಷಣಿಸುವ ಕಲೆ ಆತನಿಗೆ ಕೈವಶವಾಗಿದೆ. 'ಕರ್ಣಾಟಕ ವಿಷಯ ಜಾತಿ'ಯ ಮಟ್ಟುಗಳ ಮೇಲೆ ಆತನು ಬೀರಿದ ಬೆಳಕು ತುಂಬಾ ಉಪಯುಕ್ತವಾದುದು ; ಕನ್ನಡ ಛಂದಸ್ಸಿನ ಅಭ್ಯಾಸಿಗಳಿಗೆ ನಿಜವಾಗಿಯೂ ದಾರಿದೀಪ.

*

ಛಂದೋಂಬುಧಿಯನ್ನು ರಚಿಸಿದ ನಾಗವರ್ಮನು ಕ್ರಿ. ಶ. 990 ರ ಸುಮಾರಿನವನು. ಕನ್ನಡಿಗನೇ ಆದ ಇನ್ನೊಬ್ಬ ಛಂದೋಗ್ರಂಥಕಾರನಾಗಿದ್ದ ಜಯಕೀರ್ತಿಯ ಕಾಲ ಕ್ರಿ. ಶ. 1000 ಎಂದು ಎಚ್. ಡಿ. ವೇಲಣಕರ್ ಮೊದಲಾದ ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಸಮಕಾಲೀನರಾದ ಈ ಛಂದೋಗ್ರಂಥಕಾರರಲ್ಲಿ ನಾಗವರ್ಮನೇ ಒಂದಿಷ್ಟು ಹಿರಿಯ. ಹಾಗಿದ್ದ ಪಕ್ಷದಲ್ಲಿ ಛಂದೋಂಬುಧಿಯ ಪಂಚಮಾಧಿಕಾರದಲ್ಲಿ ನಾಗವರ್ಮನು 'ಕರ್ಣಾಟಕ ವಿಷಯ ಜಾತಿ'ಯ ಛಂದಸ್ಸಿನ ಬಗೆಗೆ ಚೆಲ್ಲಿದ ಬೆಳಕು ಜಯಕೀರ್ತಿಯು ಸಂಸ್ಕೃತ ಭಾಷೆಯಲ್ಲಿ ರಚಿಸಿದ 'ಛಂದೋನುಶಾಸನ'ದ ಸಪ್ತಮೋಧಿಕಾರದಲ್ಲಿ ಸುಳುಹುದೋರಿದೆ. ಏಕೆಂದರೆ ಕರ್ಣಾಟಕ ವಿಷಯ ಜಾತಿಯ ಮಟ್ಟುಗಳನ್ನು ಲಕ್ಷಣಿಸುತ್ತ ಈ ಇಬ್ಬರೂ ಹೇಳಿದ ಮಾತುಗಳಲ್ಲಿ ಸಾಕಷ್ಟು ಸಾಮ್ಯ ಕಂಡುಬರುತ್ತದೆ.

ನಾಗವರ್ಮ ಹಾಗೂ ಜಯಕೀರ್ತಿಗಳ ತರುವಾಯದ ಸೋಮದೇವನ 'ಮಾನಸೋಲ್ಲಾಸ'ದಲ್ಲಿ ಹಾಗು ಶಾರ್ಙ್ಗದೇವನ 'ಸಂಗೀತ ರತ್ನಾಕರ'ದಲ್ಲಿ ಕೆಲವು ಕನ್ನಡ ಛಂದೋಬಂಧಗಳ ಲಕ್ಷಣ ನಿರೂಪಣೆ ಬಂದಿದೆ. ಈಶ್ವರ ಕವಿಯ 'ಕವಿಜಿಹ್ವಾಬಂಧನ,' ಗುಣಚಂದ್ರನ 'ಛಂದಸ್ಸಾರ' ಹೆಸರು ಗೊತ್ತಾಗದೆ ಇದ್ದ ಒಬ್ಬ ಛಂದೋಗ್ರಂಥಕಾರನ "ನಂದಿ ಛಂದಸ್ಸು" ಹೀಗೆ ಮೂರು ನಾಲ್ಕು ಹಿರಿ ಕಿರಿ ಕನ್ನಡ ಛಂದೋಗ್ರಂಥಗಳು ರಚಿತವಾದವು. ಇವುಗಳಲ್ಲೆಲ್ಲ ನಾಗವರ್ಮನ ಛಂದೋಂಬುಧಿಯೇ ಕನ್ನಡ ಛಂದಸ್ಸಿಗೆ ಪ್ರಮಾಣ ಗ್ರಂಥವೆನ್ನಬಹುದು.

ಅನುಬಂಧ

ಛಂದೋಂಬುಧಿಯ ಆಚೆ ಈಚೆ

ಛಂದಸ್ಸು - ಗಣ

ಪದ್ಯದಲ್ಲಿ ನುಡಿಯುವ ಸ್ವರಾಂದೋಲನವೇ ಛಂದಸ್ಸು ಎಂದು ಛಂದಸ್ಸನ್ನು ಕುರಿತು ಸ್ಥೂಲವಾಗಿ ವ್ಯಾಖ್ಯೆ ಹೇಳಬಹುದು. ಪದ್ಯದಲ್ಲಿ ನಿಯತರೀತಿಯ ಸ್ವರದ ಗುಂಪುಗಳು ಅಥವಾ ಗಣಗಳು ಆಂದೋಲನಗೊಳ್ಳುವುದರಿಂದ ಪದ್ಯಕ್ಕೆ ಅದರದೇ ಆದ ಛಂದೋಲಯವುಂಟಾಗುತ್ತದೆ. ಪದ್ಯವು ಚರಣಗಳನ್ನು ಒಳಗೊಂಡಿರುತ್ತದೆ; ಚರಣದಲ್ಲಿ ಗಣಗಳು ಅಳವಟ್ಟಿರುತ್ತವೆ. ಪದ್ಯಕ್ಕೂ ಅದರಲ್ಲಿ ಸ್ಪಂದಿಸುವ ಗಣಗಳಿಗೂ ಇರುವ ಸಲೀಲ ಸಂಬಂಧವನ್ನು ಒಂದು ಉದಾಹರಣೆಯಿಂದ ಅರಿಯಬಹುದು.

ಏನದು : ಎಂತಹ : ಅಮೃತದ : ಧಾರೆಯು
ಸೂಸಿದೆ : ಸಭೆಯೊಳ : ಗೆಂಬವೊ : ಲು
ಅನುಭಾ : ವವು ಕ : ನ್ನಡದಲಿ : ಹೊಮ್ಮುತ
ಹರಿಯುತ : ಲಿದೆ ಕಾಂ : ತಿಯ ಹೊನ : ಲು

ಇಲ್ಲಿ ಗುರುತುಮಾಡಿದ ಎಡೆಗಳು ಗಣಗಳ ಸುಳುಹುಗಾಣಿಸುತ್ತವೆ.

ಛಂದಸ್ಸು - ಪ್ರಾಸ

"ಪ್ರಾಸವಿಲ್ಲದ ಪದವ ತಾಸು ಹಾಡಿದರೇನು ?" ಎಂದಿದ್ದಾನೆ ಸರ್ವಜ್ಞ. ಅವನ ಈ ಮಾತು ಪದ್ಯ ಹಾಗು ಪ್ರಾಸಗಳ ಸಂಬಂಧವನ್ನೂ ಸೂಚಿಸುತ್ತದೆ. ಕನ್ನಡ ಪದ್ಯಗಳಲ್ಲಿ ಕಾಣಿಸಿಕೊಳ್ಳುವ ಪ್ರಾಸವನ್ನು ಒಟ್ಟಿನಲ್ಲಿ ಮೂರು ಪ್ರಕಾರಗಳಾಗಿ ವರ್ಗೀಕರಿಸಬಹುದು. ಆದಿಪ್ರಾಸ, ಅನುಪ್ರಾಸ, ಅಂತ್ಯಪ್ರಾಸ ಎಂದು ಅವುಗಳಿಗೆ ಹೆಸರುಗಳು ರೂಢವಾಗಿವೆ.

ಆದಿಪ್ರಾಸವು ಕನ್ನಡದಲ್ಲಿ ವಿಶಿಷ್ಟವಾಗಿ ರೂಢವಾದ ಪ್ರಾಸ. ಅದನ್ನು ಖಂಡಪ್ರಾಸವೆಂದೂ ಕರೆಯುವುದುಂಟು. ಹಳಗನ್ನಡ ಹಾಗು ನಡುಗನ್ನಡ ಕಾವ್ಯಗಳ ಪದ್ಯಗಳಲ್ಲಿ ಖಚಿತವಾಗಿ ತೋರಿ ಬರುವ ಪ್ರಾಸವಿದು. ಪದ್ಯದ ಪ್ರತಿಚರಣದ ಆದಿಯಲ್ಲಿ ಒಂದೆರಡನೆಯ ಸ್ವರಗಳ ನಡುವೆ ಮರಳಿ ಮರಳಿ ಬರುವ ಎರಡನೆಯ ವ್ಯಂಜನಾಕ್ಷರವು ಆದಿಪ್ರಾಸ. ಉದಾಹರಣೆ:

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯನ್
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ

ಇಲ್ಲಿ 'ಧ' ವರ್ಣ ಪ್ರಾಸಾಕ್ಷರ. ಅದು ಚರಣದ ಮೊದಲಲ್ಲಿ ಬರುವುದರಿಂದ ಅದನ್ನು ಆದಿಪ್ರಾಸವೆನ್ನುತ್ತಾರೆ.

ಕೆಳಗಣ ರಗಳೆಯಲ್ಲಿ ಕಾ ಣಿ ಸಿ ದ ಅನುಸ್ವಾರಗಳು ಅನುಪ್ರಾಸವನ್ನು ಪದ ಪದದಲ್ಲಿಯೂ ಕಾಣಿಸುತ್ತವೆ. ಒಂದೊಂದೇ ಅನುಸ್ವಾರ ಅನುಪ್ರಾಸವನ್ನು ಸೂಚಿಸಿದರೆ ಜೋಡಕ್ಷರಗಳ ಪದ – ಕೊಂಡು – ಅಂತ್ಯಪ್ರಾಸವನ್ನು ಎತ್ತಿ ತೋರುತ್ತದೆ.

ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು

*

ಛಂದೋಂಬುಧಿಯ ಆಚೆ

ಕವಿರಾಜಮಾರ್ಗ ಛಂದೋಂಬುಧಿಗಿಂತ ಮೊದಲು ರಚಿತವಾದ ಲಕ್ಷಣಗ್ರಂಥ. ಅದರಲ್ಲಿ ಯತಿ, ಪ್ರಾಸ, ವೃತ್ತ, ಜಾತಿ ಮೊದಲಾದ ಛಂದಸ್ಸಿಗೆ ಸಂಬಂಧಿಸಿದ ಮಾತುಗಳು ಬಂದಿವೆ. ಕವಿರಾಜಮಾರ್ಗದಲ್ಲಿ 'ಬೆದಂಡೆ' ಎಂಬ ಕಾವ್ಯರೂಪದ ಸಂಬಂಧದಲ್ಲಿ ಕಂದ ಹಾಗೂ ವೃತ್ತಗಳ ಪ್ರಸ್ತಾಪ ಬಂದಿದೆ.

'ಚತ್ತಾಣ' ಎಂಬ ಕಾವ್ಯರೂಪದ ಸಂಬಂಧದಲ್ಲಿ ಕಂದ ಹಾಗು ವೃತ್ತಗಳ ಜೊತೆಗೆ 'ಚವುಪದಿ' 'ಗೀತಿಕೆ' 'ತ್ರಿಪದಿ' – ಇವುಗಳ ಪ್ರಸ್ತಾಪ ಬಂದಿದೆ,

ಅಂತೂ 'ಕವಿರಾಜಮಾರ್ಗ'ದ ಪೂರ್ವದಲ್ಲಿಯೇ ಕಂದ ವೃತ್ತಗಳೂ ತ್ರಿಪದಿ ಚೌಪದಿ ಗೀತಿಕೆಗಳೂ ಕನ್ನಡ ಕಾವ್ಯಗಳಲ್ಲಿ ಬಳಕೆಯಾಗತೊಡಗಿದ್ದುವು. 'ಕವಿರಾಜಮಾರ್ಗ'ದಲ್ಲಿ 'ಕಂದ' ವಿಶೇಷವಾಗಿ ಬಳಕೆಯಾಗಿರುವುದಲ್ಲದೆ ಖ್ಯಾತಕರ್ಣಾಟಕ

ವೃತ್ತಗಳಲ್ಲಿ ಚಂಪಕಮಾಲೆ ಉತ್ಪಲಮಾಲೆಗಳು ಹಾಗು ಮತ್ತೇಭವಿಕ್ರೀಡಿತ ಶಾರ್ದೂಲವಿಕ್ರೀಡಿತಗಳು ಪ್ರಯೋಗವಾಗಿವೆ ಎಂಬುದು ಗಮನಾರ್ಹ.

ಕವಿರಾಜಮಾರ್ಗದಲ್ಲಿ ರಗಳೆಯ ಸುಳುಹಿಲ್ಲ. ರಗಳೆ ಕವಿರಾಜಮಾರ್ಗ ಹಾಗು ಪಂಪಯುಗಗಳ ನಡುವಣ ಗಡುವಿನಲ್ಲಿ ಪ್ರಾಕೃತದ ಮಾರ್ಗವಾಗಿ ಕನ್ನಡಕ್ಕೆ ಬಂತು ಎಂದು ಹೇಳಬಹುದು.

*

ಛಂದೋಂಬುಧಿಗೆ ಈಚೆ

ಛಂದೋಂಬುಧಿಯ ಈಚೆಗೆ ಛಂದಸ್ಸಿನ ವಿಕಾಸದ ದಾರಿಯಲ್ಲಿ 12ನೆಯ ಶತಮಾನದ ಮಧ್ಯಭಾಗವು ಪ್ರಯೋಗದ ದೃಷ್ಟಿಯಿಂದ ಮಹತ್ವಪೂರ್ಣವಾದ ದೇಸಿ ಪ್ರಚುರವಾದ ಗಡುವು.

ತ್ರಿಪದಿಯು ಆಗ ಅಂಶಗಣದಿಂದ ಮಾತ್ರಾಗಣಕ್ಕೆ ತಿರುಗುವ ಪ್ರವೃತ್ತಿಯನ್ನು ತೋರಿತು. ಉದಾಹರಣೆಯನ್ನು ಗಮನಿಸಬಹುದು.

ಅಷ್ಟದಳ : ಕಮಲದಾ : ಬಟ್ಟಬಯ : ಲೊಳಗೊಂದು
ಮುಟ್ಟ ಬಾ : (ರದಾ) : ಘನವಿಹುದು : ಮನದೊಳಗೆ
ದೃಷ್ಟಿಯಿ : (ಟ್ಟವನೆ) : ಕಡುಜಾಣ

– ಮಹದೇವಿ ಅಕ್ಕನ ಯೋಗಾಂಗ ತ್ರಿವಿಧಿ

12ನೆಯ ಶತಮಾನದ ವರೆಗಿನ ಸಾಹಿತ್ಯದಲ್ಲಿ ಕಣ್ಣಿಗೆ ಬೀಳದ ಸಾಂಗತ್ಯವು ಅದೇ ಗಡುವಿನಲ್ಲಿ ಸುಳುಹುದೋರಿತು. ಇದಕ್ಕೆ ಬಸವಣ್ಣನವರ ಕಾಲಜ್ಞಾನದ ಒಂದು ವಚನ (ಅದು ಬಸವಣ್ಣನವರದೇ ಆಗಿದ್ದರೆ) ನಿದರ್ಶನ. ಅದು ಹೀಗಿದೆ.

ಮುಱೆಯಿಲ್ಲ : ಬೆಳೆಯಿಲ್ಲ : ಹೊಱೆಯಿಲ್ಲ : ಕೆಱೆಯಿಲ್ಲ
ನೆಲಲಿಲ್ಲ : ಉದಕ ಮು : ನ್ನಿಲ್ಲ
ಮೊಳೆಯಿಲ್ಲ : ಸೂರ್ಯನ : ಕಳೆಯಿಲ್ಲ : ಗೆಲುವಿಲ್ಲ
ಉಱುವಿಲ್ಲ : ಆ ಪಾಪಿ : ಗಳಿಗೆ.

ಷಟ್ಪದಿಯ ದಿಕ್ಕಿನಲ್ಲಿಯೂ ಆ ಗಡುವು 12ನೆಯ ಶತಮಾನದ ಮಧ್ಯಭಾಗದಿಂದ ಪ್ರಾರಂಭವಾಗಿ 13 ನೆಯ ಶತಮಾನದ ದಶಕಗಳಲ್ಲಿ ಸುಳಿದುಬಂದ ಗಡುವು – ಷಟ್ಪದಿಯ ದಿಕ್ಕಿನಲ್ಲಿಯೂ ಪ್ರಗತಿಯನ್ನು ಸಾ ಧಿ ಸಿ ತು. ಚೆನ್ನಬಸವಣ್ಣನವರ ಮಂತ್ರಗೋಪ್ಯದಲ್ಲಿ ಭೋಗಷಟ್ಪದಿಯ ಸುಳುಹು ಕಾಣುತ್ತದೆ.

ಅದರೊಳಗಣ ಒಂದು ಪದ್ಯವನ್ನು ಭೋಗಷಟ್ಪದಿಯ ರೂಪದಲ್ಲಿ ಹೀಗೆ ಇಡಬಹುದು.

ಉದಾಹರಣೆಗಾಗಿ ಅರ್ಧಪದ್ಯ

ಮುಟ್ಟಿ : ದಲ್ಲಿ : ಮುಟ್ಟಿ : ದಲ್ಲಿ   ಮೂರು ಮೂರು ಮಾತ್ರೆಗಳ 4 ಗಣಗಳು
ತೊಟ್ಟು : ಬಿಟ್ಟ : ಹಣ್ಣಿ : ನಂತೆ   ” ” ” ”
ಬಟ್ಟ : ಬಯಲ : ತುಟ್ಟ : ತುದಿಯ : ಮೆಟ್ಟಿ : ನಿಂದ : ನು
ಮೂರು ಮೂರು ಮಾತ್ರೆಗಳ 6 ಗಣಗಳು
+ ಒಂದು ಗುರು

ಹರಿಹರದೇವನು ರಗಳೆಯಲ್ಲಿ ಸಾಧಿಸಿದ ಹುಲುಸಾದ ಬೆಳೆ, ರಾಘವಾಂಕನ ವಾರ್ಧಕ ಷಟ್ಪದಿಯ ಸೊಗಸಾದ ಕೃಷಿ ದೇಸಿಪ್ರಚುರವಾದ ಆ ಪ್ರಯೋಗಯುಗದ ಸೀಮೆಯಲ್ಲಿಯೇ ಸಮಾವೇಶವಾಗುತ್ತವೆ.

*

ತರುವಾಯದ ಛಂದೋಗ್ರಂಥಗಳು

ಛಂದೋಂಬುಧಿಯ ತರುವಾಯದ ಛಂದೋಗ್ರಂಥಗಳಲ್ಲಿ 2ನೆಯ ನಾಗವರ್ಮ (ಕ್ರಿ. ಶ. 1145) ನಿಂದ ರಚಿತವಾದುದೆಂದು ಪ್ರತೀತಿಯಿರುವ ಛಂದೋವಿಚಿತಿ (?) ಈಶ್ವರ ಕವಿಯ ‘ಕವಿ ಜಿಹ್ವಾಬಂಧನ’(1500)ಗುಣಚಂದ್ರನ (1650) ಛಂದಸ್ಸಾರ, ಹೆಸರು ಗೊತ್ತಿಲ್ಲದ ಗ್ರಂಥಕರ್ತನ ‘ನಂದಿಛಂದಸ್ಸು’ ಇವು ಗಮನಾರ್ಹವಾದುವುಗಳು. ಸಂಸ್ಕೃತ ಭಾಷೆಯಲ್ಲಿ ನಿರೂಪಿತವಾದ ಜಯಕೀರ್ತಿಯ ‘ಛಂದೋನು ಶಾಸನ’ವಂತೂ ಸರಿಯೇ ಸರಿ. ಜೊತೆಗೆ ಚಾಲುಕ್ಯ ದೊರೆ 3ನೆಯ ಸೋಮೇಶ್ವರನ (1129) ‘ಮಾನಸೋಲ್ಲಾಸ’, ಹಾಗು ಶಾರ್ಙ್ಗದೇವನ (13ನೆಯ ಶತಮಾನದ ಪೂರ್ವಭಾಗ) ‘ಸಂಗೀತರತ್ನಾಕರ’ ಇವು ಅಚ್ಚಗನ್ನಡ ಮಟ್ಟುಗಳಾದ ತ್ರಿಪದಿ ಹಾಗೂ ಷಟ್ಪದಿಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲಿವೆ.

ಗತಿಪ್ರಗತಿ

ಕನ್ನಡ ಛಂದಸ್ಸು ಮುಖ್ಯವಾಗಿ ಮೂರು ಮೂರು ಛಂದೋಗತಿಗಳ ಶ್ರುತಿಯಲ್ಲಿ ಪ್ರಗತಿಗೈಯುತ್ತ ಬಂದಿದೆ. ಮೂಲತಃ ಅವು ರಗಳೆಗಳಲ್ಲಿ ನುಡಿದ ಮಾತ್ರಾಗಣಾನ್ವಯವಾದ ಛಂದೋಲಯಗಳು. ಅವುಗಳ ಗಣಯೋಜನೆ ಹೀಗೆ :—

ಉತ್ಸಾಹ ಲಯ	3: 3: 3: 3	(ಮೂರು ಮೂರು ಮಾತ್ರೆಗಳ 4 ಗಣಗಳು)
ಮಂದಾನಿಲ ಲಯ	4: 4: 4: 4	(ನಾಲ್ಕು ನಾಲ್ಕು ಮಾತ್ರೆಗಳ 4 ಗಣಗಳು)
ಲಲಿತ ಲಯ	5: 5: 5: 5	(ಐದೈದು ಮಾತ್ರೆಗಳ 4 ಗಣಗಳು)

ಭಾಮಿನಿಯೊಂದನ್ನು ಬಿಟ್ಟರೆ ನಡುಗನ್ನಡ ಯುಗದ ಉಳಿದೆಲ್ಲ ಷಟ್ಪದಿಗಳು ಈ ಮೂರು ಲಯಗಳ ಸೂತ್ರವನ್ನೇ ಹಿಡಿದು ರಚಿತವಾದುವು. ನಡುಗನ್ನಡದ ಕಾಲದಲ್ಲಿ ರಚಿತವಾದ ಬಿಡು ಗೀತಗಳ ಛಂದೋಬಂಧಗಳಿಗೂ ಈ ಮಾತು ಅನ್ವಯಿಸುತ್ತದೆ. ಇತ್ತೀಚಿನ ಭಾವಗೀತಗಳು ಸಹ ಈ ಮಾತ್ರಾಗಣಾನ್ವಯವಾದ ಮೂರು ಛಂದೋಲಯಗಳನ್ನೇ ಪ್ರಾಮುಖ್ಯವಾಗಿ ಅವಲಂಬಿಸಿದುವು.

ಇತ್ತೀಚಿನ ವಿಕಾಸ

(ಆಧುನಿಕ ಛಂದಸ್ಸು)

ಆಧುನಿಕ ಯುಗವು ಪ್ರಧಾನವಾಗಿ ಭಾವಗೀತಗಳ ಯುಗ. ಆಧುನಿಕ ಕವಿತೆಗಳ ಛಂದಸ್ಸಿನಲ್ಲಿ ಇಂಗ್ಲಿಷ್ ಭಾವಗೀತಗಳ ಛಂದಸ್ಸಿನ ಪ್ರಭಾವ ಕೆಲಮಟ್ಟಿಗೆ ಕಾಣುತ್ತದೆ. ಪದ್ಯದ ಕಟ್ಟು ಹಾಗು ಪ್ರಾಸವಿನ್ಯಾಸ - ಇವುಗಳಿಗೆ ಸಂಬಂಧಿಸಿದ ಪ್ರಭಾವವದು.

ಈ ಯುಗದ ಭಾವಗೀತಗಳಲ್ಲಿ ಸ್ಪಂದಿಸುವ ಪ್ರಮುಖ ಛಂದೋಲಯಗಳು ಮೊದಲಿಂದ ನುಡಿಯುತ್ತ ಬಂದ ಉತ್ಸಾಹ, ಮಂದಾನಿಲ ಹಾಗು ಲಲಿತ ಲಯಗಳನ್ನು ಅವಲಂಬಿಸಿದುವು. ಅವುಗಳ ಜೊತೆಗೆ 3: 4: 3: 4 ಈ ಬಗೆಯ ಗಣ - ಚರಣವಿನ್ಯಾಸವುಳ್ಳ ಭಾಮಿನಿಯನ್ನೂ 3: 5: 3: 5 ಈ ಬಗೆಯ ವಿನ್ಯಾಸವನ್ನು ಒಳಗೊಂಡ ಮಂದಾನಿಲ ಪ್ರಭೇದವನ್ನೂ 6: 6: 6: 6: ಈ ಗಣವಿನ್ಯಾಸವನ್ನು ಅನುಸರಿಸುವ ಅಧಿಕೋತ್ಸಾಹ ಲಯವನ್ನೂ ಗಣನೆಗೆ ತಂದರೆ ಆಧುನಿಕ ಛಂದಸ್ಸು ಒಟ್ಟು ಆರು ಮುಖ್ಯ ಗತಿಗಳಲ್ಲಿ ವಿಧವಿಧವಾದ ಚರಣ ವಿನ್ಯಾಸ ಹಾಗು ಪ್ರಾಸ ವಿನ್ಯಾಸದೊಡನೆ ಅನೇಕಾನೇಕ ಛಂದೋಬಂಧಗಳನ್ನು ನಿರ್ಮಿಸಿಕೊಂಡಿದೆ. ಈ ದಿಶೆಯಲ್ಲಿ 'ಶ್ರೀ' ಅವರ 'ಇಂಗ್ಲಿಷ್ ಗೀತಗಳು' ತೋರಿದ ದಾರಿ ವಿಶೇಷ ಗಮನಾರ್ಹವಾದುದು.

ಈ ಹೊಸ ದಿಶೆಯಲ್ಲಿಯೇ 'ತಲಷಟ್ಪದಿ,' 'ಜಲಷಟ್ಪದಿ' ಮೊದಲಾದ ಹೊಸ ಷಟ್ಪದಿಗಳು ರೂಪತಾಳಿವೆ. ಇಂಗ್ಲಿಷಿನ ಸಂಪರ್ಕದಿಂದಾಗಿ ಕೆಲವು ಹೊಸ ಛಂದೋರೂಪಗಳೂ ಕನ್ನಡದಲ್ಲಿ ಸುಳಿದು ಬಂದಿವೆ. ಅಷ್ಟಷಟ್ಪದಿ

(Sonnet) ಗೀತರೂಪಕ (Opera) ಪ್ರಗಾಥ (Ode) ಈ ಛಂದೋರಚನೆಗಳನ್ನು ಇಲ್ಲಿ ಹೆಸರಿಸಬಹುದು.

ರಗಳೆ - ವಿಶೇಷತಃ ಲಲಿತ ರಗಳೆ - ತನ್ನ ಆದಿ ಅಂತ್ಯಪ್ರಾಸಗಳಿಂದ ಬಿಡುಗಡೆ ಹೊಂದಿ ಸರಳ ರಗಳೆಯಾಗಿ ಪರಿಣಮಿಸಿ ಕಥನ ಕವನ ಹಾಗು ನಾಟಕಗಳ ರಚನೆಗೆ ನೆರವಾಗಿದೆ. ತೀರ ಇತ್ತೀಚಿನ ನವ್ಯಕವಿತೆಯಲ್ಲಿ ಕೂಡ ಈ ಸರಳ ಲಲಿತ ರಗಳೆ ಹೆಚ್ಚು ಸ್ವಚ್ಛಂದವಾಗಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.*

---

*ನವ್ಯ ಕವಿತೆಯ ಛಂದಸ್ಸು ಅನಿಯತ ಬಿಡಿ ವಿಷಮ ವೃತ್ತಗಳನ್ನು ಆದರೆ ಮಾತ್ರಾಗಣವನ್ನು ಬಹುತರ ಉಳಿಸಿಕೊಂಡು ಅರ್ಥಕ್ಕೆ, ಭಾವಕ್ಕೆ ತೂಗುತ್ತದೆ — ಸಂ.

ಸಮೀಕ್ಷೆ

ಕನ್ನಡ ಛಂದಸ್ಸಿನ ಚರಿತ್ರೆಯನ್ನು 'ಶ್ರೀ'ಯವರು ಕನ್ನಡ ಕೈಪಿಡಿಯಲ್ಲಿ, ಡಾ॥ ಕರ್ಕಿಯವರು 'ಛಂದೋವಿಕಾಸ'ದಲ್ಲಿ ಬೇರೆ ಬೇರೆ ರೀತಿಯಲ್ಲಿ ಮಾಡಿದ್ದರು. ಈಚೆಗೆ ಅದರ ವೈವಿಧ್ಯವನ್ನು ಡಾ॥ಎಸ್.ಸಿ. ನಂದೀಮಠರು 'ಕುವಲಯಾನಂದ'ದ ಪೀಠಿಕೆಯಲ್ಲಿಯೂ 'ಕನ್ನಡ ಛಂದಸ್ಸು' ಎಂದು ಶ್ರೀ ಟಿ. ವಿ. ವೆಂಕಟಾಚಲ ಶಾಸ್ತ್ರಿಗಳೂ ಮಾಡಿಕೊಟ್ಟಿದ್ದಾರೆ. ಬೇರೆ ಬೇರೆ ಸಂದರ್ಭಗಳಲ್ಲಿ ಛಂದಸ್ಸಿಗೆ ಸಂಬಂಧಿಸಿದ ವಿಚಾರಗಳನ್ನೂ ವಿಮರ್ಶೆಯನ್ನೂ ವಿದ್ವಾಂಸರು ಪತ್ರಿಕೆಗಳಲ್ಲಿಯೂ ಕಿರುಹೊತ್ತಿಗೆಗಳಲ್ಲಿಯೂ ಬಿಡಿ ಲೇಖನಗಳಲ್ಲಿಯೂ ತಾವು ಸಂಪಾದಿಸಿರುವ ಛಂದೋಂಬುಧಿ, ಕವಿಜಿಹ್ವಾಬಂಧನ ಮುಂತಾದ ಗ್ರಂಥಗಳ ಪೀಠಿಕೆಗಳಲ್ಲಿಯೂ ಪ್ರಬಂಧ ಸಂಕಲನಗಳಲ್ಲಿಯೂ ಮಾಡಿದ್ದಾರೆ. ಅದನ್ನೆಲ್ಲ ಪುನರಾವೃತ್ತಿ ಮಾಡಬೇಕಿಲ್ಲ. ಇಲ್ಲಿ ಒಂದೆರಡು ಸಂಗತಿಗಳನ್ನು ಮಾತ್ರ ಎತ್ತುತ್ತೇನೆ. ಹಳಗನ್ನಡದಲ್ಲಿ ಸಂಸ್ಕೃತದ, ಪ್ರಾಕೃತದ ಮತ್ತು ದೇಶಿಯಾದ ಮೂರು ಬಗೆಯ ಛಂದೋಜಾತಿಗಳಿವೆ. ಅವು ಅಕ್ಷರ, ಮಾತ್ರಾ, ಅಂಶ ಛಂದಗಳು.

ಮೂರು ಸಾಲಿನ ಗಾಯತ್ರಿ, ಪವಿತ್ರವಾದ ಗಾಯತ್ರಿ ಮಂತ್ರಕ್ಕೂ (ಅದು ಛಂದಸ್ಸಿನ ಹೆಸರೂ ಮೊದಲು) ಒದಗಿತು. ಪದ್ಯವೆಂದರೆ ನಾಲ್ಕು ಸಾಲಿನದು ಎಂಬ ಎಣಿಕೆ ಬೆಳೆದಾಗ ಗಾಯತ್ರಿ ಎಂಬುದು ಆರಕ್ಷರಗಳ ನಾಲ್ಕು ಸಾಲಿನ ಛಂದಸ್ಸಾಯಿತು. ಎಂದರೆ 8×3 ಅಕ್ಷರಗಳದಿದ್ದುದು 6×4 ಲೆಕ್ಕದ್ದಾಯಿತು. ಮೊದಲು ವೇದದ ಗಣ ನಾಲ್ಕು ಅಕ್ಷರಗಳದು; ಕಾವ್ಯಗಳ ಕಾಲಕ್ಕೆ ಮೂರು ಅಕ್ಷರದ ಗಣವಾಗಿ ಪ್ರಸ್ತಾರ ಮಾಡುವ ಪದ್ಧತಿ ಏರ್ಪಟ್ಟಿತು. ಗಾಯತ್ರಿಯು ಎಂಟು ಅಕ್ಷರದ ಒಂದೊಂದು ಪಾದ ನಾಲ್ಕು ಪಾದವಾಗಿ ಅನುಷ್ಟುಭ್ ರೂಪದಲ್ಲಿ ನಾಲ್ಕು ಪಂಕ್ತಿಯದಾಯಿತು. ಅಲ್ಲಿಂದೀಚಿನ ಕಾಲಗಳಲ್ಲಿ ಶ್ಲೋಕರೂಪಕ್ಕೆ ತಿರುಗಿದಾಗ ಅದು ಹೆಚ್ಚು ಧಾರಾಳ ಪಡೆದು ಬರವಣಿಗೆಯಲ್ಲಿ ಹದಿನಾರು ಅಕ್ಷರದ ಎರಡು ಸಾಲು – ಎಂದರೆ $32 = (8 \times 4)$ ಅಕ್ಷರಗಳ ಒಟ್ಟು ಪರಿಮಿತಿಯುಳ್ಳ ಪದ್ಯಜಾತಿ

ಯಾಯಿತು. ಇದರ ಚರಿತ್ರೆ ಚೇತೋಹಾರಿಯಾದ್ದು. ಹನ್ನೊಂದು ಅಕ್ಷರ ಪಾದದ ತ್ರಿಷ್ಟುಭಿನ ಕಡೆಯಲ್ಲಿ 4, 4, 3 ಅಥವಾ 4, 3, 4 ಅಕ್ಷರಗಳ ಮಾನದಲ್ಲಿ ಮೂರು ಅಕ್ಷರದ ಯಗಣದ ಲಕ್ಷಣವಿರುತ್ತದೆ. ಗಾಯತ್ರಿ, ಅನುಷ್ಟುಭ್, ಶ್ಲೋಕಗಳಲ್ಲಿನ ನಾಲ್ಕು ಅಕ್ಷರದ ಗಣಗಳಲ್ಲಿ ಮೊದಮೊದಲು ಎರಡನೆಯ ಗಣದಲ್ಲಿಯೊ ನಾಲ್ಕನೆಯ ಗಣದಲ್ಲಿಯೊ ದ್ವಿಲಗ* (⏑–⏑–) ರೂಪವನ್ನು ತೋರಿಸುತ್ತಿದ್ದು, ಹದಿನಾರು ಅಕ್ಷರದ ಸಾಲಿನ ಶ್ಲೋಕವಾದಾಗ ಉಳಿದ ಗಣಗಳು ಎಂಥವೇ ಆಗಲಿ, ಸಾಲಿನ ಕಡೆಯ 4 ಅಕ್ಷರಗಳ ಗಣ (Cadence-Fall)· ಈ ದ್ವಿಲಗ ರೂಪವನ್ನು ಉಳಿಸಿಕೊಳ್ಳುತ್ತಿತ್ತು. ಅಲ್ಲಿ ಕೂಡ ಅಪವಾದಗಳು ಇಲ್ಲದೆ ಇಲ್ಲ. 'ಪಂಚಮಂ ಲಘು ಸರ್ವತ್ರ', ಆರರಲ್ಲಿ ಗುರು ಎಂಬ ನಿಯಮ ಅನುಷ್ಟುಭಿನದು – ಶ್ಲೋಕದ್ದು ಎಂದುದೂ ಎಷ್ಟೋ ಕಡೆ ಮೀರಿದ ಸಂದರ್ಭಗಳನ್ನು ಮಹಾಭಾರತದಲ್ಲಿ, ಅದರ ಅಂಗವಾದ ಭಗವದ್ಗೀತೆಯಲ್ಲಿ ಕಾಣಬಹುದು. 'ಪರೋಪಕಾರಃ ಪುಣ್ಯಾಯ. ಪಾಪಾಯ ಪರಪೀಡನಂ' ಎಂಬಲ್ಲಿ "ರಃ ಪುಣ್ಯಾಯ" ಎಂದಾಗುತ್ತದೆ. 'ಃ' ಲಘು ವಲ್ಲ. ಇಂಥವು ಎಷ್ಟೋ. ಆದರೂ ಶ್ಲೋಕದ ನಡೆ ಬಹುಮುಖ ಧಾರಾಳ ವನ್ನು ಪಡೆದು ಸಂಸ್ಕೃತ ಬರವಣಿಗೆಯ ಬಹುಭಾಗಕ್ಕೆ ಆಸರೆಯಾಯಿತು. ಸುಲಭ ವಾಗಿ ಶ್ಲೋಕವನ್ನು ಬರೆವ ಅವಕಾಶ ಸಾಮಾನ್ಯರಿಗೂ ಬರುವಂತೆ ಆಗಿದ್ದಿರ ಬೇಕು. ಆದರೂ ಕನ್ನಡದ ಜಾಯಮಾನಕ್ಕೆ ಲಗಕ್ರಮ (⏑–) ಏಕೊ ಹೊಂದಲಿಲ್ಲ. ಲಗದಿಂದ ಆರಂಭವಾಗುವ ಯಾವ ಛಂದಸ್ಸೂ – ವಿಶೇಷವಾಗಿ 'ಜ' (⏑–⏑) 'ಯ' (⏑––) – ಗಣಗಳು ಕನ್ನಡದ ಜಾಯಮಾನಕ್ಕೆ ಒಗ್ಗ ಲಿಲ್ಲ.† ಈ ಲಗಕ್ರಮದ ವಿರಸವೇ ಇರಬೇಕು – ಕನ್ನಡದಲ್ಲಿ ಶ್ಲೋಕ ಬಳಕೆಯಾ ಗದೆ ಹೋದುದಕ್ಕೆ. ಕನ್ನಡದ ಉಸಿರಿನ ಓಟಕ್ಕೆ ಅದು ಒಗ್ಗದಾಯಿತು. ನೃಪ ತುಂಗನೇ ಕೆಲವು ಶ್ಲೋಕಗಳನ್ನು ಬರೆದಿದ್ದಾನೆ. ಅಲ್ಲಿ ದ್ವಿತೀಯಾಕ್ಷರ ಪ್ರಾಸವನ್ನು ಕನ್ನಡದ ವಿಶೇಷ ಲಕ್ಷಣವಾಗಿ ಉಪಯೋಗಿಸಿದ್ದಾನೆ. ಆದರೂ ಆ ನಡೆ ಕನ್ನಡಕ್ಕೆ ಪರಕೀಯವೆಂಬಂತಿದೆ. ಎಂದರೆ ಶ್ಲೋಕ ಛಂದಸ್ಸು ಕನ್ನಡಕ್ಕೆ ಆಗಿಬರಲಿಲ್ಲ.

ಜಗಣ ಬಳಕೆಗೆ ಒಂದು ಅಪವಾದವಾಗುವಂತೆ ಸಂಸ್ಕೃತದಲ್ಲಿ 'ಆರ್ಯಾಗೀತಿ'

---

* ಇಲ್ಲಿ ಲಘು (ಲ) ⏑ ; ಗುರು (ಗ) - ಸಂಜ್ಞೆ.

† ಈಚೆಗೆ ಕೆಲವು ವಿಶೇಷ ರಂಜನೆಗಾಗಿ ಅದನ್ನು ಬಳಸಿರುವುದುಂಟು. 'ಅನಾಥೆ', 'ಉದಾತ್ತಂ', 'ಅದೇಕೆ?', 'ಅನಂತ', 'ಗುಲಾಬಿ'- ಹೀಗೂ ಪೃಥ್ವಿಯಲ್ಲಿಯೂ ವಿಶೇಷವಾಗಿ ಬಳಕೆಯಾಯಿತು. ಉರ್ದುವಲ್ಲಿ ಫವೂಲನ್ ⏑–– ; ಫವೂಲಾತನ್ ⏑––– ಗಣನೆ ಇದೆ.

ಪ್ರಾಕೃತದಲ್ಲಿ 'ಸ್ಕಂದಕ' ಎಂಬ ರಚನೆ ಕನ್ನಡಕ್ಕೆ ಎತ್ತಿದ ಛಂದವಾಯಿತು. ಅಲ್ಲಿ 'ಜಗಣಂ ವಿಷಮದೊಳಾಗದು' – ಆರನೆಯ ಗಣ ಜಗಣವಾಗಬೇಕು; ಇಲ್ಲವಾದರೆ ನಾಲ್ಕು ಲಘುಗಳಿಂದ ಕೂಡಿರಬೇಕು. ಅಂಥಲ್ಲಿ ಆರಂಭದ ಕೂಡಲೆ ಯತಿ ಕಾಣಬೇಕು – ಎಂಬ ಮುಂತಾದ ನೇಮವನ್ನು ಇಟ್ಟುಕೊಂಡಿತು. ಬಹುಶಃ ಅರ್ಧಸಮವೃತ್ತವಾದ ಕಂದ ಇದಕ್ಕೆ ಅನುಕೂಲ ಒದಗಿಸಿರಬೇಕು.* ಅಲ್ಲಿ ಮಾತ್ರಾಗಣನೆ ಬಂದುದು, ಮಾತ್ರಾಗಣದ ಪ್ರಮಾಣ ನಾಲ್ಕು ಮಾತ್ರೆಗಳದಾದ್ದು ಕಂದದ ವಿಶೇಷ(ಮೊದಲ ಪಂಕ್ತಿ ನಾಲ್ಕು ಮಾತ್ರೆಗಳ ಮೂರು ಗಣ, ಎರಡನೆಯದು ನಾಲ್ಕು ಮಾತ್ರೆಗಳ ಐದು ಗಣ). ಮಾಲಿನಿ, ಹರಿಣಿ ಮುಂತಾದವು ಕನ್ನಡಕ್ಕೆ ಏಕೊ ಅಸುಖ ನುಡಿತ, ನಡೆ ಉಳ್ಳವು. ಬಳಸಿಕೊಳ್ಳಲಾಗದಂತೆ ಆಗಿರಬೇಕು. ಪೃಥ್ವಿ ಒಂದು ವಿಶೇಷಶಕ್ತಿಯಿಂದ ನುಡಿವ ಕೆಲವು ಸಂದರ್ಭಗಳಿಗೆ ಬಹುಚೆನ್ನಾಯಿತು. ಒಟ್ಟು 24 ಮಾತ್ರೆಗಳ 8 – 8 ಮಾತ್ರೆಗಳ ಮೂರು ಖಂಡಗಳು ಸುಭಗವಾದಾಗ ಅಲ್ಲಿ ಕಾಣಬಲ್ಲವು. ಲಗಕ್ರಮದಲ್ಲಿ ಆರಂಭವಾದರೂ ಅದನ್ನು ಕನ್ನಡಿಗರಿಗೆ ಅಪ್ರಿಯವಾಗಿ ಮಾಡಲಿಲ್ಲ.

ಪಂಚಚಾಮರದ ನಾಲ್ಕು (ಜರಜರಜಗ) ಅಥವಾ ಅದೇ ಹನ್ನೆರಡು ಅಕ್ಷರದ್ದು ಮುಂತಾದವು ಮೂಲದಲ್ಲಿ ಇದ್ದಂತೆಯೇ ಕೆಲವು ವಿಶೇಷ ಕಾರ್ಯಪ್ರಕರಣಗಳಿಗೆ ಹೆಚ್ಚು ಅನುಕೂಲವಾಗಿ ಹೊಮ್ಮಿವೆ. ಇನ್ನು ಕೆಲವು ಮೂಲದಲ್ಲಿದ್ದಂತೆಯೇ ರಚನೆಯನ್ನು (Structure) ಉಳಿಸಿಕೊಂಡರೂ ಪಾದದ ಗಣಗಳ ನೆಯ್ಗೆ (Texture) – ಎಂದರೆ ಲಗಗಳ ವಿನ್ಯಾಸದಲ್ಲಿ ಮಾತ್ರಾಗಣನೆಗೆ ಸಹಜವಾಗಿ ಒಳಪಡುವಂತೆ ಓಟ, ಒಳರಚನೆ ಉಳ್ಳವಾಗಿ ಕಾಣಿಸಿದ್ದರಿಂದ ಕನ್ನಡಕ್ಕೆ ಸಹಜವಾಗಿ ಹೊಂದಿಕೊಂಡವು.†

* ಗಾಥದ ಒಂದು ಪ್ರಕಾರವಾದ ಸ್ಕಂಧಕದಲ್ಲಿ — ಪ್ರಾಕೃತದಲ್ಲಿ ಉಪ, ಉತ್, ಸಂಕೀರ್ಣ ಸ್ಕಂಧಕಗಳು ಎಷ್ಟೋ ಇವೆಯಂತೆ. ಮೊದಲೆರಡು ಪಾದಗಳ ನೆಲಗಟ್ಟು (Ground Rhythm) — ನಡೆ ಕೇವಲ ಲಯದ ನಡೆಯನ್ನು ಕಿವಿಯಲ್ಲಿ ಕೇಳಿದರೆ ಕನ್ನಡಕ್ಕೆ ಹೇಗೆ ಹೊಂದೀತೆನ್ನಿಸಿಕೊಳ್ಳುವಂಥದು. ಆದರೆ ಅದನ್ನು ಬಳಸಿರುವ ರೀತಿಯನ್ನು ನೋಡಿದರೆ ಇಷ್ಟು ಬಗೆಯ ವಿನ್ಯಾಸ ಹೇಗೆ ಶಕ್ಯವಾಯಿತೊ ಅಚ್ಚರಿಯಾಗುತ್ತದೆ. ಅಷ್ಟು ಚೆನ್ನಾಗಿ ಪಳಗಿತು ಕಂದ ಕನ್ನಡಕ್ಕೆ. ದೂರದವರ ಹೆಣ್ಣುಮಗಳು ಈಮನೆಯ ಸೊಸೆ, ಇಲ್ಲಿನ ಮಕ್ಕಳ ತಾಯಿ ಆಗುವಂತೆ. ಗಣದ ಕೊನೆಯ ಅಕ್ಷರ ಗುರುವಾಗಿ ಅದರ ಎರಡು ಮಾತ್ರೆಗಳು ಹಿಂದಿನದಕ್ಕೂ ಮುಂದಿನದಕ್ಕೂ ಹಂಚುವಂತೆ ಮಾತ್ರ ಗಣ ರಚನೆ ಆಗಬಾರದು.

† ನಮ್ಮಲ್ಲಿ ವ್ಯಂಜನಗಳ ಆವೃತ್ತಿಗೆ, ರಂಜನೆಗೆ ಹೆಚ್ಚು ಗಮನಹೋಗಿ ಸ್ವರವಿನ್ಯಾಸದ ಸೌಂದರ್ಯದ ಕಡೆಗೆ ಹೋಗಲಿಲ್ಲವೆಂದು ಕಾಣುತ್ತದೆ ; – ಛಂದೋರಚನೆಯನ್ನು ಕುರಿತು ಬರೆಯುವವರಲ್ಲಿ. ಕವಿಗಳು ಆ ನಯಗಾರಿಕೆಯನ್ನು ಮೆರಸಿದ್ದಾರೆ : ಅದೃಷ್ಟ.

*

ಎಂದರೆ, ನಾಲ್ಕು ಅಕ್ಷರದ ಗಣ ವೇದಕಾಲದ್ದು, ಮೂರು ಅಕ್ಷರಗಳ ಗಣ ಸಂಸ್ಕೃತ ಕಾವ್ಯಗಳ ಛಂದೋನಿಯಮದ್ದೆಂಬಂತೆ ಮಾರ್ಪಟ್ಟವು ಆಗಲೂ ಆ ಗಣಗಳ ಮಾತ್ರಾಪ್ರಮಾಣ ಸುಗಮವಾಗುವ ಒಂದು ಅವಕಾಶ ಕೆಲವು ವೃತ್ತಗಳಿಗೆ ವಿಶೇಷವಾಗಿ ಬಂದಿತು. ಮೂಲವೃತ್ತಗಳಲ್ಲಿಯೂ ಮೂರು ಅಕ್ಷರ – ತ್ರಿಕ – ಗಳಾಗಿ ಅಳೆವ ರೂಢಿ, ನೇಮ ಅನೇಕ ಪಾದಗಳಿಗೆ ಅಸಹಜ, ಅನ್ಯಾಯಕರ ವಾಗಿ ಕಂಡಿತು. ಪ್ರಸ್ತಾರ ಕ್ರಮದಲ್ಲಿ ಕೋಟ್ಯಂತರವಾಗಬಹುದಾಗಿದ್ದ ಛಂದಃಪ್ರಕಾ ರಗಳು ಅಷ್ಟು ಸಂಖ್ಯೆಗೆ ಗಣಿತದಲ್ಲಿನಂತೆ ಎಲ್ಲಿಯೂ ಆಗಲಿಲ್ಲ. ಕೆಲವು ಪ್ರಕಾರಗಳಿಗೆ ಮಾತ್ರ ಮಿತವಾಯಿತು. ಮಹಾಕವಿಗಳು ಮಹಾಕಾವ್ಯದಲ್ಲಿ ಬಳಸಿದ ಹೆಚ್ಚು ಸಂಖ್ಯೆ ಒಟ್ಟು 850ರಲ್ಲಿ 600ಕ್ಕಿಂತ ಹೆಚ್ಚು ಸಮವೃತ್ತಗಳಿಲ್ಲ; ಅವುಗಳಲ್ಲಿಯೂ ಸುಮಾರು ನೂರು ಮಾತ್ರ; ಅದರಲ್ಲಿಯೂ ಒಂದು ಕಾವ್ಯದ ಒಂದು ಆಶ್ವಾಸಕ್ಕೆ ಪೂರ್ತಿ ಸ್ವಲ್ಪ ಧಾರಾಳವಾಗಿ ಉಪಯೋಗಿಸಿದುವೆಂದರೆ 25 ಕ್ಕಿಂತ ಹೆಚ್ಚಿಲ್ಲವೆಂದೂ ಉಳಿದುವನ್ನು ವೈವಿಧ್ಯಕ್ಕಾಗಿಯೊ ಅಲಂಕರಣಕ್ಕಾಗಿಯೊ ಬ ಳ ಸಿ ದ ರು ಎಂದೂ ವೇ ೞ ಣ ಕ ರ್ ಲೆಕ್ಕ ಮಾಡಿದ್ದಾರೆ. ಗಣಮೈತ್ರಿ, ಗಣವೈರ ಎಂಬ ಅಂಶವನ್ನು ನಮ್ಮ ಛಂದೋವಿಚಿತಿಕಾರರು ಬಲ್ಲರು. ಆದರೂ ಸುಮಾರು ಯಾರೂ ಪಾದದ ನಡೆಯಲ್ಲಿ ಈ ಲಕ್ಷಣ ಹೇಗೆ ಲಯದ - Rhythm – ಒಂದು ನೆಲಗಟ್ಟು – ಹಾಗೂ ನಡೆ – ಒಂದು ತತ್ವಕ್ಕೆ ಸಂಬಂಧಪಡುವುದು ಎಂಬುದರ ಪರಿಶೀಲನೆಗೆ ಮನಸ್ಸು ಕೊಡಲಿಲ್ಲವೆನ್ನಿಸುತ್ತದೆ. ಲಯ, ಲಯಗತಿ ಎಂಬ ಮಾತೂ ಗ ಣ ವಿ ನ್ಯಾ ಸ, ಗಣ ಮೈತ್ರಿ, ಗಣ ವಿರಸ ಅವರಿಗೆ ಗೊತ್ತಿದೆ. ವಿರಾಮ, ವಿಚ್ಛಿತ್ತಿ, ವಿಶ್ರಾಮಸ್ಥಾನ, ಅವಧಿ ಎಂಬ ಉಸಿರಿನ ನಿಲುಗಡೆಯು ಪದಚ್ಛೇದ ಸಂಜ್ಞೆ ಎಂಬ ಯತಿಯೂ ಅವರಿಗೆ ಗೊತ್ತಿದೆ. ಆದರೂ ಇದಕ್ಕೆ ಸಂಬಂಧಿಸಿದ ಲಯಗತಿಯ ರಹಸ್ಯಕ್ಕೂ ಅದರ ಭೇದನಕ್ಕೂ ಪರಿಶೀಲನೆಗೂ ಅವರು ಮನಸ್ಸು ಕೊಡಲಿಲ್ಲ. ಲಯ ಎಂಬ ಮಾತೂ ಲಯಗ್ರಾಹಿ ಎಂಬ ಮಾತೂ ಒಂದು ಛಂದಸ್ಸಿಗೆ ಬಳಕೆಯಾಗಿದೆ. ಪ್ಲುತಗಳನ್ನು ಲಕ್ಷಿಸದೆ ಗುರು ಲಘುಗಳಿಗೆ ಇರುವಷ್ಟು ಮಾತ್ರೆ, ಮಾತ್ರಾಪ್ರಮಾಣವನ್ನು (ಮಿತ) ಗೊತ್ತು ಮಾಡಿ ಪ್ಲುತವನ್ನು ಛಂದಸ್ಸಲ್ಲಿ ನಿರಾಕರಿಸಿದರು.

ಛಂದಸ್ಸಿನ ಲಯಗತಿಗೂ ಸಂಗೀತದಲ್ಲಿನ ಲಯಕ್ರಮಕ್ಕೂ ವ್ಯತ್ಯಾಸ ಉಂಟು. ಅಲ್ಲಿ ಲಯ ಎಂದರೆ ತಾಳ; ಯಾವುದೊ ಒಂದು ಕಾಲದ ಮಿತಿಗೆ, ಮಾನಕ್ಕೆ ಲಯದ ನಡೆ, ಬಂಧ, ವಿತರಣೆಗೆ ನಿರ್ಧ್ಯಣವಾಗಿ ಒಳಪಟ್ಟಿರು ತ್ತದೆ. ಇಷ್ಟು ಕಾಲಪ್ರಮಾಣ ಈ ಲ ಯ ಖ ಂ ಡ ಕ್ಕೆ ಸೇರಬೇಕು ಎಂಬ

ಕಾಲಮಾನ ಉಸಿರ ಅಥವಾ ನಾದದ ನಡೆಯ ಮಾನ, ಅವುಗಳ ಗುಣಕಗಳು (Multiples)ಸೇರಿದ್ದು ಒಂದು ತಾಳ. ಕಾಲದ ಅಳತೆ ಪರಮನಿಷ್ಠುರ ತಾಳದಲ್ಲಿ. ಒಂದು ಕಾಲಾಂತರದಲ್ಲಿ ನಾದ ಓಡಬಹುದೇ ಹೊರತು ನಾದವೂ ಇಲ್ಲದೆ, ಶೂನ್ಯತೆ, ಹುಸಿ, ಖಾಲಿ, ಅರ್ಧ ಅಂಗವಾಗಿರಬಲ್ಲ ತಾಳಗಳುಂಟು. ಸಾಹಿತ್ಯಕ್ಕೂ ಸಂಗೀತಕ್ಕೂ ಇರುವ ಮುಖ್ಯ ವ್ಯತ್ಯಾಸ ಇದು. – ಅಕ್ಷರಗಳು ಅಂಗವಾಗಿರುವ ಪದಗಳು, ಪದಗಳ ಅರ್ಥ, ಭಾವ, ನಡೆ – ಇವು ಸಾಹಿತ್ಯದ ಮೂಲಾಂಶ; ಅದೇ ಛಂದಸ್ಸಿನ ಮೂಲಾಂಶ. 'ಛಂದೋಹೀನೋ ನ ಶಬ್ದೋಽಸ್ತಿ, ನಛಂದಃ ಶಬ್ದವರ್ಜಿತಃ' – ಎಂಬ ಭರತಮುನಿಯ ಮಾತು ಇದಕ್ಕೆ ಮೂಲಧಾತುವಾಗಿ ದುಡಿಯುತ್ತದೆ. 'ಓ ಜಗದಂಬಾ' ಎಂಬ ಆನಂದಭೈರವಿ ಕೃತಿಯಲ್ಲಿ ನಡೆಯುವ ಲಯದ ನಡೆಯನ್ನು ಎಷ್ಟು ಅಕ್ಷರಗಳನ್ನು, ಪದಗಳನ್ನು, ಕೂಡಿಸಿ ಸಾಧಿಸಲಾದೀತು ? ಅಂತೆಯೇ 'ಚಕಿತೋದ್ವೃತ್ತಪಕ್ಷಿಪಕ್ಷಸ್ವನದೊಳಮರ್ದ ಕೋಳಾಹಳಧ್ವಾನದಿಂ ಪರ್ವಿ' 'ಹೇಮ ಪ್ರಭಾ ಪ್ರಸ್ಫುರಿತ ಗಿರಿಶಚಂಚಜ್ಜಟಾಜಾಲ ಜೂಟ ವ್ಯೋಮಪ್ರಾದ್ಭಾಸಿ ಚಂದ್ರಂ' ಎಂದು ಮುಂತಾದುವನ್ನು ಕೇವಲ ನಾದ ಹೇಗೆ ಸಾಧಿಸೀತು ? ಆದುದರಿಂದ ಇಲ್ಲಿನ ಲಯದ ನಡೆಗೂ ಅಲ್ಲಿನ ಲಯದ ನಡೆಗೂ ವಿಶೇಷ ವ್ಯತ್ಯಾಸ ಉಂಟು. ಇಲ್ಲಿ ಅಕ್ಷರ ಪರಿಮಿತಿ, ಗಣದ ಪರಿಮಿತಿ ಮುಖ್ಯಾಂಗ. ಅಲ್ಲಿ ಉಸಿರ ಓಟ,ನಡೆಯ ವಿಲಾಸ ಅದರ ಆನುಪೂರ್ವಿ, ಕ್ರಮ, ಲಯದ ವಿಶೇಷ. ಬಹುತರ 8 ಲಘುಗಳ ಪ್ರಮಾಣ ಉಳ್ಳ ಅಕ್ಷರಗಳಿಗಿಂತ ಹೆಚ್ಚಾಗಿ ಉಸಿರ ಓಟ ಒಂದು ಘಟಕದಲ್ಲಿ ತಡೆಯಲಾರದು. 7 = (3 – 4 ಆಗಿ) 8 = (2 × 4 ಆಗಿ) ಲಘುಗಳದು ಕುಣಿತ. ಗುರುಗಳ ನಡೆ ಗಂಭೀರ, ನಿಧಾನ. ವ್ಯಥೆಯನ್ನೊ ಉದಾತ್ತವಾದ್ದನ್ನೊ ಶಾಂತವನ್ನೊ ಹೇಳುವಾಗ ದೀರ್ಘ ಸಂಯುಕ್ತಾಕ್ಷರ ಸಾನುಸ್ವರ ವಿಸರ್ಗ ಸಂಯುಕ್ತತೆಗಳ ನೆರವಿನಿಂದ ಸಾಧಿಸಬೇಕಾಗುತ್ತದೆ. ಸಂಗೀತದಲ್ಲಿ "ರಿ – ಧ – ನಿ" (ರಿಷಭ, ಧೈವತ, ನಿಷಾದ) ಪ್ರತಿಮಧ್ಯಮ ಸ್ಥಾಯಿಗಳ ಬಳಕೆ ವಿಶೇಷವಾಗಿ ಸಾಧಿಸಬಲ್ಲವು. ನಾದ ಯಾವುದನ್ನು ಮಾಡದು ?

ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಸಂಸ್ಕೃತ ಛಂದೋರಚನೆ, ವಿಚಿತಿಗಳಲ್ಲಿ ಮೊದಮೊದಲು ಆರು ಅಕ್ಷರಕ್ಕೆ ಕಡಮೆಯಾದ ಛಂದಗಳನ್ನು ಹೆಸರಿಸಲಿಲ್ಲ : ಅವು ಕವಿತೆಗೆ ತುಂಬಾ ಚಿಕ್ಕವಾದುದರಿಂದ* ಕವಿಗಳು ಎಂಟರಿಂದ ಹನ್ನೆರಡು ಅಕ್ಷರಗಳವರೆಗಿನ ಪ್ರಕಾರಗಳನ್ನು

---

* ಕ್ಷೇಮೇಂದ್ರನು ಹೇಳುವಂತೆ ನ ಷಟ್ ಸಪ್ತಾಕ್ಷರೇ ವೃತ್ತೇ ವಿಶ್ರಾಮ್ಯತಿ ಸರಸ್ವತೀ - ಆದ್ದರಿಂದ 6. 7 ಬಿಟ್ಟವು.

ಮೊದ ಮೊದಲು ಪಾದಕ್ಕೆ ಇಷ್ಟು ಅಕ್ಷರ ಸಂಖ್ಯೆ ಒಟ್ಟು ಪದ್ಯಕ್ಕೆ ಅಕ್ಷರಗಳಿಷ್ಟು ಎಂದು ತಿಳಿಸಿದರು. ಆಮೇಲಿನ ಕಾಲಗಳಲ್ಲಿ ಪಾದದಲ್ಲಿ ಇಷ್ಟು ಗುರು ಲಘು, ಇಲ್ಲಿ ಇಲ್ಲಿ ಹೀಗೆ ಎಂದು ವರ್ಣಿಸುತ್ತಿದ್ದರು. ಆಮೇಲೆ ತ್ರಿಕಗಣನೆ ಬಂತು.

ವಿಶೇಷವಾಗಿ ಆಯ್ದುಕೊಂಡರು. 4 – 4 ಅನುಷ್ಟುಭ್. ಆದರೆ 4 – 4 – 3 ಆಗಿಯೊ, 4 – 3 – 4 ಆಗಿಯೊ, ಅಂತೂ ಒಟ್ಟು 11 ರದು ತ್ರಿಷ್ಟುಭ್ ಆಗಿಯೊ ನಾಲ್ಕರ ಮೂರು (4 × 3) ಖಂಡಗಳ ಜಗತಿ ಆಗಿಯೊ ಬಳಸಿಕೊಂಡರು. ತ್ರಿಷ್ಟುಭಿಗೆ ಒಂದಕ್ಷರ ಸೇರಿಸಿ ಜಗತಿ ಆದುದೊ ಅನುಷ್ಟುಭಿನ ಇನ್ನೊಂದು ನಾಲ್ಕಕ್ಷರ ಗಣ ಸೇರಿ ಆದುದೊ ಎಂಬ ಚರ್ಚೆ ಕೂಡ ನಡೆದಿದೆ. 8 – 12 ಗಣ ಗಳು ಹೊಂದುವ ಹಾಗೆ 11 – 12 ಅಲ್ಲಿಯೂ ಹೆಚ್ಚು ಬಳಕೆಗೆ ಬರಲಿಲ್ಲ. ಪ್ರಗಾಥದಲ್ಲಿ ಇವನ್ನು ಸೇರಿಸುವ ಯತ್ನ ನಡೆದಿದೆಯಾದರೂ ಪ್ರಗಾಥಗಳು– ಸತೋಬೃಹತಿ, ಅತಿಶಕ್ವರಿ – ಮುಂತಾದವು ಹನ್ನೆರಡಕ್ಕಿಂತ ಹೆಚ್ಚಿನ ಅಕ್ಷರಗಳ ಛಂದಸ್ಸುಗಳಾದರೂ ಅವುಗಳ ಬಳಕೆಯೂ ಬೆಳೆಯಲಿಲ್ಲ. 15 – 17 ಅಕ್ಷರಗಳ ಛಂದಸ್ಸುಗಳು ಚಂಪೂಕಾರರಿಗೆ, ನಾಟಕಕಾರರಿಗೆ ಹೆಚ್ಚು ಪ್ರಿಯವಾದವು ; 19 ರಿಂದ ಹಿಡಿದು 22 ರವರೆಗೆ ಅಕ್ಷರ ಉಳ್ಳವೂ ಹಾಗೆಯೇ.* ನಡುವೆಯವು ಪ್ರಿಯವಾಗ ಲಿಲ್ಲ. ಎಂಟು ಅಕ್ಷರಗಳ ಅನುಷ್ಟುಭ್ ಎಲ್ಲವೂ ಲಘುವಾದರೆ ಎಂಟು ಮಾತ್ರೆ, ಎಲ್ಲವೂ ಗುರುವಾದರೆ ಹದಿನಾರು ಮಾತ್ರೆ ಗಣನೆ ಆಗುವುದರಿಂದ ಸುಲಭವಾಗಿ ಎರಡರ್ಧವಾಗಿ ಅಥವಾ ನಾಲ್ಕು ಭಾಗವಾಗಿ ವಿಂಗಡಗೊಂಡರೆ ಕಿವಿಗೆ ಪ್ರಿಯವಾ ಗುತ್ತದೆ. ಜಗತಿಯೂ ಹಾಗೆಯೇ. ಹತ್ತು ಮಾತ್ರೆಯ ಅಥವಾ ಹತ್ತು ಅಕ್ಷರದ ಛಂದಸ್ಸು ಸುಲಭವಾಗಿ 5 – 5ರ ಖಂಡಗಳಾಗಿ ಒಡೆಯುತ್ತದೆ. ಹಾಗೆ ಸುಲಭವಾಗಿ ಒಡೆಯದು ತ್ರಿಷ್ಟುಭ್. ತ್ರಿಷ್ಟುಭಿನ ಶಕ್ತಿಯನ್ನು ರೂಢಿಸಿಕೊಳ್ಳದೆ ಏಕೆ ವೇದದ ಕವಿಗಳೇ ಬಿಟ್ಟರೆಂಬುದೂ ಕು ತೂ ಹ ಲ ಕಾ ರಿ ಯಾ ದ ಸಂಗತಿ. ಅದರ ಗಣವಿನ್ಯಾಸದಲ್ಲಿ ಸಂಕೀರ್ಣತೆಯ ಬಹು ಬಗೆಯ ಬೆಡಗುಗಳನ್ನು ಸಾಧಿಸ ಬಹುದಾಗಿತ್ತು. ಅಲ್ಲಿನ ಗಲ ಲಯವೂ ಪರ್ಯಾಲೋಚ್ಯ. ತ್ರಿಷ್ಟುಭಿನಲ್ಲಿ 44, ಜಗತಿಯಲ್ಲಿ 55 ಬಗೆಗಳನ್ನು ಕವಿಗಳು ಬಳಸಿಕೊಂಡಿರುವುದು ಅವು ಅವರ ಹಿಡಿತಕ್ಕೆ ಹೇಗೆ ಒಪ್ಪಿದುವು ಎಂಬುದನ್ನು ಕಾಣಿಸುತ್ತದೆ. ಆದ್ದರಿಂದಲೇ ಆ ಜಾತಿಯವನ್ನು ಹೆಚ್ಚಾಗಿ ಬಳಸಿರುವುದು. ಯತಿಗಳ ಈಚೆ ಆಚೆ ಯಾವ

* ಕ್ಷೇಮೇಂದ್ರನು ತನ್ನ ಸುವೃತ್ತತಿಲಕದಲ್ಲಿ ಯಾವಯಾವುದನ್ನು ಯಾರು ಯಾರು ಹೇಗೆ ಬಳಸಿ ಕೊಂಡಿದ್ದಾರೆ ಎಂಬುದನ್ನು ತಿಳಿಸಿದ್ದಾನೆ (ಪುಟ 140-1 ನೋಡಿ). ಹಾಗೆಯೇ ಇನ್ನೊಂದು ಕ್ರಿಯೆಯನ್ನು ಮೊದಲು ಪಾಶ್ಚಿಮಾತ್ಯ ವಿದ್ವಾಂಸರೂ ಆಮೇಲೆ ನಮ್ಮವರೂ ಗುರುತಿಸಿ ಪಟ್ಟಿ ಮಾಡಿದ್ದಾರೆ. 8 ರಿಂದ 12 ಅಕ್ಷರಗಳ ನೆಲಸಿನ ವೃತ್ತಗಳಲ್ಲಿ ಯಾವ ಯಾವ ಛಂದೋಖಂಡ ಕಿವಿಗಳಿಗೆ ಹಿತಕರವಾಗಿ ಕಂಡು, ಅವು ಬಗೆಬಗೆಯಾಗಿ ಸೇರಿಕೊಂಡವು ? ಎಲ್ಲಿ ಶಾಲಿನೀ ವಾ ತೋರ್ಮೀ ಗಣಗಳು ಪಥ್ಯವಾಯಿತು ? — ಎಂಬುದನ್ನೂ Fossil Remains ಎಂಬ ವನ್ನೂ ಎಚ್. ಡಿ. ವೇಲಣಕರ್ ಪಟ್ಟಿಮಾಡಿದ್ದಾರೆ. ಶ್ರೀಯುವರು ಮಾಡಿಟ್ಟಿದ್ದರು. ಇತರ ಹಲವು ಕೈಬರಹಗಳಂತೆಯೇ ಅವು ನಷ್ಟವಾದವು.

ಯಾವ ಬಗೆಯ ಲಯ ಖಂಡಗಳು ರುಚಿಸಿದವೊ ಅವನ್ನು ಘಟಕಗಳನ್ನಾಗಿ ಮಾಡಿ ಕೊಂಡು ಇನ್ನೂ ಉದ್ದದ ಛಂದಸ್ಸುಗಳನ್ನು ನಿರ್ಮಿಸಿಕೊಂಡರು.

ಲಘು ಗುರು ಎರಡೇ ಮಾನ, ಮೂರು ಅಕ್ಷರಕ್ಕೆ ಒಂದು ಗಣ ಎಂದು ಗೊತ್ತುಮಾಡಿಕೊಂಡಾಗ $(3 \times 3) - 1 = 8$ ಬಗೆಯ ಗಣವಿನ್ಯಾಸವಾಯಿತು. 8 ಗಣಗಳು 24 ಅಕ್ಷರಗಳಾದುವು. ಅವಕ್ಕೆ 'ಗ' ಸೇರಿಯೊ ('ಲ'ದಲ್ಲಿ ಪಾದ ನಿಲ್ಲದು; ನಿಂತರೂ ಅದು ಗುರುಗಣನೆಯುಳ್ಳದ್ದು) 'ಲಗ' ಸೇರಿಯೊ 'ಗಗ' ಸೇರಿಯೊ ನಾಲಿಗೆಗೆ 26 ಅಕ್ಷರಗಳ ಪರಮಪ್ರಮಾಣ ಸಿದ್ಧವಾಯಿತು. ಇದನ್ನು $(8 \times 3 = 24) + 2 = 26$ ಎನ್ನಬಹುದು. ಅಥವಾ, $(3^3 = 27) - 1 = 26$ ಎಂಬ ಲೆಕ್ಕಕ್ಕೆ ಅಡಗಿಸಿಕೊಳ್ಳಬಹುದು. ಎಂದರೆ, 26 ಛಂದೋಜಾತಿಗಳು ಏರ್ಪಟ್ಟು ಅವುಗಳಲ್ಲಿ ಗುರುಲಘುವಿನ್ಯಾಸ ಏರ್ಪಡುತ್ತದೆ. ಗಣಗಳ ವಿನ್ಯಾಸ ಹೇಗಾಗುತ್ತದೆ, ಗಣಮೈತ್ರಿ – ವಿರಸ ಹೇಗೆ ಬರುತ್ತದೆ, ಲಯದ ನಡೆ ಹೇಗೆ ಸುಲಭ, ಕ್ಲಿಷ್ಟ ಆಗುತ್ತದೆ – ಎಂಬುದರ ಶ್ರವಣಾನುಭವ, ಉಚ್ಚಾರಾನುಭವ ಪದ್ಯದರಚನೆಯನ್ನು ಏರ್ಪಡಿಸಿತು. ಯಾವುದು ಸುಭಗ, ಯಾವುದಲ್ಲ ಎಂಬುದು ಆ ಬಗೆಗೆ ಮಾತ್ರ ವೇದ್ಯವಾಗುತ್ತದೆ. ಅವೇ ಬಳಕೆಯಲ್ಲಿ ನಿಲ್ಲುವವು. 10 ರ ಛಂದ ಸ್ಸಾದ ಪಂಕ್ತಿಯಲ್ಲಿ 1024 ಶಕ್ಯ; 21 ರಲ್ಲಿ 20,97,152 ಸಂಖ್ಯೆ; 26 ರಲ್ಲಿ 6,71,08,864 ಎಂಬುದು ಲೆಕ್ಕ, ಪ್ರಸ್ತಾರ ಕ್ರಮದಲ್ಲಿ ಇದನ್ನು ರಚಿಸಿ ತೋರಿಸ ಬಹುದು. ಆದರೂ ಬಹುಮಟ್ಟಿಗೆ ಮಹಾಕವಿಗಳು ಬಳಸಿರುವುದು ಸುಮಾರು100 ಮಾತ್ರ. ಕಾರಣ, ಉಳಿದವು ಕ್ಲಿಷ್ಟ; ಕರ್ಕಶ; ಕಾಕಸ್ವನದವು, ಬೆರೆಯದವು ಎಂಬುದು ಇರಬೇಕು. ಅವು ಬೆರೆಯಲಾಗದೆಂಬಲ್ಲಿ ಬರೆಯಲಿಲ್ಲ. ರಾಗಗಳಲ್ಲಿಯೂ ಹೀಗೇ ಆಯಿತು. ಮಧ್ಯಮದ ರೀತ್ಯ (36)ರ ಎರಡು ಚಕ್ರಗಳು ಏರ್ಪಟ್ಟು $36 \times 2 = 72$ ಮೇಳಕರ್ತ ಜನಕ ರಾಗಗಳಾಗಿ ಅವುಗಳಲ್ಲಿ ಕೋಟಿ ಕೋಟಿ ಉಪರಾಗಗಳಾಗಬಲ್ಲವೆಂಬ ಗಣಿತ ಏರ್ಪಟ್ಟಿತು.

ಶೃಂಗಾರ, ವೀರ, ಕರುಣೆ, ಭಕ್ತಿಗಳಿಗೇ ವಿಶೇಷವಾಗಿ ಒದಗಬೇಕಾದ ಸಾಹಿ ತ್ಯದ ಅಗತ್ಯ ಇಲ್ಲಿನ ಮಾರ್ದವಗಳಿಗೆ ಗೌರವಗಳಿಗೆ ಪ್ರಾಮುಖ್ಯತೆ ಕೊಟ್ಟಿರ ಬೇಕು, ಸಂಸ್ಕೃತ ಮಹಾಕವಿಗಳಲ್ಲಿ ಯಾರು ಯಾರು ಏಕೆ ಕೆಲವು ವೃತ್ತಗಳಿಗೆ ಒಲಿದ ರೆಂದು ಹೇಳಿದ್ದಾರೆ. ['ಅನುಷ್ಟುಭ್, ಉಪಜಾತಿ, ವಂಶಸ್ಥ'ಗಳನ್ನು ಸಂಸ್ಕೃತ ಮಹಾಕವಿಗಳು ದೀರ್ಘವಾಗಿ ಕಥನ ಬೆಳಸಬೇಕಾದಾಗ ಬಳಸಿದರು;–28 ಕವಿಗಳಲ್ಲಿ ಅವನ್ನು ಕ್ರಮವಾಗಿ 23,21,13ಮಂದಿ,ರಥೋದ್ಧತವನ್ನು14ಮಂದಿ, ವಸಂತತಿಲ ಕವನ್ನು13 ಮಂದಿ, ವಿಯೋಗಿನಿಯನ್ನು 12 ಮಂದಿ, ಮಾಲಾಭಾರಿಣಿಯನ್ನು11

ಮಂದಿ, ದ್ರುತವಿಲಂಬಿತವನ್ನು 11 ಮಂದಿ ಬಳಸಿಕೊಂಡರು. ವಿಯೋಗಿನಿ ಅರ್ಧ ಸಮವೃತ್ತ. ಅಂಥವುಗಳ ಮೂಲ ವೈತಾಳಿಕ, ಔಪಛಂದಸಿಕ.

ಕಾವ್ಯೇ ರಸಾನು ಸಾರೇಣ ವರ್ಣನಾನುಗುಣೇನ ಚ
ಕುರ್ವೀತ ಸರ್ವವೃತ್ತಾನಾಂ ವಿನಿಯೋಗಂ ವಿಭಾಗವಿತ್

(III – ವೃತ್ತವಿನಿಯೋಗಃ)

ಎಂದವನೇ ಯಾವ ಯಾವ ಕಾವ್ಯ ಭಾಗಕ್ಕೆ, ರಸಕಾರ್ಯಕ್ಕೆ ಯಾವ ವೃತ್ತ ಸಂಗತ, ಯೋಗ್ಯ ಎಂಬುದನ್ನು ತಿಳಿಸುತ್ತಾನೆ.

ಉದಾ :– ಅರಂಭೇ ಸರ್ಗಬಂಧಸ್ಯ ಕಥಾವಿಸ್ತರ ಸಂಗ್ರಹೇ
ಶಮೋಪದೇಶ ವೃತ್ತಾನ್ತೇ ಸಂತಃ ಶಂಸನ್ತ್ಯನುಷ್ಟುಭಂ –ಎಂದು

ಶೃಂಗಾರಾಲಂಬನೋದಾರ ನಾಯಿಕಾ ರೂಪವರ್ಣನಂ
ವಸನ್ತಾದಿ ತದಂಗಂ ಚ ಸಚ್ಛಾಯ ಮುಪಜಾತಿಭಿಃ – ಎಂದು
ರಥೋದ್ಧತಾ ವಿಭಾವೇಷು ಭವ್ಯಾ ಚಂದ್ರೋದಯಾದಿಷು
ವಿರಾಜತೇ........
ವಸನ್ತತಿಲಕಂ ಭಾತಿ ಸಂಕರೇ ವೀರ ರೌದ್ರಯೋಃ
ಕುರ್ಯಾತ್ ಸರ್ಗಸ್ಯ ಪರ್ಯಂತೇ ಮಾಲಿನೀಂ ದ್ರುತತಾಲವತ್
ಇತ್ಯಾದಿಗಳನ್ನು ಹೇಳಿ
ಪಾಣಿನಿಗೆ ಉಪಜಾತಿ, ಭಾರವಿಗೆ ವಂಶಸ್ಥ
ವಸಂತ ತಿಲಕಾರೂಢಾ ವಾಗ್ವಲ್ಲೀ ಗೂಢಸಂಗಿನೀ
ರತ್ನಾಕರ ಸ್ಯೋತ್ಕಲಿಕಾ ಚ ಕಾಸ್ತ್ಯಾನನಕಾನನೇ
ಭವಭೂತೇಃ ಶಿಖರಿಣೀ ನಿರರ್ಗಲ ತರಂಗಿಣೀ
ರುಚಿರಾ ಘನಸಂದರ್ಭೇ ಯಾ ಮಯೂರೀವ ನೃತ್ಯತಿ
ಸುವಶಾ ಕಾಲಿದಾಸಸ್ಯ ಮಂದಾಕ್ರಾಂತಾ ಪ್ರವಲ್ಗತಿ
ಸದಶ್ವದಮಕಸ್ಯೇವ ಕಾಂಭೋಜ ತುರಗಾಂಗನಾ.

ಶಾರ್ದೂಲ ವಿಕ್ರೀಡಿತಕ್ಕೆ ರಾಜಶೇಖರನನ್ನು ಉದಾಹರಿಸುತ್ತಾನೆ.

ಆ ಕಾಲಕ್ಕೆ ಕಾರ್ಯಕ್ಕೆ ಆ ಛಂದಗಳು ಎಷ್ಟು ರಮ್ಯವಾದುವು ಎಂಬ ಸಂಗತಿ ಒಂದು ತೀರಾದರೆ ಕಾವ್ಯದಲ್ಲಿ ಆನುಗಣ್ಯ ರಮ್ಯತೆ ಎಷ್ಟು ಅಗತ್ಯ, ಅದಕ್ಕೆ ಛಂದಸ್ಸು ಹೇಗೆ ಹೊಂದಿದರೆ ಒಳಿತು ಎಂಬ ಸಂಗತಿ ಇಲ್ಲಿ ತಿಳಿಯಲಾಗುತ್ತದೆ.] ಹೀಗಾಗಿ ಕೆಲವು ನಡೆಗಳು ಪ್ರಿಯವಾಗಲು ಕಾರಣವಾಯಿತು. ಯಾವಾಗ ಗುರು ಲಘು ವಿನ್ಯಾಸವೂ ಅವುಗಳಲ್ಲಿನ ಅಕ್ಷರ ಸಂಯೋಜನೆಯೂ ಒಂದು ಛಂದ

ಸ್ಸಿನ ಲಯವನ್ನು ಹೊಂದಿಸಿತೊ ಆಗ ಎರಡು ದೊಡ್ಡ ಪರಿಣಾಮಗಳು ವಿವಕ್ಷಿತ ವಾಗಿರಬೇಕು :

(1) ಅಕ್ಷರಗಣಗಳಲ್ಲಿ ಯತಿಯ ಪ್ರಸಂಗ ;
(2) ಮಾತ್ರಾ ಪರಿಮಾಣ.

ಯತಿ 8 ಅಕ್ಷರದವಕ್ಕೆ, 10 ಅಕ್ಷರದವಕ್ಕೆ, 12 ಅಕ್ಷರದವಕ್ಕೆ ಅಷ್ಟು ಅಗತ್ಯವಿಲ್ಲ ; ಸಮವಾಗಿ ಪಾದ ಒಡೆದುಕೊಳ್ಳುತ್ತದೆ. ಕೆಲವೇಳೆ ಹಾಗೆಯೇ ಒಟ್ಟು ಮಾತ್ರೆಗಳ ಲೆಕ್ಕ ಮಾಡಿದರೆ ಅದೂ ನಿಯತವಾಗುತ್ತದೆ, ಒಂದು ತಾಳದ ಕಟ್ಟಿಗೂ ಸುಲಭವಾಗಿ ಹೊಂದಿಕೊಳ್ಳಬಹುದಾಗುತ್ತದೆ ಎಂದೆ. ಯತಿಯನ್ನು ಮೊದಲಿಂದಲೂ ಛಂದೋರಚನಕಾರರು ಬಲ್ಲರು. ಭೇದ - ವಿಚ್ಛಿತ್ತಿ ಸಂಜ್ಞಕಂ, ವಿರಮಸ್ಥಾನಂ, ಉಸಿರ ನಿಲ್ದಾಣಂ, ಅವಧಿ - ಮುಂತಾದ ಅರ್ಥ ಹೇಳಿ ಇದನ್ನು ವಿವರಿಸಿದ್ದಾರೆ. ತ್ರಿಷ್ಟುಭಿನ 11 ಅಕ್ಷರದ ಗಣನೆಯಲ್ಲಿ 4 + 7 ಖಂಡಗಳಾದಾಗ ಮುಂಚಿತವಾಗಿ ಯತಿ ನಾಲ್ಕರಲ್ಲಿ ಬರಬಹುದು; ಅಥವಾ, ತಡೆದು 5 ರಲ್ಲಿ ಬಂದು ಅಕ್ಷರವಿಭಾಗ 5 + 6 ಆಗಿ ನಡೆಯಬಹುದು. ಅಂತೂ ಖಂಡಗಳು ಅಸಮ. ಯತಿ ಮುಂಚಿತವಾಗಿಯೊ ಆಮೇಲೊ ಬರುವಂತೆ ನಡೆದಾಗ ಪೂರ್ವಾರ್ಧ ಉತ್ತರಾರ್ಧ ಗಳ ಲಯಸ್ವರೂಪ ಮಾರ್ಪಡುವ ಅವಕಾಶಗಳೂ ಧಾರಾಳಗಳೂ ಉಂಟಾದವು. ಕೆಲವು ಪ್ರಾಚೀನ ಛಂದೋರಚನಕಾರರು ಯತಿಯನ್ನು ಒಪ್ಪಲಿಲ್ಲ. ಕೆಲವರು ಯತಿ ನಿಯತವೆಂದರು. ಸೈತವ, ಮಾಂಡವ್ಯ, ಕಶ್ಯಪ, ಪಿಂಗಳ - ಮುಂತಾದ ವರ ಹೆಸರುಗಳು ಈ ಸಂಬಂಧದಲ್ಲಿ ಬರುತ್ತವೆ.* ಒಟ್ಟಿನಲ್ಲಿ ಮಹಾಕಾವ್ಯಗಳಲ್ಲಿ ಛಂದಸ್ಸು ನುಣುಪಾಗಿ ನಿಲ್ಲಬೇಕಾದರೆ ಯತಿನಿಯತಿಗೆ ಪ್ರಾಶಸ್ತ್ಯ ಕೊಟ್ಟರು. ಅದನ್ನು ಮೀರತಕ್ಕದ್ದಲ್ಲವೆಂದು ಸೂತ್ರಕಾರರು ಹೇಳುತ್ತಿದ್ದುದುಂಟು. ಸಾಲಿನ ಖಂಡ – ಘಟಕ – ಗಳಾಗಿ ಅದನ್ನು ಒಡೆವ ಸ್ಥಾನಗಳಾಗುತ್ತವೆ ಆ ಭಾಗಗಳು. ಕವಿರಾಜ ಮಾರ್ಗಕಾರನ ಕಾಲಕ್ಕಾಗಲೇ ಕನ್ನಡದ ಕವಿಗಳು ಖಂಡಪ್ರಾಸವನ್ನು ಇಟ್ಟುಕೊಂಡು ಯತಿಯನ್ನು ಮಿಕ್ಕರು ಎಂಬ ಮಾತು ಬರುತ್ತದೆ. ಯತಿನಿಯಮದ ಉಲ್ಲಂಘನೆ ಅಷ್ಟು ದುಷ್ಟವಲ್ಲ – ಎಂಬಂತಾದುದು ಆಮೇಲಿನ ಕಾಲಗಳಲ್ಲಿ. ಕನ್ನಡಕ್ಕೆ ಯತಿಯಿಲ್ಲ ಕೋಣನಿಗೆ ಮತಿಯಿಲ್ಲ ಎಂದು ಅಣಕಿಸುವವರೆಗೂ ಕನ್ನಡದಲ್ಲಿ ಅದರ ಗುಣಗಣನೆ ಬೆಳೆಯಿತು.

---

* ಜಯದೇವ ಪಿಂಗಲಾ ಸಕ್ಕಯಂಮಿ ದೋಚ್ಚಿ ಅ ಜಇಂ ಸಮಿಚ್ಛಂತಿ;
ಮಂಡವ್ವ, ಭರಹ, ಕಾಸವ, ಸೇಯವ ಪಮುಹಾ ನ ಇಚ್ಛಂತಿ.

ಈ ಸಂಬಂಧದಲ್ಲಿ ಒಂದು ಮಾತು ಹೇಳಬಹುದು. ಪಾದದ ರಚನೆಯ ಯತಿಗೂ, ಗಣರಚನೆ, ಅರ್ಥ, ಭಾವ, ಸಾಧನೆಗಳ ಯತಿಗೂ ಇಂಥ ಸಂದರ್ಭಗಳಲ್ಲಿ ಸಾಕಷ್ಟು ಬೆಲೆ ವಿವೇಚನೆ ಮಾಡದ್ದರಿಂದ ಈ ಯತಿವಿಲಂಘನಕ್ಕೆ ಸಲ್ಲದ ಗಮನ ಪ್ರಾಶಸ್ತ್ಯ ಹುಟ್ಟಿತೇನೊ ಎನ್ನಿಸುತ್ತದೆ. ಸ್ಥಿತಿ ಇದು : ಒಂದು ಪಾದಕ್ಕೆ ಇಷ್ಟು ಅಕ್ಷರ, ಈ (ಇಷ್ಟು – ಇಷ್ಟು ಬಗೆಯ) ಅಕ್ಷರಗಳ ಆನುಪೂರ್ವಿ, ಆನಂತರ್ಯ ಸಂಗತಿ ಹೀಗೆ ಹೀಗೇ ಇರಬೇಕು ; ಇವು ಹೀಗೆ ಹೀಗೇ ಆಗುತ್ತವೆ, ಈ ಗಣಗಳು ಹೀಗೆ ಹೀಗಿದ್ದರೆ ಇಂಥ ಛಂದ ಎಂದಾದಾಗ ಇದು ಓದುವವರ ಉಸಿರ ನಿಲುಗಡೆ ಅಲ್ಲ, ಈ ಅಕ್ಷರ ರಚನೆಯಲ್ಲಿ ಅಗತ್ಯವಾಗಿ ಬೀಳುವ ಪೆಟ್ಟು, ಉಸಿರ ನಿಲವು ತಡೆ,ನಡೆ ಇದು ಅಕ್ಷರ ರಚನೆಯ ಅತ್ಯಾವಶ್ಯಕವಾದ, ದಾಟಲಾರದ ಸಂಯೋಜಕ ನಿರ್ಬಂಧ(Constituent element) ವಾಗುತ್ತದೆಂಬ ಅಂಶ ಯಾರಿಗೂ ವೇದ್ಯವಾಗಬೇಕು. ಅಲ್ಲಿಗೆ ಪಾದ ಎರಡೊ ಮೂರೊ ಖಂಡವಾಗುತ್ತದೆ;* ಅದು ಅನಿವಾರ್ಯ. ಎರಡು ಯತಿಗಳೊ ಮೂರು ಯತಿಗಳೊ ಬರುತ್ತವೆಂದರೆ ಏಕೆ ಬೇಕು, ಹೇಗೆ ಎಂಬುದನ್ನು ತಿಳಿಯುವಾಗ ಸರಿತಪ್ಪುಗಳನ್ನು ನಿರ್ಣಯ ಮಾಡುವುದು ಓದುವವನ ಉಸಿರಿಂದಲ್ಲ (ಅದು ಗುರುತಿಸುತ್ತದೆ); ಅಕ್ಷರಗಳ ಓಟ ಅಲ್ಲಿಗೆ ತಡೆದು ನಿಲ್ಲುತ್ತದೆ ; ನಿಂತು ಖಂಡವಿಭಾಗವಾಗುತ್ತದೆ. ಕೆಲವು ಭಾಷೆಗಳಲ್ಲಿ ಒಂದು ಸ್ಥಳ ಹಿಂದೊ ಮುಂದೊ ಆಗಿರುವುದುಂಟೆಂದು ಹೇಳುತ್ತಾರೆ. † ಕಾಲುವೆಯಲ್ಲಿ ಸಣ್ಣ ಅಂತರವಿರುವಾಗ ದಾಟುವ ಯತ್ನ ಅಗತ್ಯ ಹೆಚ್ಚಾಗಿರುವುದಿಲ್ಲ. ಅಗಲ ಸ್ವಲ್ಪ ದೊಡ್ಡದಾದರೆ ಸಾಮಾನ್ಯವಾಗಿ ಎರಡು ಹೆಜ್ಜೆ ಸಾಕು ; – ಸಮವಾಗಿಯೊ ಅಸಮವಾಗಿಯೊ. ಇನ್ನೂ ನಿಡಿದಾದಾಗ ಅಗತ್ಯವಾದ ಹಲವು ಹೆಜ್ಜೆಗಳನ್ನು ಗೊತ್ತುಮಾಡಿಕೊಂಡು ದಾಟಬೇಕಾಗುತ್ತದೆ. ಹೀಗೆ ಬೇಕಾದರೆ ವಿಶ್ರಮಿಸಲಿ ಎಂದಲ್ಲವೆ ಮೈನಾಕನು ಕೂಡ ಹನುಮಾನನಿಗೆ ಎದ್ದು ನೆರವು ಕೊಡಬಯಸಿದ್ದು ? ಒಂದು ಕಡೆ ಯತಿ ಬಂದಾಗ ಛಂದಸ್ಸಿಗೆ ಒಂದು ಹೆಸರು ; ಇನ್ನೊಂದು ಕಡೆ ಯತಿ ಬಂದಾಗ ಇನ್ನೊಂದು ಹೆಸರು ಎಂದು ಹೇಳಿರುವುದುಂಟು.ಉದಾ: 'ನಜಭಜಜಜರ' ಎಂಬ 21 ಅಕ್ಷರದ ನಮ್ಮ ಚಂಪಕಮಾಲೆಗೆ ನಾಗವರ್ಮ 13 ರಲ್ಲಿ ಯತಿ

* ಆಗ ಇಂಥ ಖಂಡಗಳಿಂದ ಆದುದು ಪಾದ ಎಂಬ ಗಣನೆ ಹೆಚ್ಚು ಸೂಕ್ತವಾಗುತ್ತದೆಯೇನೊ. ಪಾದಗಳು ಈ ಖಂಡಗಳಾಗಿ ಒಡೆಯುತ್ತವೆ ಎಂಬುದು ಇದರ ಇನ್ನೊಂದು ಹೇಳಿಕೆಯ ರೀತಿ. ಎರಡು ಖಂಡ ಭದ್ರ ! ಚೆನ್ನ ; ಮೂರು ಚೆಲು; ಸುಷ್ಠು; ನಾಲ್ಕು ಸಡಿಲವಾಗುತ್ತವೆ.

† ಓದುವ ರೀತಿಗೂ ಛಂದಸ್ಸಿಗೂ ಸಂಬಂಧವಿಲ್ಲವೆಂಬುದು ಮೂಲ ಪ್ರತ್ಯಯ. ಹಾಗಿದ್ದರೆ ಬೇರೆ ಬೇರೆಯವರು ಯತಿ ಸ್ಥಾನಗಳನ್ನು ಮುಂಚೆ, ಆಮೇಲೆ ಏಕೆ ಗುರುತಿಸಿಕೊಂಡರು ?

ಎಂದ. – (ಇದನ್ನು ಚಿತ್ರಲತಾ, ಚಂಪಕಮಾಲಿಕಾ ಎಂದ ಜಯಕೀರ್ತಿ; ಹೇಮಚಂದ್ರ ರುಚಿರಾ ಎಂದ ; ಛಂದೋಮಂಜರಿಕಾರ ಸರಸೀ ಎಂದ ; ವೃತ್ತರತ್ನಾಕರ ಸಲಿಲನಿಧಿ ಎನ್ನುತ್ತಾನೆ. ಪಂಚಕಾವಲಿ, ಧೃತಶ್ರೀ ಎಂಬುದು ಬೇರೆಯವರ ಹೆಸರುಗಳು. ಎಷ್ಟು! ಪಂಚಕಾವಲೀ, ಶಶಿವದನಾ ಎಂದಾಗ 11 ರಲ್ಲಿ ಯತಿ ಹಾಕಿ ವೃತ್ತರತ್ನಾಕರದವನೂ ಶಶಿವದನಾ ಎಂದು ಪಿಂಗಳನೂ ಇದನ್ನೇ ಏಕೆ ಕರೆದರೊ ?) ಆದರೆ ಯತಿ ಎಲ್ಲಿಗೆ ನಿಲ್ಲುವುದೆಂದು ಭಾಷೆಯವರು ಆ ಉಸಿರಿನ ಖಂಡವನ್ನು ಕಾಣುತ್ತಾರೊ ಅಲ್ಲಿಗೆ ನಿಲ್ಲಿಸಿಕೊಳ್ಳುತ್ತಾರೆ ಮಾತ್ರ. ಅದು ನಿಲ್ಲುವ ಕಡೆ ಪದ ಸಹಜವಾಗಿ ಒಡೆದುಕೊಂಡು ಸ್ವರವೊ ವ್ಯಂಜನರಚನೆಯೊ ಪಾದದ ಸಹಜಾಂಶವೊ ಆದರೆ ಯತಿ ಸುಭಗವಾಗುತ್ತದೆ, ಕಾವ್ಯನಿರ್ಮಾಣಕಾರನ ಅಗತ್ಯದಿಂದಲೊ ಅಶಕ್ತಿಯಿಂದಲೊ ಉಚ್ಚಾರವೇಗದಿಂದಲೊ ಆಲಸ್ಯದಿಂದಲೊ ಬೇಸರದಿಂದಲೊ ನಿಲ್ಲದೆ ನಡೆವಾಗ ಅಲ್ಲಿ ಸುಭಗವಾಗದೆ ನಿಲ್ಲದೆ ಹೋಗಬಹುದು. ಇಂಥ ಯತಿಯ ದಾಟು ಕಾಳಿದಾಸನಲ್ಲಿಯೇ ಕಾಣಬಹುದು. ಅದು ದೋಷವೆಂದರೆ ದೋಷ ; ಅಲ್ಲವೆಂದರೆ ಅಲ್ಲ. ಯತಿಸ್ಥಾನಕ್ಕೆ ಸಹಜವಾಗಿ ಅಕ್ಷರಪರಿಮಾಣ, ಗಣದ ವಿನ್ಯಾಸ ನಡೆಯಬೇಕು. ಆ ಅರ್ಥದಲ್ಲಿ ಯತಿಯನ್ನು ಮೀರುವುದು ಯಾವ ಪಾದಕ್ಕೂ ಶಕ್ಯವಿಲ್ಲ. ಪಾದಾಂತದಲ್ಲಿ ಯತಿ ಇದೆ ಎನ್ನುವಾಗ ಏನು ಹೇಳಿದ ಹಾಗಾಯಿತು ? ಅಲ್ಲಿಗೆ ಪಾದವನ್ನು ನಿಲ್ಲಿಸಿಕೊಂಡಿದ್ದೇವೆ; ಅದರ ನಾಲ್ಕು ಪಾದಗಳಲ್ಲಿ ಒಂದು ಪಾದ ಇಲ್ಲಿಗೆ ಮುಗಿಯಿತು ಎಂದು ಹೇಳಿದ ಹಾಗೆ ಆಯಿತೇ ಹೊರತು ಸಹಜವಾಗಿ ಪದವೊ ಅರ್ಥವೊ ಓಟವೊ – ಅಲ್ಲಿಯೂ ನಿಲ್ಲದೆ ಇರಬಹುದು. ಮಾತಿನ, ಅರ್ಥದ ಓಟ ಅಲ್ಲಿ ಸಾಲು ಒಂದರಿಂದ ಇನ್ನೊಂದಕ್ಕೆ ತಿರುಗುತ್ತದೆ ಮಾತ್ರ. ಸಮಪಾದಗಳಲ್ಲಿ ಇದು ಯಾಂತ್ರಿಕ. ಪಾದದ ಒಳರಚನೆಯನ್ನು ಕುರಿತದ್ದು ಈ ಯತಿ.

ಒಂದು ಪಾದದಿಂದ ಪದ್ಯವಾಗಲಾರದು ; ಎರಡಾದರೂ ಪಾದ ಬೇಕು ಪದ್ಯಕ್ಕೆ. ಇಂಥ ಎರಡನ್ನು ಜೋಡಿಮಾಡಿದ ಹೊರತು ಮನಸ್ಸಿಗೆ ತೃಪ್ತಿ ಬಾರದಿರುವುದರಿಂದ ಅಂಥದೇ ಎರಡು ಜೋಡಿ ಸೇರಿ ನಾಲ್ಕು ಪಾದಗಳ ಚೌಕವನ್ನು ಪದ್ಯಮಾಡಿಕೊಂಡಿರುವುದು. ದ್ವಿಪದಿಯಲ್ಲಿ ಎರಡೇ ಸಾಲು. ಸಾಮಾನ್ಯವಾಗಿ ಎಲ್ಲವೂ ನಾಲ್ಕು ಸಮ ಸಾಲಿನವೇ ಎಂದಾಗ ಮೊದಲಿನಂತೆಯೇ ಉಳಿದೆರಡೂ ರಚಿತವಾಗುತ್ತವೆ. ಅಲ್ಲಿನ ಗಣರಚನೆ ಯತಿರಚನೆ ನಾಲ್ಕಕ್ಕೂ ಅರ್ಥವನ್ನೊ ಭಾವವನ್ನೊ ನಡಸಿಕೊಂಡವನು ಯತಿಯನ್ನೂ ಲಯವನ್ನೂ ಮೊದಲ ಪಾದದ ಮೊದಲ ಅಕ್ಷರದಿಂದ ತೊಡಗಿ, ಮೊದಲ ಪಾದದ ಕೊನೆಯಲ್ಲಿ ನಿಲ್ಲಿಸದೆ ಎರಡನೆಯ ಪಾದದ ಅಂತ್ಯದವರೆಗೂ ತಂದು ಅದರ ಕಡೆಯಕ್ಷರದಲ್ಲಿ ನಿಲ್ಲಿಸಬೇಕಾಗು

ತ್ತದೆ. ಎಂದರೆ ಮೊದಲೆರಡು ಸಾಲುಗಳೂ ಒಂದು ಖಂಡ; ಎಂದರೆ ಪದ್ಯಾರ್ಧದಲ್ಲಿ 3 – 4ರದು ಇನ್ನೊಂದು ಖಂಡ ; ಈ ಎರಡು ಜೊತೆ ಖಂಡಗಳು ಸೇರಿ ಒಂದು ಪದ್ಯ ವಾದ ಹಾಗಾಯಿತು. ಅಷ್ಟಪದಿ ಎಂದಾಗಲೂ ಹಾಗೇ. ನಾಲ್ಕು ಸಾಲಿಗೆ ಬದಲು ಎಂಟು ಇರುತ್ತವೆ. ಸಾಲುಗಳ ಲಕ್ಷಣದಲ್ಲಿ ವ್ಯತ್ಯಾಸವಿಲ್ಲ. ಲಯದ ನಡೆ ಹಾಗೆ ಅಖಂಡವಾದಾಗ ಅಂಥ ಇನ್ನೊಂದು 3 ರಲ್ಲಿ ಆರಂಭವಾಗಿ ನಾಲ್ಕರ ಕಡೆಯಲ್ಲಿ ನಿಲ್ಲುತ್ತದೆ. ಎರಡನೆಯ ಪಾದದಲ್ಲಿ ನಿಂತ ನಡೆ 3 ರಲ್ಲಿ ಪುನಃ ಆರಂಭವಾಗುತ್ತದೆ – ಪ್ರತ್ಯೇಕವಾಗಿ ಎಂಬಂತೆ. 2 – 3ಕ್ಕೆ ಲಯದ ಸರಸ, ಆಪ್ತಬಾಂಧವ್ಯ, ಹೊಂದಿಕೆ ಅಷ್ಟಾಗಿ ಇಲ್ಲವೇನೊ ಎಂಬಂತೆ. ಸಾಹಸಿಗಳು ಮೊದಲನೆಯ ಅಕ್ಷರದಿಂದ ಆರಂಭ ಮಾಡಿ ನಾಲ್ಕನೆಯ ಸಾಲಿನ ಕಡೆಯುವರೆಗೂ ಅರ್ಥವನ್ನೊ ಭಾವವನ್ನೊ ಸಮಸ್ತ ಪದಗಳ ಗುಂಪುಗಳನ್ನೊ ಸೇರಿಸಿಕೊಂಡು ಉಸಿರು ಹಿಡಿದಂತೆ ನಡೆದು ನಾಲ್ಕನೆಯ ಸಾಲಿನ ಕೊನೆಯಲ್ಲಿ ನಿಲ್ಲಿಸಬಹುದು. ಇನ್ನೂ ಹೆಚ್ಚು ಸಾಹಸಿಗರು ಮುಂದಿನ ಪದ್ಯಕ್ಕೂ ನಡಸಬಹುದು. ಆದರೂ ಛಂದೋಲಯಗತಿಯೇನೊ ಅವರನ್ನು ಕಡ್ಡಾಯವಾಗಿ ಅಲ್ಲಲ್ಲಿಗೆ ತಂದು ನಿಲ್ಲಿಸುತ್ತದೆ.

*

ಮೂರಕ್ಷರದ ಗಣವಿಭಾಗ ಮಾಡಿದ್ದು ಏಕೆ ? – ಎಂಬ ವಿಷಯದಲ್ಲಿ ಬಹು ಬಗೆಯ ಆಲೋಚನೆ ನಡೆದಿದೆ. ಅನೇಕ ವೇಳೆ ಪಾದದ ಮಾನವನ್ನು ಹೀಗೆ ಅಳೆಯುವುದು ಹೊಂದುತ್ತದೆ. ಉಚ್ಚಾರಣೆಯಲ್ಲಿ ಒಂದು ಮೂಲಾಂಶ ಸಾಮಾನ್ಯ ವಾಗಿ ಗುರುಪ್ರಮಾಣದ ಅಥವಾ ಅದು ಒಡೆದು ಎರಡು ಲಘುಗಳಾಗುವ ಮೂಲಾಂ ಶವಾದರೆ ಅದಕ್ಕೆ ಇನ್ನೊಂದು ಸೇರಿ 3 ಅಕ್ಷರದ ಒಂದು ಗಣವಾಗಬಲ್ಲದು. ಒಂದು ಗುರು ಒಂದು ಲಘು, ಅಥವಾ ಒಂದು ಲಘು ಒಂದು ಗುರು ಸೇರಿದ ಗಣ ಅಸ್ಥಿರ, ಅಸ್ತಿಮಿತ – ಉಚ್ಚಾರಣೆಯಲ್ಲಿ ಗುರುವಿನ ಅಂಶಕ್ಕೆ ಪ್ರತಿ ಯಾಗಿ ಎರಡು ಲಘು ಗಳಾದಾಗ ಇನ್ನೊಂದು ಉಚ್ಚಾರಣಾಂಶ ಸೇರಿದರೆ ನಗಣ ಅದು. ಗುರುವಾಗಿರಲಿ, ಲಘುವಾಗಿರಲಿ ಅ ದ ನ್ನು ಮೂರು ಅಕ್ಷರದ ಖಂಡವನ್ನಾಗಿ ಮಾಡುತ್ತದೆ. ಉಚ್ಚಾರಣೆಯ ಸ್ತಿಮಿತತೆಗೆ ಸ್ಥೈರ್ಯಕ್ಕೆ, 3 ಅಕ್ಷರ ಒಂದು ಖಚಿತವಾದ ಉಚ್ಚಾರಖಂಡ. ಸಂಖ್ಯೆ ಮೂರು ವಿಶಿಷ್ಟವಾದ್ದು† – ತ್ರಿಮೂರ್ತಿ, ತ್ರಿಲೋಕ,

† Three is the first number at which a sequence becomes perceptible and a sequence of more than three masses would, in a painting, tend to be too obvious—H. Read.

ತ್ರಿಕರಣ, ತ್ರಿಕಲ, ತ್ರಿಕಾಲ, ತ್ರಿವರ್ಗ, ತ್ರಿಶೂಲ, ತ್ರಿಭಂಗಿ, ತ್ರಿಗುಣ, ತ್ರಿಸ್ಥಾನ ಇತ್ಯಾದಿ. ನಾದ ಬಿಂದು ಕಲಾ, ಪಶು ಪತಿ ಪಾಶ ಹೀಗೆ. ಪಾಣಿನಿ ಬಹುಳತ್ವವನ್ನು ಮೂರರಿಂದ ಆರಂಭಿಸುತ್ತಾನೆ ಎನ್ನುತ್ತಾರೆ.–ಮೂರಕ್ಕೆ ಯೋಗದ ಮತ್ತು ಸಂಕೇತದ ಒಂದುಪ್ರಾಮುಖ್ಯತೆ ದೊರಕಿದೆ*.ಚಿತ್ರದಲ್ಲಿಯೂ ಹಾಗೆಯೇ ಎಂದೆ.ಎರಡು ಬಣ್ಣದ ಅಂಶಗಳು ಜೊತೆಯಾದರೆ ಅದು ನಿರ್ದಿಷ್ಟವಾದ ಒಂದು ಉಚ್ಚಾರಣಾ ಖಂಡವಾಗಿ ನಿಲ್ಲದೆ ಇವನ್ನು ಒಂದು ಅವಯುವವಾಗಿ ನಿಲ್ಲಿಸಬೇಕಾದರೆ ಇನ್ನೊಂದು ಅಂಶ ಸೇರಿ ಅದು ತಕ್ಕಮಟ್ಟಿಗೆ ಯಾಂತ್ರಿಕವಲ್ಲದ ಸ್ಪಷ್ಟ ವೈಶಿಷ್ಟ್ಯ ಪಡೆದ ಅಂಗವಾಗುತ್ತದೆ. 3ನೆಯ ಅಂಶದಲ್ಲಿಯೇ ಲಯದ ಇಂಥ ಒಂದು ಅಂಗ, ಅಂಶ ನಿರ್ಧರಗೊಳ್ಳುವುದು. Monopressure ಎಂಬ ಒಂದು ಉಚ್ಚಾರಣೆಯ ಅಳತೆ ಅಥವಾ ಸೂತ್ರವನ್ನು ಓಮಂಡ್ ವಿವರಿಸುತ್ತಾನೆ. ಅದನ್ನು ಲಘುಪ್ರಮಾಣದ ಉಸಿರೋಟದ ಪರ ಮಾವಧಿಗೆ ಹೇಗೆ ಅನ್ವಯಿಸಬಹುದೊ ಅದರ ಅಂಶವಾಗಿ ಇವಕ್ಕೆ ಅನ್ವಯಿಸ ಬಹುದು. ನಮ್ಮಲ್ಲಿಯೂ ಹೀಗೇ ಮೂರು ಅಕ್ಷರದ ತ್ರಿಕಗಣನೆಗೆ ಪ್ರಾಶಸ್ತ್ಯ ಬಂದು ಅವುಗಳ ಮೂಲಕ ಪಾದಕ್ಕೆ ಪ್ರಸ್ತಾರ ಹಾಕುವ ಪದ್ಧತಿ ಉಂಟಾಗಿರಬೇಕು. ಇದು ಪಾದದಲ್ಲಿ ಎರಡು ಭಾಗವೊ ಮೂರುಭಾಗವೊ ಯತಿನಿಯತವಾದ ಪಂಕ್ತಿಯ ರಚನೆಗೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದು ಯೋಚನಾರ್ಹವಾದ ಸಂಗತಿ. ಸಗ್ಧರೆಯಲ್ಲಿ ಏಳು ಅಕ್ಷರದ ಮೂರು ಖಂಡಗಳಿವೆ. ಸಮಸಂಖ್ಯೆಯ ಅಕ್ಷರ ಗಳುಳ್ಳ ಸಮಭಾಗಗಳ ಪಂಕ್ತಿಗಳು ಇರುವಾಗ ಈ ಎಣಿಕೆ ಕಷ್ಟವಾಗುವುದಿಲ್ಲ.** ಸಹಜವಾಗಿ ಎರಡೊ ಮೂರೊ ಭಾಗಗಳಾಗುತ್ತವೆ. ಉದ್ದ ಪಂಕ್ತಿಗಳಲ್ಲಿ ಯತಿ ಸ್ಥಾನಗಳು ಹೆಚ್ಚಾಗಬೇಕಾಗುತ್ತವೆ. ಅವು ಹೆಚ್ಚಾದಷ್ಟೂ ಉಸಿರಿನ ನಡೆ ಕಡೆಕಡೆಗೆ ದುರ್ಬಲವಾಗುತ್ತದೆ. ಕಡೆಯ ಭಾಗ ಜೋತೊ ಏಕನಾದದಂತೆಯೊ ಆಗಿ ಗಣಗಳ ಪುನರಾವೃತ್ತಿಯಿಂದ ಕೊನೆಗೊಳ್ಳಬೇಕಾಗುತ್ತದೆ. 26 ರಿಂದ 48–49 ಅಕ್ಷರಗಳವರೆಗೂ ಲಂಬವಿರುವ ದಂಡಕ, ಮಾಲಾ ವೃತ್ತಗಳಲ್ಲಿ ಒಂದೊಂದು ಸಾಲಿನ ಕಡೆಗೂ ಗಣದ ಪುನರುಕ್ತಿ ಪಿಪೀಲಿಕಾಪಂಕ್ತಿ ಎಂಬ ಹೆಸರಿನಲ್ಲಿ ಹೇಗೆ ನಡೆ ಯುತ್ತದೆ ಎಂಬುದನ್ನು ನೋಡಬಹುದು. ಸಾಹಸವನ್ನೊ ಕೌಶಲವನ್ನೊ ಸೂಚಿ

* ಮಗಣದ ಮೂರುಗುರು ನಾಲ್ಕು ಮಾತ್ರಾವಕಾಶದಲ್ಲಿ ನಾಲ್ಕು ಲಘುಗಳಿರುತ್ತಿದ್ದ ವೇದಗಣವಾಗಬಲ್ಲದಿತ್ತು. 4×2 ಮಾತ್ರಾಕಾಲ ಒಂದು ರೀತಿ ಸಂಯುಕ್ತಗಣ. ತ, ಯ, ರಗಣಗಳು (5 ಮಾತ್ರೆಗಳ) ಕೂಡ ಸಂಯುಕ್ತಗಣಗಳೇ; ಉಚ್ಚಾರಣಾಂಶಗಳ ದೃಷ್ಟಿ ಯಿಂದ ನೋಡಿದರೆ. ಮಾತ್ರಾನಿಯಮದಲ್ಲಿ ಆಳಿದಾಗಲೂ 3 ಗುರುಗಳ ಮಗಣ ಪರಮ ಪ್ರಕಾರವಾಗುತ್ತದೆ.

** ಇಲ್ಲಿರುವುದು ಮಾತ್ರಾಸಮತೆ ಮುಂತಾದ ಇನ್ನಾವ ಪ್ರಮಾಣವೂ ಅಲ್ಲ.

ಸುವುದಕ್ಕಾಗಿ ಅಲ್ಲಲ್ಲಿ ಒಂದೊಂದು ಸೊಲ್ಲನ್ನು ಸೇರಿಸಿಕೊಂಡು ಬೆಳಸಿಕೊಂಡು ಹೋಗಬಹುದು.§ ಲಯೋತ್ತರದಲ್ಲಿ ಹೀಗೇ ಆಗಬಲ್ಲದು.

*

ಪಂಕ್ತಿಯನ್ನು ತ್ರಿಕಾಕ್ಷರ ಗಣಗಳದಾಗಿ ಅಳೆಯುವಾಗ ಅನೇಕ ಸಾಲುಗಳು ಇಂಥ ಅಳತೆ ಯಾಂತ್ರಿಕ, ಕೃತಕ ಆಗುತ್ತವೆ. ಅನೇಕ ವೇಳೆ ಪಂಕ್ತಿಯ ರಚನೆಯಲ್ಲಿ ಯತಿಗೆ ಒಳಪಡುವಂತೆಯೊ ಬೇರೆಯಾಗಿಯೊ 2 – 3, ಹೆಚ್ಚೆಂದರೆ 4, ಲಯದ ಘಟಕಗಳು (Spans) ಸೇರಿರುವುದು ಕಾಣುತ್ತದೆ.* ಇಂಥವನ್ನು ಸೇರಿಸಿ ಪಾದವನ್ನು ಮಾಡುತ್ತಾರೆ ಎನ್ನಬಹುದು ; ಅಥವಾ ಪಂಕ್ತಿಗಳು ಈ ಖಂಡಗಳಾಗಿ ಒಡೆದುಕೊಳ್ಳುತ್ತವೆ ಎನ್ನಬಹುದು. ಪಂಕ್ತಿ ಮುಗಿದು ಮುಂದಿನ ಪಂಕ್ತಿ ಆರಂಭಮಾಡಬೇಕು ಎಂದಾಗ ವೃತ್ತ – ವೃತ್ = ತಿರುವು – ಕಾಣುತ್ತದೆ. ಇಷ್ಟಕ್ಕೇ ತಿರುಗಬೇಕು, ನಿಲ್ಲಿಸಬೇಕು ಎಂಬುದು ಕರ್ತೃವಿನ ಇಚ್ಛೆಯಿಂದಾಗುತ್ತದೆ. ಆಯಾ ಪದ್ಯದ ಪಾದ ಅಲ್ಲಲ್ಲಿ ತಿರುಗುತ್ತದೆ. ಅಷ್ಟೇ. ಅದರಲ್ಲಿ ಯತಿಗಳೊ ಲಯದ ಖಂಡಗಳೊ ನಡುತ್ತವೆ ಎಂಬುದು ನುಡಿವಲ್ಲಿ ಉಸಿರೋಟದಲ್ಲಿ ಸ್ಪಷ್ಟವಾಗಿ ಗೋಚರವಾಗುವ ಸಂಗತಿ. ಆದ್ದರಿಂದ ಅಡಕವಾದ, ಸಮಗ್ರವಾದ ಯಾವ ಅಕ್ಷರ ಸಂಗತಿ ಪಂಕ್ತಿಯನ್ನು ಪಂಕ್ತಿಯನ್ನಾಗಿ ಮಾಡುತ್ತದೆ, ಹೆಚ್ಚಲ್ಲ ಕಡಮೆಯಲ್ಲ ಎಂಬ ಸಂಗತಿ — What makes a line a line, no more no less— ಕುತೂಹಲಕಾರಿಯಾದ ಪ್ರಶ್ನೆ. ಎಷ್ಟೊ ಸಂಖ್ಯೆಯ ಅಕ್ಷರಗಳವರೆಗೂ ಇದನ್ನು ಬೆಳಸಬಹುದು. ನಮ್ಮವರು ಹಾಗೆ ಮಾಡಿದ್ದಾರೆ. ಆಗ ಪಂಕ್ತಿ ಕುಸಿದು ಕುಸಿದು ಬೀಳುತ್ತದೆ.ಮೂರು ಖಂಡಗಳಿಗಿಂತ ದೊಡ್ಡವಾದರೆ ಪಂಕ್ತಿಯ ಬಿಗಿ ಕೆಡಲುಳ್ಳದ್ದು. ಸಾಲು 3 – 3 ಅಕ್ಷರ ಗಣಗಳ ಗುಣಿತವಾಗಿ ನಿಲ್ಲದೆ ಇನ್ನೆರಡು ಅಕ್ಷರಗಳಷ್ಟು ಹೆಚ್ಚಾದಾಗ ಎಂದರೆ 25–26ರಲ್ಲಿ ಕೆಲವಲ್ಲಿ ಒಂದು ಗುರು –, ಲಘು ಗುರು ⌣ –,

---

§ ‘ಫಲಪ್ರಕೀರ್ಣ ತರುಗಳಿಂ’ ಎಂಬುದರಲ್ಲಿ ‘ಸುಮಪ್ರಶೋಭಿ ಲತೆಗಳಿಂ’ ಎಂದೂ ಹೀಗೇ ಬೆಳಸಬಹುದು. ಪಾದದ ಲಂಬ ಹೆಚ್ಚುವಂತೆ ಇಂಥದನ್ನು ನೇಮಿಚಂದ್ರನಂಥವರು ಅಧಿಕವಾಗಿ ಸೇರಿಸಿದಂತೆ ಮಾಡಿದ್ದಾರೆ : ಬಡತಿ, Increment ಆಗಿ.

* ಪ್ರಾಕೃತ, ಅಪಭ್ರಂಶ ವೃತ್ತಗಳಲ್ಲಿ 30,35 ಮಾತ್ರೆಗಳ ಸಾಲುಗಳನ್ನು ಅವುಗಳಲ್ಲಿನ ಯತಿ ಯಮಕಗಳ ಸ್ಥಾನದಿಂದ ಎರಡು - ಮೂರು ಸಾಲುಗಳಾಗಿ ಈಚಿನವರು ಒಡೆಯುತ್ತಾರೆ. ಚತುಷ್ಪದಿಯನ್ನು ದ್ವಿಪದಿ ಎಂದು ಕರೆಯುವ ಒಂದು ಪರಿಪಾಠಿ ಮಾಡಲು ನಾಲ್ಕು ಪಾದಗಳಿದ್ದುದನ್ನು ಎರಡು ಅರ್ಧಮಾಡಿಕೊಂಡರೊ ದ್ವಿಪದಿಗಳೆರಡನ್ನು ಸೇರಿಸಿ ಚತುಷ್ಪಾದಿ ಮಾಡಿಕೊಂಡರೊ ಹೇಳುವುದು ಕಷ್ಟ. ಅಲ್ಲಿ ಎರಡರಿಂದ 8ರವರೆಗೂ ಮಾತ್ರಾ ಗಣಗಳುಂಟು.

ಅಥವಾ ಎರಡು ಗುರು — — ಗಳಿಂದ ಮುಗಿಸಿಕೊಳ್ಳಬೇಕಾದ ಆಗತ್ಯ ಕಂಡಿದೆ. ಅರ್ಥವನ್ನೊ ಭಾವವನ್ನೊ ಹೊಮ್ಮಿಸುವಾಗ ಈ ಪಂಕ್ತಿಯನ್ನು ನಾನಾ ರೀತಿಯಲ್ಲಿ ಕವಿಗಳು ಒಡೆದುಕೊಂಡಿದ್ದಾರೆ. ಇನ್ನಷ್ಟು ಲಂಬಿಸಿಕೊಳ್ಳಲೆಂದು ಹೋಗಿ ಒಂದೇ ಬಗೆಯ ಗಣಗಳ ಪಂಕ್ತಿಗಳನ್ನು ಹೊಸೆದುಕೊಂಡಿದ್ದಾರೆ.

ಇನ್ನೊಂದು ರೀತಿ ಗಣರಚನೆ ಆಗುತ್ತದೆ ಪರಿಣಾಮದಲ್ಲಿ. ಅಕ್ಷರಗಣದವೆಂದು ಸೂತ್ರಲಕ್ಷಣ ಹೇಳುವ ಸಾಲುಗಳ ಛಂದಸ್ಸುಗಳಲ್ಲಿ ಮಾತ್ರಾಗಣ ರೂಪತಾಳುತ್ತವೆ. ಅಕ್ಷರಗಣನೆಯುಂತಿದ್ದುದರಲ್ಲಿ ಮಾತ್ರಾಗಣನೆ ಹೇಗೆ ಬಳಕೆಗೆ ಬಂದಿರಬೇಕು ಎಂಬುದನ್ನು ವೇಲಣಕರರು Apabhramsa Metres ಎಂಬ ಲೇಖನದಲ್ಲಿ ಹೇಳುತ್ತಾರೆ. ತಾ ಳ ವ ನ್ನು ಮುಖ್ಯಮಾಡಿಕೊಂಡು ದೀರ್ಘವನ್ನು ಹ್ರಸ್ವವಾಗಿಯೊ ಹ್ರಸ್ವವನ್ನು ದೀರ್ಘವಾಗಿಯೊ — ಅಥವಾ,

ಜಇ ದೀಹೋ ವಿ ಅ ವಣ್ಣೋ, ಲಹು ಜೀಹಾ ಪಢಇ ಹೋಇ ಸೋವಿ ಲಹೂ.
ವಣ್ಣೋವಿ ತುರಿಅ ಪಢಿಓ ದೋತ್ತಿಣ್ಣಿವಿ ಏಕ್ಕು ಜಾಣೇಹು — ಎಂದು ಪ್ರಾಕೃತ ಪೈಂಗಳ ಹೇಳುವಂತೆಯೋ 2 — 3 ಲಘುಗಳಿಗೆ ತ್ವರಿತ ಪಠಣದಿಂದ ಒಂದೇ ಹ್ರಸ್ವದ ಎಣಿಕೆಯಾಗಿಯೋ ಮಾಡಿಕೊಳ್ಳುತ್ತಿದ್ದರು. ಡಗಮಗ ಒಂದೇ ಲಘುವಂತೆ. ಸಂಸ್ಕೃತದ ಛಂದೋವಿಚಿತಿಕಾರರಿಗೆ ಇದು ಅಕ್ರಮವೆಂದು ಕಂಡು ಅಕ್ಷರಗಳನ್ನು ತೂಗಿ ಏಕಮಾತ್ರಾ ದ್ವಿಮಾತ್ರಾ ವಿವಕ್ಷೆ ಹೀಗೆ ಹೀಗೆ ಮಾಡತಕ್ಕದ್ದು ಎಂದು ಲಘುಗೆ 1 ಮಾತ್ರೆ — ದೀರ್ಘ ಪ್ಲುತಾದಿಗಳಿಗೆ ಎರಡು ಮಾತ್ರೆ ಎಂದು ನಿಶ್ಚಯಿಸಿಕೊಂಡರು ಎಂಬ ಮಾತನ್ನು ಪರಿಶೀಲಿಸಬಹುದು. ನಾಲ್ಕಕ್ಷರದ ಗಣಗಳನ್ನು ಬಿಟ್ಟು ಗಾಥಾವನ್ನು ವೇದಕಾಲದಲ್ಲಿ ಕೂಡ ಹೇಳಬೇಕಾದ ಅಗತ್ಯ ಬಂದಿತು. ಆಗ ಈನೇಮ ಮಾಡಿಕೊಂಡರು ಎನ್ನುತ್ತಾರೆ.

ಗಾಯತ್ರೀ ಮಂತ್ರದಲ್ಲಿಯೇ ತತ್ಸವಿತುರ್ವರೇಣ್ಯಂ ಎಂಬಲ್ಲಿ ಕೂಡ ಛಂದೋಲಕ್ಷ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ವರೇಣೀಯಂ ಮಾಡಿಕೊಳ್ಳಬೇಕಾಗಿ ಬಂದ ಅಗತ್ಯವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಇಲ್ಲಿ ಮಾತ್ರಾ ವಿವಕ್ಷೆಕೂಡ ಬೇಕಿರಲಿಲ್ಲವಲ್ಲವೆ ? ಒಂದಕ್ಷರವೇ ಊನವಾಗಿರಲು ಸ್ವರಭಕ್ತಿ ಮಾ ಡಿ ಕೊ ಳ್ಳ ಬೇ ಕಾಯಿತು. ಲಘುವಿಗೆ ಒಂದು ಮಾತ್ರೆ ; ಗುರುವಿಗೆ ಎರಡು ಎಂಬುದು — ಇದು ಸಮಯ; * * —ಗುರುಗಳನ್ನು ಲಘುಗಳನ್ನಾಗಿ ಒಡೆದುಕೊಳ್ಳುವ ಸೌಲಭ್ಯದಿಂದ ಛಂದೋನಿರ್ಮಿತಿ ವಿಶೇಷಗೊಂಡಿತು.

* * ಒಟ್ಟಿಗೆ ಬರುವ ಎರಡು ದೀರ್ಘಗಳು ಸಮಪ್ರಮಾಣಗಳವಲ್ಲ. ನಾರಾಯಣ ಎಂಬಲ್ಲಿ 'ನಾರಾ' ಗಳ ದೀರ್ಘೋಚ್ಚಾರಣೆಯಲ್ಲಿ ಹೆಚ್ಚು ಕಡಮೆ ಉಂಟಲ್ಲವೆ ? ಒಟ್ಟನಲ್ಲಿ ಇದು ಲೆಕ್ಕ ; ಸ್ಥೂಲವಾಗಿ ; ಸಂಜ್ಞೆ.

8 ಗುರುಗಳ ಛಂದಸ್ಸನ್ನು 16 ಲಘ್ವಕ್ಷರಗಳನ್ನಾಗಿ ಮಾಡಿಕೊಳ್ಳಬಹುದಾಗಿ ಈ ನಡುವೆ ಬೇಕಾದಷ್ಟು ಧಾರಾಳಗಳು ಬೆಳೆದವು. 8 ಅಕ್ಷರದ ಅನುಷ್ಟುಭಿನಿಂದ 12 ರ ಜಗತಿಗಳವರೆಗೆ ಛಂದಸ್ಸುಗಳ ಸಂಖ್ಯೆ ಹೆಚ್ಚು.

ಅಕ್ಷರಗಣ ಮಾತ್ರಾಗಣಗಳಾಗಿ ಮಾರ್ಪುಗೊಳ್ಳುವಂತಾಗುತ್ತದೆ ಎಂದೆ. ಸಂಸ್ಕೃತದಲ್ಲಿ ಅಕ್ಷರಗಣಗಳಾಗಿ ಸ್ವಾಸ್ಥ್ಯದಿಂದ ನಿಲ್ಲಬಲ್ಲ ಗಣಗಳು ಈ ಮಾತ್ರಾಗಣ ಪ್ರಾಚುರ್ಯದಿಂದಾಗಿ ಪಂಕ್ತಿಯ ಲಯವನ್ನೇ ಮಾರ್ಪಡಿಸುವಷ್ಟು ಪ್ರಭಾವಗೊಳ್ಳುತ್ತವೆ. ಗುರುಗಳಿದ್ದಾಗ ಒಂದು ರೀತಿ, ಲಘುಗಳಿದ್ದಾಗ ಇನ್ನೊಂದು ರೀತಿ ಅವು ಒಡೆದುಕೊಳ್ಳುತ್ತವೆ; ಆಗ ಲಯದ ಖಂಡಗಳು ವ್ಯತ್ಯಾಸಗೊಳ್ಳುತ್ತವೆ.*

ದೇಶಿ ಛಂದಸ್ಸುಗಳು ಅವುಗಳ ಉಚ್ಚಾರ ವಿಶೇಷಗಳ ಅಗತ್ಯದಿಂದ ಇವನ್ನು ಹಾಗೆ ಮಾರ್ಪಡಿಸಿಕೊಳ್ಳುತ್ತವೆ. ಕೆಲವು ಅಕ್ಷರ ಛಂದಸ್ಸುಗಳು – ಇಂದ್ರವಜ್ರ, ಉಪೇಂದ್ರವಜ್ರ – ಏನು ಮಾಡಿದರೂ ಮೂಲಸಂಸ್ಕೃತದ ಘೋಷವನ್ನೂ ಸಂಸ್ಕೃತದ ಘೋಷವನ್ನೂ ನಡೆಯನ್ನೂ ಬಿಡುವುದಿಲ್ಲ ; ಉಳಿಸಿ ಕೊಳ್ಳುತ್ತವೆ. ಇನ್ನು ಕೆಲವು ಸುಲಭವಾಗಿ ಮಾ ತ್ರಾ ಗ ಣ ಗ ಳ ರೀತಿಗೆ ಒಗ್ಗಿಕೊಳ್ಳುತ್ತವೆ. ವ ಂ ಶ ಸ್ಥ, ಹರಿಣಿಗಳು ಅದೇ ಹನ್ನೊಂದು ಅ ಕ್ಷ ರ ಗ ಳ ದೋಧಕವು ('ಇಂದು ಗ । ಣಂಗಳೆ । ಮೂರವ । ರಿಂದಂ') ತ್ರಿಕಗಳ ಅಕ್ಷರ ವೃತ್ತವಾಗಿ ಮೂರು ಭಗಣ + ಎರಡು ಗುರು ಲಕ್ಷಣ ಉಳ್ಳದ್ದು ಎನ್ನಬಹುದು ; ಅಥವಾ ಮಾತ್ರಾಸಂಖ್ಯೆಯಲ್ಲಿ ನಾಲ್ಕು ಮಾತ್ರೆಗಳ ನಾಲ್ಕು ಗಣಗಳದ್ದೆಂದು ಹೇಳ ಬಹುದು.§ ಅಕ್ಷರ ಗಣವೃತ್ತವನ್ನೂ ಮಾತ್ರಾಗಣವೃತ್ತವನ್ನೂ ವಿವೇಚಿಸಬೇಕಾದಾಗ, ಅಕ್ಷರಸಂಖ್ಯೆ, ಗಣಗಳ ಅನುಪೂರ್ವಿ, ಯತಿಸ್ಥಾನ – ಈ ಮೂರೂ ನಾಲ್ಕು ಪಾದಗಳಲ್ಲಿಯೂ ಅಕ್ಷರಗಣ ಛಂದಸ್ಸಲ್ಲಿ ಒಂದೇ ಸಮ. ಮಾತ್ರಾಗಣ ಮಾಡಿಕೊಂಡರೆ ಅಕ್ಷರ ಸಂಖ್ಯೆ, ಗಣಸಂಖ್ಯೆ ವ್ಯತ್ಯಾಸವಾಗಬಲ್ಲದು † ರಥೋದ್ಧತೆಯಲ್ಲಿ ('ಮಾರುತೇಷ್ಟ ದಿವಿ । ಜಾಗ್ನಿಯುಂ ಲ – ಗಂ') ಘೋಷ ಸಂಸ್ಕೃತದ್ದು. ಯತಿ ಒಂದು ರೀತಿ 6 – 5 ಭಾಗವುಳ್ಳ ಅಕ್ಷರದ್ದು ; ಮಾತ್ರಾಗಣನೆಯಲ್ಲಿ 3 + 3 + 2 ॥ 3 + 2 + 3 (5 + 3 ?) ಆಗಬಹುದು. ಅದೇ ಭ್ರಮರ ವಿಲಸಿತದಲ್ಲಿ ("ಏಮಾತುರ್ವೀ । ಶಶಿದಿವಿ । ಜಲಗಂ") — 8 ಮಾತ್ರೆಗಳ ಲೆಕ್ಕದಲ್ಲಿ ಮೊದಲನೆಯ ಲಯಖಂಡವೂ ನಾಲ್ಕು ಮಾತ್ರೆಗಳ ಇನ್ನೆರಡೂ ಬರುತ್ತವೆ.

---

* ಮುಂದೆ ಇದರ ಉದಾಹರಣೆಗಳನ್ನು ಕಾಣಿಸಿದೆ.

§ ಅಥವಾ, 3 ವಿಷ್ಣು 1 ಬ್ರಹ್ಮ ಪ್ರಸ್ತಾರ ಉಳ್ಳದ್ದು ಎನ್ನಬಹುದು. ಇದು ಬೇರೆ ಅಳತೆ ಅಂಶದ್ದು.

† ಅಂಶ ಅಥವಾ ದೇವಗಣದಲ್ಲಿ ಈ ಅಂಶ ಇನ್ನೂ ವಿಶಿಷ್ಟ.

ಮಂದಾಕ್ರಾಂತದ ಒಂದು, ಎರಡು ಖಂಡಗಳಿವೆ ಇಲ್ಲಿ.ಅಂತ್ಯ ಪ್ರಾಸವಿಲ್ಲದ ಮಂದಾನಿಲವಾಗುತ್ತದೆ –

ಒಂದೇ ಸಂಖ್ಯೆಯ ಅಕ್ಷರ ವಿನ್ಯಾಸವುಳ್ಳಲ್ಲಿ ಎರಡು ಸ್ಥಾನಗಳಲ್ಲಿ ಯತಿನಿರ್ದೇಶಗಳೇಕೆ ? 3 – 3 ಅಕ್ಷ ರದ ಗಣಗಳಾಗಿ ಇದನ್ನು (ಏಮಾತು। ರ್ವಿೀ ಶಶಿ) ಮಾಡಿಕೊಂಡರೆ (ಮಭನಗ) ಎಂದು ಅಳಿದರೆ ಸಹಜವಾದೀತೆ ? ಮಾತ್ರಾವಿಭಜನೆ ಮಾತ್ರೆಯ 4 ಗಣಗಳೊ (ಏಮಾ:ತು ರ್ವಿೀ : ಶಶಿ ದಿವಿ : ಜ ಲಗಂ) ಅಥವಾ ಬೇರೆಯಾಗಿಯೊ ಗಣಗಳು ಒಡೆಯಲಾರವೆ ? – ಎಂಬ ಪ್ರಶ್ನೆ ಬರುತ್ತದೆ. ಸ್ವಾಗತ ಏನು ಮಾಡಿದರೂ ಕನ್ನಡದ ನಡೆಗೆ ಹಿತವಾಗುವುದಿಲ್ಲ. ಶಾಲಿನಿಯೂ ಹಾಗೆಯೇ. 12 ಅಕ್ಷರದ ತೋಟಕವನ್ನು 'ಪವಮಾ । ನ ಚತು । ಷ್ಕಯುತಂ | ಯತಿಯುಂ' ಎಂದು ಒಡೆದರೆ ಲಯ ಅಕೃತಕವಾಗುತ್ತದೆ. ಯತಿ 12 ರಲ್ಲಿ ಎನ್ನದೆ 'ಚತುಷ್' ಅಲ್ಲಿ ಬರಬಾರದೇಕೆ ಎಂದು ಕೇಳುವಂತಾಗುತ್ತದೆ. ಭುಜಂಗ ಪ್ರಯಾತದಲ್ಲಿ ('ಕುಶಂವಾ : ರ್ಧಿಪರ್ಯಾ : ಯ ಮಕ್ಕುಂ :ವಿರಾಮಂ) 8 ರಲ್ಲಿ ಯತಿಯೆನ್ನುತ್ತಾರೆ. ಇದರ ಘೋಷವೂ ಕನ್ನಡಕ್ಕೆ ಹೊಂದದು. ನಾಲ್ಕು ಯಗಣಗಳಲ್ಲಿ ಇದು ರಚಿತವಾಗಿದೆ. 'ಪರ್' ಎಂಬಲ್ಲಿಯೊ ಯ ಅಲ್ಲಿಯೊ ಏಕೆ ಯತಿ ನಿಲ್ಲಿಸಬಾರದಿತ್ತು ? 'ಮಕ್' ಎಂಬ ಎಂಟನೆಯ ದಿಶಸ್ಥಾನದಲ್ಲಿ ಏಕೆ ನಿಲ್ಲಬೇಕು–ಇಂಥದನ್ನೂ ವಿಚಾರಣೆ ಮಾಡಬಹುದು. ಬರುವ ಕಷ್ಟ ಇದು: ಅದನ್ನು ಓದುವ ರೀತಿ ಕಾಲಕಾಲಕ್ಕೆ ವ್ಯತ್ಯಾಸವಾಗಿರಬೇಕು. ಆದರೆ ಓದುವ ರೀತಿಗೆ ಛಂದಸ್ಸಿನಲ್ಲಿ ಸ್ಥಾನ ಯಾವುದು ? ಸ್ಥಾನ ಕೊಡಬೇಕೆ ?– ಎಂಬುದು ಮುಖ್ಯ. ಉದಾಹರಣೆಗೆ ಉತ್ತರದೇಶದವರು ಕಾಳಿದಾಸನ ವೃತ್ತಗಳನ್ನು ಕೂಡ ಓದುವರೀತಿಗೂ ದಕ್ಷಿಣದವರು ಓದುವರೀತಿಗೂ ಸ್ಪಷ್ಟ ವ್ಯತ್ಯಾಸವಿದೆ. ಯತಿ ಮಾತ್ರ ಪಾದದ ಅಕ್ಷರ ಮತ್ತು ಗಣರಚನೆಗೆ ಸಂಬಂಧಪಟ್ಟ ಸಾವಯವಾಂಶ (Organic, Constituent). ದ್ರುತಪದ 12 ಅಕ್ಷರಗಳ (16 ಮಾತ್ರೆಯ) ಛಂದಸ್ಸು. 'ಶತಮ । ಖೇಂದು ರವಿ ॥ ತೋಯ । ಗಣಂಪದ್' ಎಂಬಲ್ಲಿ ಯತಿಯ ಹಿಂದೆ ಮಾತ್ರಾಗಣ (3+5=8) (4+4=8) ಆಗಿ ನೇರ ಒಡೆದುಕೊಳ್ಳುತ್ತದೆ. ನಮ್ಮ ಮಂದಾನಿಲ ರಗಳೆಗೆ 16 ಮಾತ್ರೆಗಳ ನಾಲ್ಕು ಗಣಗಳೆಂದಾಗ 16 ಲಘ್ವಕ್ಷರಗಳ 8 ಗುರ್ವಕ್ಷರಗಳ ಯಾವಯಾವ ಬಗೆಯ ಅಕ್ಷರ ಛಂದಸ್ಸು ಒದಗುತ್ತವೆಂಬುದನ್ನು ಪರೀಕ್ಷಿಸಬಹುದು. ಪದ್ಧತಿಕಾ, ವಾ ನ ವಾ ಸಿ ಕಾ, ವಿಶ್ಲೋಕಾ ಮುಂತಾದ ಮಾತ್ರಾಸಮಕಗಳಲ್ಲಿ ಕೂಡ ಪರೀಕ್ಷೆಗಳು ನಡೆಯಬಹುದು.* ಲಲಿತ

*ಪ್ರಾಕೃತ ಅಪಭ್ರಂಶಗಳಲ್ಲಿನ ಕಡವಕಗಳ ಚತುರ್ಮಾತ್ರಾಗಣದ ಯಾವ ಬಗೆಯನ್ನಾದರೂ ಪರಿಶೀಲಿಸಬಹುದು. ನಿಜವಾಗಿ ಕಡವಕಗಳಲ್ಲಿ ಸಂಧಿಗಳನ್ನು ರಚಿಸಿ ಆರಂಭದಲ್ಲಿ, ಕೊನೆಯಲ್ಲಿ, ಘತ್ತ, ವರ್ಣ, ಧ್ರುವ ಮುಂತಾದ ಹೆಸರುಗಳಲ್ಲಿನ ಛಂದೋವಿಲಾಸ ಪೂರ್ತಿಯಾಗಿ ನಮ್ಮ ಕವಿತೆಗೆ ಏಕೆ ಬರಲಿಲ್ಲವೋ ಎನ್ನಿಸುತ್ತದೆ. ರಾಜಶೇಖರನ ಹೊತ್ತಿಗೇ ಆ ಬಗೆಯ ರಚನೆಗಳು ಪ್ರಾಚುರ್ಯಕ್ಕೂ ಕವಿಪ್ರಿಯತೆಗೂ ಬಂದಿದ್ದವು.

ಪದದ 'ಕುಲಿಶಧರಾರ್ಕ ಯುಗಂಗಳ ಮುಂದಂ' ಎಂಬುದು ತ್ರಿಕವಿನ್ಯಾಸದಿಂದಲೇ ನ – ಜ – ಜ – ಯ (ಯತಿಸ್ಥಾನ ಏಳು) ಎಂದು ಬರೆದರೂ ಅಚ್ಚ(3–4ರ)ಮಾತ್ರಾ ಛಂದಸ್ಸಿನ ಲಯವನ್ನು ಉಳಿಸಿಕೊಳ್ಳುತ್ತದೆ. 'ಳಮುಂದಂ' ಎಂದು ಗಣವನ್ನು ಒಡೆದುಕೊಳ್ಳುವುದು ಏನು ಸೌಖ್ಯ ? 16 ಅಕ್ಷರದ ಲಲಿತಪದ 3 ನಗಣ + 1 'ಜಸಗಣ + ಗುರು' ಎಂದಿದ್ದರೂ 10 ರಲ್ಲಿ ಯತಿಯೆಂದು ಹಾಕಿದ್ದರೂ 5ಮಾತ್ರೆ ಗಳ ಗಣಗಳಾಗಿ ಒಡೆದುಕೊಳ್ಳುತ್ತದೆ ಅದೇ 'ಕುಲಿಶಧರ: ಪುರದಿನಪ: ಮಾರುತಹ: ರಾಂತಂ'. ಈ 3ರನ್ನು ಹೇಗೆ ಒಡೆಯಬಹುದು ? 10ಕ್ಕೆ ಸಹಜವಾಗಿ ಯತಿ ಇದೆ. ಅಥವಾ ಮಾತ್ರಾಗಣಗಳಲ್ಲಿ ಆ ಅಗತ್ಯವೇ ಇಲ್ಲ ಎಂಬಲ್ಲಿ ಕಡೆಯ 2 ಗುರು ಪಾದದ ಸಮಾಪ್ತಿಗೆ ನಿಲವುಘಟ್ಟಗಳು. ಪಂಚಚಾಮರ ಹಿಂದೆಯೇ ಹೇಳಿದಂತೆ ನಡೆಯಲ್ಲಿ ಮಾತ್ರಾವಿನ್ಯಾಸದಿಂದ ಕನ್ನಡಕ್ಕೆ ಒಪ್ಪಿಗೆಯಾಗಿದೆ. ಮಂದಾಕ್ರಾಂತವನ್ನು ಕನ್ನಡ ದಲ್ಲಿ ಬಳಸಲು ಪ್ರಯತ್ನಪಟ್ಟರೂ ಆ ನಡೆ ದೇಶಿಗೆ ಸುಲಭವಾಗಿ ಹೊಂದುವುದಿಲ್ಲ ವೆಂದು ಕೈಬಿಟ್ಟಹಾಗೆಕಾಣುತ್ತದೆ. 'ಕಾಂತೇ ಧಾತ್ರೀ ಹಿಮಕೃದಮರಾಕಾಶ ಯುಗ್ಮೇಶ ಯುಗ್ಮಂ' ಎಂದಾಗ ಮೊದಲ ಯತಿಸ್ಥಾನ 4 ಅಕ್ಷರಗಳಾದ ಮೇಲೆ; ಗಟ್ಟಿಯತಿ 10 ಅಕ್ಷರವಾದ ಮೇಲೆ. ಈ ಮೊದಲ ನಾಲ್ಕರಲ್ಲಿ ಎರಡೆರಡು ಗುರುವಾಗಿ ಉಸಿರು ಒಡೆದುಕೊಳ್ಳುತ್ತವೆ. ಸ್ಪಷ್ಟವಾಗಿ ಉಸಿರು ನಿಂತರೂ ಅಷ್ಟು ಮುಂಚೆ ಯತಿ ಯನ್ನು ಸೂಚಿಸುವುದು ಪದ್ಧತಿಯಲ್ಲ. ಮೊದಲ ನಾಲ್ಕಕ್ಷರ ಒಂದು ಖಂಡ ; ಮುಂದಿನ ಆರು ಒಂದು ಖಂಡ (ಹಿಮಕೃದಮರಾ); ಮುಂದಿನ ನಾಲ್ಕು ಅಥವಾ ಐದು ಅಕ್ಷರ, ಒಂದೊ ಎರಡೊ ಗುರುಗಳು – ಹೀಗೊ ? 8 – 7 – 12 ಮಾತ್ರೆಗಳ ಅವಯವಗಳಾಗಿ ಒಡೆದುಕೊಂಡರೆ ಹೆಚ್ಚು ಸಹಜವಾಗಿ ನುಡಿಯು ತ್ತವೆ. ಇದೇ ಛಂದಸ್ಸಿನ ಪೃಥ್ವಿ ಕನ್ನಡಿಗರಿಗೆ ಪ್ರಿಯವಾಯಿತು. ಆದಿಪುರಾಣ ದಲ್ಲಿ ತನ್ನ ಪ್ರಿಯೆಯ ಚಿತ್ರವನ್ನು ಗುರುತಿಸುವ ಸಂದರ್ಭದಲ್ಲಿ ವಜ್ರಜಂಘನು ಶ್ರೀಮತಿಯ ಆಕೃತಿಯನ್ನೂ ರೂಪವನ್ನೂ ಗುರುತಿಸುವಾಗ ಪೃಥ್ವಿಗಳು ಎಷ್ಟು ಚೆನ್ನಾಗಿ ಹೊಂದುತ್ತವೆ ಎಂಬುದು ಕಾಣುತ್ತದೆ. ಆರಂಭದ ಲಗ ಕಾದಂಬರಿಯಲ್ಲಿ 'ಎಲೇ ಕುಮುದನೇತ್ರ ಮನ್ಮಥ ಸಹಾಯನೀ ಚಂದ್ರಮಂ' ಎಂಬಲ್ಲಿನ ಸಂಬೋಧ ನೆಗೆ ಹೇಗೆ ಒದಗುತ್ತದೆ ಎಂಬುದನ್ನು ನೋಡಬಹುದು. ಆದಿ ಲಘು – ಗುರು ಅಚ್ಚರಿಯನ್ನು ಹೇಗೆ ಕಾಣಿಸುತ್ತದೆ ಎಂಬುದೊಂದೇ ಅಲ್ಲದೆ 'ಇನಾನಿಲ ದಿನೇಶ ಮಾರುತ ಪಯೋಲಗಂಗಳ್ ಬೆಡಂ' ಎಂಬಲ್ಲಿ 8 – 8 ಮಾತ್ರೆಗಳ 3 ಖಂಡಗ ಳಾಗಿ ಹೇಗೆ ವಿಂಗಡಗಳಾಗಬಲ್ಲದು ಎಂಬುದನ್ನು ನೋಡಬಹುದು. ಹರಿಣೀಪ್ಲುತ ವನ್ನೂ ನಮ್ಮವರು ಬಳಸಿದ್ದಾರೆ ಆದರೆ ಅದು ಹೊಂದಲಿಲ್ಲ. 5 ಲಘುಗಳನ್ನು, ಒಟ್ಟು 5 ಗುರುಗಳು ಅನುಸರಿಸಿ ಇದರಲ್ಲಿ ಎಷ್ಟು ಶಕ್ತಿಯಿದ್ದರೂ ಹೆದೆಯಲ್ಲಿನ

ಬಾಣವನ್ನು ಆಕರ್ಣಾಂತಂ ಎಳೆದರೂ ಅದು ಮುಂದುವರಿಯುವ ರೀತಿ ಕನ್ನಡದ ಜಾಯಮಾನಕ್ಕೆ ಹೊಂದದು.

15 ನೆಯ ಛಂದಸ್ಸಿನಲ್ಲಿ 'ಮಣಿಗಣನಿಕರ' ಎಂಬುದೊಂದಿದೆ. 8 ರಲ್ಲಿ ಅದರ ಯತಿ. ಕಡೆಯ ಅಕ್ಷರ ಮಾತ್ರ ಅದರಲ್ಲಿ ಗುರು ; ಉಳಿದ 14 ಲಘು. ಇದು ನಾಲ್ಕು ನಾಲ್ಕು ಮಾತ್ರೆಗಳ ನಾಲ್ಕು ಗಣ (ಸುರಪುರ: ಗಣಮೆಸೆ: ದಿರೆಜಲ ನಿಧಿಯೊಳ್)ಉಳ್ಳದ್ದಾಗುತ್ತದೆ. ಅಂಶ ರೀತಿಯಲ್ಲಿ ಅಳೆದರೆ 3ವಿಷ್ಣು + 1ಬ್ರಹ್ಮಗಣ ಉಳ್ಳದ್ದಾಗುತ್ತದೆ. ವಿಚಿತ್ರಲಲಿತವೆಂಬ 5 – 5 ಮಾತ್ರೆಗಳ 3+2 ವಿನ್ಯಾಸವುಳ್ಳ 3 ಖಂಡಗಳು +2ಗುರು ಸೇರಿ ಒಂದು ಪಾದ ಯತಿ 11ರಲ್ಲಿ ಬರುತ್ತದೆನ್ನುತ್ತಾರೆ. 'ಹರ' ಅಥವಾ 'ರಂಧ್ರ' ಎಂದು ಮಾತಿದೆ. ವಿಚಿತ್ರಲಲಿತದ 'ತ್ರಿದಶಮರುದಿಂದ್ರ ಪುರ ಚಂದ್ರ ಸಲಿಲಂಗಳ್' ಎಂಬಲ್ಲಿ 11ರಲ್ಲಿ ಯತಿ ಬರಬೇಕಾದರೆ ಇದನ್ನು ಓದುವ ರೀತಿ ಆ ಕಾಲದಲ್ಲಿ ಹೇಗಿತ್ತೊ? 'ಸಲಿ' ಆದ ಮೇಲೆ ಬಂದಿದ್ದರಾದರೂ ಚೆನ್ನಾಗಿತ್ತು; ಮರು – ಪುರ – ಸಲಿ ಸಹಜವಾಗುತ್ತದೆ. 'ಮಣಿವಿಭೂಷಣ' ವೆಂಬ ಒಂದು ಛಂದೋಜಾತಿಗೆ ಯತಿ ಕೊಟ್ಟೇ ಇಲ್ಲ. 'ಶಶಿ' ಆದ ಮೇಲೆಯೊ, 'ಯುಗ್' ಆದ ಮೇಲೆಯೊ ಯತಿ ಖಚಿತವಾಗಿ ನಿಲ್ಲುತ್ತದೆ. ಪಾದಾಂತ್ಯದಲ್ಲಿ ಯತಿ ಎಂದಾಗ ಇಲ್ಲಿನ ಅನಿಶ್ಚಿತತೆಯನ್ನು ಮರೆಮಾಡುವುದಕ್ಕಾಗಿ ಯತಿಯನ್ನು ನಿರ್ದೇಶಿಸಿಲ್ಲವೆನಿಸುತ್ತದೆ.

18 ರ ಧೃತಿಯ (2,62,144 ಆಗುವ) ಛಂದಸ್ಸುಗಳಲ್ಲಿ ಹುಟ್ಟುವ ಮಲ್ಲಿಕಾಮಾಲೆ, ರ – ಸ – ಜ – ಜ – ಭ – ರ, ಯತಿ 8 ಎಂದು ಸೂ ಚಿ ತವಾಗಿದ್ದರೂ'ಮಾಲೆ : ಯೆಂಬುದು' ಮಾತ್ರೆಯ (3+4) ಗಣಗಳು ನಿಶ್ಚಯಂ ಕವಿ, ರಾಜಹಂಸವಿ. – ಯಂತೆ ನುಡಿದು "ನಿರ್ಮಿ"ಎಂಬ ಮೂರು ಮಾತ್ರೆ ಮತ್ತು ಒಂದುಗುರುವಿಂದ(3 + 2)ಮುಕ್ತಾಯವಾಗುತ್ತದೆ.ಈನಡೆ ಕನ್ನಡಕ್ಕೆಎಷ್ಟೋ ಸಂದರ್ಭದಲ್ಲಿ ಪ್ರಿಯವೆನಿಸಿದೆ. ಅರವಿಂದದಲ್ಲಿ "ಸು ರ ಪು ರ : ಯು ಗ ಪ ವ : ನ ದ್ವಿ ತ : ಯಾ ಕಾ ಶಂ ಬು ಗ : ಣಂಗಳ್ :" 9ರಲ್ಲಿ ಯತಿ ಎಂದಿದ್ದರೂ 4+4 ಮಾತ್ರೆಗಳ 3 ಖಂಡಗಳಾಗಿ, ಸಹಜವಾಗಿ ಒಡೆದುಕೊಳ್ಳುತ್ತದೆ. ಮಲ್ಲಿಕಾಮಾಲೆಯ ಆದಿಗುರು ಎರಡು ಲಘುವಾಗಿ ಒಡೆದು ತರಳ ಮುಂದುವರಿದದ್ದು ಸ್ರಗ್ಧರೆಯ ನಡೆ 7 ರಲ್ಲಿ 14 ರಲ್ಲಿ (ಕಡೆಯಲ್ಲಿ ಯತಿಯೆಂದು ಹೇಳಬೇಕಾಗಿಯೇ ಇಲ್ಲವಲ್ಲ!) ಯತಿ ಉಳ್ಳದ್ದು ಭೂಮಿಜ್ಯಾ:ಲೇಂದು ದೇವಾ:ಧಿಪಪುರ ಗಣದಿಂ : ಮುಂತೆತೋಯತ್ರ: ಯಂಗಳ್ ॥ ಇಂಥ ಖಂಡಗಳಿಂದ ಆಗಿರುವ ಹಾಗೆ ಕಾಣುತ್ತದೆ. ಪ್ರಖ್ಯಾತವಾಗಿರುವಹಾಗೆ ಉತ್ಪಲಮಾಲೆಯ ಮೊದಲ ಗುರುವನ್ನು ಎರಡು ಲಘುವಾಗಿ ಒಡೆದು

ಚಂಪಕಮಾಲೆಯಾಗಿ, ಶಾರ್ದೂಲದ ಆರಂಭದ ಗುರುವನ್ನು ಎರಡಾಗಿ ಒಡೆದು ಮತ್ತೇಭ ವಿಕ್ರೀಡಿತ, ಸ್ರಗ್ಧರೆ>ಮಹಾಸ್ರಗ್ಧರೆ ಆಗಿವೆ.ಇದೇ ಸೂತ್ರ ಖಚರಪ್ಲುತ> ಅನವದ್ಯ, ಜಯಕೀರ್ತಿ ಶಾರ್ಙ್ಗ ಎಂದೂ ಹೇಮಚಂದ್ರನು ಊರ್ಜಿತವೆಂದೂ ಕರೆಯುವ> (ರಸಸತಜಜಗ– ಮುದ್ರಾ ಅಥವಾ ಉಜ್ವಲದಿಂದ) ರೂಪಗೊಳ್ಳುತ್ತವೆ. ಈಛಂದಸ್ಸುಗಳು ಒಂದು ಹೊಸವರ್ಣರಂಜನೆಯನ್ನು ಲಯಕ್ಕೆ ಕೊಡುತ್ತವೆ;ಅಥವಾ ಹಾಡಿಕೊಳ್ಳಲು ಒಂದು ಸೌಲಭ್ಯವನ್ನು ಕೊಡುತ್ತವೆಯಾಗಿ ಮಾತ್ರಾಗಣ ಅಥವಾ ಅಂಶಗಣದ ತಾಳಕಟ್ಟಿಗೆ ಹೊಂದುವ ಯಾವುದೊ ಒಂದು ಲಕ್ಷಣವುಳ್ಳವಾಗಿರುವುದರಿಂದ ಕನ್ನಡ ನುಡಿಯ ಜಾಯಮಾನಕ್ಕೆ ಹೆಚ್ಚು ಸಹಜವಾಗಿ ಹೊಂದಿಕೊಳ್ಳುತ್ತವೆ. ತರಳದ್ದು 3 – 4 ಮಾತ್ರಾಗಣರಚನೆ. 21 ರ ತರಂಗದಲ್ಲಿ 'ಪಾವಕಂ ತ್ರಿದಶಪಾವಕಂ ದಿವಿಜ ಪಾವಕಂ ಸುರಪಪಾವಕಂ' ಎಂಬ ಪಂಕ್ತಿಯನ್ನು ನೋಡಿದರೆ ಪಾವಕದ ಪುನರುಕ್ತಿ ತ್ರಿದಶ, ದಿವಿಜ, ಸುರಪ ಎಂಬ ಮಾತು ಅಲ್ಲಿ ಬೀಳುವ ಒಂದು ಬಗೆಯ ತಾಳದ ಪೆಟ್ಟು ಬಹು ವಿಶಿಷ್ಟವಾದುದು. 22 ರ ಭದ್ರಕ ಅಕ್ಷರಗಣವಾಗಿ ಓದಲು ತುಂಬಾ ತಕರಾರು ಮಾಡುತ್ತದೆ. ಹಾಗೆಯೇ 24 ಅಕ್ಷರಗಳ ಪಂಕಜವೂ ಅರ್ಕಮರೀಚಿಯ 'ಅಮರಗಣಾರ್ಕ ಚಂದ್ರಮರೋಳಿಯ ನಾಲ್ಕರಿನತ್ತಲೆ ದಿನೇಶ ಪಾವಕರ್' ಎಂಬುದೂ 21ರ ಲಲಿತಗತಿಯಲ್ಲಿ 12ರಲ್ಲಿ ಬರುವ ಯತಿ 16ರ ಕೊನೆಯಲ್ಲಿ ಹೇಳದಿದ್ದರೂ ಬರುವಂಥದು. ವಿಭಾಗವಾಗಿ ಬರುವುದರ ಓದು, ಲಯದ ನಡೆ ವಿಶಿಷ್ಟವಾದುದು. (ಸುರದಿವಿಜ : ಸುರಜಲದ : ನಿಕಾಯಂ : ಜಲೋದಾಯಂ : ವ್ಯೋಮ ಭೂ: ಪ್ರಾಯಂ ॥), 22 ರ ವನಮಂಜರಿಯ 7 ಭ+ಗು (ಎಷ್ಟು ವನಮಂಜರಿಗಳು!)"ಶೀತಕರಪ್ರಕರಂಗಳವೇಳೆಡೆಯೋಳಿಯೊಳ್ಪೆದಲನುಕ್ರಮದಿಂ"ಎಂಬುದರಲ್ಲಿ 3 – 3 ಅಕ್ಷರಗಣ ಹೊಂದಿದರೂ ಅಲ್ಲಿ ನಡೆ ಭಗಣದ ನಾಲ್ಕು ಮಾತ್ರೆಗಳದು. 'ಳೆಡೆ' ಯಲ್ಲಿ ಯತಿ ಹೆಚ್ಚು ಸಹಜವಾದೀತು. ಅದರಲ್ಲಿಯೂ 'ಶೀತಕರ ಪ್ರ ಕ । ರಂಗಳ ವೇಳೆಡೆ । ಯೋಳಿಯೊಳ್ಪೆದ ಲ । ನುಕ್ರಮ । ದಿಂ' ಆಗಿ ರಚನೆಯ ಮಾಟ ವಿಭಕ್ತವಾಗುತ್ತದೆ.

83 ಲಕ್ಷ ಚಿಲ್ಲರೆ ವೃತ್ತಗಳು ಶಕ್ವ ಎಂಬ (23 ನೆಯ) ವಿಕೃತಿ ಛಂದಸ್ಸಿನಲ್ಲಿ ಹಂಸಗತಿ ಎಂಬ ಒಂದಕ್ಕೆ ಉದಾ. ಇದೆ. ಅದರಲ್ಲಿ 7 ನಾಲ್ಕು ಮಾತ್ರಾ ಪ್ರಮಾಣವುಳ್ಳ ವಿಷ್ಣುಗಣಗಳ ಅಥವಾ 8 ಮಾತ್ರಾ ಖಂಡಗಳ ಪ್ರಸ್ತಾರ ಸಹಜ. ಕಡೆಯಲ್ಲಿ ಒಂದು ಗುರು ಅಥವಾ ಒಂದಂಶ. ಇದನ್ನು ತ್ರಿಕರೀತಿಯಲ್ಲಿ ಓದುವುದು ತುಂಬಾ ಅಸಹಜ. ಆದಿನಗಣ ದಾಟಿದರೆ ಉಳಿದ 6 ಜ ಕಡೆಯಲಗ ವಿಚಿತ್ರವಾಗುತ್ತದೆ. ಒಂದು ರೀತಿ ಓದಿದರೆ 'ಹರ' ಎಂಬ ಹನ್ನೊಂದನೆಯ ಸ್ಥಾನದಲ್ಲಿ ಯತಿ ಬಂದರೂ "ದಿವಿಜ – ಷಡಂಬು – ಜ ಮಿತ್ರ – ಗಣ ಪ್ರ – ಕರಂ ಲ – ಗ

ಮುಂ ಕ್ರ – ಮದಿಂ ಪ – ದದೊಳ್" ಎಂಬಲ್ಲಿ ಜ.ಕ. "ಕ್ರಮ" ಆದ ಮೇಲೆ (ಅಂಶ ವಿನ್ಯಾಸದಲ್ಲಿಯೂ ಹಾಗೇ) ಇನ್ನೊಂದೆರಡು ಯತಿ ಕೇಳಿಸಿಕೊಳ್ಳುತ್ತವೆ. ಪಾದವನ್ನು ಮುಗಿಸುವುದಕ್ಕಾಗಿ ಹಾಕಿಕೊಂಡದ್ದು ಕಡೆಯ ಗುರು. ಇದೇ ಛಂದಸ್ಸಿನ ಮತ್ತಾ ಕ್ರೀಡೆ – "ಮುನ್ನಂಭೂಮಿದ್ವಂದ್ವಾಕಾಶಂ – ಸುರಪುರ ಗ ಣ ಮ ಸೆ ದಿ ರೆ ಗಣ ತತಿಯಿಂ" – 8 ಗುರುಗಳಿಂದ ಆರಂಭವಾಗಿ ಯತಿ ಪಡೆದು 14 ಲಘು ಸೇರಿ ಒಂದು ಗುರುವಿಂದ ಮುಕ್ತಾಯವಾಗುತ್ತದೆ. ಇನ್ನೊಂದು ಯತಿ 'ಸೆ' ಅಲ್ಲಿಯೊ, 'ಣ' ಅಲ್ಲಿಯೊ, 'ತಿ' ಅಲ್ಲಿಯೊ ಸುಳಿಯುತ್ತವೆ. 24 ಅಕ್ಷರಗಳ "ಸುರಪುರ ಯುಗಳಂ : ಬರೆ ಶಶಿದಿವಿಜಂ : ಖರಕರ ಸುರಯುಗ : ತೋ : ಯಂ" ಎಂಬಲ್ಲಿ ಎಲ್ಲ ನಾಲ್ಕು ಮಾತ್ರೆಗಳ ಗಣದ ಛಂದ. 'ತೋಯಂ' ಎಂಬ ಕಡೆಯ ಖಂಡ ಪಂಕ್ತಿಯ ಮುಗಿವಿಗೆ ಉಪಯೋಗಿಸಿಕೊಂಡ 2 ಗುರುಗಳದು. ಮುಂದಿನ ಉದಾ. ಯಾದ ತನ್ವಿ ("ಇಂದುನಭಂಗಳ್") ಮೇಲಿನಂತೆಯೇ 4 – 4 ಮಾತ್ರೆಗಳ ಗಣ ಗಳದು ; ಅಷ್ಟೇ ಅಲ್ಲ, 16 ಮಾತ್ರೆಗಳ ಸ್ಥಾನದಲ್ಲಿ ಯತಿ ಪಡೆಯುತ್ತದೆ. ಆದರೆ ಸೂತ್ರ 18 ಕ್ಕೆ ಪುನಃ ಯತಿಯನ್ನು ಹೇಳುವುದಿಲ್ಲ. ಅಲ್ಲಿಯೂ ಒಂದು ಎಂಟು

3 5 4 4 4

ಮಾತ್ರೆಯ ಗಣ ಬಂದಿದೆ. ಇಂದುನಭಂಗಳ್ : ಸುರಪುರ ಪವನೇಂ : ದುದ್ವಯ

4 4 4

ಮಾಗಿರೆ : ಕುಲಿಶ ಜ : ಲಂಗಳ್ ಅಥವಾ ಆರಂಭದ 8 ಮಾತ್ರೆಗಳನ್ನು 8 ಮಾತ್ರೆ ಗಳ ಸಂಯುಕ್ತ ಗಣವೆಂದು ಭಾವಿಸಬಹುದು. ಅಥವಾ 2 ಮಂದಾನಿಲ ಪದಗಳು.

ಲಲಿತದ 'ಸುರಪುರ ಯುಗಳಂ : ಬರೆ ಶಶಿ ದಿವಿಜಂ : ಖರಕರ ಸುರಯುಗ: ತೋಯಂ:' ವಿನ್ಯಾಸ ನಾಲ್ಕು ಮಾತ್ರೆಗಳದೇ.

ತನ್ವಿಯ(ಭತನಸ. ಭಭನಯ.) ಯತಿ 5 ರಲ್ಲಿ 12 ರಲ್ಲಿ ಪುನಃ 18 ರಲ್ಲಿ ಏಕೆ ಬೇಡ ? ಎರಡು ಮಂದಾನಿಲ ಖಂಡಗಳಿವೆ. ಒಟ್ಟಿನಲ್ಲಿ ಎಲ್ಲ 4 ಮಾತ್ರೆಗಳ ಸಾಲೂ 3+5, 4+4 ಇತ್ಯಾದಿ ಬರುತ್ತವೆ. 25 ರ ಕ್ರೌಂಚಪದ ಒಟ್ಟು 32 ಮಾತ್ರೆಗಳ ನಾಲ್ಕು ನಾಲ್ಕು ಮಾತ್ರಾಗಣಗಳದು. "ಶೀತಕ. ರೋರ್ವೀ. ವಾತಶ. ಶಾಂಕರ್. ಯುಗಮಿತ. ಸುರಪುರ. ನಿವಹದ. ಕಡೆಯೊಳ್" ಎಂಬಲ್ಲಿ 8 – 8 ಮಾತ್ರೆಗಳ ಖಂಡ ಹೇಗೆ ಒಡೆದುಕೊಳ್ಳುತ್ತವೆ ಎಂಬುದನ್ನು ನೋಡಬಹುದು.

26 ರಲ್ಲಿ 'ಭುಜಂಗವಿಜೃಂಭಿತ' ವೆಂದು ಒಂದು ಛಂದವಿದೆ. ಇದು 26 ಛಂದ ಗಳಲ್ಲಿ ಕಡೆಯದು.

"ಆದಿಕ್ಷ್ಮಾಯುಗ್ಮಾಕಾಶಾಗ್ರಂ : ಪುರಮಿತ ಸುರಪುರ ಸಹಿತಂ :
ಕೃಶಾನುಮರುಲ್ ಲ : ಗಂ"

ಎಂಬಲ್ಲಿ "ಆ ದಿ ಕ್ಷ್ಮಾ ಯು ಗ್ ಮಾಕಾಶಾ ಗ್ರಂ ಪುರಮಿಶ ಸುರಪುರ ಸಹಿತಂ" ಎಂಬಲ್ಲಿ ಯತಿನಿಂತು ಇನ್ನೊಂದು ಬಗೆಯ ಲಯದ ನಡೆ ಪಂಕ್ತಿಯನ್ನು ಮುಗಿಸುತ್ತದೆ. 8 – 8 ಮಾತ್ರೆಗಳ ಖಂಡ 2 ; ನಾಲ್ಕು ಮಾತ್ರೆಗಳ 3 ರ ಖಂಡ ಬಹು ಸಹಜವಾಗಿ ಪಂಕ್ತಿಯನ್ನು ಮುಗಿಸ ಬಲ್ಲದು. ಪಂಕ್ತಿಯನ್ನು ಬೆಳಗಿಸಬೇಕೆಂದು ಲಯದ ಬೇರೆ ಬಗೆಯ ನಡೆಯನ್ನು : ಉದಾ. ಕೃಶಾನು ಮರುಲ್ಲಗಂ ಎಂದು ಸೇರಿಸಿಕೊಂಡು ಸಾಲನ್ನು ಮಾಡುತ್ತಾರೆ. ಮೊದಲನೆಯ ಖಂಡವನ್ನೊ ಎರಡನೆಯ ದನ್ನೊ ಮೂರನೆಯದನ್ನೊ ಪುನರಾವೃತ್ತಿ ಮಾಡುತ್ತ ಈ ಸಾಲನ್ನು ಬೆಳಸುತ್ತ ಹೋಗಬಹುದು–ಸುಸ್ತಾಗುವವರೆಗೂ. ಇಲ್ಲಿಯೂ ಹಾಗೆಯೇ : 2ಯತಿ ಗಳ ನಡುವೆ ಇರುವ 2 ನೆಯ ಖಂಡವನ್ನು ಹೇಗೆ ಮೊದಲ ಭಾಗ ಗುರುಗಳು ತಮ್ಮ ಕಡೆಗೆ ಎಳೆದು ಹಿಡಿದುಕೊಳ್ಳುತ್ತವೆ ಎಂಬುದನ್ನು ನೋಡಬಹುದು. ಮುಂದಿನ ಒಂದು ಉದಾ. ವನಲತೆ ಎಂಬುದು. ಅದರಲ್ಲಿ 26 ಅಕ್ಷರಗಳು – ಎಲ್ಲವೂ ಲಘು – ಪಾದವನ್ನು ಮುಗಿಸಲು 2 ಗುರು ಹಾಕಿಬಂದಿವೆ. ಗುರು ಬಂದ ಹೊರತು ಪಾದಗಳು ಮುಗಿಯುವುದಿಲ್ಲವೇನೊ. ಈ ಛಂದಸ್ಸು ಎಷ್ಟು ಹಗುರ ವಾದ ಚಿಗರಿ ನಡೆಯಿಂದ ವರ್ಣನಾಕಾರ್ಯಗಳಿಗೆ ಒದಗಬಲ್ಲದು ಎಂಬುದನ್ನು ತೋರಿಸುತ್ತದೆ. ಕಡೆಯ ದೊಡ್ಡವೃತ್ತ ಮುನಿಮತಂ ಎಂಬುದು. ಅಂಶಗಣ ಏಳು ವಿಷ್ಣುವಿಂದ ರಚಿತವಾಗಿ ಒಂದು ಗುರುವಿಂದ ಮುಗಿಯುತ್ತದೆ. ಇಲ್ಲಿಯೂ ನಾಲ್ಕು ನಾಲ್ಕು ಮಾತ್ರೆಗಳ ಗಣಗಳದೇ ಓಟ ; ಎಂದರೆ ಇಷ್ಟರಲ್ಲಿಯೂ ಅಕ್ಷರ ಗಣವೆಂದು ಅದರ ಓಟಕ್ಕೆ ತಕ್ಕಂತೆ ಯತಿಸ್ಥಾನಗಳನ್ನು ನಿರ್ದೇಶಿಸಿ ಮೂರಕ್ಷರದ ಗಣಗಳಿಂದ ಅಳೆಯುತ್ತಿದ್ದ ರೀತಿ ಕನ್ನಡಕ್ಕೆ ಹೊಂದಿಕೊಳ್ಳುವಾಗ ಹೇಗೆ ಮಾತ್ರಾ ಗಣಗಳಾಗಿ ಒಡೆದುಕೊಂಡವು, ಅಥವಾ ಅಂಶಗಣದ ಧಾಟಿಗೆ ಒದಗಿ ಕನ್ನಡದ ಬಹುವಾಗಿ ನಾಲ್ಕು ಮಾತ್ರೆಗಳ ಅಥವಾ 8 ಮಾತ್ರೆಗಳ ಸಂಯುಕ್ತ ಖಂಡಗಳ – ದೇಶಿಗೆ ಹತ್ತಿರವಾದವು ಎಂಬುದನ್ನು ಕಾಣಬಹುದು.

[26 ರ ಉತ್ಕೃತಿಯಲ್ಲಿ 'ಶಂಭುನಟನ' ಎಂಬ ಒಂದನ್ನು ರಾಜಶೇಖರವಿಲಾಸ ದಲ್ಲಿ ಷಡಕ್ಷರನು ಉಪಯೋಗಿಸುತ್ತಾನೆ. ಛಂದೋಂಬುಧಿಗೆ ಇದು ಸೇರದು. ಇಲ್ಲಿನ ಐದು ಮಾತ್ರಾ ಗಣಗಳ ವಿನ್ಯಾಸ ಬಹು ಸೊಗಸಾಗಿರುತ್ತದೆ. ಎರಡ ನೆಯ ಅಕ್ಷರದ ಗುರು ಮೊದಲನೆಯ ಗಣದಲ್ಲಿ ಹೇಗೊ ಹಾಗೆಯೇ ಕಡೆಯವರೆಗೂ ಲಗದ ನಡೆಯುಳ್ಳದ್ದು ; ಜಗಣ ಲಕ್ಷಣದಿಂದ ತೊಡಗುವಂಥದು. ಸಾಲಿನ ಮುಕ್ತಾಯ ಒಂದು ಲಗದಿಂದ ಆಗುತ್ತದೆ. ಸ್ತೋತ್ರದ ಅಂಗವಾಗಿ ಬರು ವಾಗ ಇದರ ಲಯಗತಿ ಚೆನ್ನಾಗಿ ಹೊಂದುತ್ತದೆ.

ಲಯೋತ್ತರ ಎಂಬ ಛಂದಸ್ಸನ್ನು ನೋಡಿದರೆ ಅದರ ಕಡೆಯ ಖಂಡಗಳು ಹಿಂದಿನ ಅಂಥುದೇ ಒಂದು ಖಂಡದೊಡನೆ ಪುನರಾವೃತ್ತಿಗೊಳ್ಳುತ್ತವೆ. ಇಂಥು ದನ್ನು ಎಷ್ಟು ಬೇಕಾದರೂ ಸೇರಿಸಿಕೊಂಡು ಸಾಲಿನ ಲಂಬವನ್ನು ವೃದ್ಧಿಮಾಡಿಕೊಳ್ಳ ಬಹುದು. ಪಂಪಭಾರತದ ಮೊದಲನೆಯ ಆಶ್ವಾಸದ (Pp 11) ಮೂರು– ಮಾತ್ರೆಯದೊ ಅಥವಾ ಆರುಮಾತ್ರೆಯ ಸಂಯುಕ್ತಗಣವೊ ಆಗಿ ರಚಿತವಾದ ರಗಳೆ ಇಂಥವೇ ಕಡೆಕಡೆಯ ಖಂಡಗಳಲ್ಲಿ–'ಫಳಪ್ರಕೀರ್ಣ ತರುಗಳಿಂ। ಸುಮಪ್ರತಾ ನಲತೆಗಳಿಂ'ಎಂದು ಸೇರಿಸಿ ಬೆಳಸಿಕೊಂಡು ಹೋಗಬಹುದು ಎಂದೆ; ಒಂದು ಅಕ್ಷರದ ಅಥವಾ ಮಾತ್ರಾ ಚಿಟಿಕೆ ಹಾಕಿಕೊಂಡು ಹಿಂದಿನ ಪಾದದ ಕಡೆಯ ಖಂಡಗಳನ್ನು ಪುನರಾವೃತ್ತಿ ಮಾಡಿಕೊಳ್ಳುತ್ತ ಹೋಗಬಹುದು. ಮೂರನೆಯ ಆಶ್ವಾಸದಲ್ಲಿ ಎಂಟು ಮಾತ್ರೆ ಅಥವಾ ಹದಿನಾರು ಮಾತ್ರೆಗಳ ಗಣಗಳು ಖಂಡಗಳಾಗಿ ಒಡೆದು ಕೊಳ್ಳುತ್ತವೆ. "ಅಲ್ಲಿ ಸೊಗಯಿಸುವ...." ನಾಲ್ಕನೆಯ ಆಶ್ವಾಸದ (P. 9 2–93) ಮಟ್ಟರಗಳೆ ಎಂಬ ಹೆಸರಿನ ಛಂದಸ್ಸು ಹದಿನಾರು ಮಾತ್ರೆಗಳ ಜೊತೆಯಿಂದ ಬೆಸೆದುದಾಗಿ ಇಲ್ಲಿನ ಗಣಗಳ ನೆಯ್ಗೆಯೂ ಎಂಟು ಮಾತ್ರೆಗಳ ಖಂಡಗಳೂ ಒಡೆದು ಕೊಳ್ಳುವ ಚೆಲುವು ವಿಶೇಷ. "ರಸರಸದ ಭಾವಿ 2. 3. 3. ಮನೆಮನೆಗೆ ಬೇರೆ" – ಹಾಗೆಯೇ 'ಪೊಳಲಬೆಡಂಗಂ" ಎಂಬುದು 3. 5/4.4 ಒಟ್ಟು 8ಮಾತ್ರೆಯ ಖಂಡ ವಾದರೆ ಮುಂದಿನ ಭಾಗ ಮಾತ್ರಾಗಣದ ಲೆಕ್ಕದಂತೆ ಒಂಬತ್ತು ಮಾತ್ರೆಯದಾಗ ಬೇಗುತ್ತದೆ. ಬಹುಶಃ 'ಮೆಚಿ ಮೆಚ್ಚಿ ನೋಡಿ' ಎಂದು ಶ್ರೀಯುವರೆಂದಂತೆ ಹಾಡಿ ಕೊಳ್ಳುತ್ತಿದ್ದಿರಬೇಕು.]

ಇಷ್ಟೂ ಸಮವೃತ್ತಗಳ ವಿಚಾರ. ನಾಲ್ಕು ಪಾದದ ಅಸಮ ವೃತ್ತಗಳಲ್ಲಿ ಮೊದಲ ಪಾದ ದೊಡ್ಡದು, ಎರಡನೆಯದು ಚಿಕ್ಕದಾಗಿಯೊ ಮೊದಲನೆಯದು ಚಿಕ್ಕದು, ಎರಡನೆಯದು ದೊಡ್ಡದಾಗಿಯೊ (Paired) ಜತೆಗೂಡಿ ಒಂದು ಪ್ರಮಾಣಕ್ಕೆ ಹೊಂದಿಕೊಂಡು ರಚಿತವಾಗುತ್ತವೆ. ಅಲ್ಲಿ ದೊಡ್ಡದು ಮೊದಲಿರು ವಾಗ ಚಿಕ್ಕ ಎರಡನೆಯ ಸಾಲನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತದೆ. ಚಿಕ್ಕದು ಮೊದಲಿರುವಾಗ ದೊಡ್ಡದರ ಕಡೆ ಸೆಳೆದುಹೋಗುತ್ತದೆ. ಬಹುಶಃ ಇದೇ ಸೂತ್ರದ ಮೇಲೆಯೇ ಎರಡು ಸಣ್ಣ ಸಮಪಾದಗಳನ್ನು ಬೇರೆಬೇರೆಯಾಗಿ ಮಾಡಿ ಕೊಂಡು ಅವುಗಳಿಗೆ ಪ್ರಾಸಗಳನ್ನು ಕಾಣಿಸಿ, ಮೂರನೆಯ ಸಾಲು ಅದರ ಒಂದೂ ವರೆಯಷ್ಟು ಪ್ರಮಾಣ, ಆ ಭಾಗದ ಅಷ್ಟು ಭಾಗವನ್ನು ಮುಗಿಸುವುದಕ್ಕೆ ಒಂದು ಗುರುವಿನ ಮುಗಿವು ಸೇರಿಸಿ ಷಟ್ಪದಿಗಳು ಮುಂದೆ ಆದವು. ಅರ್ಧಸಮ ಪದ್ಯ ದಲ್ಲಿದ್ದ ತತ್ವವೇ ಇಲ್ಲಿಯೂ. ಅಲ್ಲಿ ಅಕ್ಷರಗಣವಾದ್ದರಿಂದ ಯತಿ ಕಾಣಬೇಕಾಗುತ್ತದೆ. ಮಾತ್ರಾಗಣಗಳು ಮುಗಿದಂತೆಲ್ಲ ಸಹಜಯತಿ ಬರುತ್ತದೆ. ಪ್ರಾಸ ಯಮಕಾದಿ

ಅಲಂಕರಣಗಳು ಹೆಚ್ಚು ಸುಲಭವಾಗಿ ಬರಬಲ್ಲವು. ಎರಡು ಸಾಲಿನ ಪದ್ಯಾರ್ಧ ವಾದರೆ ಮೂರು ಸಾಲಿನದೂ ಅಷ್ಟೇ. ಈಗಿನ ಕಾಲದ ಕೆಲವರು ಷಟ್ಪದಿಯ ಮೊದಲ ಎರಡು ಸಾಲನ್ನು ಒಂದೇ ಸಾಲಾಗಿಯೂ ಮೂರನೆಯದನ್ನು ಎರಡ ನೆಯದನ್ನಾಗಿಯೂ ಅಚ್ಚುಮಾಡಿ ತೋರಿಸುವುದುಂಟು; ಲಯದ ನಡೆಯಲ್ಲಿ ಹೆಚ್ಚು ವ್ಯತ್ಯಾಸ ಕಾಣಿಸುವುದಿಲ್ಲ. ಆಗ ಇದನ್ನು ಷಟ್ಪದಿಯೆಂದು ಕರೆಯ ಬೇಕಾದ್ದು ಕೂಡ ಇಲ್ಲ.*

ವಿಷಮವೃತ್ತವೆಂಬ ಇನ್ನೊಂದು ಜಾತಿಯನ್ನೂ ಛಂದಸ್ಸಿನಲ್ಲಿ ಹೇಳುತ್ತಾರೆ. ಸಮ, ಅರ್ಧ ಸಮ, ವಿಷಮ ಎಂದು ಹೇಳಿದರೆ ಸಮಸ್ತವವೂ ಮುಗಿಸಿದಂತಾ ಯಿತಲ್ಲ. ನಾಲ್ಕನೆಯದು ಎಲ್ಲಿ ಶಕ್ಯ ? ವಿಷಮದಲ್ಲಿ ಯಾವೊಂದು ಸಾಲೂ ಇಷ್ಟೇ ಪ್ರಮಾಣದ್ದಿರಬೇಕು, ಇಷ್ಟೇ ಗಣಗಳದ್ದಿರಬೇಕು ಎಂಬ ನಿಯಮವಿಲ್ಲ. ಬರೆವವನಿಗೆ ಸರ್ವಸ್ವಾತಂತ್ರ್ಯ. ಆದರೆ ಬಹುಶಃ ಲಯದ ನಡೆ ಒಂದು ಪಾದಕ್ಕೂ ಇನ್ನೊಂದು ಪಾದಕ್ಕೂ ಸಹಜವಾಗಿ ಹರಿದು ನಡೆದರೆ ಇದೂ ಚೆನ್ನಾಗುತ್ತದೆ. ಭಾರವಿ ಮುಂತಾದವರು ಕೆಲವನ್ನು ಪ್ರಯೋಗ ಮಾಡಿದ್ದಾರೆ. ಏಕೊ ಏನೊ ಒಂದು ಕ್ರಮಕ್ಕೆ ಒಗ್ಗದ ಈ ರಚನೆ ಕವಿಗಳಿಗೆ ಕಿವಿಗಳಿಗೆ ರುಚಿಸಿದ ಹಾಗೆ ಕಾಣಲಿಲ್ಲ.

ಈ ಎಲ್ಲ ಸಂಬಂಧಗಳಲ್ಲಿಯೂ ಪದ್ಯವೆಂದರೆ ನಾಲ್ಕುಪಾದ ಮಾತ್ರ; ಪಾದ ವೆಂದರೆ ಎಷ್ಟೆಷ್ಟು ಸಂಖ್ಯೆಯ ಅಕ್ಷರಗಳ ಲಂಬವುಳ್ಳದ್ದಾದರೂ ಮಾಡಿಕೊಳ್ಳ ಬಲ್ಲದು ಎಂದು ಭುಜವನ್ನು ವಿಸ್ತರಿಸುತ್ತ ಹೋದರು. ಎಷ್ಟುಪದಿ ಎಂದು ಬರೆ ದಾಗಲೂ ಒಂದೇ ತರಹದ ಅಷ್ಟು ಸಾಲುಗಳೇ. ಸಂಸ್ಕೃತದಲ್ಲಿ ದ್ವಿತೀಯಾಕ್ಷರ ಪ್ರಾಸವಾಗಲಿ ಅಂತ್ಯಪ್ರಾಸವಾಗಲಿ ಇಲ್ಲ. ಬೇಕಾದರೆ ಮಾಡಿಕೊಳ್ಳಬಹುದು; ಒಳ ಪ್ರಾಸ ಯಮಕಾದಿಗಳನ್ನು ನೆಯ್ದುಕೊಳ್ಳಬಹುದು; ಇಂತಹ ನಡೆಯನ್ನು ದುಡಿಸಿಕೊಂಡು ನೂರುಗಟ್ಟಳೆ ಸಾವಿರಗಟ್ಟಳೆ ಪಾದಗಳನ್ನು ಮಾಡಿ ಕೊಂಡಿದ್ದರೆ ನಿಡುಗವಿತೆಗೆ ಸಹಾಯವಾಗುವಂತಹ ಛಂದೋನಿರ್ಮಾಣ ಆಗಬಹು ದಿತ್ತು. ಹಾಗೆಯೇ ಅರ್ಧಸಮ ವೃತ್ತಗಳನ್ನೂ ವ್ಯತ್ಯಾಸ ಮಾಡಿಕೊಳ್ಳದೆ ಎಷ್ಟು ಸಂಖ್ಯೆಗೆ ಬೇಕಾದರೆ ಅಷ್ಟನ್ನು ಬೆಳಸಿಕೊಂಡು ಕಾವ್ಯರಚನೆ ಮಾಡಿದ್ದರೆ ಲಾಭಕರವಾಗುತ್ತಿತ್ತು ವಿಷಮ ಛಂದಸ್ಸನ್ನು ಬೆಳಸಿದ್ದಿದ್ದರೆ ಇಂದಿನ ಕಾಲದ ಎಲ್ಲ Free Verse ತತ್ವ ಸಿದ್ಧವಾಗಿರುತ್ತಿತ್ತು. ಅರ್ಥಕ್ಕೆ, ಭಾವಕ್ಕೆ, ಇತರ ಅವಧಾರಣೆಗೆ (Emphasisಗೆ), ಚಮತ್ಕಾರಗಳಿಗೆ ಬೇಕಾದಂತೆ ಸಾಲುಗಳ

*ಪ್ರಾಕೃತದ ಷಟ್ಪದ ಬೇರೆ ತೆರದ್ದು. ತೀ. ನಂ. ಶ್ರೀ. ಅವರು ಅಂಶಗಣದ್ದಕ್ಕೆ ಒಂದು ಹೆಸರನ್ನು ಮಾತ್ರಾಗಣದ್ದಕ್ಕೆ ಇನ್ನೊಂದನ್ನು ನಿರ್ದೇಶಿಸುತ್ತಾರೆ.

ಉದ್ದವನ್ನು ಹೆಚ್ಚು ಕಡಮೆ ಮಾಡಿಕೊಳ್ಳುವ ಅವಕಾಶ ಅನಂತವಾಗುತ್ತಿತ್ತು. ಸಮವೃತ್ತದಿಂದ ಸುಲಭವಾಗಿ ಅನಿಯತ ಯತಿಯುಳ್ಳ, ಅಂತ್ಯಪ್ರಾಸವುಳ್ಳ ಛಂದಸ್ಸನ್ನು ಮಾಡಿಕೊಳ್ಳಬಹುದಾಗಿದ್ದ ಅವಕಾಶ ಹೋಯಿತು. ನಡುವೆ ನಿಲುಗಡೆಗಳನ್ನೊ 10–20 ಸಾಲುಗಳ ನಡೆಯ ಅರ್ಥದ ಬೆಳಸನ್ನೊ ಮಾಡಿಕೊಳ್ಳುವ ಅವಕಾಶ ದೊರಕಿಸಿಕೊಳ್ಳಲಿಲ್ಲ. ಅದು ಈ ಕಾಲಕ್ಕೆ ಉಳಿದ ಪುಣ್ಯವಾಯಿತು. ಹಾಗೆಯೇ ವೇದದಲ್ಲಿ ಬರುವ ಗೀತ, ಉದ್ಗೀತ, ಪ್ರಗೀತ ಮುಂತಾದ ಛಂದೋಜಾತಿಗಳಲ್ಲಿ ಬೆಳೆದ ಸತೋಬೃಹತಿ, ಅತಿಶಕ್ವರಿ ಮುಂತಾದ ಮಿಶ್ರಜಾತಿಯ ಹಲವಾರು ಪಂಕ್ತಿಗಳನ್ನು ರಚಿಸಿ ಛಂದಸ್ಸಿನ ವಿಶೇಷ ಬಗೆಯ ಶಿಲ್ಪವನ್ನು 'ಶ್ರೀ' ಯವರು ಪ್ರಗಾಥದಲ್ಲಿ ಬಳಸಿರುವಂತೆ, ಮೇಳಗೀತಗಳಲ್ಲಿರುವಂತೆ ಬೆಳಸುವ ಅವಕಾಶವೂ ಸಂಸ್ಕೃತ ಮತ್ತು ಕನ್ನಡದ ಛಂದೋರಚನಕಾರರ ಮನಸ್ಸಿಗೆ ಸೊಗಸಲಿಲ್ಲ. ದಂಡಕಗಳಲ್ಲಿ ಬೆಳೆಯುವ ಲಯಖಂಡಗಳನ್ನು ವಿಷಮಸಂಖ್ಯೆಯವಾಗಿ ಬೆಳಸಲಾಗುತ್ತದೆ. ಅದನ್ನು ನಿಲ್ಲಿಸುವ ಚಾತುರಿ ವಿಶಿಷ್ಟವಾದ್ದು. ಅಲ್ಲಿ ಉರುಳು, ಓಟಗಳಿಗಿರುವ ಸೌಕರ್ಯಕ್ಕಿರುವಷ್ಟು ಹಲವು ಕಡೆ ನಿಲುಗಡೆಯ ಸೌಕರ್ಯ ಕಡಮೆ. ಲಯದ ಪುನರಾವೃತ್ತಿ ಕೆಲವೇಳೆ ಏಕತಾನದ್ದು. ಗಮಕಕ್ಕೆ ಸುಖ. ಏಕೊ ಏನೊ ನಮ್ಮವರು ವ್ಯಂಜನಕ್ಕೆ ಕೊಟ್ಟ ಪ್ರಾಶಸ್ತ್ಯವನ್ನು ಸ್ವರಗಳಿಗೆ ಕೊಡಲಿಲ್ಲ. ಸ್ವರ ವಿನ್ಯಾಸದಿಂದ ಬರುವ ಗಾನ ಮಾಧುರ್ಯ, ರಾಗ ರಂಜನೆ ಅಮೋಘವಾದ್ದು. ವ್ಯಂಜನಾಂತವಾದ ಪದಗಳು ಹೋಗಿ ಸ್ವರಾಂತವಾದಾಗ ಪ್ರಾಸಗಳ ಜೀವಗುಣ ಮಾರ್ಪಟ್ಟಿತು.

ಕನ್ನಡ ಛಂದಸ್ಸಿನ ಒಂದೇ ರಗಳೆಗೇ ಇಲ್ಲಿ ಉದಾಹರಣೆ ಇರುವುದು. ರಗಳೆ ಸಮಪಾದ ಉಳ್ಳದ್ದು. ರಗಳೆಯೊಂದಾಗಲೂ ದ್ವಿತೀಯಾಕ್ಷರ ಅಂತ್ಯಾಕ್ಷರ ಪ್ರಾಸದ ಒಂದು ನೇಮವನ್ನು ಇಟ್ಟುಕೊಂಡರು. ಇದು ಪ್ರಥಮತಃ ಅಂಶಗಣದ್ದೇ ವೃತ್ತ. ನಿಜವಾಗಿ ನೋಡಿದರೆ ಇದು ದ್ವಿಪದೀಮಾಲೆ. ಅದು ಕಾಣುವಂತೆ ಜೊತೆಪಾದಗಳಲ್ಲಿ ಅಂತ್ಯಪ್ರಾಸ ಒಂದೇ ಆಗಿರುತ್ತದೆ. ಮೂರು, ನಾಲ್ಕು, ಐದು ಮತ್ತು ಏಳು (3 + 4) ಮಾತ್ರಾಗಣಗಳ ಛಂದೋ ವಿನ್ಯಾಸ ಮೊದಲ ಮೂರು ರಗಳೆಗಳಿಗೆ, ಕಡೆಯದು ಷಟ್ಪದಿಗೆ ಉಪಯುಕ್ತವಾಗುತ್ತದೆ. ಮೂರು ಉತ್ಸಾಹ, ನಾಲ್ಕು ಮಂದಾನಿಲ, ಐದು ಲಲಿತ ಮಾತ್ರಾಗಣಗಳೆಂದು ಗೊತ್ತಾಗುತ್ತದೆ. ಭೋಗಷಟ್ಪದಿ ಮೂರು ಮಾತ್ರೆಯದು; ಪರಿವರ್ಧಿನಿಗೆ (ಶಿವ) ನಾಲ್ಕು; ಲಲಿತ (ಕುಸುಮಾಸ್ತ್ರ) ವಾರ್ಧಕಕ್ಕೆ ಐದು ಮೂಲವಾಗುತ್ತದೆ. 3–4 ವಿನ್ಯಾಸವುಳ್ಳ ಕೂಡುಗಣಗಳು ಎರಡರಂತೆ ಸಣ್ಣ ಸಣ್ಣ ಗಣಗಳಲ್ಲಿ ಸೇರುವ ಭಾಮಿನೀ ಷಟ್ಪದಿಗೆ ಆಧಾರವಾಗುತ್ತದೆ. ವಾರ್ಧಕದ ಐದು ಮಾತ್ರೆಗಳ ನಾಲ್ಕು ಗಣ, ನಾಲ್ಕು ಮಾತ್ರೆ

ಗಳ ಐದು ಗಣವಾಗಿ ಪರಿವರ್ತಿತವಾಗಿ ವಿರೇಶಚರಿತೆಯಲ್ಲಿ (ಉದ್ದಂಡ ಷಟ್ಪದಿ) ಬರುವುದನ್ನು ಕಾಣಬಹುದು. ಅಲ್ಲಿ ಪುನಃ ನಡೆಯ ತೊಡಕುಗಳುಂಟು ; ಸುಗಮತೆ ಸಾಲದು. ಕಥನ ಕಾರ್ಯಕ್ಕೆ ವರ್ಣನಾಕಾರ್ಯಕ್ಕೆ ಅಡಚಣೆ ತಂದದ್ದರಿಂದ ಬಹುಶಃ ಅದು ಅಷ್ಟು ಬಳಕೆಯಾಗಲಿಲ್ಲ. ಈ ರಗಳೆಗಳಲ್ಲಿ ಪರಿವರ್ಧಿನಿ ಒಂದರ ಓಟ, ಮಂದಾನಿಲ ಗಣದ ಷಟ್ಪದಿಗೆ ಬರುವಾಗ ಹೇಗೊ ಸುಗಮವಾದ ನಡೆಗೆ ಅಡ್ಡಿ ಉಂಟುಮಾಡಿದ್ದರಿಂದ ಆ ಷಟ್ಪದಿ ಕವಿಪ್ರಿಯವಾಗಲಿಲ್ಲ. ಕಪ್ಪೆ ಕುಪ್ಪಳಿಸುವ ಹಾಗಿರುತ್ತದೆ ಎಂದು ವೆಂಕಣ್ಣಯ್ಯನವರೆಂದುದುಂಟು. ಗಾಯಕರು ಕೆಲವರು ಮೆಚ್ಚಿಕೊಳ್ಳುತ್ತಾರೆ.

ಮಂದಾನಿಲ ರಗಳೆಗೆ ಮೂಲ ಯಾವುದಿರಬಹುದು ಎಂಬ ಪ್ರಶ್ನೆ ಎದ್ದಿದೆ. ಹಿಂದೆ ಹೇಳಿದಂತೆ ಎಂಟು ಅಕ್ಷರದ ಗುರುಗಣಗಳಿಂದ ಹದಿನಾರು ಲಘು ಅಕ್ಷರದ ವರೆಗೂ ಇದು ಹುಟ್ಟಿರಬಹುದು. ಯಾವುದೂ ಮೂಲವಾಗಬಹುದು. ಓಟ, ಲಯಕ್ರಮವನ್ನು ಸಾಧಿಸಿದ ಎಲ್ಲ ಮಾತ್ರಾ ಸಮಕಗಳೂ ಆಗಬಹುದು.* ಆದರೆ ಅವುಗಳಲ್ಲಿ ಕೆಲವು ಗುರುಲಘುಗಳ ನಯಗಳುಂಟು ; ನಿಯತಿಗಳುಂಟು. ಕಡೆಯ ಗಣ ಒಂದರಲ್ಲಿ ಜಗಣವಾಗುವುದು ಕನ್ನಡದ ನಡೆಗೆ ಸುಖವಾಗುವುದಿಲ್ಲ–ಎಂದು ಅದನ್ನು ಬೇರೆಯಾಗಿ ಒಡೆದುಕೊಳ್ಳುವ ಹಿತಯತ್ನ ಸೂಚಕವಾಗಿದೆ. ಪಜ್ಝಟಿಕಾ (ಮಟ್ಟರಗಳೆ), ಮಂದಾನಿಲ ಇವು ಬಳಕೆಯಲ್ಲಿವೆ. ನಾಲ್ಕು ನಾಲ್ಕನ್ನು 3+5 ರ ಸಂಯುಕ್ತ ಗಣವಾಗಿಕೂಡ ನಿಯಮಗೊಂಡ ಪ್ರಕಾರಗಳುಂಟು. ಮೊದಮೊದಲ ಚಂಪೂವನ್ನು ಬರೆದ ಕವಿಗಳಿಗೆ ಪ್ರಾಕೃತದಲ್ಲಿ ಬರೆದ ಕಾವ್ಯಗಳ ಪರಿಚಯ ಚೆನ್ನಾಗಿತ್ತು. ಅಲ್ಲಿನ ಸಾಹಿತ್ಯದಲ್ಲಿ ಬರುವ ಕಡವಕಗಳೆಂಬ ಒಂದು ಜಾತಿ ಬಹುಶಃ ಗೇಯಪ್ರಿಯವಾಗಿ ಈನಾಲ್ಕು ನಾಲ್ಕುಮಾತ್ರೆಗಳ ನಾಲ್ಕುಗಣಗಳ ಪ್ರಸ್ತಾರದಲ್ಲಿ ರಚಿತವಾಗಿರುತ್ತವೆ ; ಕಿವಿಗೆ ಹಿತವಾಗಿ ನುಡಿಯುತ್ತವೆ. ಆ ಸಂಸ್ಕಾರವುಳ್ಳ ಅನುಭವದಿಂದ ಪ್ರೇರಿತವಾದ ನಡೆ ನಮ್ಮ ಮಂದಾನಿಲ ರಗಳೆಯ ರಚನೆಯನ್ನು ಪ್ರಭಾವಗೊಳಿಸಿರಬಲ್ಲದು. ಆ ಕಡವಕಗಳಲ್ಲಿ ಆರಂಭದಲ್ಲೊಂದು, ಕಡೆಯಲ್ಲೊಂದು 'ಘತ್ತ' ವೊ 'ಧ್ರುವ'ವೊ ಹಾಕಿ ಮುಗಿಸುವ ಸಂಪ್ರದಾಯವಿತ್ತು; ಅದು ಇಲ್ಲಿ ಬರಲಿಲ್ಲ. ಅವನ್ನು

* ವಾನವಾಸಿಕ, ವಿಶ್ಲೋಷ, ಚಿತ್ರಾ, ಉಪಚಿತ್ರಾ, ಪಾದಾಕುಲಕ, ಮಾತ್ರಾಸಮಕಗಳೆಂಬವಿವೆ. ಅಪಭ್ರಂಶ ಮತ್ತು ಪ್ರಾಕೃತ ಛಂದಸ್ಸುಗಳಲ್ಲಿನಪ್ರಕಾರಗಳಿವೆ. 3-5 ಮಾತ್ರೆಗಳ ಖಂಡವೆಲ್ಲವನ್ನು ಬಿಟ್ಟು 4 ಮಾತ್ರೆಗಳ ಗಣಗಳನ್ನು ಆಯ್ದುಕೊಂಡರೆ ಈ ಲೆಕ್ಕಸರಿ ಬಂತು. ರಾಸವೆಂಬುದರಲ್ಲಿ 3 ಚತುರ್ಮಾತ್ರೆಗಳೂ 2 ದೀರ್ಘಗಳೂ ಇರುತ್ತವೆಯಾಗಿ ಅಲ್ಲಿಂದಲೂ ಈ ಛಂದಸ್ಸನ್ನು ರೂಢಿಸಿಕೊಳ್ಳಬಹುದು. ಸಂಸ್ಕೃತಕ್ಕೆ ಮಾತ್ರಾಗಣನೆ ಬಂದದ್ದೇ ಪ್ರಾಕೃತ ಛಂದದಿಂದ; ಗೇಯವಾಗಬೇಕಾದ ಕಾರಣದಿಂದ ಎಂದು ವೇಲಣಕರರು ಹೇಳುತ್ತಾರೆ.

ಮೊದಲಿಗೆ ಕಡೆಗೆ ಬಳಿಸಿಕೊಂಡಂತೆ ಪ್ರೊಡ್ಡಾರಾಧನದಲ್ಲಿ ಗಾಥಗಳನ್ನು ಬಳಸಿ ಕೊಳ್ಳುತ್ತಾರೆ. ರಗಳೆಯ ಕಾವ್ಯಗಳಲ್ಲಿ ಕಂದವನ್ನೊ ಬೇರೊಂದನ್ನೊ ದುಡಿಸು ತ್ತಾರೆ. ಷಟ್ಪದಿ ಕಾವ್ಯಗಳಲ್ಲಿ ಸೂಚನೆಯ ಪದ್ಯವಾಗಿ ಸಂಧಿಯ ಸಾರವನ್ನು ಅರ್ಧ ಅದೇ ಷಟ್ಪದಿಯ ತುಣುಕನ್ನೇ ಬಳಸುವುದು ವಾಡಿಕೆಯಾಗಿದೆ. ಇಪ್ಪತ್ತು ನಾಲ್ಕು ಅಕ್ಷರದ ತನ್ವಿಯನ್ನು ಹದಿನಾರು ಮಾತ್ರೆಗಳ ಎರಡು ಖಂಡಗಳ ಸಂಯೋ ಜನೆಯ ಪಾದವಾಗಿ ಎಣಿಸಲು ಅವಕಾಶವಿದೆ. ಉದಾ :

"ಮುಂದಿರೆ. ಬಾಣಾ. ದ್ರಿಗಳೆಡೆ. ಯತಿಗಳ್ : ನಿಂದಿರೆ.
ನೀನರಿ. ಯತಿಶಯ. ದಿಂದಂ."

ಅಥವಾ ದಿವಿಜಕಲ್ಪಲತೆ ಎಂಬ ಛಂದಸ್ಸಿನಲ್ಲಿ "ಪಾವಕಾಮರ ಗಣಾನಲಂನಗಂ" ಎಂದು ಕನ್ನಡದ್ದಲ್ಲದ ನಡೆಯಿರುವ ರಗಣದಿಂದ ಮುಗಿಯುವ ಛಂದಸ್ಸು ಇನ್ನೊಂದು ಬಗೆಯ ರಚನೆಯನ್ನು ನಿರ್ಮಾಣ ಮಾಡಬಹುದಿತ್ತು. ಇಲ್ಲಿ ನಾಲ್ಕು ಮಾತ್ರೆಗೆ ಬದಲಾಗಿ 3–5 = (ಅಥವಾ 5–3 ಮಾತ್ರೆಗಳುಳ್ಳ) ಎಂಟು ಮಾತ್ರೆಗಳ ಸಂಯುಕ್ತಗಣದ ಎರಡು ಖಂಡಗಳಾಗಿ ವಿನ್ಯಾಸಗೊಂಡು ಈ ಛಂದಸ್ಸು ಬೆಳೆಯ ಬಹುದಾಗಿತ್ತು. ಎಂಟು ಮಾತ್ರೆಯ (3+5) ಸಂಯುಕ್ತಗಣ ಒಂದು ಹೊಸ ಸಂಪ್ರದಾಯವಾಗಿ ಪ್ರಯೋಗವಾಗುವುದಕ್ಕೆ ಪುನಃ ಈ ಕಾಲದವರೆಗೆ ಛಂದಸ್ಸು ಕಾಯಿತು. *

ಮೊದಮೊದಲು ಒಂದು ಪದ್ಯದಲ್ಲಿ ಒಟ್ಟು ಇಷ್ಟು ಅಕ್ಷರಗಳು ಇರಬೇಕು, ಎಂದರೆ ಒಂದು ಪಾದಕ್ಕೆ ಇಷ್ಟು ಅಕ್ಷರ ಸಂಖ್ಯೆ ಎಂಬ ಎಣಿಕೆ ಮಾತ್ರ ಇತ್ತು. ಆಮೇಲೆ ಅವುಗಳಲ್ಲಿ ಯಾವುದು ನಿಯತವಾಗಿ ಲಘುವೊ ಗುರುವೊ ಆಗಿರಬೇಕು ಎಂಬ ವಿವೇಚನೆ ಉಂಟಾಯಿತು. ಆಮೇಲೆ ಪಾದಾಂತ್ಯ ಸುಮಾರು ಯಾವ ರೀತಿ ಇರಬೇಕು ಎಂದೂ ಹನ್ನೊಂದು ಅಕ್ಷರಕ್ಕೆ ಮೇಲ್ಪಟ್ಟ ಛಂದಸ್ಸುಗಳಲ್ಲಿ ಯತಿ ಎಲ್ಲೆಲ್ಲಿ ಬರುತ್ತದೆ ಎಂದೂ ನಿಯಮವಾಯಿತು. ತ್ರಿಕಗಣನೆ ಖಚಿತವಾಗಿ ಏರ್ಪಟ್ಟು ಪಾದ ಗಳನ್ನು ಅಳೆವಾಗ ಗಣಗಳ–ಎಂದರೆ ಅಕ್ಷರಗಳ ಆನುಪೂರ್ವಿ ಇಂಥದೇ, ಹೀಗೇ ಆಗಬೇಕೆಂಬ ನಿರ್ಬಂಧವಾಯಿತು. ಇದು ಸಮವೃತ್ತಪ್ರಕರಣ ಎಂದೆ. ಮಾತ್ರಾಗಣ ಬಂದಾಗ ಇಷ್ಟಿಷ್ಟು ಮಾತ್ರೆಗಳ ಸಂಖ್ಯೆ ಇದ್ದರಾಯಿತು ಎಂಬ ಕಾಲದಿಂದ ಮಾತ್ರಾ ಗಣಗಳ ಎಣಿಕೆ ವಿಶಿಷ್ಟವಾಯಿತು. ಇವು 3–4–5 ಮಾತ್ರೆಗಳುಳ್ಳ ಗಣಗಳ ರಚನೆಗೆ ಪ್ರಾಶಸ್ತ್ಯವನ್ನು ತಂದಿತು. ಪ್ರಾಕೃತದವರು ಎರಡರಿಂದ ಆರಂಭಮಾಡಿ

* ಇಂದು 8ನ್ನು ಬಗೆಬಗೆ ಆಗಿ ಒಡೆದುಕೊಳ್ಳಲು ಶಕ್ಯ. ಕಿವಿಗೆ ಹಿತವಾದರೆ; ನಾಲಿಗೆ ಸುಖ ವಾಗಿ ನುಡಿದರೆ; ಲಯ ಖಂಡಗಳು ಸುರಚಿತವಾದರೆ.

ಎಂಟರವರೆಗೂ ಗಣಗಳು ಇವೆಯೆಂದು ವಿವೇಚಿಸುತ್ತಾರೆ. ಗಣವಿಭಾಗ ಮಾಡು ವಾಗ ಹದಿನೆಂಟು ಬಗೆಯ ಒಟ್ಟು ಗಣಗಳು ಎಂದು ಜನಾಶ್ರಯೀ ಛಂದಸ್ಸಿನ ಕರ್ತೃ ತಿಳಿಸಿ ತನ್ನದೇ ಆದ ರೀತಿಯಲ್ಲಿ ಆ ಗಣಗಳ ಹೆಸರನ್ನು ಹೇಳುವುದಲ್ಲದೆ ನಕಾರದ ಬೇರೆ ಬೇರೆ ಸ್ವರಸಂಯೋಜನದಿಂದ (ನ, ನೃ, ನ್ನ(ನನ)ನೇ, ನೌ ಎಂಬಂತೆ) ಈ ಸ್ವರ ಎಷ್ಟನೆಯದೊ ಆ ಸಂಖ್ಯೆಯನ್ನು ಸೂಚಿಸುವುದು ಮಾರ್ಗವಾಯಿತು.† ಎರಡು ಮಾತ್ರೆಗಳ ಗಣ ಬಹು ಸಣ್ಣದು. ಒಂದು ಮಾತ್ರೆಗೆ ಇನ್ನೊಂದು ಜೋಡಿ ಎಂದಾಗ ಇದು ಗಣವಾಗಬಹುದು. ಆದರೆ ಅದಕ್ಕೆ ಸ್ತಿಮಿತತೆ, ಸೌಷ್ಠವ ಮೂರ ನೆಯ ಒಂದು ಮಾತ್ರೆ ಬಂದಾಗ ಹೆಚ್ಚು ಗಟ್ಟಿಯಾದ ಅಂಗವಾಗಿ ಗಣವಾಗಬಲ್ಲ ದಾದ್ದರಿಂದ ಎರಡು ಮಾತ್ರೆಗಳ ಗಣವನ್ನು ನಮ್ಮವರು ಹೆಚ್ಚಾಗಿ ಬಳಸಲಿಲ್ಲ. ಹಾಗೆ ನೋಡಿದರೆ ಕಟ್ಟಾ ಮೂಲಗಣಗಳೆಂದರೆ 2–3 ಮಾತ್ರೆಗಳವು ಮಾತ್ರ. ನಾಲ್ಕ ರಿಂದ ಮುಂದಿನ ಮಾತ್ರೆಗಳ ಗಣಗಳು ಈ 2–3 ರ ಗುಣಕಗಳು. ಒಂದು ಸಾಲು ಪದ್ಯ ಹೇಗಾಗಲಾರದೊ ಹಾಗೇ ಒಂದು ಅಕ್ಷರವು ಗಣವಾಗದು.* 2 + 2 ಸೇರಿ ನಾಲ್ಕು 2 + 3 ಅಥವಾ 3 + 2 ಸೇರಿ ಐದು ; 3 + 3 ಅಥವಾ 2.2.2 ಸೇರಿ ಆರು; 7–8 ಬಗೆಬಗೆಯ ಸಂಯೋಜನೆಗಳಿಂದ ಸಂಯುಕ್ತಗಣಗಳಾಗಬಹುದು. ಎಂಟಕ್ಕಿಂತ ಹೆಚ್ಚಾಗಿ ಘಟಕ ಗಳಾಗುವುದು ಕೃತಕ; – ಅವು ಸಣ್ಣ ಸಣ್ಣ ಅಥವಾ ಸಂಯುಕ್ತವಾಗಿ ಒಡೆದುಕೊಳ್ಳುತ್ತವೆಯಾಗಿ. ಆದುದರಿಂದ 7 ರಲ್ಲಿ 3–4, ನಾಲ್ಕರ ಅಂಗಗಳು ಐದರವು ಹೇಗೊ, – ಸಾಮಾನ್ಯವಾಗಿ 4-3 ರ ನಡೆ ಬಳಕೆಯಾಗಲಿಲ್ಲ. 8 ರದು ಹೇಗೆ ವಿಭಕ್ತವಾಗುವುದು ಎಂಬುದನ್ನು ತಿಳಿಸಿದೆ. 6-7-8 ರ ಸಂಯುಕ್ತ ಮಾತ್ರಾ ಗಣರಚನೆ ಬಹುದೊಡ್ಡ ಛಂದೋ ಕಾರ್ಯಗಳನ್ನು ನಿರ್ವಹಿಸಬಲ್ಲದು. ಅವು ನಮ್ಮ ಕಾಲದಲ್ಲಿ ವಿಶೇಷವಾಗಿ ಬಳಕೆಗೆ ಬರುತ್ತಿವೆ. ಎಲ್ಲಿ ಹೋಗಿ ಭಾಮಿನೀ ಷಟ್ಪದಿ ಯಲ್ಲಿ ಮಾತ್ರ 3 – 4ರ ಸಂಯುಕ್ತ ಗಣಗಳ ಒಂದು ಜೊತೆ ಸಣ್ಣ ಸಾಲಿನ ರಚನೆ ಷಟ್ಪದಿಯಲ್ಲಿ 1 – 2 – 4 – 5 ನೆಯ ಪಂಕ್ತಿಗಳಲ್ಲಿ ಸೇರಿಕೊಂಡು ಬರುತ್ತವೆ. 3 – 6 ಅವುಗಳ $1\frac{1}{2} + 1$ ಗು. ಪ್ರಮಾಣದವು. ಇಲ್ಲಿನ ವೈವಿಧ್ಯ, ಧಾರಾಳ, ಸ್ವರ ವ್ಯಂಜನ ವಿಲಾಸ, ವಿಷಮ–ಸಮ ಮಾತ್ರಾಗಣಗಳ ಜೊತೆ ಓಟ ಅತ್ಯದ್ಭುತವಾದ ಮೋಹಕವಾದ ಛಂದೋರಚನೆ, ಅದರಿಂದ ಉಂಟಾಗುವ ಸಂತೋಷವನ್ನು ಹೆಚ್ಚಿಸ ಬಲ್ಲವು. 5 ಮಾತ್ರೆಗಳ ವಾರ್ಧಕದ್ದು ಶ್ರೀಮದ್ಗಾಂಭೀರ್ಯ ; ಪಟ್ಟ ಕಟ್ಟಿದ

† ಅನುಬಂಧ ನೋಡಿ.

*ಬಂಗಾಳಿ ಒಬ್ಬನಿರುವಾಗ ಒಬ್ಬವ್ಯಕ್ತಿ ಕವಿ ; ಇಬ್ಬರಾದರೆ ಒಂದು ಪಕ್ಷ. ಮೂವರಾದರೆ ಎರಡು ಪಕ್ಷ ಎನ್ನುತ್ತಾರಂತೆ. ಹಾಗೆ ನಮ್ಮ ಗಣಗುಣ. ಹಲವು ಪ್ರಾಂತಗಳವರಿಗೆ ಈ ಮಾತು ಹೇಳಬಹುದು.

ಆನೆಯಂತೆ ತುಂಬಾ ಅಭಿಮಾನಿಶಾಲಿಯಾಗಿ ನಡೆಯುತ್ತದೆ. ಇದಕ್ಕೆ ತೀನಿ ಒದಗಿಸುವುದು ಕಷ್ಟವಾದರೂ ಕನ್ನಡದ ವಿಷ್ಣುಗಣವೂ ಹೆಚ್ಚಿನದೂ ಸುಮಾರು 5 ಮಾತ್ರೆಗಳ ಗಣವಾಗಿ ಸಂಘಟಿಸಿದೆ. ಇಂದಿನ ಸರಳ ರಗಳೆಯಲ್ಲಿ ಇತರ ದೇವತೆಗಳೆಲ್ಲ ಮರೆಯಾಗಿ ಕಡೆಗೆ,ಬಹುವಾಗಿ ವಿಷ್ಣುಪ್ರಭಾವ ಭಾರತ ಸಂಸ್ಕೃತಿಯ ಸಂಘಟನೆಯಲ್ಲಿಯೇ ಪ್ರಧಾನವಾದಂತೆ ನಮ್ಮ ಛಂದಸ್ಸಿನಲ್ಲಿಯೂ ಪ್ರಬಲಿಸಿತು. ನಾಲ್ಕು ಐದು ಮಾತ್ರೆಗಳ ಗಣ ವಿಧವಿಧವಾದ ಲಾವಣ್ಯಗಳನ್ನು ಸಾಧಿಸಿದೆ.

*

ಕನ್ನಡಕ್ಕೆ ವಿಶೇಷವಾದ್ದು ಇನ್ನೊಂದು ಜಾತಿಯ ಗಣರಚನೆ. ಇದನ್ನು ದೇವಗಣ ಅಥವಾ ಅಂಶಗಣ ಎನ್ನುತ್ತಾರೆ. ಇದು ತ್ರಿಪದಿಗಳಲ್ಲಿಯೂ ಏಳೆ, ಗೀತಿಕೆ (?), ಮದನವತಿ, ಅಕ್ಕರ, ಛಂದೋವತಂಸ ಆಮೇಲೆ ಸಾಂಗತ್ಯ ಮುಂತಾದ ಎಲ್ಲ ಅಚ್ಚ ಕನ್ನಡ ಪ್ರಕಾರಗಳಿಗೂ ಮೂಲವಾಗುತ್ತದೆ. ಬಹುಶಃ ದಕ್ಷಿಣದ ದ್ರಾವಿಡ ಭಾಷೆಗಳ ಎಲ್ಲ ಛಂದಸ್ಸಿಗೂ ಇವು ಮೂಲಾಂಗಗಳಾಗುತ್ತವೆ. ತಮಿಳಿನ ಕೆಲವು ಛಂದಃ ಪ್ರಕಾರಗಳಲ್ಲಿ ಮೊದಲನೆಯ ಗುರ್ವಂಶ ಮಾತ್ರ ಒಡೆದು ಎರಡು ಲಘುಗಳಾಗುವುದು ಮಾತ್ರವಲ್ಲ; ಗಣದ ಯಾವ ಅಂಶವಾದರೂ 2 – 3 ಲಘ್ವಂಶಗಳಾಗಿ ಒಡೆದುಕೊಳಲುಳ್ಳವು. ಈ ಅಕ್ಷರ ಸಂಯೋಜನೆ ಬಹುಮಟ್ಟಿಗೆ ಆ ಛಂದಸ್ಸಿನ ಓಟಕ್ಕೆ ಹೊಂದುತ್ತದೆ. ಇದನ್ನು ಶ್ರೀಯವರು ಉದಾಹರಿಸಿದ್ದಾರೆ. ಇವೆಲ್ಲ ಹಾಡುಗಳಾಗಿ ಹಾಡತಕ್ಕವು; ಛಂದೋನಿಯಮಕ್ಕಿಂತ ಒಂದು ಸರಳ ತಾಳ ನಿಯಮವೇ ಇಲ್ಲಿ ಹೆಚ್ಚು ಬಳಕೆಯಲ್ಲಿ ಇದ್ದಿರಬೇಕು. ಹಾಡೆಂದಾಗ ಒಂದು ಲಯ ಖಂಡದಲ್ಲಿ ಅಥವಾ ಗಣದಲ್ಲಿ ಹ್ರಸ್ವವನ್ನು ದೀರ್ಘವಾಗಿಯೂ ದೀರ್ಘವನ್ನು ಹ್ರಸ್ವವಾಗಿಯೂ ಉಚ್ಚರಿಸುವುದುಂಟು. ಸಂಯುಕ್ತಾಕ್ಷರಗಳನ್ನು ಒಡೆದು ನುಣುಪು ಮಾಡಿಕೊಳ್ಳುವ ಸೌಕರ್ಯ ಒದಗುತ್ತದೆ.

ಒಂದು ಗಣಾಂಶಕ್ಕೆ ಅಧಿಕ ಸಂಖ್ಯೆಯ ಅಥವಾ ಕಡಮೆ ಸಂಖ್ಯೆಯ ಅಕ್ಷರಗಳನ್ನು ಹಾಕಿಕೊಂಡೊ ಶೀಘ್ರವಾಗಿಯೊ ನುಡಿಯುವುದು ಕಾಣುತ್ತದೆ. ಸೂತ್ರಲಕ್ಷಣದಂತಿರುವ ಇದು ನಾಗವರ್ಮನಲ್ಲಿ ಬ್ರಹ್ಮ–ವಿಷ್ಣು–ರುದ್ರ ಎಂಬ ಗಣಗಳಾಗುತ್ತವೆ. ಈ ಗಣಗಳಲ್ಲಿ ಮೊದಲಂಶ ಗುರ್ವಂಶದಂತಿದ್ದರೆ ಬ್ರಹ್ಮಕ್ಕೆ ಇನ್ನೊಂದಂಶ ಮಾತ್ರ ಸೇರುತ್ತದೆ. ಲಘುವಾದರೆ ಇನ್ನೊಂದಾಗಬೇಕು; ಎಂದರೆ ಒಂದು ಗುರು ಅಥವಾ ಎರಡು ಲಘು ಮೊದಲಂಶ – ಎಂಬುದು ಸಂಜ್ಞೆ. ಎಲ್ಲ ಗಣಗಳಲ್ಲಿಯೂ ಸೇರುವ ಅಂಶ ಗುರುವೊ ಲಘುವೊ ಆಗಬೇಕೆಂಬ ನಿಯಮವಿಲ್ಲ. ಇಲ್ಲಿ ಗುರು ಲಘು ಎಂಬ ಮಾತೇ ಅನಗತ್ಯ; ಅಂಶ ಎಂದರೆ ಸರಿ. ವಿಷ್ಣುವಿಗೆ ಮೂಲದ ಜೊತೆಗೆ ಎರಡು

ಅಂಶ ಸೇರುತ್ತವೆ ; ರುದ್ರಕ್ಕೆ ಮೂರು ; ಅಂಶದ ಮೊದಲವು ಎರಡು ಲಘು ಗಳವಾದರೆ ಮೂರು ಅಕ್ಷರ ಬ್ರಹ್ಮಕ್ಕೆ ; ವಿಷ್ಣುವಿಗೆ ನಾಲ್ಕು ; ಐದು ರುದ್ರಕ್ಕೆ ಆಗುತ್ತದೆ. ಇವನ್ನು ಅಂಶಗಳಾಗಿಯೇ ನುಡಿದು ಮಾಡಿದ ಛಂದಸ್ಸುಗಳು ದೇಶಿ ಛಂದಸ್ಸಿನಲ್ಲಿ ಮೂಲ. ಇವನ್ನು ಜನಪದ ಸಾಹಿತ್ಯ ವಿಶೇಷವಾಗಿ ಬಳಸುತ್ತದೆ. ಇದರ ಲಯ ತುಂಬಾ ಸೊಗಸಾಗಿರುವ ಜೊತೆಗೆ ಇದಕ್ಕೆ ಗಣ ಮುಗಿದ ಮೇಲೆ ಒಂದು ತಾಳದ ಪೆಟ್ಟಿನಂತೆ ಮಾತ್ರಾ ಗಣಗಳಲ್ಲಿಯಂತೆಯೇ ಘಟಕಗಳು ಏರ್ಪಡುತ್ತವೆ. ಕೆಲವು ಕಾಲವಾದ ಮೇಲೆ ಈ ಅಂಶ ಲಕ್ಷಣ ಹೋಗಿ ಇವೆಲ್ಲಾ ಮಾತ್ರಾಗಣನೆಗೆ ತಿರುಗಿ ಮಾತ್ರಾಗಣಗಳಾಗುವುದು ರೂಢಿಯಾಯಿತು. ಹೀಗೆ 3 – 4 ಮಾತ್ರೆಗಳ ಖಂಡ ಬ್ರಹ್ಮ; 4 – 6 ಮಾತ್ರೆಗಳ ಗಣನೆ ವಿಷ್ಣು; ಐದರಿಂದ ಎಂಟು ಮಾತ್ರೆಗಳ ಅಂಶ ರುದ್ರ ಕ್ಕಾಯಿತು. ರುದ್ರ ಸಾಲಿನಕಡೆಗೆ ಬರುವುದು ಅಭ್ಯಾಸವಾಗಿರಬೇಕು. ರುದ್ರ ಏಳು ಮಾತ್ರೆ ಗಳ ಗಣವಾಗಿ ಭಾಮಿನೀವಿಲಾಸಕ್ಕೆ ಎಡೆ ಕೊಟ್ಟಿರಬೇಕು ; ಅಥವಾ ಒಂದು ವಿಷ್ಣು ಗಣ + ಒಂದು ಗುರುವಾಗಿ ರೂಪತಾಳಿರಬಲ್ಲದು; ಹಾಗೆ ಅಳಿವವರುಂಟು. ಜನ ಪದ ಸಾಹಿತ್ಯದಲ್ಲಿ, ಬರೆದುಬಂದ ಶಾಸನಗಳಲ್ಲಿ, ಕಾವ್ಯಗಳಲ್ಲಿ ಕೂಡ ಅಲ್ಲಲ್ಲಿ ನಮಗೆ ತ್ರಿಪದಿಗಳು ಸಿಕ್ಕುತ್ತವೆ. ಇವು ಅಚ್ಚ ಕನ್ನಡ ಛಂದಸ್ಸು. ಇವು ಮೊದಮೊದಲು ಅಂಶಗಣವೇ ರಚಕಾಂಶವಾಗಿ ಉಳ್ಳವು. ಕಾಲಕ್ರಮದಲ್ಲಿ ಮಾತ್ರಾಗಣಗಳಿಗೆ ಮಾರ್ಪಟ್ಟು ಯಾಂತ್ರಿಕವಾದವು. ಸರ್ವಜ್ಞನ ಕಾಲಕ್ಕೆ ಪೂರ್ತಿ ಹಾಗಾಗಿ ಕಡೆಗೆ ಮಾತ್ರಾಗಣದ ಸಾಲುಗಳು 3 – 4 – 5 ರ ಮತ್ತು 3 – 4 ರ ಅಳತೆಗೆ ಹೊಂದಿ ಕೊಂಡಿವೆ. ಆಂಧ್ರರು ಸೂರ್ಯ, ಇಂದ್ರ, ಚಂದ್ರ ಎಂದು ಈ ಗಣಗಳಿಗೆ ಹೆಸರು ಕೊಟ್ಟು ಚಂದ್ರನಿಗೆ ಹಿರಿಮೆಯನ್ನು ಕೊಟ್ಟಿದ್ದಾರೆ. ಜೈನ ಸಂಪ್ರದಾಯದವರಿಗೂ ಈ ಹೆಸರು ಹೆಚ್ಚು ಪ್ರಿಯವಾಗಿರಬೇಕು. ಈ ಗಣಗಳನ್ನು ರ – ಲ – ಧ ಎಂಬ ಸಂಜ್ಞೆಯಲ್ಲಿ ಜಯಕೀರ್ತಿ ರತಿ – ಮದನ – ಶರ ಎಂದು ಸಾಂಕೇತಿಕವಾಗಿ ಕರೆಯು ತ್ತಾನೆ.* ರತ್ನಮಂಜೂಷದವನು 'ಸ್ವರೋಽಸ್ತ್ಯಃ ತದಂತಸ್ಯ । ವ್ಯಂಜನಂ ಚ – ಎನ್ನುತ್ತಾನೆ. ಈ ಹೆಸರುಗಳಲ್ಲಿ ಯಾವ ಯಾವಕ್ಕೆ ಎಷ್ಟು ಬೇರೆ ಬೇರೆ ಹೆಸರು ಗಳಿವೆಯೊ ಅವುಗಳಿಂದ ನಿರ್ದೇಶಿಸುವ ವಾಡಿಕೆ ಉಂಟು. ಉದಾ. ಬ್ರಹ್ಮವನ್ನು ಅಜವೆನ್ನಬಹುದು ; ವಿಷ್ಣುವನ್ನು ಹರಿಯೆಂದೊ ಇನ್ನಾವುದೊ ವಿಷ್ಣುವಿನ ಹೆಸ ರಿಂದಲೊ ಕರೆಯುಬಹುದು ; ರುದ್ರವನ್ನು ಪರ್ಯಾಯನಾಮಗಳಿಂದ ಕರೆಯ ಬಹುದು. ಹಾಗೆಯೇ ರತಿಮದನಶರಗಳನ್ನು. ಯತಿಸ್ಥಾನವನ್ನು ಹೇಳುವಾಗ ಯಾವ

---

* ಅನುಬಂಧ ನೋಡಿ.

ಸಂಖ್ಯೆಗೆ ಯತಿ ಬರುತ್ತದೊ ಅದನ್ನು ಗ್ರಹ ಎಂದು ಒಂಬತ್ತಕ್ಕೊ, ರುದ್ರ ಎಂದು ಹನ್ನೊಂದಕ್ಕೊ, ಸೂರ್ಯ ಎಂದು ಹನ್ನೆರಡಕ್ಕೊ, ಋತು ಎಂದು ಆರಕ್ಕೊ, ಕರ ಎಂದು ಎರಡಕ್ಕೊ ಬಗೆಬಗೆಯಾಗಿ ವರ್ಣಿಸುವ ವಾಡಿಕೆ ಉಂಟು.

ತ್ರಿಪದಿ ಮೂರು ಸಾಲಿನದು ಎಂದರೂ ನಿಜವಾಗಿ ಇದು ಒಂದು ಅರ್ಧಸಮ ಅಂಶ ಗಣಗಳ ಪದ್ಯರೂಪ. ಅದರಲ್ಲಿ ಮೊದಲ ಪಾದ ನಾಲ್ಕು ಗಣಗಳದ್ದು. ಆ ನಾಲ್ಕು ಪಾದದ ರಚನೆಯಲ್ಲಿ ಎರಡೆರಡು ಗಣಗಳ ಸಮಪರಿಮಾಣವುಳ್ಳದಾಗಿರುತ್ತದೆ. ಅದನ್ನು ವಡಿಯೊ ಪ್ರಾಸವೊ ನಿರ್ದೇಶಿಸುತ್ತದೆ. ಎರಡನೆಯ ಪಾದ ಸಣ್ಣದು. ಅದರ ರಚನೆ ಮೇಲಿನದರಂಥಲ್ಲ. ಈ ಎರಡೇ ಮೂಲಾಂಶ, ಒಟ್ಟು ಏಳು ಗಣಗಳು ಉಳ್ಳ ಈ ಛಂದ ಏಳೆ. ಇಷ್ಟನ್ನೇ ಅನೇಕ ಜಾನಪದ ಗೀತೆಗಳೂ ರಚನೆಗಳೂ ಕಥೆ, ವರ್ಣನೆ, ನೃತ್ಯ ಮುಂತಾದವೂ ಬಳಸಿಕೊಳ್ಳುತ್ತವೆ (ಕುಜಿಳ್ ಅಲ್ಲಿನಂತೆ). ಆರನೆಯ ಗಣದಲ್ಲಿಯೂ ಹತ್ತನೆಯ ಗಣದಲ್ಲಿಯೂ ಬ್ರಹ್ಮಗಣ ಬರುತ್ತದೆ ಎಂದು ಸೂತ್ರವಿದೆ. ಉಳಿದವೆಲ್ಲ ಸಾಮಾನ್ಯವಾಗಿ ವಿಷ್ಣು ಗಣ. ಎರಡನೆಯ ಸಣ್ಣ ಪಾದದಲ್ಲಿ ಮೂರನೆಯ ಗಣ ಒಂದು ಬ್ರಹ್ಮ ಆದಮೇಲೆ ಯತಿ ಪಡೆದು ಒಂದಂಶ ಹೆಚ್ಚಿಗಾಗುತ್ತದೆ. ಅದನ್ನು ಒಟ್ಟು ಸೇರಿಸಿ ಹೊಸದಾಗಿ ಒಂದು ಗಣ ಸೊಲ್ಲನ್ನು ಮೂರನೆಯಪಾದವಾಗಿ ಮಾಡಿಕೊಂಡು ಇದನ್ನು ಮೊದಲ ಪಾದದಷ್ಟರ ಪ್ರಮಾಣ ಮಾಡಿಕೊಂಡು ಎರಡನೆಯ ಪಾದವಾಗಿದ್ದಂತಹ ಪಾದ ಇನ್ನೊಂದನ್ನು ರಚಿಸಿ ಮುಗಿಸುವುದು ವಾಡಿಕೆ. ಆಗ ಅದು ಒಂದು ಅರ್ಧಸಮ ಅಂಶ ವೃತ್ತವಾಗುತ್ತದೆ. ಉದಾ:

ಕಟ್ಟಿದ : ಸಿಂಘಮುನ್ : ಕೆಟ್ಟೊದೇ : ನೆಮಗೆಂದು
ಬಿಟ್ಟವೋಲ್ : ಕಲಿಗೆ : ವಿಪರೀತಂ ॥ ಗಹಿತರ್ಕಳ್
ಕೊಟ್ಟರ್‌ಮೇಣ್ : ಸತ್ತು : ರವಿಚಾರಂ ॥

ಇದು ಬಹು ಪ್ರಾಚೀನಕಾಲದಿಂದ ನಮ್ಮಲ್ಲಿ ಬಂದಿರುವ ಛಂದಸ್ಸು. ಜನಪದ ಗೀತದಲ್ಲಿ ತ್ರಿಪದಿ ಮಾಡದ ಕೆಲಸವೇ ಇಲ್ಲ. ಇದರ ಒಂದು ವಿನ್ಯಾಸರೂಪ ಹೀಗಾಗಬಲ್ಲದು.

ಹೊಸ ಅಂಶಖಂಡಗಳು ಇಲ್ಲಿ ಹೇಗೆ ಸೇರುತ್ತವೆ ನೋಡಬೇಕು:

ಒಕ್ಕಲ : ಗೇರ್ಯಾಗ : ಮಳೆರಾಜ ॥ ಮಕ್ಕಳ : ಮಾರ್ಯಾರ : ಮಳೆರಾಜ
ಮಕ್ಕಳಮಾರಿ : ರೊಕ್ಕ : ಹಿಡಕೊಂಡು
ಅಕ್ಕಂತ : ತಿರುಗ್ಯಾರು ಮಳೆರಾಜ.

ಗಂಡುಳ್ಳ : ಬಾಲೇರು : ಮಳೆರಾಜ ॥ ಪೇಟೆಗೆ : ಹೊಂಟರು : ಮಳೆರಾಜ
ಗಂಡುಳ್ಳ : ಬಾಲೇರು : ಪೇಟೆಗೆ : ಹೊಂಟರು : ಎಂಥ
ಅನ್ಯಾದ : ಕಾಲ : ಬಂದು : ಮಳೆರಾಜ.

ಬಡವರು : ಸತ್ತರೆ : ಸುಡುವುದಕೆ : ಸೌದಿಲ್ಲ
ಒಡಲ ಕಿ : ಚ್ಚಿನಲೆ : ಹೆಣ ಬೆಂದೊ ॥ ದೇವರೆ
ಬಡವರಿಗೆ : ಸಾವ : ಕೊಡಬ್ಯಾಡ

ವರ್ಣನೆಗೂ ಜೀವನ ವಿವೇಕಕ್ಕೂ, ಸಂತೋಷಕ್ಕೂ ಸಂವಾದದ ಮೂದಲೆಗಳಿಗೂ ದಿನ ಜೀವನದ ಎಲ್ಲ ಅಗತ್ಯಗಳಿಗೂ ಹೊಂದುವಂತೆ, ಅದರಲ್ಲಿಯೂ ವಿಶೇಷವಾಗಿ *ಹೆಣ್ಣುಮಕ್ಕಳ ಜೀವನವನ್ನು ಪ್ರತಿಫಲಿಸುವುದಕ್ಕೆ ತ್ರಿಪದಿ ಸಲ್ಲಿಸಿರುವ ಸೇವೆ ಅತಿಶಯವಾದ್ದು. ಅಮೋಘವಾದ ಸಂಭಾಷಣೆ, ಉಕ್ತಿಪ್ರತ್ಯುಕ್ತಿ, ವಾದ, ಬೇಸರ ಪರಿಹಾರ – ಎಲ್ಲಕ್ಕೂ ತ್ರಿಪದಿ ದುಡಿದಿದೆ – ನೇರವಾಗಿ ; ಅಥವಾ ಆಗಾಗ ಒಂದೆರಡಕ್ಷರವನ್ನೊ ಸೊಲ್ಲನ್ನೊ ಸೇರಿಸಿಕೊಂಡು ಕಾಲಕ್ರಮದಲ್ಲಿ ಇಲ್ಲಿನ ವಿಷ್ಣುಗಣಗಳು ಮಾತ್ರಾಗಣಕ್ಕೆ ತಿರುಗಿ ಆರನೆಯ ಗಣ ನಾಲ್ಕು ಮಾತ್ರೆಗಳ ಒಂದು ಗಣವಾಗಿಯೂ ಏಳನೆಯದು 4+1 ಮಾತ್ರೆಗಳ ಖಂಡವಾಗಿಯೂ ಮಾರ್ಪಡುತ್ತದೆ. ಮೂರನೆಯ ಪಾದ ಮೊದಲ ಸಾಲಂತಾಗಿ ಪುನರಾವೃತ್ತವಾಗಿ ಕಡೆಯದು ಹಿಂದಿನ ಎರಡನೆಯದರಂತೆ ಮುಗಿಯುತ್ತದೆ. ಈ ಪರಿಮಾಣ ಸಿದ್ಧಿಸುವಂತೆ ಲಘು ಗುರುಗಳನ್ನು ಎಳೆದುಕೊಂಡೊ ಹ್ರಸ್ವಮಾಡಿಕೊಂಡೊ ವಿಜಾತೀಯ ಸಂಯುಕ್ತಾಕ್ಷರ ಮಾಡಿಕೊಂಡೊ ತೇಲಿಸಿಯೊ ಹೇಳಬೇಕಾದೀತು.

ಏಳು ಗಣಗಳ ಇನ್ನೊಂದು ಛಂದಸ್ಸು ಸಾಂಗತ್ಯ. ಸಾಂಗತ್ಯವನ್ನು ಕುರಿತು 'ಛಂದೋಂಬುಧಿ' ಏನೂ ಹೇಳುವುದಿಲ್ಲ. ಗೀತಿಕೆ ನಾಲ್ಕು ಸಾಲುಗಳ ಪದ್ಯವೆಂದೂ ಅದರಲ್ಲಿ 2–6 ಬ್ರಹ್ಮಗಣ; ಉಳಿದವು ಕರ್ತೃ ಮೆಚ್ಚುವ ತೆರದಿಂದ ಆಗುತ್ತದೆ ಎನ್ನುತ್ತಾರೆ : ಇದರ ಗತಿ, ಲಯಗಳನ್ನು ಕುರಿತು ಇನ್ನೂ ಅಭ್ಯಾಸ ಪರಿಶೀಲನೆ ನಡೆಯಬೇಕು. ಸಾಂಗತ್ಯದಲ್ಲಿಯೂ ಒಟ್ಟು 7 ಗಣಗಳ ಒಟ್ಟು ಒಂದು ಸಾಲು. ಕಡೆಯ ಗಣ ಬ್ರಹ್ಮಗಣದ ಹಾಗೆ ಉಳಿಯುತ್ತದೆ. ಒಳಪ್ರಾಸ ತುಂಬಾ ಹದವಾಗಿ ಬರುತ್ತವೆ. ಇಲ್ಲಿಯೂ ಏಳು ಗಣದ ಪಾದ ಎರಡಿದ್ದರೂ ಮೊದಲ ಪಾದ ನಾಲ್ಕು ಗಣಗಳದ್ದು. ಎರಡನೆಯದು ಮೂರು ಗಣಗಳದ್ದು ; ಕಡೆಯ ಗಣ ಚಿಕ್ಕದು ; ಅದನ್ನು ಎಳೆದು ಹೇಳಿಕೊಳ್ಳಬೇಕು. ಒಳಪ್ರಾಸ ವಡಿಗಳುಳ್ಳದ್ದಾಗಿರಬಹುದು. ವಿಷ್ಣುಗಣಕ್ಕೆ

*ಜನಪದ ಸಾಹಿತ್ಯವನ್ನು ಕುರಿತ ಈ ಮಾಲೆಯ ಪುಸ್ತಕದಲ್ಲಿ ಅದರ ಅನೇಕ ಕಾರ್ಯಗಳನ್ನು ವಿವರಿಸಲಾಗುತ್ತದೆ. — ಸಂ.

ಬದಲಾಗಿ ಬ್ರಹ್ಮ ಬರಬಹುದು, "ಗಣವಿಭಾಗ ಮಾಡುವಾಗ ಶಬ್ದಸ್ವರೂಪಕ್ಕೂ ಅರ್ಥಸ್ಫೂರ್ತಿಗೂ ಗಮನ ಕೊಡಬೇಕು. ಬೇಕಾದ ಕಡೆ ಲಘುವನ್ನು ಎಳೆದು ಗುರು ಮಾಡಿ, ಗುರುವನ್ನು ಕುಗ್ಗಿಸಿ ಲಘು ಮಾಡಿ ಹಾಡಬೇಕು." ಇದು ಸಂಗತಿ: ಸಂಗೀತಕ್ಕೆ ಹತ್ತಿರವಾದ್ದು.

ಉದಾ :

"ಪೆಣ್ಣಲ್ಲ : ವೆ ತಮ್ಮ : ನೆಲ್ಲ ಪ : ಡೆದ ತಾಯಿ
ಪೆಣ್ಣಲ್ಲ : ವೆ ಪೊರೆ : ದವಳು
ಪೆಣ್ಣು ಪೆ : ಣ್ಣೆಂದೇ : ತಕೆ ಬೀಳು : ಗಳೆವರು
ಕಣ್ಣು ಕಾ : ಣದ ಗಾವಿ : ಲರು ॥

ಇನ್ನೊಂದು ಪ್ರಕಾರದ ಅಂಶಗಣ ಛಂದಸ್ಸು ಆರು ಬಗೆಯದು. ಅಕ್ಕರಗಳಲ್ಲಿ ಮುಖ್ಯವಾಗಿ ಪಿರಿಯಕ್ಕರವನ್ನು ಹೆಚ್ಚಾಗಿ ಕವಿಗಳು ಬಳಸಿರುವರು : ಕಂದ ವೃತ್ತಗಳ ಮಹಾವಿಲಾಸವನ್ನು ಚಂಪೂ ಕವಿಗಳು ಮೆರಸುತ್ತ ಇರುವಾಗ ಒಂದು ವಿಶೇಷ ಆತ್ಮೀಯತೆಯನ್ನೊ ದೇಶಿ ಲಕ್ಷಣವನ್ನೊ ತಿಳಿಸಬಯಸಿದಾಗ ಪಿರಿಯಕ್ಕರವನ್ನು ಬಳಸುತ್ತಾರೆ. ಪಂಪರಾಮಾಯಣದಲ್ಲಿ ದಶರಥನ ವಿಲಾಪದಲ್ಲಿ, ಕಾದಂಬರಿಯಲ್ಲಿ ಗಿಳಿಯ ಒಂದು ದೀನಸ್ಥಿತಿಯಲ್ಲಿ ಇವು ಬಂದರೆ ಪಂಪಭಾರತದಲ್ಲಿ ಬೇಡನಾಯಕನು ಬೇಟೆಗೆ ಅವಕಾಶವನ್ನು ವಿವರಿಸುವ ಸಂದರ್ಭದಲ್ಲಿ, ಸುಭದ್ರೆಗೆ ಬಳುವಳಿ ಕೊಡುವ ಸಂದರ್ಭದಲ್ಲಿ, ಅರಿಕೇಸರಿ ಕವಿಗೆ ಮಾಡಿದ ಮರ್ಯಾದೆಯ ವರ್ಣನೆಯಲ್ಲಿ ಪಿರಿಯಕ್ಕರವನ್ನು ಉಪಯೋಗಿಸಲಾಗಿದೆ. ಇಲ್ಲಿಯೂ ಏಳು ಗಣಗಳು. ಸಾಮಾನ್ಯವಾಗಿ ಆದಿಗಣ ಬ್ರಹ್ಮ ; ಮುಂದಿನ ಐದು ವಿಷ್ಣು ; ಕಡೆಯದು ನಿಯತವಾಗಿ ರುದ್ರ. ಹಾಡಿನ ಧಾಟಿಗೆ ಒಳಪಟ್ಟು ಇದರ ಲಯಗತಿ ನಡೆಯುವುದರಿಂದ ಅರ್ಥದ್ಯೋತನೆಗೊ ಭಾವದ್ಯೋತನೆಗೊ ಸನ್ನಿವೇಶಸಾಧನೆಗೊ ಕರ್ತೃವಿನ ಇಚ್ಛೆಯಿಂದ ವಿಷ್ಣುವಿಗೆ ಬದಲಾಗಿ ಬ್ರಹ್ಮ ಬರಬಹುದು – ಪ್ರತಿಸಾಲಿನಲ್ಲಿಯೂ ಸಾಲುಗಳಲ್ಲಿ ಒಳಪ್ರಾಸ ಬರಬಹುದು. ಪ್ರಾಚೀನ ಪಿರಿಯಕ್ಕರಗಳಲ್ಲಿ ಆದಿಯಲ್ಲಿಯೇ ಬ್ರಹ್ಮಕ್ಕೆ ಬದಲು ವಿಷ್ಣು ಬಂದಿವೆ. ಕಡೆಯ ರುದ್ರ ನಿಯತ.* ಚಂಪೂ ಕಾವ್ಯಗಳ

* ಇದರ ಪ್ರಸ್ತಾರ ಮಾಡುವಾಗ ಕಡೆಯ ರುದ್ರವನ್ನು ಮೊದಲು ಬೇರೆ (— ⏑ ⏑ + 3 ಅಂಶ) ಮಾಡಿಕೊಂಡು ಉಳಿದುದನ್ನು ವಿಷ್ಣು ಆಗಿ ಮೊದಲು ಬ್ರಹ್ಮ ಬರುತ್ತದೆಯೆ ಅಥವಾ ವಿಷ್ಣು ಆಗುತ್ತದೆಯೆ ಎಂಬುದನ್ನು ವಿಂಗಡಿಸಿಕೊಳ್ಳಬೇಕು. ಈಚಿನ ಕವಿಗಳಲ್ಲಿ ಕೆಲವರು ಈ ಪ್ರಕಾರವನ್ನು ಬಳಸಿದ್ದಾರೆ. ಶ್ರೀ ಸೇಡಿಯಾಪು ಕೃಷ್ಣಭಟ್ಟರು ಒಂದು ಕಾವ್ಯವನ್ನೇ ರಚಿಸಿದ್ದಾರೆ.

ವಿದ್ವತ್ ವಿಜೃಂಭಣೆಯಲ್ಲಿ ರಗಳೆ, ಪಿರಿಯಕ್ಕರ, ತ್ರಿಪದಿಗಳಿಗೆ ಶ್ರೀಮಂತರ ಮನೆಯ ಔತಣಗಳಲ್ಲಿ ಬಡಸಂಬಂಧಿಗಳಿಗೆ ದೊರೆವಷ್ಟು ಸ್ಥಳಾವಕಾಶ ಮಾತ್ರ ಸಿಕ್ಕುತ್ತದೆ. ಉಳಿದ ಅಕ್ಕರಗಳು ಅಪರೂಪವಾಗಿ – ಬಹುಮಟ್ಟಿಗೆ ಇಲ್ಲವೇ ಇಲ್ಲ ಎಂಬಷ್ಟು ಮಟ್ಟಿಗೆ ಬಳಕೆಯಾಗುತ್ತವೆ ; ಹಾಡುಗಳಲ್ಲಿ, ಜನಪದ ಸಾಹಿತ್ಯದಲ್ಲಿ ಇವು ವಿಶೇಷ ವಾಗಿ ರೂಢಿಯಲ್ಲಿದ್ದಿರಬೇಕು. ಇಲ್ಲವಾಗಿದ್ದರೆ ತ್ರಿಪುಡೆ, ಗೋವಿನ ಕಥೆಯ ಮಟ್ಟು ಪಾರ್ಥಜೋಗಿ ಹಾಡು, ಯಾಲಪದ, ನುಲಿಯ ಚಂದಯ್ಯನ ಶಾರದ, ಗೀತ ಗೋಪಾಲದ ಛಂದಸ್ಸು ಮುಂತಾಗಿ ಕೈಪಿಡಿಯ ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಕಾಣಿಸಿರುವ ಲಯರಚನೆ, ಗಾನ ಕಾಣುತ್ತಿರಲಿಲ್ಲ.

ವೇಲಣಕರ್ ಲೆಕ್ಕ ಮಾಡಿರುವಂತೆ ಸಂಸ್ಕೃತ ಮಹಾಕಾವ್ಯಗಳ, ಅಕ್ಷರ ಗಣ ಗಳ ಛಂದಸ್ಸಿನಲ್ಲಿ ಬಳಕೆಯಲ್ಲಿರುವ ಇತರ ಛಂದಗಳು : 50 ಅರ್ಧಸಮ ಚತು ಷ್ಪದಿಗಳು, 36 ವಿಷಮ ಚತುಷ್ಪ ದಿಗಳು, 42 ಮಾತ್ರಾ ವೃತ್ತಗಳು. ಈ ಮಾತ್ರಾವೃತ್ತಗಳಲ್ಲಿ 14 ದ್ವಿಪದಿಗಳು, 28 ಚತುಷ್ಪದಿಗಳು. ಆದರೂ ಇಷ್ಟು ವೃತ್ತಗಳಲ್ಲಿ ನಿರ್ದಿಷ್ಟಕಾಲದ ಸಂಸ್ಕೃತ ಕವಿಗಳು ಪ್ರಯೋಗಿಸಿದವು ಕೆಲವು ಮಾತ್ರ. 1948 ರಲ್ಲಿ (2 ನೆ ಶತಮಾನದ ಅಶ್ವಘೋಷನಿಂದ ಹಿಡಿದು 16 ನೆ ಶತಮಾನದ ಶಿವಸ್ವಾಮಿಯ ವರೆಗೂ) 28 ಮಂದಿ ಮಹಾಕವಿಗಳ ವೃತ್ತಗಳನ್ನು ಪರೀಕ್ಷಿಸಿ ಜಡಿತಿ ಮಾಡಿದ್ದಾರೆ. ಒಂದು ಕೃತಿಯ ಒಂದೊಂದು ಆಶ್ವಾಸಕ್ಕೆ ಪೂರ್ತ ಬಳಸಿ ದವು. ಒಟ್ಟು ನೂರರಲ್ಲಿ ಸುಮಾರು 25ಮಾತ್ರ. ಉಳಿದವು ಬೇಸರಿಕೆ ಕಳೆಯಲೊ ಬದಲಾವಣೆ ಸೂಚಿಸಲೊ ಅಲಂಕರಣಕ್ಕೊ ಬಳಸಿದವು.

ಮಾಲಾವೃತ್ತಗಳೆಂಬ ಹೆಸರಲ್ಲಿ ಲಲಿತವೃತ್ತ, ಕುಸುಮ ರಸಂ ಎಂಬ ಎರಡನ್ನು ನಾಗವರ್ಮನು ಕೊಡುತ್ತಾನೆ. ಇವು ಲಲಿತಗಣಗಳ ಎಂದರೆ 5 ಮಾತ್ರೆಯ ಗಣ ಗಳ ಕಡೆಯಲ್ಲಿ ಎರಡು ಗುರುಗಳಿಂದ ಮುಕ್ತಾಯಗೊಳ್ಳುತ್ತವೆ. ಕುಸುಮರಸವೂ ಹಾಗೆಯೇ. ಲಲಿತವೃತ್ತ ಗುರುವಿಂದ ಆರಂಭವಾಗುತ್ತದೆ. ಕುಸುಮರಸ ಲಘು ಗಳಿಂದ ಆರಂಭವಾಗುತ್ತದೆ. ಅರ್ಧಸಮವೃತ್ತವೆಂಬ ಹೆಸರಿನಲ್ಲಿ 'ದಿವಿಜಕಲ್ಪ' ಎಂದು ಉದಾ. ಕೊಟ್ಟಹಾಗೆಯೇ ರವಿಪ್ರಭಂ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತಾರೆ. ಅಲ್ಲಿ 8 ಮಾತ್ರೆಗಳ ಓಟ ಸ್ಪಷ್ಟವಾಗಿ ಕಾಣುತ್ತದೆ. ಅದನ್ನು ಗುರುವಿ ನಿಂದ ಮುಕ್ತಾಯಗೊಳಿಸಿಕೊಳ್ಳುತ್ತಾರೆ. "ಅಮರ ಸರೋರುಹ ಮಿತ್ರಗಣಂ ಶರ ಸಂಖ್ಯೆಯ ಮುಂದೆ ಲಗಂ" ಎಂದಾಗ 'ಅಮರಸರೋರುಹ : ಮಿತ್ರಗಣಂ ಶರ : ಸಂಖ್ಯೆಯ ಮುಂದೆ ಲ : ಗಂ (ಗುರು) ಆಗುತ್ತದೆ. ಮಾತ್ರಾಗಣಂಗಳ್ ಎಂದು ಹೇಳಿ ಉತ್ಸಾಹಕ್ಕೆ ಒಂದು ಉದಾ. ಇದೆ. 8 ಲಘುಗಳುಳ್ಳ ಪಾದಗಳು ನಾಲ್ಕು ;

ಅಥವಾ ನಾಲ್ಕರವು ಎಂಟು. ಮದನವತಿಯೆಂಬ ಒಂದು ಛಂದಸ್ಸನ್ನು ಕುರಿತು ನಾಟ್ಯಶಾಸ್ತ್ರ ಈ ಪದ್ಯವನ್ನು ಕೊಟ್ಟಿದೆ.

ಅಷ್ಟಾವಾದೌ ದೀರ್ಘಾಣಿ (ದೀರ್ಘಾಣ್ಯಷ್ಟಾವಾದೌ) ಸ್ಯುಸ್ವತಿಜಗತೀ
ಅಂತ್ಯಂ ದೀರ್ಘಂ ಸಾ ವಿಜ್ಞೇಯಾ ಮದನವತೀ.

(32–163)

ಯಾವುದನ್ನು ಖಚಿತವಾಗಿ ಮೂಲ ಛಂದೋಂಬುಧಿ ಎನ್ನಬಹುದೊ ಆ ಒಂದು ಗ್ರಂಥ ಈಗ ದೊರಕಿರುವ ಅಚ್ಚಾದ ಪಾಠಾಂತರಗಳನ್ನೆಲ್ಲ ಸೇರಿಸಿಕೊಂಡು ಪ್ರಕಟವಾದರೆ ಇನ್ನಷ್ಟು ನಿಷ್ಕೃಷ್ಟವಾಗಿ ನಾಗವರ್ಮನ ಕಾವ್ಯದ ವ್ಯಾಸಂಗ ನಡೆಯಬಹುದು. ಸಂಸ್ಕೃತ, ಪ್ರಾಕೃತ, ದೇಶಿ ಮೂರೂ ಬಗೆಯ ಛಂದಃ ಪ್ರಕಾರಗಳನ್ನು ಒಳಗೊಂಡ ವಿಷಯದ ಒಟ್ಟು ವ್ಯಾಸಂಗಮಾಡಲು ಅದು ತಳ ಹದಿಯಾಗುವುದು. ಇವೊತ್ತು ಇದರ ಆಧಾರದ ಮೇಲೆ ಯಾವ ಯಾವ ಬಗೆಯ ಛಂದೋನಿರ್ಮಾಣ ಆಗಿದೆ, ಲಯಗತಿ ಎಷ್ಟು ಬಗೆಯ ರಚನೆ, ವಿನ್ಯಾಸ ಉಳ್ಳದ್ದಾಗಿದೆ ಎಂಬುದನ್ನು ಕಂಡು ಕನ್ನಡದಲ್ಲಿನ ಛಂದಃ ಪ್ರಕಾರಗಳ ಅಭ್ಯಾಸ ನಡೆದರೆ ಈ ಭಾಗದ ಕಾರ್ಯ ಸಮರ್ಪಕವಾಗಬಲ್ಲದು.

*

ಹಿಂದಿನ ಛಂದಸ್ಸುಗಳ ಝಂಕಾರವೇ ಈಗ ಬರೆವ ಅನೇಕರಿಗೆ ರುಚಿಸದು. ಕಥೆಗೆ ವರ್ಣನೆಗೆ ಅವು ಒಗ್ಗಿದ್ದವು ; ಈಗ ಎರಡೂ ಇಲ್ಲ. ಒಂದು ಕಾರಣ : ಬರೆವರಿಂದ ಅಲ್ಲಿನ ಶಿಲ್ಪತಂತ್ರ ಹೆಚ್ಚು ಸಂಯಮವನ್ನೂ ನಿಯಮಪಾಲನೆಯನ್ನೂ ಬೇಡುತ್ತವೆ. ಪ್ರಾಸಾದಿಗಳನ್ನು ಉಳಿಸಿಕೊಂಡು 102 ಮಾತ್ರೆಗಳ ಓಟದ ಭಾಮಿನಿ, 144 ಮಾತ್ರೆಗಳ ವಾರ್ಧಕಕ್ಕೆ ಆಹಾರವೊದಗಿಸಿ ನಡಸುವುದು ಶ್ರಮ ಸಾಧ್ಯ. ಇವೊತ್ತಿನ ಮನಸ್ಸಿಗೆ ತಕ್ಕಂತೆ ವಿಷಯವನ್ನು ತುಂಬುವುದು ಕಷ್ಟ. ಅಲ್ಲಿ ಬಳಸಬಹುದಾಗಿದ್ದ ಪ್ರಾಸ ಅಲಂಕಾರಾದಿ ತಂತ್ರಗಳನ್ನೆಲ್ಲ ಬೇಸರ ಬರುವಂತೆ ಹಿಂದಿನವರು ಮಾಡಿ ಮುಗಿಸಿದ್ದಾರೆ. ಆಗಿನವರಿಗೆ ಇರುತ್ತಿದ್ದ ಸಂಸ್ಕೃತದ ಪರಿಚಯ ಹೆಚ್ಚು ಮುಂದಿಗಿಲ್ಲ. ಮಧ್ಯಕಾಲದ ಶಬ್ದರೂಪಗಳೂ ಸಮಯಗಳೂ ಪ್ರಾಚೀನವಾಗಿ ಹೇಗೆ ಹೇಗೋ ಕಾಣಿಸುತ್ತವೆ,ಕೇಳಿಸುತ್ತವೆ.ನಂಬಿಕೆಗಳು ಪುರಾಣ,ಸಮಯಗಳು ಜಳ್ಳು ಆಗಿವೆ. ಸರಳರಗಳೆಯ ನಿಷ್ಠೆ ನಿಯಮ ವಿಲಾಸದ ರಹಸ್ಯಗಳನ್ನು ಅರಿಯದೆ ಅದನ್ನು ಬಳಸುವ ಕೆಲವರು ಅಲ್ಲಿನ ಶಿಸ್ತನ್ನು ಓಸರಿಸಿದ್ದಾರೆ. ಶ್ರೀಯವರ ಪ್ರಗಾಥಗಳಲ್ಲಿ, ಮೇಳ ಗೀತಗಳಲ್ಲಿ,ಅಶ್ವತ್ಥಾಮನ್, ಪಾರಸಿಕರು ಮುಂತಾದ ರಚನೆಗಳಲ್ಲಿ ಬಳ

ಸುವ ಛಂದಸ್ಸಿನ ಕಟ್ಟು,ಬಿಗಿ ನಿರಾಸೆ ತರುವಷ್ಟು ಕಷ್ಟ ಸಾಧ್ಯ. ಜೊತೆಗೆ ಎಲ್ಲಕಡೆಯೂ ಒಂದು ಸ್ವತಂತ್ರ/ಸ್ವಚ್ಛಂದ ಅಭಿಲಾಷೆ ವಿಶೇಷವಾಗಿ ಬೆಳೆದು Free Rhythm* ಅನಿಯುತಲಯ – ಅರ್ಥವನ್ನೊ ಭಾವವನ್ನೊ ನಡಸಿದರೆ ಸಾಕು ; ನಮ್ಮಕಾಲಕ್ಕೆ ಅಗತ್ಯಕ್ಕೆ ಅದು ಹೆಚ್ಚು ಸಹಜ ಎಂಬ ಒಂದು ತತ್ವವನ್ನೂ ಸ್ಥಾಪಿಸಿಕೊಳ್ಳುತ್ತಿದೆ. ಹಿಂದಿನ ಛಂದಃಪ್ರಕಾರಗಳಲ್ಲಿ ಯಾವುದನ್ನು ವಿಷಮವೃತ್ತವೆಂದರೊ ಅದನ್ನು ಸಾಲಿನ ಉದ್ದಗಲಗಳಿಗೆ ಸಂಖ್ಯೆಗಳಿಗೆ ಬೆಳಸಿಕೊಂಡರೆ ಅದೇ ಇದಾದೀತು ಎಂಬ ಯೋಚನೆ ಬರಬಲ್ಲದು. ಯಾವುದನ್ನು ಇಂತಹ ಬಿಡಿವೃತ್ತ ಎನ್ನಬಹುದೊ ಅಲ್ಲಿಯೂ ಒಂದು ಪಾದಕ್ಕೂ ಇನ್ನೊಂದು ಪಾದಕ್ಕೂ ಲಯ ಹೊಂದಬೇಡವೆ ? ಪ್ರತಿಪಾದವೂ ಆರಂಭವಾಗಿ ಮುಗಿದು ನಿಂತುಬಿಟ್ಟರೆ ಆಯಿತೆ ? ಹಿಂದಿನ ಸಾಲಿಗೂ ಅದಕ್ಕೂ ಏಕೆ, ಹೇಗೆ ಸಂಬಂಧ ಇರಬೇಕು ? ಎಂಬಂತೆ ಬೆಳಸುವುದಕ್ಕೂ ತಿಳಿವಳಿಕೆ ಬೇಕು. ನುಡಿತದ ಹದ, ಕಿವಿಯ ಹದ, ನಡೆಯ ಹದ ಇದ್ದಲ್ಲಿ ಯಾ ವು ದೂ ಸುಭಗವಾಗಬಲ್ಲದು. ಆದರೋ ಸ್ವಾತಂತ್ರ್ಯದ ಲಕ್ಷಣವೆಂದು ಬೆಳೆದಾಗ ಛಂದಸ್ಸಿನ ಅಗತ್ಯವೇ ಇಲ್ಲದಂತಾಗಿದೆ. ಜೊತೆಗೆ ಯಾವ ಒಂದಂಶದಲ್ಲಿಯೂ ಕ್ರಮ, ಪೂರ್ಣತೆ, ನುಣುಪು, ಚೌಕ ಜೀವನದಲ್ಲಿಯೇ ಇಲ್ಲದಾಗ ಜೀವನವನ್ನು ಪ್ರತಿಫಲಿಸುವ ಕವಿತೆ ಯಲ್ಲಿ ಅದನ್ನು ನಿರೀಕ್ಷಿಸತಕ್ಕದ್ದಲ್ಲ ಎಂಬ ಅಧ್ವಾನ, ಅಧ್ವಾನ್ನವಾದವೂ ಬಲಿದಿದೆ. ಕಮ್ಮಿಂಗ್ಸ್, ಕಾರ್ಲೋಸ್ ವಿಲಿಯಂಸ್ ಮುಂತಾದವರು ಮಾಡಿದ ಪರೀಕ್ಷಾ ಪ್ರಯೋಗಗಳು ಅನಿಯುತ ರಚನೆಗೆ ಪರಮ ಘೋಷಣೆ ಕೊಟ್ಟಂತೆ ಆಯಿತು ಎಂದರು. ನಮ್ಮಲ್ಲಿ ಯಾರ ಹೆಸರನ್ನೂ ಹೇಳುತ್ತಿಲ್ಲ.

*

ಕವಿತೆ, ಗಾಯನ ಅಥವಾ ಗೇಯಗುಣ ಎರಡೂ ಪ್ರತ್ಯೇಕ ಪ್ರಕರಣಗಳು. ಗೇಯತೆಗೆ ಕವಿತೆ ಲಕ್ಷ್ಯ ಕೊಡಬೇಕಿಲ್ಲ. ಗೀತವಾಗಿ ಹಾಡಲು ಬರುವ ಕಾರಣ ದಿಂದಲೇ ಭಾವಗೀತೆ ಉತ್ತಮ ಕವಿತೆಯಾಗಲಾರದು – ಎನುತ್ತ ಕವಿತೆಗೂ ಅದನ್ನು ಹಾಡುವ ಯತ್ನಗಳಿಗೂ ತಿರಸ್ಕಾರ ಭಾವ ಒಂದು ಬಂದಿದೆ. ಹೀಗಾಗಿ ಕವಿತೆಯ ಒಂದು ಶೃಂಗಾರವನ್ನೊ ಸೌಖ್ಯವನ್ನೊ ಕಳೆದುಕೊಂಡಂತಾಗಿದೆ. ಛಂದೋರಚನೆ ಯನ್ನು ಕುರಿತು ಮಾತನಾಡುವುದಾಗಲಿ, ದೇಶವಿದೇಶಗಳ ಛಂದಃಪ್ರಕಾರಗಳ ವರ್ಣನಾ

---

* Free ಸರಿಯೇ; Rhythm ಸುಷ್ಮುವೊ ? - ಇದೆಯೊ ? ಎಂಬ ಪ್ರಶ್ನೆ ಬೇರೆ. Vers libre ಆಗಬಹುದು : ಬಳಸಿದುದೇ ನಿಯಮ. ನಡೆದುದೆ ಮಾರ್ಗ ಎಂದು ಕವಿ ಇನ್ನೊಂದು ಪ್ರಸಂಗದಲ್ಲಿ ಹೇಳಿ ಕೀರ್ತಿ ಪಡೆಯಲಿಲ್ಲವೆ ? ಬೇರೇನನ್ನೊ ಅದಕ್ಕೆ ತುಂಬಿ ಕೊಟ್ಟ ಆ ಕೀರ್ತಿಗೆ. 'No Vers is libre for the man who wants to do a good job ಎಂದರು ಎಲಿಯಟ್.

ಸಂಪತ್ತಿಯನ್ನು ನುಡಿಯುವುದಾಗಲಿ ನಮ್ಮವರಿಗೆ ಬೇಡವೆನ್ನಿಸಿದೆ* ಜಾನಪದ ಗೀತೆಗಳಲ್ಲಿನ ಲಯಗಳು ಸೋದರ ಭಾಷೆಗಳಲ್ಲಿನ ರಚನೆಗಳು, ಷೆಲ್ಲಿ, ಕೀಟ್ಸ್, ಟೆನ್ನಿಸನ್ ಸ್ವಿನ್‌ಬರ್ನ್ – ಈಚಿನ ಎಲಿಯಟ್, ಪೌಂಡ್, ನೆರುಡ, ಮುಂತಾದವರ ರಚನಾ ವೈಭವಗಳನ್ನಾಗಲಿ, ಭಾರತದಲ್ಲಿ ರವೀಂದ್ರನಾಥ ಟಾಗೋರರು** ಮಾ ಡಿ ದ ಪ್ರಯೋಗಗಳನ್ನಾಗಲಿ ಎತ್ತಿ ತೋರಿಸಿ ಅಲ್ಲಿನ ಲಯಗಾನವನ್ನೂ ಶಿಲ್ಪವನ್ನೂ ತಂತ್ರವನ್ನೂ ಎತ್ತಿ ಹಿಡಿದ ಕವಿತೆ ಬಂದರಾದೀತು. ಮಾಸ್ತಿ, ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ, ಪುತಿನ, ಕರ್ಕಿ (ಉದಾ: ಜಲಷಟ್ಪದಿ) ಮುಂತಾದವರು ಕೆಲವು ಸಾಧನೆಗಳನ್ನು ಮಾಡಿದ್ದಾರೆ. 6, 7, 8 ಮಾತ್ರೆಗಳ ಸಂಯುಕ್ತ ಗಣಗಳ ಬಳಕೆ ಹಲವರಲ್ಲಿ ಬಂದಿದೆ. ಲಗ(⏑ – –)ದಿಂದ ಪಾದಗಳೂ ವೈದೃಶ್ಯ ಪೋಷಣೆಗಳೂ (contrast, counterpoint) ಅಣಕಗಳೂ ನಡುನಡುವೆ ಅಪವಾರಿತ ನುಡಿಗಳೂ ಸೇರಿ ಕವಿತೆ ಅಲ್ಲಲ್ಲಿ ನಡೆದಿದೆ. ಈವರೆಗೂ ಇಲ್ಲದ (4+5)=9 ಮಾತ್ರಾ ಗಣಗಳ ಸಂಯೋಜನೆ, ಷಟ್ಪದಿಯಲ್ಲಿ ಆದಿಪ್ರಾಸ ಅಂತ್ಯಪ್ರಾಸ ಎರಡನ್ನೂ ಇಡುವ, ಒಂದೆರಡು ಪ್ರಯೋಗಗಳೂ ನಡೆದಿವೆ. ಗೋಕಾಕರ 'ಸಮುದ್ರಗೀತೆ' ಗಳಲ್ಲಿ, ಎಡಿಂಬರೊದಲ್ಲಿ, ಸ್ವತಂತ್ರವಾದ ಶಕ್ತಿಯುತವಾದ ಕೆಲವು ಛಂದೋಸಾಹಸಗಳು ಕಂಡುಬಂದರೆ 'ಬಾಳದೇಗುಲ' ದಲ್ಲಿನ ಕೆಲವು ರಚನೆಗಳ ಸ್ನಿಗ್ಧತೆ ಆಕರ್ಷಕವಾಗಿದೆ. ರಾಜರತ್ನಂ ಛಂದೋಸಾಹಸ ಅನನ್ಯ ಸಾಧಾರಣ.

---

* ಆದರೂ ಕೆಲವು ದಂಡಕಗಳ, ಸಂಸ್ಕೃತ ಪ್ರಾಕೃತಗಳ ಕೆಲವು ರಚನೆಗಳ ವೈಖರಿ ನಮ್ಮ ಕಾಲದ ಕಿವಿಗಳಿಗೂ ನಾಲಿಗೆಗಳಿಗೂ ಸುಳಿದರಾದೀತು. ಅವು ಮೋಹಕವಾಗಿವೆ. ಬೇರೆಒಂದೆರಡನ್ನು ನಮ್ಮ ಕವಿಗಳೂ ಬಳಸಿದ್ದಾರೆ. ಉದಾ. ಬ್ರೌನಿಂಗ್ ಕವಿಯ Love among the Ruins ಎಂಬ ಹದಿನಾಲ್ಕು ಪದ್ಯಗಳ ಕವಿತೆಯಲ್ಲಿ ಒಂದೊಂದರಲ್ಲಿಯೂ ಮೂರುಮೂರು ಜೊತೆ – ಪ್ರಾಸಗಳು ಬರುತ್ತವೆ. ಉದಾ :

When the quiet - coloured end of evening Smiles
Miles and Miles,

On the Solitary Pastures where our Sheep
Half asleep,

Tinkle homeward through the twilight stray or stop
As they crop —

ಎಂಬಂಥದನ್ನು ಠಾಕೂರರೂ ಕುವೆಂಪು ಅವರೂ ಕಂಡು ಬಳಸಿದ್ದಾರೆ.

** ಉದಾ : ಟ್ಯಾಗೋರರು ಶಾಹಜಹಾನಲ್ಲಿ ಭಾಗಶಃ ಬಳಸುವ
"ಚಲೇ ಗೇಛ್‌ತುಮಿ, ಆಜ್
ಮಹಾರಾಜ್," — ಎಂಬಂತೆ.

ಕವಿಯ ಮನಸ್ಸು ಒಂದು **House of Rumours** ಎನ್ನುತ್ತಾರೆ.ಕವಿತಾ ವೇಶ ಕೆರಳಿ ನಿರ್ಮಾಣಕ್ರಿಯೆಯನ್ನು ನಡಸುವಾಗ ಎಲ್ಲೆಲ್ಲಿನವೊ ಎಂಥೆಂಥವೊ ಪದ ಗಳು ಲಯಗಳು ಅವುಗಳ ಅಲಂಕರಣಗಳು ಬಂದು ಸೇರಿಕೊಳ್ಳಬಲ್ಲವು. ಆ ಲಯಗಳ ತಾಂಡವ ದಿವ್ಯಾನಂದವನ್ನು ತರಬಲ್ಲದು. ಹೊಸ ಚ ಮ ತ್ಕಾ ರ ಗ ಳ ನ್ನು ಹೊಮ್ಮಿಸಬಲ್ಲ ಕವಿ ಎಲ್ಲೆಲ್ಲಿಂದಲೊ ಲಯಖಂಡಗಳನ್ನು ತನ್ನಲ್ಲಿಗೆ ತಂದು ಕೊಂಡು ಆ ಮಾದರಿಗಳ ವಲಸೆಯನ್ನು ಸಾರ್ಥಕ ಮಾಡಿಕೊಳ್ಳಬಹುದು. ಪಂಪನ ರಗಳೆ ("ಅದರ ಪೊ ರ ವೊ ಳ ಲ ವಿಶಾಲ ಕನಕ ಕೃತಕ ಗಿರಿಗಳಿಂ") ಉತ್ತರ ಭಾಗದಲ್ಲಿ ವಿಚಿತ್ರವಾಗಿ ಪುನರಾವೃತ್ತಿ, ಪಡೆದು ಹೊಸತಾಗಿ ಪ್ರಾಸ ಸೌಂದರ್ಯ ಬೆಳಸುತ್ತಿದ್ದುದನ್ನು ಒಬ್ಬಿಬ್ಬರು ಕವಿಗಳು – ಕುಮುದೇಂದು, ನೇಮಿಚಂದ್ರ – ಅನುಕರಿಸಿ ಅಂಥುದೇ ಇನ್ನೂ ಒಂದೆರಡು ಹೆಚ್ಚು ಸಾಲನ್ನು ಸೇರಿಸಿಕೊಂಡರು – ಎಂಬುದನ್ನು ಈ ಮುಂಚೆ ತಿಳಿಸಿದ್ದೇನೆ. ನಾಲಿಗೆ ಅದನ್ನು ನುಡಿದು ನಲಿಯಬೇಕು. ಇಂಥ ಪ್ರಯೋಗಗಳನ್ನು ಎಲ್ಲ ಬಗೆಯ ಛಂದೋರಚನೆ ಯಲ್ಲೂ ಮಾಡಿಕೊಳ್ಳಲು ಅವಕಾಶವಿದೆ. ಹಿಂದಿನವರು ಕೆಲವು ದಂಡಕಗಳಲ್ಲಿ ಅದನ್ನು ಮಾಡಿ ಪ್ರಯೋಗಿಸಿರುವರು. **Structural patterns** ಎಂಬ ವನ್ನು ಪೂರ್ತಿ ನಿರಸನ ಮಾಡದಿದ್ದರಾದೀತು. ಕೃತಿಕಾರರಿಗೆ ಹೇಳುವವರು ಯಾರು?

ಪಂಪನ
'ಅಡಿ ತೊಡೆ ಪೊರ್ಕುಟಿಂ
ತೆಗಲೆ ಕೈ ಕಣಕಾಲ್ ಕೊರಲೆಂಬಿವುಂ ಬೆರಲ್' – ಎಂಬುದೊ
'ಖಳ ದುಶ್ಶಾಸನ ವಕ್ಷ। ಸ್ಥಳೋಚ್ಚಲತ್ ಕೃಷ್ಣರಕ್ತಜಲದಿಂ ಕೋಪಾ॥ ನಳನಂ
ಮುಟ್ಟಿಸಿ ನೀನುಂ। ಗಳಾ ಗಳಿತಕೋಪನಿರ್ಪತೆರದಿಂದಿರ್ಪೈ' –
ಎಂಬುದೊ ಒಂದು ಬಗೆಯ ಪಾದರಚನೆಯದಾದರೆ

'ಜಳಜದ ಮೊಗ್ಗೆಯಂತೆ ಮುಗುಳಂತೆ ಎಳಎಕ್ಕೆಯ ಕಾಯ್ಗಳಂತೆ।
ಶಾಲ್ಮಲಿ ಕುಸುಮಗಳಂತೆ

ಎಂಬುದರ ಓಟ ಬೇರೊಂದು ಸವಿಯದು.

ಕಂದ ನಿಜಾನುಜರೆಲ್ಲಿದ। ರೆಂದೆನ್ನಂ ಜನನಿ ಬಂದು ಬೆಸಗೊಂಡೊಡದೇ॥ನೆಂದು
ಮರುಮಾತುಗುಡವೆಂ। ಕೊಂದರ್ ಕೌಂತೇಯರೆಂದು ಬಿನ್ನೈಸುವೆನೋ

—– ಎಷ್ಟು ಬಗೆಯವು ಕಂದ ರಚನೆಯ ನುಡಿತಗಳೆಂಬುದನ್ನು ನಂಬುವುದು ಕಷ್ಟ. ಶಿಶುಪಾಲನ ಮೂದಲಿಕೆಯ 'ಕುಡವೇಟ್ಟಿನ ಕುಡುವನ ಕುಡೆ ಪಡೆವನ' – ಇತ್ಯಾದಿಯನ್ನು ಕಿ ವಿ ಯಿ ಂ ದ ಕೇಳಿದರೆ ಗೇಯತೆಗೆ ಬೆಲೆಗೊಡದಿದ್ದಾಗಲೂ ಎಂಥ ದೊಡ್ಡ ಕಾವ್ಯ ಪ್ರಯೋಜನ ಸಾಧಿಸಬಹುದು ಎನಿಸುತ್ತದೆ.

ಗೇಯತೆ ಇಂದಿಗೂ ಸುಖವನ್ನು ಕೊಡಬಲ್ಲುದು. 'ಎಚ್ಚರೆಚ್ಚರು ಮಾರ, ಮೂಜಗದ ಸಿಂಗಾರ, ಎಚ್ಚರೈ ಏಳೈ'ಎಂದು ಬರೆದ ಪು.ತಿ.ನ.ಅವರ ಗೀತೆಯೊ' 'ಬಿಳಿ ಬೆಳಕಿನ ಬಾನಾಡಿ,' 'ಚಿಂತೆಗೆ ಕಣ್ಣ ತೆತ್ತವಳೆ, ಚಿಲುಕದ ಮೇಲೆ ಮುಂಗೈಯೂರಿ ನಿಂತವಳೆ' ಅಥವಾ 'ಸಿರಿಗೆರೆಯ ನೀರಿನಲಿ ಬಿರಿದ ತಾವರೆಯಲ್ಲಿ ಕೆಂಪಾಗಿ ನಿನ್ನ ಹೆಸರು' ಎಂಬ ನರಸಿಂಹ ಸ್ವಾಮಿಯವರ ಗೇಯತೆಯೊ ಕವಿತೆಯ ನಡೆಬೆಡಗಿಗೆ ರೆಕ್ಕೆ ಕೊಡುತ್ತವೆ ; ಅವನ್ನು ಗಂಧರ್ವಗಾನವಾಗಿ ಮಾಡುತ್ತದೆ.ಗೇಯತೆ ಅತಿಶಯವಾದಾಗ ಅದರ ವೈಭವವನ್ನು ಅಕ್ಷರ ಪದ ತುಂಬಿ ಆಗುವ ಕವಿತೆಯ ಸಾಲು ಮಾಡಿಕೊಡಲಾರವು. ತ್ಯಾಗರಾಜರ 'ಚಲ್ಲಗ ನಾತೋ ಪಲ್ಕುಮಾ ರಾಮ' ಎಂಬುದೊ,ದೀಕ್ಷಿತರ 'ಓ ಜಗದಂಬಾ' ಎಂಬ ಕೀರ್ತನೆಯ ವಿಶಾಲ ವಿನ್ಯಾಸವೊ ಕೇವಲ ಸಾಹಿತ್ಯವಾದ ಯಾವ ತುಂಬೂ ಮಾಡಿಕೊಡಲಾಗದ್ದು. ಒಂದು ಕೇವಲ ಕವಿತೆ ; ಇನ್ನೊಂದು ಕೇವಲ ಗಾನಖಂಡ. ಭಾವಕ್ಕೇ ಬೆಲೆ ಕೊಡದೆ ಇರುವವರಿಗೆ ಇದು ಅರಣ್ಯರೋದನ. ಆದರೂ ಇವುಗಳ ಹದವಾದ ಮೇಳ ಹಾಗೆಯೇ ಆಳವಾಗಿ ಭಾವ ಪೋಷಣೆ ಮಾಡಬಲ್ಲದು.

ಒಂದು ಸಂಗತಿಯನ್ನಂತೂ ಎರಡುಕಲೆಗಳವರೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು: ಗಮಕ, ನಡೆ, ಅಲಂಕಾರ, ಭಾವ, ಲಯ, ಕಲ್ಪನೆ, ತೀರ್ಮಾನ, ವರ್ಣ, ಮೆಟ್ಟು ಮುಂತಾದ ಮಾತುಗಳನ್ನು ಬಳಸುವಾಗ ಸಂಗೀತದ ಅರ್ಥ ಬೇರೆ, ಛಂದಸ್ಸಿನ ಮತ್ತು ಸಾಹಿತ್ಯದ ಅರ್ಥ ಬೇರೆ. ಅಲ್ಲಿ – ತಾಳ ನಿರ್ಘೃಣವಾಗಿ ಒಂದು ಲಯ ಬಂಧವನ್ನು ಕಟ್ಟುತ್ತದೆ. ಒಂದು ಆವೃತ್ತದಲ್ಲಿ ಹೆಚ್ಚೊ ಕಡಮೆಯೊ ಅಕ್ಷರಗಳು ಬರಬಹುದು. ದೀರ್ಘ ಹ್ರಸ್ವ ಬರಬಹುದು. ಯಾವ ಅಕ್ಷರಗಳೂ ಬಾರದೆ ಸಂಚಾರ ಆಗಬಹುದು; Silences – ನುಡಿತ ವಿಲ್ಲದ ವಿರಾಮಗಳು ಅನಾಗತ, ಸಮಗಳು ತಾಳಕ್ಕೆ ನೆರವಾಗಬಹುದು. ಆ ಬಗೆಯ ನಿರ್ಬಂಧ ಛಂದಸ್ಸೆಂಬ ಹೆಸರಿನ ಲಯಕ್ಕೆ ಸಾಮಾನ್ಯವಾಗಿ ಸಲ್ಲದು.* ಸ್ವರಗಳ ಏರಿಳಿತದಲ್ಲಿ ಜೀವಾಳ.

---

* Break, Break, Break
At the foot of thy Crags O Sea

ಎಂಬಲ್ಲಿ ಸಾಲುಗಳಲ್ಲಿ Break ∧ Break ∧ ! Break ∧ ! ಊನ ಗಣಗಳನ್ನು ಖಾಲಿ ತುಂಬುತ್ತದೆ. King Lear ಅಲ್ಲಿ Ah ಎಂದು ತೊಡಗುವ ಷೇಕ್ಸ್‌ಪಿಯರ್ ಸಾಲು Pippa Passesಅಲ್ಲಿ Day ! ಎಂದು ತೊಡಗುವ ಬ್ರೌನಿಂಗ್ ಪಾದ ಅದ್ಭುತ ಪ್ರಯೋಜನಗಳನ್ನುಸಾಧಿಸುತ್ತವೆ. 3 ಅಕ್ಷರಗಳ ಒಂದು ಪದವನ್ನು ಒಡೆದು ಒಂದೊಂದು ಅಕ್ಷರವನ್ನು ಒಂದೊಂದು ಪಾದಕ್ಕೆ ಹೇಗೆ ಹೇಗೊ ವಿಂಗಡಿಸಿ ಅಚ್ಚು ಮಾಡಿದರೆ ಲಯ ಗಾನ, ಅರ್ಥದೀಪ್ತಿ ಭಾವಸಂಪನ್ನತೆ ಬೆಳಗೀತೆಂಬವರಿಗೆ ಕಿವಿ ಲುಪ್ತವೆಸ್ನಿಸುತ್ತದೆ.

ಇಲ್ಲಿನ ಲಯಬಂಧ ಒಟ್ಟು ಯಾವುದೊ ಪ್ರಕಾರವನ್ನು ರಚನೆಯನ್ನು ರೂಪಿಸುತ್ತದೆ. ಷಟ್ಪದಿಯ 3–6ನೆ ಪಂಕ್ತಿಗಳಲ್ಲಿ ಕಡೆಯ ಗುರುವನ್ನು ಇನ್ನೊಂದು ಗಣದ ಪ್ರಮಾಣ ಉಳ್ಳದ್ದೆಂದು ಹೇಳಿದರೆ ಛಂದಃಸ್ವರೂಪದ ಜೀವಲಕ್ಷಣವನ್ನು ಬಿಟ್ಟು ಕೊಟ್ಟು ಅದಕ್ಕೆ ಗೇಯತೆಯ ತಾಳಬಂಧದ ಯಾವುದೊ ಇನ್ನೊಂದು ಗುಣಕಲ್ಪನೆ ಮಾಡಿದಂತಾಗುತ್ತದೆ. ಬಹುಶಃ ಈ ಗುರುವನ್ನು ಎಳೆದು ಅಲ್ಲಿ ಸ್ವಲ್ಪ ನಿಲ್ಲಿಸಿಕೊಳ್ಳುತ್ತೇವೆ, ಅಷ್ಟೇ. ಅದು ಅರ್ಧ ಅಥವಾ ಪೂರ್ಣ ನಿಲುಗಡೆಯ ಸಂಕೇತ. ಛಂದೋಲಯ ಹೆಚ್ಚು ಹಾರ್ದವಾಗಿ ಮಾನವವಾಗಿ ನಡೆಯುತ್ತದೆ. ಹೊಸಕಾಲದ ಕವಿ ನಿರ್ಮಿತಿಗಳು ಕವಿಯ ಮೋಹ, ಸಾಹಸ, ರಚನಾವಿಲಾಸ ಯಾವ ಬಗೆಯ ಶಿಲ್ಪವನ್ನು ಕಾಣಿಸಬೇಕೆಂದು ತೊಡಗುತ್ತದೆಯೊ ಅದನ್ನು ಸ್ವಾಗತಿಸಿದರೆ ಒಳಿತು. ಯಾವ ಬಗೆಯ ಛಂದಸ್ಸಿನಲ್ಲಿಯೂ ವೈವಿಧ್ಯದಿಂದ ಬರುವ ಸೊಬಗನ್ನು ಕಿವಿ ಆಲಿಸಿ ಮೋಹಗೊಳ್ಳುತ್ತದೆಯೊ ಮುದಿಸುತ್ತದೆಯೊ ಅದರ ಅನುರಣನ ಝುಂಕಾರಗಳು ನಿಜವಾದ ಸಂತೋಷವನ್ನು ತಂದುಕೊಡುತ್ತದೆ.

“ಸದ್ದಿಲಿ ಕತ್ತಲು, ಕತ್ತಲದೆತ್ತಲು
ಸಿಂಹಗಡದಾ ಕೋಟೆಯ ಸುತ್ತಲು
ಕೃಷ್ಣಪಕ್ಷದ ಕತ್ತಲು ! – ಕಗ್ಗತ್ತಲು !”

ಎನ್ನುವುದರ ಆವರಣ ಕಲ್ಪನೆ ಗಭೀರವಾದ್ದು. ಒಂದು ಆರ್ದ್ರತೆ, ಹಿತ, ನಯ, ನುಡಿತ, ಆಟ, ವಿನೋದ, ವೈಭವ, ಗಾಂಭೀರ್ಯ ಲಯ ಸಾಧನೆಯಲ್ಲಿ ನಿಜವಾಗಿ ದೊಡ್ಡವು.

‘ಪೊರೆದ ದಾತಾರಂಗೆ ಹಗೆವರ । ಶಿರವ ತಂದೊಪ್ಪಿಸುವೆನೆಂಬೀ ।
ಭರದೊಳಿದ್ದೆನು ಕೌರವೇಂದ್ರನ ಕೊಂದೆ ನೀನೆಂದ’

ಎಂಬುದೊ ‘ಒಂದುದಿನ ರವಿವಾರದಲಿ ಭಾಗೀರಥೀ ತೀರದಲಿ
ತಾತಂಗರ್ಘ್ಯವನು ಕೊಡುತ’

ಎಂಬಲ್ಲಿ ನುಡಿವ ಕಥನರೀತಿಯೊ

‘ಶಿವನ ಬಲ ವುಂಟೆಂಬೆನೇ ಶಿವ
ನವರ ಕಡೆ, ಹರಿಯೆನುವೆನೇ ಪಾಂ
ಡವರ ಬಂಡಿಯ ಬೋವ, ಇಂದ್ರಾದ್ಯರು ಸಹಾಯಿಗಳು
ಅವರು ಸಾಕ್ಷಾತ್ ಅರ್ಜುನರು........’

ಎಂಬುದೊ, ‘ಎಸೆ ಮರುಳೆ ಗಾಂಡೀವಿ, ಆಪ | ತ್ತೆಸಗಿದಾಗಲೆ ಹಗೆಯನಿಸುವುದು ವಸುಮತೀಶರ ನೀತಿ’ ಎಂಬುದೊ

ಈತನೀ ಭವದಲ್ಲಿ ಒಡವಂ
ದಾತನೋ ಮೇಣ್ ಪೋದ ಜನ್ಮದೊ
ಳೀತ ನೊಡವಂದಾತನೊ ಆಗಿಹುದು ಸಂದೇಹ
ಮಾತಿನಲಿ ಮನದಲ್ಲಿ ನಡೆಯುಲಿ
ನೀತಿಯುಲಿ ಸತ್ವಾತಿಶಯುದಲಿ
ಸೂತಕುಲದವನಲ್ಲ, ಕೃಷ್ಣ, ಕರ್ಣನಾರೆಂದ

ಎಂಬಲ್ಲಿ ನುಡಿವ ಭಾಮಿನೀವಿಲಾಸವಾಗಲಿ ಸಾಹಿತ್ಯಕವಾಗಿ ಸಾಮಾನ್ಯವಾದು ವಲ್ಲ. ಶ್ರೀಯುವರು ನುಡಿವಂತೆ

ಭೂವ್ಯೋಮ ಪಾತಾಳ ಲೋಕಂಗಳಲ್ಲಿ ಸಂ
ಭಾವ್ಯರೆಂದೆನಿಸಿಕೊಳ್ವಖಿಳ ದೇವರ್ಕಳಿಂ
ಸೇವ್ಯನಾದಜನ ಪಟ್ಟದ ರಾಣಿ ವರದೆ ಕಲ್ಯಾಣಿ ಫಣಿವೇಣಿ ವಾಣಿ
ಕಾವ್ಯಮಿದು ಭುವನದೊಳ್ ಸಕಲರಿಂದೆ ಸು
ಶ್ರಾವ್ಯವಪ್ಪಂತೆನ್ನ ವದನಾಬ್ಜದಲ್ಲಿ ನೀ
ನೇ ವ್ಯಾಪಿಸಿರ್ದಮಲ ಸುಮತಿಯುಂ ತಾಯೆನಗೆ ತಾಯೆ ನಗೆಗೂಡಿ ನೋಡಿ.

ಎಂಬಲ್ಲಿ, ಗಗನವನ್ನು ಮುಟ್ಟುತ್ತದೆ.

ಬಿರುಗಾಳಿ ಪೊಡೆಯುಲ್ಕೆ ಕಂಪಿತ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳುವ ಮುನ್ನ ಹಮ್ಮೈಸಿ ಬಿದ್ದಳಂಗನೆ'

ಎಂಬಲ್ಲಿ ಲಕ್ಷ್ಮೀಶನ ವಾರ್ಧಕದ ವೈಭವವಾಗಲಿ,

ಪವನಜನಾಸ್ಯಮಲ್ತಿದವನಾನನ ಮುಪ್ಪೊಡೆ ಮಟ್ಟಮಿರ್ದು ನೋ
ಡುವುದೆ ಮದೀಯ ವಕ್ತ್ರಮನೆ ಕೆಮ್ಮನೆ ಪೋಯ್ತುಱಿವಿಲ್ಲದಾಯ್ತು ಪಾಂ
ಡವರ ಶಿರಂಗಳಲ್ಲವಿವು ಕೃಷ್ಣೆಯ ಸೂನುಗಳಪ್ಪ ಪಂಚಪಾಂ
ಡವರ ಶಿರಂಗಳಂ ನೆಱೆವಿಚಾರಿಸದಕ್ಕಟ ಕೊಂಡು ಬರ್ಪುದೇ

ಇಂಥ ಸಾಧನೆಗಳನ್ನೆಲ್ಲ ಮೃತ ವಸ್ತುಗಳ ಸಂಗ್ರಹ ಶಾಲೆಗಳಲ್ಲಿಗೆ ತಳ್ಳಿ ಮರೆಯು ಬೇಕೆ? ಎನಿಸುತ್ತದೆ... ಅಪೇಬೇಡ. ಆ ಫಲಗಳನ್ನು ದುಡಿಸಿಕೊಳ್ಳೋಣ.

ಛಂದಸ್ಸನ್ನು ಕುರಿತು ಬರೆದ ಮೊದಲ ಬಹುದೊಡ್ಡ ಪ್ರಖ್ಯಾತ ಗ್ರಂಥವಾದ ಛಂದೋಂಬುಧಿಯನ್ನು ಕುರಿತು ಯೋಚಿಸುವಾಗ ಇಂಥ ಒಂದೆರಡು ಸಂಗತಿಗಳನ್ನು ಈ ಕಾಲದಲ್ಲಿಯೂ ಪರ್ಯಾಲೋಚಿಸಿದರೆ – ಪ ರಾ ಂ ಬ ರಿ ಕೆ ಗೆ ತಂದುಕೊಂಡರೆ ಪ್ರಯೋಜನ ಕಾರಿಯಾದೀತೆಂದು ಭಾವಿಸಿ ಈ ನಾಲ್ಕು ಮಾತು ಬರೆದಿದೆ.

ಅನುಬಂಧ ೧

ಜಯಕೀರ್ತಿಯ ಛಂದೋನುಶಾಸನ

ಸಪ್ತಮೋಧಿಕಾರ

ವಕ್ಷ್ಯೇಽಕ್ಷರತ್ರಿಪದ್ಯೇಲಾಕ್ಷರಿಕಾ ಷಟ್‌ಪದೀಚತುಷ್ಪದಿಕಾಃ
ಛಂದೋಽವತಂಸ ಸಂಜ್ಞಾ ಮದನವತೀ ಗೀತಿಕಾದಿಮಪಿ ಕರ್ಣಾಟೇ – 1

ಅರ್ಥ :- ಕನ್ನಡದಲ್ಲಿ ಪ್ರಸಿದ್ಧವಾದ ಅಕ್ಷರ, ತ್ರಿಪದೀ, ಏಲಾ, ಅಕ್ಷರಿಕಾ, ಷಟ್ಪದೀ, ಚತುಷ್ಪದಿಕಾ, ಛಂದೋವತಂಸ, ಮದನವತೀ, ಗೀತಿಕಾ – ಮುಂತಾದ ವೃತ್ತಗಳ ಲಕ್ಷಣಗಳನ್ನು ಹೇಳುವೆನು.

ರಲಧಾ ರತಿಮದನಶರಾ ದ್ವಿತ್ರಿಚತುರ್ಗಾದಯೋಽಬ್ಧಿವಸುನೃಪಸಂಖ್ಯಾಃ
ಪ್ರಸ್ತಾರೇ ಪೂರ್ವಗುರೋರಧೋ ಲಘೂ ದ್ವೌ ಪರಸ್ಯ ಚೈಕೈಕಲಘುಃ – 2

ಅರ್ಥ :- ರತಿ, ಮದನ, ಶರ – ಎಂದು ಮೂರು ಗಣಗಳುಂಟು. ಅವುಗಳಿಗೆ ಕ್ರಮವಾಗಿ ರ, ಲ, ಧ – ಎಂದು ಸಂಜ್ಞಾಂತರಗಳಿವೆ. ಪ್ರಸ್ತಾರದ ಆದಿಯಲ್ಲಿ ರತಿಗಣವು ಎರಡು ಗುರು – – ಉಳ್ಳದ್ದು; ಮದನಗಣವು ಮೂರು ಗುರುವುಳ್ಳದ್ದು. ಶರಗಣವು ನಾಲ್ಕು ಗುರು ವುಳ್ಳದ್ದು – – – –. ರತಿಗಣದಲ್ಲಿ ನಾಲ್ಕು ವೃತ್ತ ಗಳೂ, – – – ರ ಮದನಗಣದಲ್ಲಿ ಎಂಟು ವೃತ್ತಗಳೂ, ಶರಗಣದಲ್ಲಿ ಹದಿನಾರು ವೃತ್ತ ಗಳೂ ಸಂಭವಿಸುತ್ತವೆ. ಇವಕ್ಕೆ ಪ್ರಸ್ತಾರವನ್ನು ಹಾಕುವಾಗ ಮೊದಲಿನ ಗುರುವಿನ ಕೆಳಗೆ ಎರಡು ಲಘುಗಳನ್ನಿಡಬೇಕು. ಮುಂದಿನ ಗುರುವಿನ ಕೆಳಗೆ ಮಾತ್ರ ಒಂದೊಂದು ಲಘುವನ್ನು ಇಡಬೇಕು. ಸರ್ವ ಗುರುವಿನಿಂದ ಹಿಡಿದು ಸರ್ವಲಘು ಆಗುವವರೆಗೂ ಪ್ರ ಸ್ತಾ ರ ಯೋ ೀ ಗ. ಸಂಜ್ಞೆ – ಗುರು (ಗ) ಲಘು ⌣ ಲ.

ಉದಾಹರಣೆ :-

	1. ರತಿ		2. ಮದನ		3. ಶರ
1	— —	1	— — —	1	— — — —
2	⏑ ⏑ —	2	⏑ ⏑ — —	2	⏑ ⏑ — — —
3	— ⏑	3	— ⏑ —	3	— ⏑ — —
4	⏑ ⏑ ⏑	4	⏑ ⏑ ⏑ —	4	⏑ ⏑ ⏑ — —
		5	— — ⏑	5	— — ⏑ —
		6	⏑ ⏑ — ⏑	6	⏑ ⏑ — ⏑ —
		7	— ⏑ ⏑	7	— ⏑ ⏑ —
		8	⏑ ⏑ ⏑ ⏑	8	⏑ ⏑ ⏑ ⏑ —
				9	— — — ⏑
				10	⏑ ⏑ — — ⏑
				11	— ⏑ — ⏑
				12	⏑ ⏑ ⏑ — ⏑
				13	— — ⏑ ⏑
				14	⏑ ⏑ — ⏑ ⏑
				15	— ⏑ ⏑ ⏑
				16	⏑ ⏑ ⏑ ⏑ ⏑

ಟಿಪ್ಪಣಿ :- ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ಮೇಲ್ಕಂಡ 3 ಗಣಗಳಿಗೆ ಕ್ರಮವಾಗಿ ಬ್ರಹ್ಮಗಣ, ವಿಷ್ಣುಗಣ, ರುದ್ರಗಣ ಎಂದು ಹೆಸರಿಟ್ಟಿದ್ದಾನೆ.*

ದ್ವಿತ್ರಿಚತುರ್ವರ್ಣಾ ಗಾದ್ಯಾಸ್ತ್ರಿಚತುಃಪಂಚವರ್ಣಕಾ ಲಾದಿಗಣಾಃ
ಕ್ರಮಶೋ ರಲಧೇಷು ಭವಂತ್ಯೇಕೈಕಲಘುರ್ನ ವರ್ತತೇತ್ರ ಗಣಾದೌ — 3

ಅರ್ಥ :- ರ, ಲ, ಧ ಗಣಗಳಲ್ಲಿ ಮೊದಲನೆಯ ವರ್ಣವು ಗುರುವಾಗಿದ್ದರೆ, ಆಗ ರಗಣದಲ್ಲಿ 2 ಅಕ್ಷರಗಳೂ, ಲಗಣದಲ್ಲಿ 3 ಅಕ್ಷರಗಳೂ, ಧಗಣದಲ್ಲಿ 4 ಅಕ್ಷರಗಳೂ ಇರುತ್ತವೆ. ಅವುಗಳ ಮೊದಲನೆಯ ವರ್ಣವು ಲಘುವಾಗಿದ್ದರೆ ರಗಣದಲ್ಲಿ 3 ಅಕ್ಷರಗಳೂ, ಲಗಣದಲ್ಲಿ 4 ಅಕ್ಷರಗಳೂ, ಧಗಣದಲ್ಲಿ 5 ಅಕ್ಷರಗಳೂ ಇರುತ್ತವೆ. ಮೇಲ್ಕಂಡ ಯಾವಗಣಗಳಲ್ಲಿಯೂ ಆದಿಯಲ್ಲಿ ಕೇವಲ ಒಂದು ಲಘುಬರುವುದಿಲ್ಲ.

ಉದಾ :- ಮೇಲ್ಕಂಡ ಪ್ರಸ್ತಾರದಲ್ಲಿ ಒಂದೇ ಲಘು ಆದಿಯಾದ ಯಾವ ಗಣವೂ ಇಲ್ಲ.*

---

* ತೆಲುಗಿನಲ್ಲಿ ಇವಕ್ಕೆ ಸೂರ್ಯ, ಇಂದ್ರ, ಚಂದ್ರ ಎಂಬ ಹೆಸರಿವೆ; ಇಲ್ಲಿನ ಹೆಸರುಗಳು ರತಿ, ಮದನ, ಶರ, - ಸಂ

[*ಆದಿಲಘು ಬಂದರೆ ಒಂದು ಜೊತೆ ⏑ ⏑ — ಉಳಿದವು ಯಾವುವಾದರೂ ಆಗಬಹುದು. ಇಲ್ಲಿ ಮಾತ್ರಾ ಲೆಕ್ಕವೂ ಸಲ್ಲದು — ಸಂ.]

ಅಂಗಜಗಣಯುಗಾದ್ ಬಾಣಗಣೇ
ಸಂಗತೇ ಪ್ರತಿಪಾದಮಲ್ಪಾಕ್ಷರಮ್
ಶೃಂಗಾರಪಿಂಡಾದಿ ಕಾವ್ಯೇಷು ತತ್
ಸಂಗೀತಂ ಕರ್ಣಾಟಕೇ ಪ್ರಸಿದ್ಧಮ್ – 4

ಅರ್ಥ :- ಪ್ರತಿಪಾದದಲ್ಲಿಯೂ 2 ಮದನಗಣಗಳೂ ಮುಂದೆ ಒಂದು ಬಾಣಗಣವೂ ಬಂದರೆ ಅಲ್ಪಾಕ್ಷರ ಎಂಬ ಛಂದಸ್ಸಾಗುತ್ತದೆ. ಇದು ಶೃಂಗಾರ ಪಿಂಡ ಮುಂತಾದ ಕಾವ್ಯಗಳಲ್ಲಿಯೂ ಕರ್ಣಾಟಕ ಸಂಗೀತದಲ್ಲಿಯೂ ಪ್ರಸಿದ್ಧ ವಾಗಿದೆ.

ಉದಾ :- ಅಂಗಜ = ಮದನಗಣ
ಗಣಯುಗಾತ್ = — ॥ —
ಬಾಣಗಣೇ = ಶರಗಣ

ಯದಿ ತು ರತಿಗಣಃ ಪಾದಾದೌ ಪಾದಮಧ್ಯೇ
ಮದನಗಣಯುಗಂ ಪಾದಾಂತೇ ಬಾಣಗಣಮ್
ತದಿದಮಂತರಾಕ್ಷರ ಮಕ್ಷರಜ್ಞೈರ್ಗೀತಂ
ವಿದಿತಮಾರ್ಹತೇ ಕರ್ಣಾಟೇಶ್ವರಕಥಾದೌ – 5

ಅರ್ಥ :– ಪಾದಾದಿಯಲ್ಲಿ 1 ರತಿಗಣ, ಪಾದಮಧ್ಯದಲ್ಲಿ 2 ಮದನಗಣ, ಪಾದಾಂತದಲ್ಲಿ 1 ಶರಗಣ ಬಂದರೆ ಅಂತರಾಕ್ಷರವೃತ್ತವೆಂದು ಅಕ್ಷರಜ್ಞರು ಹೇಳಿ ದ್ದಾರೆ. ಜಿನಸಂಬಂಧಿಯಾದ ಕರ್ಣಾಟೇಶ್ವರಕಥಾದಿಗಳಲ್ಲಿ ಇದು ಪ್ರಯುಕ್ತವೆಂದು ಪ್ರಸಿದ್ಧವಾಗಿದೆ.

[**ಉದಾ :–** ಯದಿತು=ರತಿಗಣ ಪಾದಾದೌ=ಮದನಗಣ
ರತಿಗಣ=ಮದನಗಣ ಪಾದಮಧ್ಯೇ=ಶರಗಣ]

(– ಎಡೆಯಕ್ಕರ)

ಪ್ರಥಮೋ ರತಿರೇವ ಮನ್ಮಥಃ ಸ್ಯಾದ್ ದ್ವಿತೀಯೋ ತೃತೀಯೋ
ಪೃಥ ಚತುರ್ಥೇ ಬಾಣಗಣಸ್ತು ಪಂಚಮಸ್ಥಾನ ಏವ
ಗ್ರಥಿತಂ ಲಕ್ಷಣಮಿತಿ ಯಸ್ಯ ತನ್ಮಧ್ಯಮಾಕ್ಷರಾಖ್ಯಂ
ಪ್ರಥಿತಂ ಕರ್ಣಾಟ ಮಾಲತೀಮಾಧವ ಪ್ರಭೃತಿಕಾವ್ಯೇ – 6

ಅರ್ಥ :– ಪಾದದ ಮೊದಲನೆಯ ಸ್ಥಾನದಲ್ಲಿ 1 ರತಿಗಣ, ಎರಡು ಮೂರು ನಾಲ್ಕನೆ ಸ್ಥಾನಗಳಲ್ಲಿ ಮದನಗಣ – ಎಂದರೆ 3 ಮದನಗಣ, ಐದನೆ ಸ್ಥಾನದಲ್ಲಿ 1 ಶರಗಣ ಬಂದರೆ 'ಮಧ್ಯಮಾಕ್ಷರ' ಎನಿಸುತ್ತದೆ. ಇದು ಕನ್ನಡ ಮಾಲತೀ ಮಾಧವ ಕಾವ್ಯದಲ್ಲಿ ಪ್ರಸಿದ್ಧವಾಗಿದೆ.

(– ನಡುವಣಕ್ಕರ)

ರತಿಪತಿಗಣಯುಗ್ಮಾದ್‌ರತಿತಃ ಸ್ಮರಯುಗ್ಮಂ ರತಿರಪಿ
ಪ್ರತಿಪಾದಂ ವರ್ತತೇ ಯಸ್ಮಿಂಸ್ತತ್ಸಮಾನಾಕ್ಷರಂ ನಾಮ
ಶ್ರುತಿಕಾಂತಮಕ್ಷರದಕ್ಷೈರಾದೃತ **ಮಸಗಾಖ್ಯ**ಕವಿನಾ
ಪ್ರತಿಪಾದಿತಂ ನನು **ಕರ್ಣಾಟ ಕುಮಾರ**ಸಂಭವ ಕಾವ್ಯೇ – 7

ಅರ್ಥ :– ಪ್ರತಿಯೊಂದು ಪಾದದ ಮೊದಲು 2 ಮದನಗಣ, 1 ರತಿಗಣ, 2 ಮದನಗಣ, ಮತ್ತೆ ಕಡೆಯಲ್ಲಿ 1 ರತಿಗಣ – ಹೀಗೆ ಬಂದರೆ 'ಸಮಾನಾಕ್ಷರ' ಎನಿಸುತ್ತದೆ, ಇದು ಕೇಳಲು ಮನೋಹರವಾಗಿರುತ್ತದೆ. ಅಸಗನೆಂಬ ಕವಿ ಕನ್ನಡ ಕುಮಾರಸಂಭವ ಕಾವ್ಯದಲ್ಲಿ ಈ ವೃತ್ತವನ್ನು ಉಪಯೋಗಿಸಿದ್ದಾನೆ.

(– ದೊರೆಯಕ್ಕರ)

ಆದೌ ರತಿಗಣೋ ಮಧ್ಯೇಽತ್ರ ಸ್ಮರಗಣಪಂಚಕಮಂತೇ ತು ಬಾಣಗಣಃ
ಪಾದೇಷ್ವಿಹ ರತಿರ್ವಾ ದ್ವಿತೀಯೇ ತುರ್ಯೇಚ ಸ್ಥಾನೇ ತನ್ಮಹಾಕ್ಷರಾಖ್ಯಮ್
ಪಾದಾದಿಪ್ರಭೃತೀತಿ ಕೇವಲಂ ಸ್ಮರಗಣಷಟ್ಕಯಂ ಬಾಣಾಂತಂ ಕೇಚಿದಾಹುಃ
ಪಾದೇ ಪಾದೇಽತ್ರ ಪ್ರತಿಗಣಮಪಿ ಯತಿರ್ಲಕ್ಷ್ಯತೇ ಸರ್ವೇಷಾಮಕ್ಷರಾಣಾಮ್ – 8

ಅರ್ಥ :– ಆದಿಯಲ್ಲಿ 1 ರತಿಗಣ, ಮಧ್ಯದಲ್ಲಿ 5 ಮದನಗಣ, ಕಡೆಯಲ್ಲಿ 1 ಶರಗಣ ಇದ್ದರೆ 'ಮಹಾಕ್ಷರ' ಎನಿಸುತ್ತದೆ. ಪ್ರತಿಪಾದದ ಎರಡು ಮತ್ತು ನಾಲ್ಕನೆಯ ಗಣಗಳು ರತಿಗಣಗಳಾದರೂ ಆಗಬಹುದು. ಕೆಲವರು ಪಾದಾದಿ ಯಿಂದ ಕೇವಲ 6 ಮದನಗಣಗಳೂ ಕಡೆಯಲ್ಲಿ 1 ಶರಗಣವೂ ಇರಬೇಕೆಂದು ಹೇಳುತ್ತಾರೆ. ಆ ಪಕ್ಷದಲ್ಲಿ 6 ಮದನಗಣಗಳಾದಮೇಲೆ ಯತಿ ಇರಬೇಕು. ಈ ವೃತ್ತದಲ್ಲಿ ಪ್ರತಿಪಾದದ ಕಡೆಯಲ್ಲಿಯೂ ಪ್ರತಿಗಣದಲ್ಲಿಯೂ ಯತಿ ಕಂಡು ಬರುತ್ತದೆ.

(– ಪಿರಿಯಕ್ಕರ)

(ನಾಗವರ್ಮನ ಲಕ್ಷಣ ಸ್ವಲ್ಪ ಭಿನ್ನವಾಗಿದೆ.)

ಕರಕರಾಬ್ಧಿತ್ರ್ಯಂಶಚರಣಾ ದಿಗ್ರಸರತಿಃ
ಸ್ಮರಮಯೀ ಲಾದಿಗಿರಿಹರಾಂಶಾ ಚಾಂತ
ವಿರಮಣಾಚ್ಚಿತ್ರಾ ತ್ರಿಪದಿಕಾ – 9

ಅರ್ಥ :– 1 ಮತ್ತು 2 ನೆಯ ಪಾದಗಳಲ್ಲಿ ಒಟ್ಟು 4 – 4 ಗಣಗಳಿರಬೇಕು 3 ನೆಯ ಪಾದದಲ್ಲಿ 3 ಗಣಗಳಿರಬೇಕು. ಮೊದಲಿಂದ 6 ಮತ್ತು 10 ನೆ ಗಣಗಳು ರತಿಗಣಗಳಾಗಿರಬೇಕು. ಉಳಿದವೆಲ್ಲ ಮದನಗಣಗಳು. 7 ಮತ್ತು 11 ನೆಯ ಗಣಗಳು ಲಘುವಿಂದ ಆರಬ್ಧವಾಗಿರಬೇಕು. ಪ್ರತಿಪಾದದ ಕಡೆಯಲ್ಲಿ ಯತಿ ಇರಬೇಕು. ಇದು 'ಚಿತ್ರತ್ರಿಪದಿಕಾ'ವೃತ್ತ.

ಟಿಪ್ಪಣಿ :– ಕರಕರ (2+2=4), ಅಬ್ಧಿ=4, ದಿಕ್=10, ರಸ=6, ಗಿರಿ=7, ಹರ=11. ಲಾದಿ=ಲಘುವಿಂದ ಆರಬ್ಧವಾದ ಗಣ.

ಸರ್ವಲಕ್ಷಣಮತ್ರ ಪೂರ್ವವದ್ಧರಧಾಮ್ನಿ
ಗುರ್ವಾದಿ ಬಾಣಗಣಭಾಗ್ ವಿಚಿತ್ರಾ ಸ್ಯಾತ್
ಪೂರ್ವಂ ಕರ್ಣಾಟಚ್ಛಂದೋಮತೇ – 10

ಅರ್ಥ :– ಚಿತ್ರತ್ರಿಪದಿಕೆಯಂತೆಯೇ ನಿಯಮಗಳು. 11 ನೆಯ ಗಣ ಮಾತ್ರ ಗುರ್ವಾದಿಯಾಗಿದ್ದು ಪದ್ಯದ ಕಡೆಯಲ್ಲಿ ಶರಗಣವಿದ್ದರೆ 'ವಿಚಿತ್ರತ್ರಿಪದಿಕಾ' ಎನಿಸಿಕೊಳ್ಳುತ್ತದೆ. (ಹರಧಾಮ=ಹನ್ನೊಂದನೆಯ ಸ್ಥಾನ)

ಮಾತ್ರಾಭಿರ್ದ್ವಾಷಷ್ಟ್ಯಾ ಚಿತ್ರಾ ಸ್ಯಾದಿತ್ಯೇವಂ
ಮಾತ್ರಾ ವರ್ಧಂತೇ ಕ್ವಚಿದಸ್ಯಾ ನ್ಯೂನಾಸ್ತಾಃ
ಸೂತ್ರಂ ಪೂರ್ವೋಕ್ತಂ ಕಿಮಮೂಭಿಃ – 11

ಅರ್ಥ :– ತ್ರಿಪದಿಕೆಯಲ್ಲಿ ಒಟ್ಟು 62 ಮಾತ್ರೆಗಳೆಂದು ಕೆಲವರು ಹೇಳುತ್ತಾರೆ. ಆದರೆ ಕೆಲವೆಡೆ ಹೆಚ್ಚಾಗಿಯೂ ಕಡಮೆಯಾಗಿಯೂ ಕಂಡುಬರುತ್ತವೆ. ಲಕ್ಷಣವನ್ನು ಹಿಂದೆ ಹೇಳಿದ್ದಾಗಿದೆ. ಈ ಮಾತ್ರೆಗಳನ್ನು ಕಟ್ಟಿಕೊಂಡು ಏನಾಗಬೇಕು ?

ಋತುಹತಗಿರಿಪರಿಮಿತಲಘು ರಿಯಮಥ
ಯತಿಯುತಿರಖಿಲಗುರುರಿಹ ನ ಭವತಿ
ಯತಿಪತಿಗದಿತಮತ ಇತಿ – 12

ಅರ್ಥ :– 'ಯತಿಪತಿ'ಗಳ ಮತದಂತೆ ಸರ್ವಲಘುವಾದ ತ್ರಿಪದಿಕೆಯುಂಟು. ಇದರಲ್ಲಿ ಗುರು ಇರುವುದಿಲ್ಲ. ಒಟ್ಟು 42 ಲಘುಗಳಿರುತ್ತವೆ. ಪಾದಾಂತ್ಯದಲ್ಲಿ ಯತಿ ಇರುತ್ತದೆ.

ಟಿಪ್ಪಣಿ :– ಋತುಹತಗಿರಿ ($6 \times 7 = 42$).

ಸರ್ವಲಘುರ್ನ ಚೇತ್ ಸರ್ವಥಾ ತ್ರಿಪದಿಕಾ
ಸರ್ವಗುರುಸ್ತು ನ ಭವೇತ್ ಗಿರೀಶಯೋಃ
ಗುರ್ವಾದಿ ಲಗಣ ಪ್ರತಿಷೇಧಾತ್ – 13

ಅರ್ಥ :– ಸರ್ವಲಘುವಾದ ತ್ರಿಪದಿಕಾ ಇಲ್ಲವೇ ಇಲ್ಲ ಎಂದು ಹೇಳುವುದಾದರೆ (ಏಕೆಂದರೆ, ಪಾದಾಂತ್ಯದಲ್ಲಿರುವ ಲಘುವನ್ನು ಎಳೆದು ಹೇಳಬೇಕಾದ್ದರಿಂದ ಅದು ಗುರುವಾಗುತ್ತದೆ) ಸರ್ವಗುರುವಾದ ತ್ರಿಪದಿಕೆಯೂ ಸಂಭವಿಸುವುದಿಲ್ಲವೆಂದೇ ಹೇಳಬೇಕು. ಏಕೆಂದರೆ, 7 ಮತ್ತು 11 ನೆಯಗಣಗಳು ತ್ರಿಪದಿಕೆಯಲ್ಲಿ ಗುರ್ವಾದಿಯಾಗುವುದಿಲ್ಲವೆಂದು ಹೇಳಿದ್ದೇವೆ.

ಟಿಪ್ಪಣಿ :– 9 ನೆಯ ಸೂತ್ರದಲ್ಲಿ 7 ಮತ್ತು 11 ನೆಯಗಣಗಳು ಲಘ್ವಾದಿಯಾಗಬೇಕೆಂದು ತಿಳಿಸಿದೆ. ಲಘು ಅಲ್ಲಿ ಬರುವುದರಿಂದ ಸರ್ವಗುರುವಾದ ತ್ರಿಪದಿಕೆ ಸಾಧ್ಯವಿಲ್ಲ. ಲಗಣ = ಮದನಗಣ. ರಲಧಾ ರತಿಮದನಶರಾಃ

ತ್ರಿಪದೀತೃತೀಯಾಂಹ್ರಾ-
ವಪಮುಂಚತ್ಯೇಲೇತಿ
ಸುಪಠಿತಾಗೇಯವಿದಜನ್ಯೈಃ – 14

ಟಿಪ್ಪಣಿ :– 'ತೃತೀಯಾಂಹ್ರಾ' ಎಂಬುದು ಯಾವ ಅರ್ಥವನ್ನೂ ಕೊಡುವುದಿಲ್ಲ. 'ತೃತೀಯಾಂಘ್ರಾವಪಮುಂಚತಿ' ಎಂದು ಪಾಠವಿರಬೇಕೆಂದು ತೋರುತ್ತದೆ. ತೃತೀಯಾಂಘ್ರಾ = 3 ನೆಯ ಪಾದವು, ಅಪಮುಂಚತಿ = ಅವಮುಕ್ತವಾಗಿದ್ದರೆ, ಎಂದರೆ ಮೂರನೆಯ ಪಾದವಿಲ್ಲದಿದ್ದರೆ – ಎಂದರೆ, ತ್ರಿಪದಿಯ 3 ನೆ ಪಾದದ ಲಕ್ಷಣವಿಲ್ಲದೆ ಇದ್ದರೆ ಆಗ ಹಿಂದೆ ಹೇಳಿದ ತ್ರಿಪದಿಯೇ 'ಏಲಾ' ಎನಿಸಿಕೊಳ್ಳುತ್ತದೆ. ತ್ರಿಪದಿಯ 1 - 2 ನೆ ಪಾದಗಳಲ್ಲಿ $4+4=8$ ಗಣಗಳಿರುತ್ತವೆ. ಈ ಎಂಟು ಗಣಗಳನ್ನೇ ಮೂರು ಸಾಲಾಗಿ ವಿಂಗಡಿಸಿಕೊಂಡರೆ ಏಲಾವೃತ್ತವಾಗುತ್ತದೆ ಎಂದು ತಾತ್ಪರ್ಯ. ಆದರೆ ಉದಾಹರಣೆಯಲ್ಲಿ 7 ಗಣಗಳು ಮಾತ್ರ ಕಂಡುಬರುತ್ತವೆ. 'ದ್ವಿತೀಯಾಂಘ್ರಾವಪಮುಂಚತಿ' ಎಂಬ ಪಾಠವನ್ನೊಪ್ಪಿಕೊಂಡರೆ ಲಕ್ಷಣ ಸರಿಹೋಗುತ್ತದೆ.

ನಾಗವರ್ಮನ ಛಂದೋಂಬುಧಿಯಲ್ಲಿ ಏಳೆಯ ಲಕ್ಷಣ ಹೀಗಿದೆ:

ಭುಜ*ಪಕ್ಷ ಪುರಗಣ
ವ್ರಜದೊಳಾರರೊಳಕ್ಕು
ಮಜಗಣೇಳೆಗಿಭಗತೀ ॥

ಅರ್ಥ :- ಭುಜ=2, ಪಕ್ಷ=2, ಪುರ=3 ಹೀಗೆ ಒಟ್ಟು ಏಳೆಯಲ್ಲಿ 7 ಗಣಗಳಿರುತ್ತವೆ. ಆರನೆಯಗಣ ಬ್ರಹ್ಮಗಣವಾಗಬೇಕು.

ಆದ್ದರಿಂದ 'ತೃತೀಯಾಂಘ್ರಾವಪಮುಂಚತಿ' ಎಂಬ ಪಾಠವೂ ಸರಿಹೊಂದುತ್ತದೆ. ಇದರಲ್ಲಿ ಉಳಿದುದೆಲ್ಲ ತ್ರಿಪದಿಯ ಲಕ್ಷಣವೇ.

ಉದಾ :-

1 ತ್ರಿಪದೀದ್ವಿ = ಮದನಗಣ
2 ತೀಯಾಂಘ್ರಾ = ”
3 ವಪಮುಂಚ = ”
4 ತ್ಯೇಲೇತಿ = ”
5 ಸುಪಠಿತಾ = ”
6 ಗೇಯು = ರತಿಗಣ (ನಾಗವರ್ಮನ ಮತದಂತೆ ಇದು ಬ್ರಹ್ಮಗಣ)
7 ವಿದಜನ್ಯೈಃ = ಮದನಗಣ.

ಶಾರ್ಙ್ಗಧರನ ಸಂಗೀತರತ್ನಾಕರದಲ್ಲಿ ಏಳೆಯ ಲಕ್ಷಣ ಹೀಗಿದೆ :

ಪಂಚ ಕಾಮಾರತಿಶ್ಚೈಕಾ ಕಾಮೋಽಂತೇ ಚರಣತ್ರಯೇ
ಪ್ರತ್ಯೇಕಂ ತಾಸು ಚೇದೇತಾ ಶ್ಛಂದಸ್ವತ್ಯೋಽಖಿಲಾ ಮತಾಃ
ಗಣಾದೇನ್ಯೂನತಾಧಿಕ್ಯಾದೇಲಾ ಭಾಸಾ ಇಮಾ ಮತಾಃ 4 - 125

ಅರ್ಥ :- ಒಟ್ಟು ಮೂರುಪಾದಗಳಲ್ಲಿ ಮೊದಲು 5 ಮದನಗಣಗಳೂ 1 ರತಿಗಣವೂ ಕಡೆಯಲ್ಲಿ 1 ಮದನಗಣವೂ ಬಂದರೆ ಏಲಾವೃತ್ತವಾಗುತ್ತದೆ. ಈ ಲಕ್ಷಣದಲ್ಲಿ ಯಾವುದೊಂದು ಗಣದಲ್ಲಿ ಅಥವಾ ಪಾದದಲ್ಲಿ ಕೊಂಚ ನ್ಯೂನತೆ ಅಥವಾ ಆಧಿಕ್ಯವಿದ್ದರೂ ಈ ಛಂದಸ್ಸುಗಳು ಏಳೆಯ ಗುಂಪಿನಲ್ಲಿ ಸೇರುತ್ತವೆ.

---

*ನನ್ನ ಬಳಿಯಿರುವ 'ಛಂದೋಂಬುಧಿ' ಪುಸ್ತಕದಲ್ಲಿ ಏಳೆಯ ಲಕ್ಷಣವನ್ನು ಬರೆಯುವಾಗ - 'ಭುಜಗ ಪಕ್ಷಪುರಗಣ' ಎಂದು ಮುದ್ರಿತವಾಗಿದೆ 'ಗ' ಕಾರ ತಪ್ಪು. 'ಭುಜಪಕ್ಷಪುರಗಣ' ಎಂದಿರಬೇಕು.

ಈ ಪಕ್ಷದಲ್ಲಿ ಜಯಕೀರ್ತಿ, ನಾಗವರ್ಮ ಮತ್ತು ಶಾರ್ಙ್ಗಧರ - ಈ ಮೂವರ ಅಭಿಪ್ರಾಯವೂ ಒಂದೇ ಆಗಿ ಕಂಡು ಬರುತ್ತದೆ.

ಮದನಾದ್ಯಾಃ ಶರಗಣಾಂತಾಃ
ಯದಿ ಚರಣಾಶ್ಚತ್ವಾರಃ
ಗದಿತಾಶ್ಚೇಚ್ಚತುಷ್ಪದಿಕಾ
ವಿದಿತಾಸೌ **ಚೂಡಾಮಣೌ** – 15

ಅರ್ಥ :– ಒಂದೊಂದು ಪಾದದಲ್ಲಿ ಮದನ, ರತಿ, ಶರಗಣಗಳಲ್ಲಿ ಯಾವುದಾದರೂ 3 ಗಣಗಳಿರಬೇಕು. 4 ಪಾದಗಳಿರಬೇಕು. ಇದು ಚತುಷ್ಪದಿಕಾವೃತ್ತ, ಚೂಡಾಮಣಿ ಗ್ರಂಥದಲ್ಲಿ ಪ್ರಸಿದ್ಧವಾಗಿದೆ.

ಕಂದರ್ಪಗಣತೋ ರತಿಗಣಚತುಷ್ಕಂ ಚೇತ್
ಛಂದಸಿ ಜಯಕೀರ್ತೇರಾದಿವರಾಹಾಖ್ಯಾ
ಛಂದೋವತಂಸ ನಾಮೇತಿ ಚತುಷ್ಪದಿಕಾ
ಸಂದೃಷ್ಟಾಸೌ **ಕುಮಾರಸಂಭವಾದೌ** – 16

ಅರ್ಥ :- ಒಂದೊಂದು ಪಾದದಲ್ಲಿ 1 ಮದನಗಣ, 4 ರತಿಗಣಗಳಿದ್ದರೆ ಜಯಕೀರ್ತಿಯ ಮತದಂತೆ ಆದಿವರಾಹವೆಂಬ ವೃತ್ತವಾಗುತ್ತದೆ. ನಾಲ್ಕುಪಾದಗಳುಳ್ಳ ಈ ವೃತ್ತವು ಶ್ರೇಷ್ಠವೆನಿಸಿದೆ. ಕುಮಾರಸಂಭವಾದಿ ಕಾವ್ಯಗಳಲ್ಲಿ ಇದು ಕಂಡುಬರುತ್ತದೆ.

ಉದಾ : ಕಂದರ್ಪ = ಮದನಗಣ
ಗಣತೋ = ರತಿಗಣ
ರತಿಗ = ”
ಣಚತು = ”
ಷ್ಕಂಚೇತ್ = ”

ಟಿಪ್ಪಣಿ :- ಈ ಶ್ಲೋಕದಲ್ಲಿ ಆದಿವರಾಹವೃತ್ತಕ್ಕೆ ಛಂದೋವತಂಸ ಎಂಬ ಹೆಸರಿದೆ ಎಂದೂ ಅರ್ಥಮಾಡಲು ಸಾಧ್ಯ. ನಾಗವರ್ಮನು ಛಂದೋವತಂಸವೆಂದೇ ಹೆಸರಿಟ್ಟಿದ್ದಾನೆ. ಅವನ ಲಕ್ಷಣಪದ್ಯ ಹೀಗಿದೆ :

ಮಂದರಧರಗಣಮೆಸೆದಿರೆ ಮೊದಲೊಳೆ
ಬಂದಿರೆ ಮುಂದೆ ನಾಲ್ಕೆಡೆ ಬಿಸರುಹಜನ್ಮಂ
ಸಂದುದು ಲಕ್ಷಣಮುವನಿಯೊಳೀ ತೆಱದಿಂ
ಛಂದೋವತಂಸಕ್ಕೆಸೆದುದು ಗಜಗಮನೇ

ಛಂದೋಂಬುಧಿ 5 – 15

1 ವಿಷ್ಣುಗಣ, 4 ಬ್ರಹ್ಮಗಣಗಳು ಬರಬೇಕೆಂಬುದಾಗಿ ಇದರ ಲಕ್ಷಣ ಸ್ಪಷ್ಟವಾಗಿದೆ.

ಉದಾ :– ಮಂದರ	=	ವಿಷ್ಣುಗಣ	ಬಂದಿರೆ	=	ವಿಷ್ಣುಗಣ
ಧರಗ	=	ಬ್ರಹ್ಮಗಣ	ಮುಂದೆ	=	ಬ್ರಹ್ಮಗಣ
ಣಮೆಸೆ	=	”	(ನಾಲ್ಕೆಡೆ)	=	”
ದಿರೆವೊ	=	”	ಬಿಸರುಹ	=	”
ದಲೊಳೆ	=	”	ಜನ್ಮಂ	=	”

ಡಾ॥ ಶಿ. ಚೆ. ನಂದೀಮಠ ಅವರು ಕನ್ನಡ ಕುವಲಯಾನಂದದ 176 ನೆಯ ಪುಟದಲ್ಲಿ “ನಾಗವರ್ಮನು ‘ಇದು ನಾಲ್ಕು ಚರಣಗಳ ಪದ್ಯ. ಪ್ರತಿಚರಣದಲ್ಲಿ ನಾಲ್ಕುಗಣಗಳು; ಅವುಗಳಲ್ಲಿ ಮೊದಲನೆ ಮೂರು ವಿಷ್ಣುಗಣ. ಕೊನೆಯದು ‘ಬ್ರಹ್ಮಗಣ’ವೆಂದು ಹೇಳುವನು” ಎಂದು ಬರೆದಿದ್ದಾರೆ. ಅಲ್ಲದೆ “ಇವನು (ಜಯಕೀರ್ತಿ) ಹೇಳುವ ಲಕ್ಷಣಕ್ಕೂ ನಾಗವರ್ಮನು ಹೇಳುವ ಲಕ್ಷಣಕ್ಕೂ ವ್ಯತ್ಯಾಸವಿದೆ; ನಾಗವರ್ಮನ ಲಕ್ಷಣವನ್ನು ಜಯಕೀರ್ತಿ ಸರಿಯಾಗಿ ತಿಳಿದುಕೊಂಡಿಲ್ಲವೆಂದು ಡಾ॥ ಕರ್ಕಿಯವರ ಮತ” ಎಂದು ತಿಳಿಸಿದ್ದಾರೆ. ನಾಗವರ್ಮನು ಹೇಳಿದ ಛಂದೋವತಂಸದ ಲಕ್ಷಣಕ್ಕೆ ಅವರು ಹೇಳುವ ಅರ್ಥ ಹೇಗೆ ಬರುತ್ತದೆಯೆಂಬುದೂ ಅದರಂತೆ ಲಕ್ಷಣಸಮನ್ವಯ ಹೇಗೆಂಬುದೂ ನಾಗವರ್ಮನ ಲಕ್ಷಣಕ್ಕೂ ಜಯಕೀರ್ತಿಯ ಲಕ್ಷಣಕ್ಕೂ ವಿರೋಧವೇನೆಂಬುದೂ ಚಿಂತನೀಯ.

ಸ್ಮರಗಣಃ ಪರಿತೋಽತ್ರ ಶರಗಣಃ ಪುರಪಷ್ಠ
ಚರಣಾಂತಯೋಸ್ತದಂತೇ ವಿರಾಮಃ
ಕರಕರಪುರಗಣಾಃ ದ್ವಿರಿಹತ್ಯಾಶ್ಚರಣಾಶ್ಚೇತ್
ಸ್ಫುರತಿ ಷಟ್‌ಚರಣವತ್ ಷಟ್ಪದಿಕಾ – 17

ಅರ್ಥ :– ಕರಕರ ಪುರಗಣಾಃ = ಕ್ರಮವಾಗಿ 3 ಪಾದಗಳಲ್ಲಿ 2, 2, 3 – ಗಣಗಳಿರಬೇಕು. ಎಂದರೆ 1, 2 ನೆಯಪಾದಗಳಲ್ಲಿ 2 ಗಣಗಳೂ 3 ನೆಯ ಪಾದದಲ್ಲಿ 3 ಗಣಗಳೂ ಇರಬೇಕು. ಈ 3 ಪಾದಗಳೂ ಆವೃತ್ತವಾಗಬೇಕು. ಆಗ ಷಟ್ಪದಿಕಾವೃತ್ತವಾಗುತ್ತದೆ. ಇದರಲ್ಲಿ 2, 6 ನೆಯ ಪಾದಗಳ ಕಡೆಯ ಗಣ ಶರಗಣವಾಗಿರುತ್ತದೆ. ಉಳಿದವೆಲ್ಲವೂ – ಎಂದರೆ ಪ್ರ ತಿ ಚ ರ ಣ ದ ಮೊದಲನೆಯ 2 ಗಣಗಳು – ಮದನಗಣಗಳು.

ಉದಾ :– ಸ್ಮರಗಣಃ	=	ಮದನಗಣ	ಯೋಸ್ತ್ವದಂ	=	ಮದನಗಣ
ಪರಿತೋತ್ರ	=	”	ತೇವಿರಾಮಃ	=	ಶರಗಣ
ಶರಗಣಃ	=	”			
ಪುರಷಷ್ಠ	=	”			
ಚರಣಾಂತ	=	”			

ಸಂಗೀತರತ್ನಾಕರದಲ್ಲಿ ಷಟ್ಪದಿಯ ಲಕ್ಷಣವನ್ನು ಹೀಗೆ ಹೇಳಿದೆ :

ಷಷ್ಠಸ್ತೃತೀಯಸ್ತ್ರಿಗಣಃ ಪೃಥಗ್ದ್ವಿದ್ವಿಗಣಾಃ ಪರೇ
ಚತ್ವಾರಶ್ಚರಣಾ ಬಾಣಪ್ರಾಂತೌ ಷಷ್ಠತೃತೀಯಕೌ
ಶೇಷಾಸ್ತು ಮಾನ್ಮಥಗಣಾ ಯಸ್ಯಾಂ ಸಾ ಷಟ್ಪದೀ ಮತಾ
ಕರ್ಣಾಟಭಾಷಾಯಾ ತಾಲವರ್ಜಿತಾ ನಾದಮುಕ್ತಿಕಾ

ಅರ್ಥ :– 6 ಮತ್ತು 3 ನೆಯ ಪಾದಗಳಲ್ಲಿ 3 ಗಣಗಳಿರಬೇಕು, ಉಳಿದ 4 ಪಾದಗಳಲ್ಲಿಯೂ ಎರಡೆರಡು ಗಣಗಳಿರಬೇಕು. 6 ಮತ್ತು 3 ನೆಯ ಪಾದಗಳ ಕೊನೆಯಲ್ಲಿ ಶರಗಣಗಳಿರಬೇಕು. ಉಳಿದವೆಲ್ಲ ಮದನಗಣಗಳು, ಇವು ಇರತಕ್ಕ ವೃತ್ತಕ್ಕೆ ಷಟ್ಪದಿಯೆಂದು ಹೆಸರು. ಇದು ಕನ್ನಡದಲ್ಲಿ ಪ್ರಯುಕ್ತವಾಗುತ್ತದೆ. ಈ ವೃತ್ತದಲ್ಲಿ ತಾಳನಾದಗಳಿಲ್ಲ.

ಜಯಕೀರ್ತಿ ಮತ್ತು ಶಾರ್ಙ್ಗಧರನ ಲಕ್ಷಣಗಳು ಸಮಾನವಾಗಿವೆ. ತಾಳನಾದ ಗಳಿಲ್ಲ ಎಂದು ಶಾರ್ಙ್ಗಧರನು ಹೇಳಿರುವುದೊಂದು ವಿಶೇಷ.*

ಸ್ಮರರತಿಪೂರ್ವಂ ಸ್ಮರರತಿಮಧ್ಯಂ ಸ್ಮರಯುಗಗುರು ನಿಧನಂ
ಚರಣಚತುಷ್ಕಂ ಸ್ಥಿರತರಚತುರುತ್ತಿರಶತಮಾತ್ರಮಿದಮ್
ಕರಿವಸುಮಾತ್ರಾವಿರಮಣಯುಕ್ಚೇತ್ ಸ್ಫುರತಿ ತದಾಕ್ಷರಿಕಾ
ಗುರುಪರಜಗಣೇತರಗತಿಮಾತ್ರಾಧರಗಣಭಾಗಥವಾ – 18

ಅರ್ಥ :– ಒಂದೊಂದು ಪಾದದಲ್ಲಿ ಮದನ, ರತಿ, ಮದನ, ರತಿ, ಮದನ, ಮದನ – ಹೀಗೆ ಗಣಗಳಿದ್ದು ಕಡೆಯಲ್ಲಿ ಒಂದು ಗುರು ಇರಬೇಕು. ಒಟ್ಟು

* 3, 6 ಸಾಲಿನ ಕಡೆಯ ಗುರುವನ್ನು ಆಯಾಷಟ್ಪದಿಯ ಗಣಗುಣಕ್ಕೆ ತಕ್ಕಂತೆ ತಾಳ ಪ್ರಮಾಣವುಳ್ಳದಾಗಿ ಅಳೆಯಬೇಕು ಎಂಬುದು ಸಂಗೀತಕ್ಕೂ ತಾಳ ವಿವಕ್ಷೆಗೂ ಸಂಬಂಧಿಸಿದ ಸಂಗತಿಯೇ ಹೊರತು ಛಂದೋನಿಯತಿಗೆ ಸಂಬಂಧಿಸಿದ್ದಲ್ಲ - ಎಂಬುದು ಇಲ್ಲಿ ಸ್ಪಷ್ಟಪಡುತ್ತದೆ ಛಂದೋಲಯ ಬೇರೆ; ತಾಳ ಲಯ ಬೇರೆ. ಸಾಹಿತಿಗಳೂ ಸಂಗೀತಗಾರರೂ ಲಯ ಎಂಬ ಮಾತನ್ನೇ ಬಳಸುತ್ತಾರಾಗಿ ಈ ಸಂದಿಗ್ಧಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. — ಸಂ.

ನಾಲ್ಕು ಪಾದಗಳು. ಈ ವೃತ್ತದಲ್ಲಿ ಒಟ್ಟು 104 ಮಾತ್ರೆಗಳಿರುತ್ತವೆ (ಒಂದು ಪಾದಕ್ಕೆ 26 ಮಾತ್ರೆಗಳು) 8 – 8 ಮಾತ್ರೆಗಳಿಗೆ ಒಂದು ಯತಿ. ಇದು ಅಕ್ಷರಿಕಾ ವೃತ್ತ. ಅಥವಾ ಇದರ ಲಕ್ಷಣವನ್ನು ಹೀಗೆ ಹೇಳಬಹುದು : ಇದಕ್ಕೆ ನಾಲ್ಕು ಪಾದಗಳು. ಒಟ್ಟು 104 ಮಾತ್ರೆಗಳು. ಎಲ್ಲಿಯೂ ಮಗಣವೂ ಜಗಣವೂ (– – – : ⏑ – ⏑) ಬರಬಾರದು. ಇತರ ಮಾತ್ರಾಗಣಗಳು ಕ್ರಮವಾಗಿ ಬರಬಹುದು.

ಪ್ರಥಮಕ ಇಹ ಗುರುಪರಕೃತಿಪರಿಮಿತಲಭೃದಿತರೇ
ಪೃಥ ಪಾದಾರತಿಗಣಪರಗತಿಮದನಗಣಾಃ ಸ್ಯುಃ
ಗ್ರಥಿತಪದಾವಲಯಸ್ತ್ಯೈಶ್ಚೇದಿತಿ ಮದನವತೀ
ಪ್ರಥಿತಯತಿಃ ಪ್ರತಿಚರಣಂ ದ್ವಾವಿಂಶತಿಮಾತ್ರಾ – 19

ಅರ್ಥ :– ಪ್ರಥಮ ಪಾದದಲ್ಲಿ 20 ಲಘುಗಳೂ 1 ಗುರುವೂ ಇರಬೇಕು. ಉಳಿದ ಪಾದಗಳಲ್ಲಿ ಮೊದಲು ರತಿಗಣಗಳಿದ್ದು ಆಮೇಲೆ ಮದನಗಣಗಳಿರಬೇಕು. ಪ್ರತಿಪಾದದಲ್ಲಿ 22 ಮಾತ್ರೆಗಳಿರಬೇಕು. ಪಾದಾಂತದಲ್ಲಿ ಯತಿ ಇರಬೇಕು. ಇದು ಮದನವತೀ ವೃತ್ತ.

ಟಿಪ್ಪಣಿ :– ಪ್ರತಿಪಾದದಲ್ಲಿ ರತಿಗಣಗಳೆಷ್ಟು ? ಮದನಗಣಗಳೆಷ್ಟು ? ಎಂಬುದನ್ನು ಹೇಳಿಲ್ಲ. ಒಟ್ಟಿನಲ್ಲಿ ಒಂದೊಂದು ಪಾದದಲ್ಲಿ 22 ಮಾತ್ರೆಗಳಿರಬೇಕೆಂಬುದು ನಿಯಮ. ಕೃತಿ = ಕೃತಿಛಂದಸ್ಸು, 20 ಸಂಖ್ಯೆಗೆ ಸಂಜ್ಞೆ.

ರಗಣೋ ದ್ವಿತೀಯೇ ಷಷ್ಠೇ ಚ
ಲಗಣೋ ಧಗಣೋ ವಾನ್ಯತ್ರ ಪಂಚಸ್ವರ್ಧಯೋಶ್ಚ
ತ್ರಿಗಣೋಽಯುಕ್ ಸಮಪಾದೋಬ್ಧಿಗಣೋ
ನಿಗದಿತಾ ಗೀತಿಕಾಲಂಕಾರೇ ಪ್ರಭುಸೇನೀಯೈಃ – 20

ಅರ್ಥ :– ಎರಡು ಅರ್ಧಗಳಲ್ಲಿಯೂ 2 ಮತ್ತು 6 ನೆಯ ಗಣಗಳು ರಗಣ ಎಂದರೆ ರತಿಗಣವಾಗಿರಬೇಕು. ಉಳಿದ 5 ಗಣಗಳು ಲಗಣವೊ ಧಗಣವೊ ಆಗಿರಬಹುದು (ರತಿಗಣವೂ ಆಗಿರಬಹುದು). ಬೆಸ ಪಾದಗಳಲ್ಲಿ ಒಟ್ಟು 3 ಗಣಗಳಿರಬೇಕು. ಸಮಪಾದಗಳಲ್ಲಿ 4 ಗಣಗಳಿರಬೇಕು. ಇದನ್ನು ಪ್ರಭುಸೇನೀಯರು 'ಗೀತಿಕಾ' ಎಂದು ಗಣಿಸಿದ್ದಾರೆ.

ಆದಿಗುರುಪೂರ್ವಶ್ಚೇತ್‌ಪಾದೋ ಗುರುಪೂರ್ವಕಾಸ್ತಥಾನ್ಯೇ ಜಾತೌ
ಪಾದೋ ಲಘುಪೂರ್ವಶ್ಚೇದಾದಿಃ ಶೇಷಾಸ್ತಥೈವ ಭಾಷಾವಿಷಯೇ – 21

ಅರ್ಥ :– ಭಾಷಾವಿಷಯದಲ್ಲಿ ಜಾತಿವೃತ್ತಗಳ ಮೊದಲನೆಯ ಪಾದವು ಗುರು ಪೂರ್ವವಾಗಿದ್ದರೆ ಉಳಿದ ಪಾದಗಳೂ ಗುರುಪೂರ್ವಗಳಾಗಿರಬೇಕು. ಲಘು ಪೂರ್ವವಾಗಿದ್ದರೆ ಉಳಿದ ಪಾದಗಳೂ ಲಘುಪೂರ್ವವಾಗಿರಬೇಕು.

ಕಿಮೇತಾವಂತಿ ಪದ್ಯಾನಿ ಚೇಹಾನುಕ್ತಾನ್ಯನೇಕಧಾ
ಸಂತಿ ಷಟ್‌ಪ್ರತ್ಯಯೇ ತಾನಿ ದೃಶ್ಯಂತೇ ಸೂಚಿತಾನಿ ಚ – 22

ಅರ್ಥ :– ಕನ್ನಡಭಾಷೆಯಲ್ಲಿ ಇಷ್ಟೇ ಪದ್ಯಗಳೊ ? ಇಲ್ಲಿ ಹೇಳದಿರುವ ಎಷ್ಟೋ ಪದ್ಯಜಾತಿಗಳು ಕಂಡು ಬರುತ್ತವೆಯಲ್ಲ ! ಹೌದು. ಕಂಡು ಬರುತ್ತವೆ. ಅವುಗಳನ್ನು ಷಟ್‌ಪ್ರತ್ಯಯಗಳಲ್ಲಿ ಸೂಚಿಸಲಾಗಿದೆ.

II

ಜಾನಾಶ್ರಯೀ ಛಂದೋವಿಚಿತಿ :

(ಪ್ರಥಮಾಧ್ಯಾಯದ 11 ನೆಯ ಸೂತ್ರದಿಂದ)

ಉಕಾಲೋ ಲಘು – 11

ಉ ಇತ್ಯೇವಂಕಾಲಃ ಸ್ವರೋ ಲಘುಸಂಜ್ಞೋಭವತಿ । ಕಾಲೋ ಮಾತ್ರಾ । ಸತ್ವಕ್ಷಿನಿಮೇಷಃ ಅಂಗುಲಿಸ್ಫೋಟೋ ವಾ ॥

ಅರ್ಥ :– 'ಉ' ಎಂಬುದರ ಉಚ್ಚಾರಣೆಗೆ ಹಿಡಿಯುವ ಕಾಲದಷ್ಟು ಕಾಲ ವುಳ್ಳ ಸ್ವರಕ್ಕೆ ಲಘು ಎಂದು ಹೆಸರು. ಕಾಲವೆಂದರೆ ಮಾತ್ರೆ. ಅದು ಕಣ್ಣು ಮುಚ್ಚಲು ತಗುಲುವಷ್ಟು ಅಥವಾ ಚಿಟಿಕೆಹೊಡೆಯುವಷ್ಟು ಕಾಲ.

ಟಿಪ್ಪಣಿ :– 'ಊಕಾಲೋಽಜ್‌ಹ್ರಸ್ವದೀರ್ಘಪ್ಲುತಃ' ಎಂಬ ಪಾಣಿನಿಸೂತ್ರ ವನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅಕ್ಷರಮಾಲೆಯ ಆದಿಯಲ್ಲಿರುವ ಅಕಾರವನ್ನು ಬಿಟ್ಟು ಉಕಾರವನ್ನು ಹೇಳುವುದಕ್ಕೆ ಕಾರಣವೇನೆಂದರೆ, ಕೋಳಿ ಕೂಗುವಾಗ 'ಉ ಊ ಊೕ' ಎಂದು ಕೂಗುತ್ತದೆ. ಇದರಲ್ಲಿ ಹ್ರಸ್ವ, ದೀರ್ಘ, ಪ್ಲುತ – ಈ ಮೂರಕ್ಕೂ ಉದಾಹರಣೆ ಇದೆ. ಇದು ಸುಬೋಧವಾದ ಉದಾಹರಣೆ. ಪಾಣಿನಿಯನ್ನನುಸರಿಸಿ ಇಲ್ಲಿಯೂ ಉಕಾರವನ್ನು ಗ್ರಹಿಸಿದ್ದಾರೆ.

ಸಂಯೋಗಾಯೋಗವಾಹಪರೋ ಗುರುಃ – 12

ಸಂಯೋಗಾಶ್ಚ ಆಯೋಗವಾಹಾಶ್ಚ ಸಂಯೋಗಾಯೋಗವಾಹಾಃ। ತೇ ಪರೇ ಯಸ್ಯ ಉಕಾಲಸ್ಯ ಸ ಸಂಯೋಗಾಯೋಗವಾಹಪರಃ । ಸ ಗುರುಸಂಜ್ಞೋ ಭವತಿ।

ಕಃ ಸಂಯೋಗಃ ? ವ್ಯಂಜನಾನ್ಯನಂತರಾಣಿ ಭವಂತಿ । ಕೇ ಅಯೋಗವಾಹಾಃ ? ವಿಸರ್ಜನೀಯ – ಜಿಹ್ವಾಮೂಲೀಯೋಪಧ್ಮಾನೀಯಾನುಸ್ವಾರಾಃ । ತತ್ರ ಸಂಯೋಗ ಪರಾಸ್ತಾವತ್ – ಅಕ್ಷಃ ಕಕ್ಷಃ ಇತ್ಯಕಾರಃ, ಋಕ್ಷಃ, ವೃಕ್ಷಃ ಇತಿಯು ಕಾರಃ । ಅಯೋಗವಾಹಪರೋऽಪಿ – ಕಃ ಕರೋತಿ – ಕಃ ⋀ ಕ ರೋ ೯ ತಿ, ಕಃ ಪಚತಿ – ಕ ⋀ ಪಚತಿ, ತ್ವಂಯಾಸಿ ॥

ಅರ್ಥ :– ಸಂಯೋಗಗಳು ಮತ್ತು ಅಯೋಗವಾಹಗಳು. ಅವು ಯಾವ ಉಕಾಲಸ್ವರದ ಮುಂದಿವೆಯೊ ಆ ಸ್ವರವೇ ಸಂಯೋಗಾಯೋಗವಾಹಪರ. ಅದು ಗುರುವೆನಿಸುತ್ತದೆ. ಸಂಯೋಗ ಯಾವುದು ? ವ್ಯವಧಾನವಿಲ್ಲದಂತೆ ಸೇರಿಕೊಂಡಿರುವ ವ್ಯಂಜನಗಳೇ ಸಂಯೋಗ. ಅಯೋಗವಾಹಗಳು ಯಾವುವು ? ವಿಸರ್ಗ, ಜಿಹ್ವಾಮೂಲೀಯ, ಉಪಾಧ್ಮಾನೀಯ ಮತ್ತು ಅನುಸ್ವಾರ. ಸಂಯೋಗಪರಗಳಿಗೆ ಉದಾಹರಣೆ :– ಅಕ್ಷಃ, ಕಕ್ಷಃ – ಇಲ್ಲಿ ಅಕಾರ; ಋಕ್ಷಃ, ವೃಕ್ಷಃ – ಇಲ್ಲಿ ಋಕಾರ. ಅಯೋಗಪರವಾವುದೆಂದರೆ : ಕಃ ಕ ರೋ ೯ ತಿ – ಕ ⋀ ಕರೋತಿ, ಕಃ ಪಚತಿ – ಕ⋀ಪಚತಿ, ತ್ವಂಯಾಸಿ.

ಟಿಪ್ಪಣಿ :– ಕ ಖ ಕಾರಗಳ ಹಿಂದೆ ವಿಸರ್ಗಕ್ಕೆ ಅರ್ಧಕಕಾರದಂತಹ ಉಚ್ಚಾರಣೆಯುಂಟು. ಅದು ಜಿಹ್ವಾಮೂಲೀಯ. ಪ, ಫ ಕಾರಗಳ ಹಿಂದಿನ ವಿಸರ್ಗಕ್ಕೆ ಅರ್ಧ ಪಕಾರದ ಉಚ್ಚಾರಣೆಯುಂಟು. ಅದು ಉಪಧ್ಮಾನೀಯ.

ಪಾದಾಂತೇ ವಾ – 13

ಪಾದಾಂತೇ ವರ್ತಮಾನಶ್ಚ ಉಕಾಲೋ ವಾ ಗುರುಸಂಜ್ಞೋ ಭವತಿ । ತದ್ಯಥಾ –

ಸ್ವಾಧೀನಸುಲಭಮೇತ
  ನ್ನಿರ – ವದ್ಯಂ ವಿದ್ಯತೇ ಮಮ್ಯೈವ ಖಲು
ಅತಿಥಿಜನಪ್ರತಿಪೂಜನ –
  ಸಮರ್ಥರೂಪಂ ಶರೀರಧನಮ್.

ಅಸ್ಯಾಶ್ಚಾರ್ಯಾಯಾ ಆದ್ಯಸ್ಯಾರ್ಧಸ್ಯಾಂತ್ಯಸ್ವರೋऽನೇನ ಲಕ್ಷಣೇನ ಗುರುರ್ಭವತಿ । ಅನ್ಯಥಾ ಆರ್ಯೇಯಂ ನ ಸ್ಯಾತ್ । ಹೀನಮಾತ್ರತ್ವಾತ್ ಇತಿ । ವಾಶಬ್ದೋ ವಿಕಲ್ಪವಾಚೀ । ಕ್ವಚಿ ನ್ನಭವತಿ । ತದ್ಯಥಾ – ಅಸ್ಯಾ ಏವ ಪ್ರಥಮ ತೃತೀಯಯೋಃ ಪಾದಯೋಃ । ಯದಿ ತತ್ರಾಪಿ ಗುರುತ್ವಂ ಸ್ಯಾತ್ ಆರ್ಯೈವೇಯಂ ನ ಸ್ಯಾತ್, ಅಧಿಕಮಾತ್ರತ್ವಾದಿತಿ ॥

ಅರ್ಥ :– ಪಾದಾಂತದಲ್ಲಿರುವ ಉಕಾಲವಾದ – (ಎಂದರೆ ಹ್ರಸ್ವವಾದ) ಸ್ವರವು ವಿಕಲ್ಪವಾಗಿ ಗುರುವೆನಿಸುತ್ತದೆ. ಹೇಗೆಂದರೆ :

'ಸ್ವಾಧೀನ ಸುಲಭಮೇತತ್
ನಿರವದ್ಯಂ ವಿದ್ಯತೇ ಮಮೈವ ಖಲು

ಎಂಬ ಮೇಲ್ಕಂಡ ಆರ್ಯಾವೃತ್ತದ ಪ್ರಥಮಾರ್ಧದ ಕಡೆಯ ಸ್ವರವು ಈ ಲಕ್ಷಣ ದಿಂದ 'ಗುರು' ಎನಿಸಿಕೊಳ್ಳುತ್ತದೆ. ಇಲ್ಲದೆ ಇದ್ದರೆ ಇದು ಆರ್ಯೆಯಾಗಲಾರದು. ಏಕೆಂದರೆ, ಒಂದು ಮಾತ್ರೆ ಕಡಮೆಯಾಗುತ್ತದೆ. 'ವಾ' ಎಂದರೆ ವಿಕಲ್ಪ. ಕೆಲ ವೆಡೆ ಇದು (ಪಾದಾಂತದಲ್ಲಿರುವ ಹ್ರಸ್ವವು) ಗುರುವಾಗುವುದಿಲ್ಲ; ಹೇಗೆಂದರೆ ಇದೇ ಆರ್ಯೆಯ ಪ್ರಥಮ ತೃತೀಯ ಪಾದಗಳಲ್ಲಿ (ಕಡೆಯ ಹ್ರಸ್ವವನ್ನು ಗುರು ಎಂದು ಗಣಿಸತಕ್ಕದ್ದಲ್ಲ). ಅಲ್ಲಿ ಗುರುವೆನಿಸಿದರೆ, ಇದು ಆರ್ಯೆಯಾಗಲಾರದು. ಏಕೆಂದರೆ, ಒಂದು ಮಾತ್ರೆ ಅಧಿಕವಾಗುತ್ತದೆ.

ಟಿಪ್ಪಣಿ :– ಈ ವ್ಯಾಖ್ಯಾಕಾರನ ಮತದಂತೆ ಆರ್ಯಾವೃತ್ತವನ್ನೂ ನಾಲ್ಕು ನಾಲ್ಕು ಪಾದಗಳನ್ನಾಗಿ ವಿಂಗಡಿಸಬಹುದು. ಒಂದೊಂದು ಪಾದದಲ್ಲಿ ಹತ್ತು ಅಕ್ಷರಗಳಿರಬೇಕು. (42ನೆಯ ಸೂತ್ರದ ವ್ಯಾಖ್ಯಾನವನ್ನು ನೋಡಿ)

ಊಕಾಲಃ – 14

ಊಕಾಲಶ್ಚ ಸ್ವರೋ ಗುರುಸಂಜ್ಞೋ ಭವತಿ । ಅತ್ರಾಹ – ಊಕಾಲೋ ದೀರ್ಘೋ ದ್ವಿಮಾತ್ರಃ, ತ್ರಿಮಾತ್ರಸ್ತು ಪ್ಲುತಃ, ಕಂ ಲಘುರ್ವೋಗುರವ ಇತಿ । ತತ್ರೋಚ್ಯತೇ– ಊ ಇತ್ಯೇವಂ ಸಂಹಿತಾಕರಣಾತ್ ದೀರ್ಘಪ್ಲುತಯೋರ್ಗ್ರಹಣಂ ಭವತಿ ॥

ಅರ್ಥ :– ಊಕಾಲವುಳ್ಳ ಸ್ವರವು ಗುರುಸಂಜ್ಞೆಯನ್ನು ಪಡೆಯುತ್ತದೆ, ಇಲ್ಲಿ ಯಾರೊಬ್ಬನೂ ಹೀಗೆ ಕೇಳಬಹುದು : ಊಕಾಲವಾದ ದೀರ್ಘವು ದ್ವಿಮಾತ್ರ ವಾಗಿದೆ. ಪ್ಲುತವಾದರೋ ತ್ರಿಮಾತ್ರ. ಹೀಗಿರುವಾಗ ಪ್ಲುತಗಳು ಲಘುಗಳೊ ಗುರುಗಳೊ ? ಈ ಪ್ರಶ್ನೆಗೆ ಉತ್ತರ ಹೇಳಲಾಗುತ್ತದೆ : ಊ ಎಂಬಲ್ಲಿ (ದೀರ್ಘ ಮತ್ತು ಪ್ಲುತಗಳಿಗೆ) ಸವರ್ಣದೀರ್ಘಸಂಧಿಯಾಗಿರುವುದರಿಂದ ದೀರ್ಘಪ್ಲುತಗಳೆ ರಡಕ್ಕೂ ಗ್ರಹಣವಾಗುತ್ತದೆ.

ಟಿಪ್ಪಣಿ :– ಊ+ಊ ಎಂದು ಬಿಡಿಸಬೇಕು. ಸೂತ್ರದಲ್ಲಿ 'ಊ' ಎಂದು ಸವರ್ಣ ದೀರ್ಘಸಂಧಿಯಾಗಿದೆ. ಆದ್ದರಿಂದ ಇವೆರಡೂ ಗುರುಗಳು.

ತೌ ಹಭೌ – 15

ತೌ ಲಘುಗುರೂ ಯಥಾಕ್ರಮೇಣ 'ಹ' 'ಭ' ಇತ್ಯೇವಂ ಸಂಜ್ಞಾ ಭವತಃ

ಆ ಲಘು ಮತ್ತು ಗುರುಗಳಿಗೆ ಕ್ರಮವಾಗಿ 'ಹ' ಎಂದೂ 'ಭ' ಎಂದೂ ಸಂಜ್ಞೆ ಗಳು.

ತಚ್ಛೇದೋ ರಗವತೌ – 16

ತಯೋರ್ಲಘು ಗುರ್ವೋಃ ಛೇದೋ ರ ಇವ ಗಕಾರ ಇವ ಚ ಭವತಿ ॥

ಅರ್ಥ :– ಆ ಲಘುಗುರುಗಳ ಛೇದವು ರಕಾರದಂತೆ ಮತ್ತು ಗಕಾರದಂತೆ ಇರುತ್ತದೆ.

ಟಿಪ್ಪಣಿ :– ಛೇದವೆಂದರೆ ಪರಿಚ್ಛೇದ, ಚಿಹ್ನೆ. ಅದರ ಸ್ವರೂಪವು ದೇವ ನಾಗರೀಲಿಪಿಯ र ಮತ್ತು ग ದಂತೆ. ಲಘು = ।; ಗುರು = ⌣ ಹೀಗಿರ ಬಹುದು.*

ಸೋಽಂಗುಲೇಽಂಗುಲೇ – 17

ಸ ಹಭಯೋಃ ಛೇದೋಽಂಗುಲೇಽಂಗುಲೇ ಕರ್ತವ್ಯಃ । ಅಂಗುಲ್ಯಾಸಮ್ಮಿತ ಮಂಗುಲಮ್ । ಅಸ್ಯಾರಂಭೋ ಹ್ಯುತ್ತರಾರ್ಥಃ ॥

ಅರ್ಥ :– ಲಘುಗುರುಗಳ ಛೇದವನ್ನು ಒಂದೊಂದು ಅಂಗುಲ ಪ್ರಮಾಣದ ಸ್ಥಳದಲ್ಲಿ ಗುರುತಿಸಬೇಕು. ಅಂಗುಲಿಯಿಂದ ಪರಿಮಿತವಾದ ಸ್ಥಳ ಅಂಗುಲ, ಇದನ್ನು ಹೇಳಿರುವುದು ಮುಂದೆ ಬೇಕಾಗುತ್ತದೆಯಾದ್ದರಿಂದ.

ಟಿಪ್ಪಣಿ :– ಒಂದು ಅಂಗುಲದಷ್ಟು ಸ್ಥಳದಲ್ಲಿ ಲಘುವನ್ನೂ ಗುರುವನ್ನೂ ಗುರುತಿಸಬೇಕು. ಮುಂದೆ ಷಟ್‌ಪ್ರತ್ಯಯಗಳಲ್ಲಿ ಅಧ್ವಯೋಗ ಎಂಬುದೊಂದುಂಟು. ಇದು ಆಯಾ ಛಂದಸ್ಸಿನ ಪ್ರಸ್ತಾರವನ್ನು ಹಾಕಲು ಉದ್ದಗಲದ ಸ್ಥಳವು ಎಷ್ಟು ಬೇಕೆಂಬುದನ್ನು ತಿಳಿಸುವ ವಿಧಾನ.

---

* ಇಲ್ಲಿ ಬಳಸಿರುವಂತೆ ⌣ ; –.

ಗಣಗಳು

ಸೂತ್ರ 18 ರಿಂದ 35 ರವರೆಗೆ.

ಗಂಗಾಸ್	— —
ನದೀಜ್	⏑ —
ಚಂದ್ರುಪ್	— ⏑
ನನುರ್	⏑ ⏑
ನಚರತಿದ್	⏑ ⏑ ⏑ ⏑
ಕಮಲಿನೀಯ್	⏑ ⏑ ⏑ —
ಜಯನರವರಣ್	⏑ ⏑ ⏑ ⏑ ⏑ ⏑
ನೂನಂಸಾಗ್	— — —
ಕೃಶಾಂಗೀಜ್	⏑ — —
ಧೀವರಾಶ್	— ⏑ —
ಕುರುತೇಲ್	⏑ ⏑ —
ತೇಶ್ರೀಃ ಕ್ವಬ್	— — ⏑
ವಿಭಾತಿಕ್	⏑ — ⏑
ಸಾತವತ್	— ⏑ ⏑
ತರತಿವ್	⏑ ⏑ ⏑
ಲೋಲಮಾಲಾಷ್	— ⏑ — —
ಧೈರ್ಯಮಸ್ತುತೇಟ್	— ⏑ — ⏑ —
ರೌತಿಮಯೂರೋಙ್	— ⏑ ⏑ — — *

ತೇ ‡ ದ್ವಿಕ – ಚತುಷ್ಕ – ಷಟ್ಕ – ತ್ರಿಕ – ಪಂಚಕವರ್ಣ
ಕಾಃ ವೃತ್ತವಿಧಾನೇ ಗ್ರಂಥಲಾಘವಾರ್ಥಂ ಪರಿಗೃಹೀತಾಃ

ಅರ್ಥ :– 2, 4, 6, 3, 5 ವರ್ಣಗಳಿರುವ ಈ ಸಂಜ್ಞಾಸೂತ್ರಗಳು ಗ್ರಂಥ ಲಾಘವಕ್ಕಾಗಿ ಸ್ವೀಕರಿಸಲ್ಪಟ್ಟಿವೆ.

ಅಂತೇಽಂತ ಉಕ್ತಾನಿ ವ್ಯಂಜನಾನ್ಯೇಷಾಂ ಸಂಜ್ಞಾ – 36

---

* ಒಟ್ಟು ಹದಿನೆಂಟು ಗಣಗಳು.

‡ 2. 6 ಅಕ್ಷರಗಣಗಳನ್ನು ಈತನು ನಿರ್ದೇಶಿಸುತ್ತಾನೆ.

ಉಕ್ತಾನಾಂ ಸೂತ್ರಾಣಾಮಂತೇಽಂತೇ ಪರಿಗೃಹೀತಾನಿ ವ್ಯಂಜನಾನಿ ಉಕ್ತಾನಾಂ ವರ್ಣಾನಾಂ ತಥಾರಚನಾನಾಂ ಸಂಜ್ಞಾ ಭವಂತಿ ॥

ಅರ್ಥ :– ಹಿಂದೆ ಹೇಳಿದ ಸೂತ್ರಗಳ ಕಡೆಯಲ್ಲಿ ಹೇಳಿರುವ ಸ್, ಜ್, ಮೊದಲಾದ ವ್ಯಂಜನಗಳು ಆ ಸೂತ್ರದಲ್ಲಿರುವ ವರ್ಣರಚನೆಗಳಿಗೆ ಸಂಜ್ಞೆಗಳಾಗುತ್ತವೆ.*

ಟಿಪ್ಪಣಿ :– ಗಂಗಾಶ್. ಶ್ ಎಂದರೆ ಎರಡು ಗುರುಗಳಿರುವ ಗಣವೆಂದರ್ಥ. ಜ್ ಎಂದರೆ ಒಂದು ಲಘು ಒಂದು ಗುರು ಇರುವ ಎರಡಕ್ಷರಗಳ ಗಣವೆಂದರ್ಥ,

ಆದಿಸ್ವರೈಶ್ಚ ಗಾದಿಸಂಜ್ಞಾಃ – 37

ಗಾದಯೋ 'ನೂನಂಸಾಗ್' (ಸೂ. 25) ಇತ್ಯೇವಮಾದಯಃ ತೇಷಾಂ ಯ ಆದೌ ವರ್ತಮಾನಾಃ ಸ್ವರಾಃ ಆದಯ್ಕತೈಶ್ಚ ಅಂತೇ ಅ ಂ ತೇ ೀ ಉಕ್ತೈಃ ವ್ಯಂಜನೈಶ್ಚ ಸಂಜ್ಞಾ ಭವಂತಿ ॥

ಅರ್ಥ :– 'ನೂನಂಸಾಗ್' ಮೊದಲಾದ ಮುಂದಿನ ಸೂತ್ರಗಳು 'ಗಾದಿಗಳು.' ಅವುಗಳ ಆದಿಯಲ್ಲಿ ಇರುವ ಊಕಾರಾದಿ ಸ್ವರಗಳಿಂದಲೂ ಕಡೆಯಲ್ಲಿರುವ ವ್ಯಂಜನಗಳಿಂದಲೂ ಆಯಾ ವರ್ಣಸಮುದಾಯಗಳ ಸಂಜ್ಞೆ ಏರ್ಪಡುತ್ತದೆ.

ಟಿಪ್ಪಣಿ :– 25ನೆ ಸೂತ್ರದವರೆಗೆ ಅಂತ್ಯವರ್ಣಗಳಿಂದ ಮಾತ್ರ ಸಂಜ್ಞೆ, 'ನೂನಂಸಾಗ್' ಮೊದಲಾದ ಸೂತ್ರಗಳಿಂದಲಾದರೊ ಮೊದಲನೆಯ ಸ್ವರದಿಂದಾಗಲಿ ಕಡೆಯ ವ್ಯಂಜನದಿಂದಾಗಲಿ ಸಂಜ್ಞೆ ಏರ್ಪಡುತ್ತದೆ. ಉದಾ :– 'ಊ' ಎಂದರೂ 'ಗ್' ಎಂದರೂ ಮೂರು ಗುರುಗಳಿರುವ ವರ್ಣಸಮೂಹದ ಸಂಜ್ಞೆ. 'ಈ' ಎಂದರೂ 'ಶ್' ಎಂದರೂ ಮಧ್ಯಲಘುವಿರುವ ವರ್ಣಸಮೂಹಕ್ಕೆ ಸಂಜ್ಞೆ– ಇತ್ಯಾದಿ.

ಗಣಾಶ್ಚತುರ್ಹಾಃ – 38

ಯೇ ಚತುರ್ಲಘವೋ ವರ್ಣಸಮೂಹಾಃ ತೇ ಗಣಸಂಜ್ಞಾ ಭವಂತಿ ॥

ಅರ್ಥ :– 4 ಲಘುಗಳಿರುವ ವರ್ಣಸಮುದಾಯಕ್ಕೆ 'ಗಣ' ಎಂದು ಹೆಸರು.

ಪಂಚಹಾಶ್ಚ – 39

ಪಂಚಲಘವಶ್ಚ ಗಣಸಂಜ್ಞಾ ಭವಂತಿ ।

* ಇವನ್ನು ಇತ್ ಸಂಜ್ಞೆಗಳು ಎನ್ನುವುದುಂಟು.

ಟಿಪ್ಪಣಿ :— ಈ ಗ್ರಂಥಕಾರನು ಹಿಂದೆ ಹೇಳಿದ ಸೂತ್ರಗಳಲ್ಲಿರುವ ಎಲ್ಲ ವರ್ಣಸಮೂಹವನ್ನೂ ಗಣವೆಂದು ಕರೆಯುವುದಿಲ್ಲ, 38, 39ನೆ ಸೂತ್ರಗಳಲ್ಲಿ ಹ=ಲಘು ಎಂದರೆ ಮಾತ್ರೆಯೆಂದರ್ಥ. ನಾಲ್ಕು ಮಾತ್ರೆಗಳಿರುವ ವರ್ಣಸಮುದಾಯಕ್ಕೂ ಐದು ಮಾತ್ರೆಗಳಿರುವ ವರ್ಣಸಮುದಾಯಕ್ಕೂ ಗಣವೆಂದು ಹೆಸರಿಟ್ಟಿದ್ದಾನೆ. ಆದ್ದರಿಂದ 'ಪಂಚಲಘುವಸ್ತ್ವಷ್ಟವಿಧಾಃ' ಎಂಬ ವ್ಯಾಖ್ಯಾನವು ಸಂಗತವಾಗುತ್ತದೆ. ಈ ಪಂಚಮಾತ್ರೆಗಳಿರುವ ಗಣಗಳನ್ನು ಯಾವ ಸ್ಥಾನದಲ್ಲಿ ಹೇಳಿದ್ದಾರೋ ಅಲ್ಲಿ ಮಾತ್ರವೇ ಆ ಗಣಗಳು ಬರುತ್ತವೆ. ಇನ್ನೆಲ್ಲಿಯೂ ಅವು ಬರುವುದಿಲ್ಲ ಎಂದು ಸೂಚಿಸುವುದಕ್ಕಾಗಿ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಲಾಗಿದೆ ಎಂಬುದು ವ್ಯಾಖ್ಯಾನದ ತಾತ್ಪರ್ಯ. ಉದಾಹರಣೆಗೆ, ನಿರ್ಧಾಯಿಕಾ ವೃತ್ತದಲ್ಲಿ ನಾಲ್ಕು ಗಣಗಳಿರಬೇಕೆಂದು ಹೇಳಿದೆ. 'ಥೀಂ ವಾನ್ತ್ಯಃ' ಎಂಬ ಸೂತ್ರದಿಂದ ಆದರಕಡೆಯಲ್ಲಿ ಥ ಅಥವಾ ೬ ಗಣವು ಬರುತ್ತದೆಯೆಂದು ಹೇಳಿದೆ. ಈ ಎರಡು ಗಣಗಳು ಅಂತ್ಯದಲ್ಲಿಯೇ ಹೊರತು ಉಳಿದೆಡೆ ಬರುವುದಿಲ್ಲ.

ಯತಿಃ ಪದಚ್ಛೇದಃ — 40

ಯತಿರವಧಿಃ ಛೇದ ಇತಿ ಪರ್ಯಾಯಾಃ। ಪದಸ್ಯ ಛೇದಃ ಪದಚ್ಛೇದಃ। ಸತು ಯತಿಸಂಜ್ಞೋ ಭವತಿ॥

ಅರ್ಥ :— ಯತಿ, ಅವಧಿ, ಛೇದ — ಇವು ಪರ್ಯಾಯಪದಗಳು. ಪದದ ಛೇದವು ಯತಿಯೆನಿಸಿಕೊಳ್ಳುತ್ತದೆ.

ಸಾ ಪಾದಾಂತೇ — 41

ಆ ಯತಿಯು ಪಾದದ ಕಡೆಯಲ್ಲಿ ಬರುತ್ತದೆ.

ಜಾತಿಷು ಯುಜೋಽವಶ್ಯಮ್ — 42

ಆರ್ಯಾದಿ ಜಾತಿವೃತ್ತಗಳಲ್ಲಿ ಯತಿಯು ಸಮಪಾದದ ಕಡೆಯಲ್ಲಿ ಇದ್ದೇ ಇರಬೇಕು. ವಿಷಮ ಪಾದಗಳ ಕಡೆಯಲ್ಲಿ ಇರಲೇ ಬೇಕೆಂಬ ನಿಯಮವಿಲ್ಲವೆಂದು ಅರ್ಥಾತ್ ಸಿದ್ಧವಾಗುತ್ತದೆ. ಹೇಗೆಂದರೆ,

ಸ್ವಾಧೀನಸುಲಭಮೇತನ್ನಿರ — 14
ವದ್ಯಂ ವಿದ್ಯತೇ ಮನ್ಯೈವ ಖಲು । — 15
ಅತಿಥಿಜನಪ್ರತಿಪೂಜನ — 12
ಸಮರ್ಥರೂಪಂ ಶರೀರಧನಮ್ — 15

ಈ ಆರ್ಯೆಯು ಪಂಕ್ತಿಚ್ಛಂದಸ್ಸಿನಲ್ಲಿ ಬರುತ್ತದೆ. ಇದರ ಒಂದೊಂದು

ಪಾದದಲ್ಲಿ ಹತ್ತು ಅಕ್ಷರಗಳಿರುತ್ತವೆ. ಬೆಸವಾದ 1ನೇ ಪಾದದ ಕಡೆಯಲ್ಲಿ ಯತಿ ಇಲ್ಲ. ಸಮವಾದ 2ನೇ ಪಾದದ ಕಡೆಯಲ್ಲಿ ಯತಿ ಇದೆ. ಆದ್ದರಿಂದ ಯತಿ ಇರಬೇಕೆಂಬ ನಿಯಮ ಸಮಪಾದಗಳಿಗೆ ಮಾತ್ರ.

ಟಿಪ್ಪಣಿ :– ಸಾಮಾನ್ಯವಾಗಿ ಆರ್ಯಾಮಾತ್ರಾಛಂದ ಎನ್ನುವುದುಂಟು. ಹಾಗೆ ವಿಭಾಜಿಸಿದರೆ ಈ ಪದ್ಯದ ರಚನೆ :

ಸ್ವರೈಃ ಸನ್ಯೈಃ – 43

ಮುಂದೆ ಲಕ್ಷಣಗಳನ್ನು ಹೇಳುವಾಗ ನ ಕಾ ರ ಸ ಹಿ ತ ವಾ ದ ಸ್ವರಗಳಿಂದ ಯತಿಯು ಎಲ್ಲಿ ಬರಬೇಕೆಂಬುದನ್ನು ತಿಳಿಸಲಾಗುತ್ತದೆ. ಉದಾಹರಣೆಗೆ, 'ಮಂದಾಕ್ರಾಂತಾ ಸೇರುಶೋನೀನೂ' (4 – 86) ಎಂಬ ಲಕ್ಷಣವಿದೆ. ಅದರಲ್ಲಿ (ನೀ–4) ನೆ ಸ್ವರವಾದ ಈಕಾರವೂ 6ನೆ ಸ್ವರವಾದ (ನೂ) ಊಕಾರವೂ ನಕಾರದೊಡನೆ ಉಕ್ತವಾಗಿವೆ. ಆದ್ದರಿಂದ ಮಂದಾಕ್ರಾಂತಾವೃತ್ತದಲ್ಲಿ 4 ಮತ್ತು ಅಲ್ಲಿಂದ 6ನೇ ಅಕ್ಷರದಲ್ಲಿ ಎಂದರೆ, 10 ರಲ್ಲಿ (4+6) ಯತಿ ಬರುತ್ತದೆ.

ಉದಾ :–

4 6/10
ಕಶ್ಚಿತ್‌ಕಾಂತಾ ವಿರಹಗುರುಣಾ ಸ್ವಾಧಿಕಾರಾತ್ಪ್ರಮತ್ತಃ ॥

ದ್ವಿರ್ನಾಂತ್ಯೈ : – 44

ಸ್ವರವು ನಕಾರಾಂತವಾಗಿ ಹೇಳಲ್ಪಟ್ಟರೆ – ಎಂದರೆ 2 ನಕಾರಗಳ ಮಧ್ಯದಲ್ಲಿ ಹೇಳಲ್ಪಟ್ಟರೆ (2ನೆಯ ನಕಾರದ ಮುಂದೆ ಸ್ವರವಿರಬಾರದು), ಆಗ ಯತಿ ಆ ಸ್ಥಾನಗಳಲ್ಲಿ ಎರಡು ಸಲ ಬರುತ್ತದೆ.

ಟಿಪ್ಪಣಿ :– 'ನುನ್' ಎಂದರೆ 5ನೇ ಸ್ವರವಾದ ಉಕಾರವು 2 ನಕಾರಗಳ ಮಧ್ಯದಲ್ಲಿ ಹೇಳಲ್ಪಟ್ಟಂತಾಯಿತು. ಆಗ ಪಾದದ 5 ರಲ್ಲಿ ಮತ್ತೆ ಅಲ್ಲಿಂದ 5 (10) ರಲ್ಲಿ ಯತಿ ಬರುತ್ತದೆ. ಉದಾ :–

ಉದ್ಗತಾ ರೀರಿ ವ್ರ್ಯ್ಯ ತಜುಲಿರ್ಯೆ ನೇನ್ ॥

ಇದು ಉದ್ಗತಾವೃತ್ತದ ಲಕ್ಷಣ. ಏಕಾರವು 10 ನೆಯ ಸ್ವರ. ಇದು ಎರಡು ನಕಾರಗಳ ಮಧ್ಯದಲ್ಲಿ ಹೇಳಲ್ಪಟ್ಟಿರುವುದರಿಂದ 10 – 10 ರಲ್ಲಿ ಯತಿ ಇರುತ್ತದೆ. ಹೇಗೆಂದರೆ, ಅಥ ವಾಸವಸ್ಯ ವಚನೇನ ರುಚಿರವದನ ಸ್ತ್ರಿಲೋಚನಮ್ ॥

ಇನ್ನೊಂದು ಉದಾ :–

ಸ್ರಗ್ಧರಾ ಗೋದುಶೋ ನ್ಯನ್

ಇದು ಸ್ರಗ್ಧರಾವೃತ್ತದ ಲಕ್ಷಣ. ಋಕಾರವು 7ನೆಯ ಸ್ವರ. ಈ ವೃತ್ತದಲ್ಲಿ 7 – 7 ರಲ್ಲಿ ಯತಿ ಇರುತ್ತದೆ. ಹೇಗೆಂದರೆ,

7 7(14)

ದಂತಾಗ್ರಪ್ರೋತಚಂಚು ದ್ಯುತಿದನುತನಯಾ ಸ್ರಗ್ವಸಾ ದಿಗ್ಧದೇಹೋ ॥

ಭಾ ಹೌ – 45

ಭಾ=ಗುರು, ಹ=ಲಘು. ಒಂದು ಗುರುವನ್ನು ಎರಡು ಲಘುಗಳೆಂದು ಎಣಿಸಕತ್ಕದ್ದು.

ಟಿಪ್ಪಣಿ :– ಲಘು ಎಂದರೆ ಒಂದು ಮಾತ್ರೆ. ಒಂದು ಗುರುವನ್ನು ಎರಡು ಮಾತ್ರೆಗಳೆಂದು ಗಣಿಸತಕ್ಕದ್ದು. ಉದಾ :– ವೈತಾಲೀಯಂ ಚತುರ್ದಶಾಯುಜಿಹಾಃ

ವೈತಾಲೀಯದ 1, 3ನೆ ಪಾದಗಳಲ್ಲಿ 14 ಮಾತ್ರೆಗಳಿರಬೇಕು. ಹೇಗೆಂದರೆ,

'ಅಭಿನಾದಿತಮಂಬರಾದ್‌ಘನೈಃ ಇಲ್ಲಿ ಗುರುವನ್ನು 2 ಮಾತ್ರೆಗಳೆಂದು ಗಣಿಸಿದರೆ ಒಟ್ಟು 14 ಮಾತ್ರೆಗಳಾಗುತ್ತವೆ.

ಸಂಸ್ಕೃತದಲ್ಲಿ ಋಕಾರಕ್ಕೆ ದೀರ್ಘವಿದೆ. ಌ ಕಾರಕ್ಕೆ ದೀರ್ಘವಿಲ್ಲ. ಜನಾಶ್ರಯಿ ಇದನ್ನನುಸರಿಸಿ ಸ್ವರಗಳನ್ನು ಗಣಿಸಿದ್ದಾನೆ. ಏಕಾರವು ಹತ್ತನೆಯ ಅಕ್ಷರ. ಐಕಾರವು ಹನ್ನೊಂದನೆಯ ಅಕ್ಷರ.

ವ್ಯಾಖ್ಯಾಕಾರನು ಉದಾಹರಿಸಿದ ಪದ್ಯಗಳಲ್ಲಿ ಯತಿನಿಯಮವು ಸರಿಯಾಗಿ ಹೊಂದುವುದಿಲ್ಲ. ಉದಾ :–

ಮದ್ರಕಮ್ ತೀಯಿಲ್ಕು ನೈ ॥

ಇದು ಮದ್ರಕವೃತ್ತದ ಲಕ್ಷಣ. ಇದರ ಪ್ರಕಾರ 11 ರಲ್ಲಿ ಯತಿ ಇರಬೇಕು.

ಅಸ್ಯೈವ ನೇ ಪಿಂಗಳಸ್ಯ ॥

ಈ ಮದ್ರಕವೃತ್ತದ 10 ರಲ್ಲಿ ಯತಿ ಇರಬೇಕೆಂದು ಪಿಂಗಳಾಚಾರ್ಯನ ಮತ. ಉದಾಹರಿಸಿದ ಈ ಪದ್ಯದಲ್ಲಿ ಯತಿಭಂಗ ಉಂಟು :–

10 11

ಮೃತ್ಯುಪರಾಯಣೇ ಪರಮದುರ್ಬಲೇ ಜ ಗ ತಿ ತೋಯಬುದ್ಬುದಸಮೇ

10 11

ವ್ಯಾಧಿಜರಾತ್ಮಕೇ ವ್ಯಸನಭಾ ಜನೇ ರುದಿತಶೋಕಶಲ್ಯ ವಿಹತೇ

10 11

ಕ್ರಂದಿತಮೂರ್ಧ್ವಭೋಜವಸಿನಿ ಘ್ನಧೀರಿಹ ಚ ಯತ್ರ ನೋಭಯತ್ರ ಶತಂ

10 11

ತತ್ರ ಗತವ್ಯಥೋ ವಿಷಯ ಗೋಚರಃ ಶಮಯಸೀಂದ್ರಿಯಾಣಿ ನ :

ಈ ಪದ್ಯದ ದ್ವಿತೀಯಾರ್ಧದಲ್ಲಿ ಪಾಠದೋಷವಿದೆ. ವೃತ್ತದ ಲಕ್ಷಣವೂ ಹೊಂದುವುದಿಲ್ಲ.

ಅನುಬಂಧ III

ಎಚ್. ಡಿ. ವೇಲಣಕರರು ಸಂಪಾದಿಸಿರುವ ಹೇಮಚಂದ್ರ ಛಂದೋನುಶಾಸನದ ಪೀಠಿಕೆ. ಪು. 6.

ಅಡಿ ಟಿಪ್ಪಣಿ

ಹೋಲಿಸಿ : ಸಂಖ್ಯಾ ದದಾರಿಃ; ಪೂರಣೇಣ್; ನವಾ I – 14 – 16. ಜನಾಶ್ರಯಿ, ರತ್ನಮಂಜೂಷಾ, ಮತ್ತು ಪಿಂಗಳಛಂದಃ ಶಾಸ್ತ್ರ ಪ್ರಕಾರ ಪಟ್ಟಿಕೆ

ಅಕ್ಷರಗಣಗಳು

	ಜನಾಶ್ರಯಿ	ರತ್ನಮಂಜೂಷ	ಛಂದಃ ಶಾಸ್ತ್ರ
1.	ಗಂಗಾಸ್ (ಸ್)	ಮಾಯಾ (ಯ್)	ಗೌ (– –)
2.	ನದೀಜ್ (ಜ್)	ನರೌ (ರ್)	ಲಗೌ (‿ _)
3.	ಚಂದ್ರಪ್ (ಪ್)	ಲಾಲಿ (ಲ್)	ಗಲೌ (_ ‿)
4.	ನನುರ್ (ರ್)	ವಿವ (ವ್)	ಲೌ (‿ ‿)
5.	ನ ಚರತಿದ್ (ದ್)	ಇಲ್ಲ.	ಇಲ್ಲ (ಲ $_4$)
6.	ಕಮಲಿನೀಯ್ (ಯ್)	”	” (ಲ $_3$ _)
7.	ಜಯನರವರಣ್ (ಣ್)	”	ಇಲ್ಲ (ಲ $_6$)
8.	ನೂನಂ ಸಾಗ್ (ಊ/ಗ್)	ಮಾಯಾಕಾ (ಕ್/ಆ)	ಧೀಶ್ರೀಸ್ತ್ರೀಮ್ (ಮ್) (– – –)
9.	ಕೃಶಾಂಗೀಜ್ (ಋ/ಜ್)	ನರೌಚೇ (ಚ್/ಏ)	ವರಾಸಾಯ್ (ಯ್) (‿ _ _)
10.	ಧೀವರಾಶ್ (ಈ/ಶ್)	ಲಾಲಿತೌ (ತು/ಔ)	ಕಾಗುಹಾರ್ (ರ್) (_ ‿ _)
11.	ಕುರುತೇಲ್ (ಉ/ಲ್)	ವಿವಷೀ (ಷ್/ಈ)	ವಸುಧಾಸ್ (ಸ್) (‿ ‿ _)
12.	ತೇಶ್ರೀಃ ಕ್ವಬ್ (ಏ/ಬ್)	ಶಾಶಾಶ (ಶ್/ಅ)	ಸಾತೇಕ್ವತ್ (ತ್) (_ _ ‿)
13.	ವಿಭಾತಿಕ್ (ಇ/ಕ್)	ಷಿಷೇಷು (ಷ್/ಉ)	ಕದಾಸಜ್ (ಜ್) (‿ _ ‿)

14. ಸಾತವತ್ (ಆ/ತ್) ಸಸ್ಸಸ್ರು (ಸ್/ಋ) ಕಿಂವದಭ್ (ಭ್)
(_ ⏑ ⏑)

15. ತರತಿಂ (ಅ/ಮ್) ಹಹಹಿ (ಹ್/ಇ) ನ ಹಸನ್ (ನ್)
(⏑ ⏑ ⏑)

16. ಲೋಲಮಾಲಾಷ್ (ಓ/ಷ್) ಇಲ್ಲ ಇಲ್ಲ

17. ಧೈರ್ಯಮಸ್ತುತೇಟ್ (ಐ/ಟ್) ಇಲ್ಲ ಇಲ್ಲ

18. ರೌತಿಮಯೂರೊಞ್ (ಔ/ಞ್) ಇಲ್ಲ ಇಲ್ಲ

ಜನಾ – I – 36 – 7. ಅಂತೇಸ್ತ್ವ ಉಕ್ತಾನಿ ವ್ಯಂಜನಾನ್ವೇಷಾಂ ಸಂಜ್ಞಾಃ
ಆದಿಸ್ವರೈಶ್ವ ಗಾದಿಸಂಜ್ಞಾಃ ॥

ಜನಾ – I – 15 – 16. ತೌಃ ಹ ಭೌ । ತಚ್ಛೇದೊ ರಗವತ್.
ರತ್ನ – I – 9 – 10. ಸ್ವರೋಂತ್ಯಸ್ತದಂತಸ್ಯ । ವ್ಯಂಜನಂ ಚ.

—ಹೀಗೆ ಜನಾಶ್ರಯಿ ಬಳಸುವ ಸ್ವರವ್ಯಂಜನಗಳು ಅಆ ಇಈ ಊ ಋ ಏ ಐ ಓ ಔ; ಕಗಜ; ಜಞ ಟ ಣ ತ ದ ಪ ಬ ಮ, ಯ ರ ಲ ಶ ಷ ಸ ಹ ಮತ್ತು ಭ.

ರತ್ನಮಂಜೂಷ ಸ್ವರಗಳು – ಅ ಆ ಇ ಈ ಉ ಋ ಏ ಮತ್ತು ಔ.
ವ್ಯಂಜನಗಳು – ಕ ಜ ತ ಪ ಯ ರ ಲ ವ ಶ ಷ ಸ ಹ. *

* ಬೇರೆ ಬೇರೆ ಛಂದೋರಚನ ಸಂಪ್ರದಾಯಗಳವರು, ಗಣಗಳ ಹೆಸರು, ಯತಿಸ್ಥಾನದ ಸಂಖ್ಯೆ ನಿವೇದಿಸುತ್ತಾರೆ. ಎಷ್ಟನೆಯ ಅಕ್ಷರಕ್ಕೆ ನ ಗುಣಿತಗಳಿಗೆ ಯತಿ ಎಂಬಲ್ಲಿ ಸಂಖ್ಯೆ ಹೇಳ ಬಹುದು, ಸಂಖ್ಯೆಯ ಹೆಸರನ್ನು ಸೂಚಿಸುವ ಋತು, ದಿಕ್ಕು ಸೂರ್ಯ ಇತ್ಯಾದಿ 6,8,10, 12 ಗಳಿಗೆ ಪ್ರತಿಯಾಗಿ ತಿಳಿಸಬಹುದು ; ಇಲ್ಲವಾದರೆ ಯಾವುದೋ ವ್ಯಂಜನ ಹತ್ತುವ ಸ್ವರ ಗಳ ಸಂಖ್ಯೆ ತಿಳಿಸಬಹುದು. ಇದನ್ನು ತಿಳಿಸಲು 3 - 4 ಪ್ರಕಾರಗಳನ್ನು ಅನುಬಂಧ ಪರಿಶಿಷ್ಟ ಗಳಲ್ಲಿ ಕೊಟ್ಟಿದೆ — ಸಂ.

ಕನ್ನಡ ಕವಿ ಕಾವ್ಯ ಪರಂಪರೆ

ಇಂಡಿಯ ಬುಕ್ ಹೌಸಿನವರಿಂದ ಪ್ರಕಟವಾಗುತ್ತಿರುವ "ಕನ್ನಡ ಕವಿ ಕಾವ್ಯ ಪರಂಪರೆ" ಎಂಬ ಮಾಲೆಯಲ್ಲಿ ಸುಮಾರು 30 ಗ್ರಂಥಗಳು ಪ್ರಕಟವಾಗಲಿವೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸುವವರಿಗೆ ಅನುಕೂಲವಾಗುವಂತೆ ಪ್ರತಿಯೊಂದು ಪುಸ್ತಕದಲ್ಲಿಯೂ ಮೂವರು ವಿದ್ವಾಂಸರ ವಿದ್ವತ್ಪೂರ್ಣವಾದ ಲೇಖನಗಳಿರುತ್ತವೆ.

ಮೊದಲ ಲೇಖನವು ಕವಿ, ಕಾಲ, ಚಾರಿತ್ರಿಕ ಸನ್ನಿವೇಶಗಳು, ಆ ಕಾಲದ ಸಾಹಿತ್ಯ ಲಕ್ಷಣಗಳು, ಜನಜೀವನ ಇತ್ಯಾದಿಗೆ ಸಂಬಂಧಿಸಿದ್ದು. ಆ ಬಗೆಗೆ ಈವರೆಗೆ ನಡೆದಿರುವ ಚರ್ಚೆಗಳನ್ನು ಸಂಕ್ಷೇಪವಾಗಿ ತಿಳಿಸಿ ಯಾವ ಗಟ್ಟಿ ತೀರ್ಮಾನಕ್ಕೆ ಈಗ ಬಂದಿದೆಯೊ ಅದಕ್ಕೆ ಇರುವ ಆಧಾರ ಪ್ರಮಾಣಗಳನ್ನು ತಿಳಿಸಲಾಗುತ್ತದೆ.

ಎರಡು ಮೂರನೆಯ ಭಾಗಗಳಲ್ಲಿ ಕವಿಯ ಕೃತಿಗಳ ಸ್ವರೂಪವನ್ನೂ ಅವು ಯಾವ ಪ್ರಕಾರದ ಕಾವ್ಯ–ಗ್ರಂಥ–? ಅವುಗಳ ವಿಶೇಷ ಲಕ್ಷಣಗಳಾವುವು? ಭಾಷೆ, ಶೈಲಿ, ಆ ಆ ಕವಿಯ ಮನೋಧರ್ಮ, ಅದಕ್ಕೆ ಆ ಬಗೆಯ ಗ್ರಂಥಗಳಲ್ಲಿ ಸ್ಥಾನಮಾನ ಯಾವುದು? ಎಂಬುದರ ನಿರ್ದೇಶನ ಮೌಲ್ಯಾಂಕನ ಮಾಡಲಾಗುತ್ತದೆ.

ಛಂದೋವಿಚಾರದಲ್ಲಿ ಸಮಾನ ಪ್ರಕಾರಗಳಿದ್ದರೆ ಅವನ್ನು ತಿಳಿಸಲಾಗುತ್ತದೆ. ಕಾಲದ ಪರಿಸ್ಥಿತಿಯ ಪರಿಣಾಮಗಳಿಂದಾಗಿ ಪ್ರತಿಫಲಿಸಿರುವ ಸಂಗತಿಗಳನ್ನೂ ಭಕ್ತಿಪಕ್ಷಪಾತಗಳನ್ನೂ ಕನ್ನಡ ನುಡಿ ತಾಳಿರುವ ರೂಪವನ್ನೂ ಶಕ್ಯವಾದ ಮಟ್ಟಿಗೆ ಕಾಣಿಸಲಾಗುತ್ತದೆ. ಪ್ರತಿಪಾದನೆ ವಸ್ತುನಿಷ್ಠವಾಗಿರುತ್ತದೆ.

ಚಾರಿತ್ರಿಕ ಅಥವಾ ವಂಶಾನುಕ್ರಮದ ಪಟ್ಟಿಕೆಗಳು, ನಕ್ಷೆಗಳು ಇದ್ದರೆ ಅನುಬಂಧವಾಗಿ ಕೊಡಲಾಗುತ್ತದೆ. ಕವಿಯ ವಿಶೇಷ ಲಕ್ಷಣ ಹೊಮ್ಮುವಂತೆ ಪದ್ಯ-ಗದ್ಯ ಖಂಡಗಳ ಒಂದು ಅನುಬಂಧವನ್ನು ಸೇರಿಸಲಾಗುತ್ತದೆ.

ಪ್ರತಿ ಸಂಪುಟದಲ್ಲಿಯೂ ಸಂಪಾದಕರ ಒಂದು ಸಮೀಕ್ಷೆ ಇರುತ್ತದೆ.

ನಾಡಿನ ಹಲವಾರು ಹೆಸರಾಂತ ವಿದ್ವಾಂಸರೂ ವಿಮರ್ಶಕರೂ ಲೇಖನಗಳನ್ನು ಬರೆಯಲು ದಯಮಾಡಿ ಒಪ್ಪಿರುತ್ತಾರೆ.